ನಾಗತಿಹಳ್ಳಿ ಚಂದ್ರಶೇಖರ್ ಅವರ ಕಥೆಗಳು : ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಧ್ಯಯನ

ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಸಂಶೋಧನಾ ನಿಬಂಧ'

ಸಂಶೋಧಕರು

ಪುಟ್ಟೇಗೌಡ ಕೆ.ಎಲ್

ನೊಂದಣಿ ಸಂಖ್ಯೆ : **14201030050**

ಮಾರ್ಗದರ್ಶಕರು

ಡಾ. ಬೋರೇಗೌಡ ಚಿಕ್ಕಮರಳಿ

ಪ್ರಾಧ್ಯಾಪಕರು, ಕನ್ನಡ ವಿಭಾಗ
ವಿಜಯ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ, ಮಂಡ್ಯ ಜಿಲ್ಲೆ

ಅಧ್ಯಯನ ಕೇಂದ್ರ

ಎಂ.ಎಲ್. ಶ್ರೀಕಂಠೇಶಗೌಡ
ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೪-೨೦೧೫

ನಾಗತಿಹಳ್ಳಿ ಚಂದ್ರಶೇಖರ್ ಅವರ ಕಥೆಗಳು : ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಧ್ಯಯನ

ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಸಂಶೋಧನಾ ನಿಬಂಧ'

ಸಂಶೋಧಕರು
ಪುಟ್ಟೇಗೌಡ ಕೆ.ಎಲ್
ನೊಂದಣಿ ಸಂಖ್ಯೆ : **14201030050**

ಮಾರ್ಗದರ್ಶಕರು
ಡಾ. ಬೋರೇಗೌಡ ಚಿಕ್ಕಮರಳಿ
ಪ್ರಾಧ್ಯಾಪಕರು, ಕನ್ನಡ ವಿಭಾಗ
ವಿಜಯ ಪ್ರಥಮ ದರ್ಜೆ ಕಾಲೇಜು
ಪಾಂಡವಪುರ, ಮಂಡ್ಯ ಜಿಲ್ಲೆ

ಅಧ್ಯಯನ ಕೇಂದ್ರ
ಎಂ.ಎಲ್. ಶ್ರೀಕಂಠೇಶಗೌಡ
ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೪-೨೦೧೫

ಮಾರ್ಗದರ್ಶಕರ ದೃಢೀಕರಣ ಪತ್ರ

೨೦೧೪-೧೫ನೇ ಸಾಲಿನಲ್ಲಿ ಪುಟ್ಟೇಗೌಡ ಕೆ.ಎಲ್. ಎಂ.ಫಿಲ್ ವಿದ್ಯಾರ್ಥಿಯು ಈ ಪರೀಕ್ಷೆಯ ಅಂಗವಾಗಿ **"ನಾಗತಿಹಳ್ಳಿ ಚಂದ್ರಶೇಖರ್ ಅವರ ಕಥೆಗಳು: ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಧ್ಯಯನ"** ಎಂಬ ವಿಷಯ ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಇದನ್ನು ಇವರು ಮೊದಲು ಯಾವುದೇ ಪದವಿ, ಡಿಪ್ಲೋಮ ಅಧ್ಯಯನಕ್ಕಾಗಲಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ : ಮಂಡ್ಯ

ದಿನಾಂಕ : 31-08-2015

ಮಾರ್ಗದರ್ಶಕರು

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘದ ಶ್ರೀಕಂಠೇಶಗೌಡ, ಸಂಶೋಧನಾ ಕೇಂದ್ರವಲ್ಲಿ ೨೦೧೪-೧೫ರ ಸಾಲಿಗೆ ಕನ್ನಡ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ನಾಗತಿಹಳ್ಳಿ ಚಂದ್ರಶೇಖರ್ ಅವರ ಕಥೆಗಳು: ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಧ್ಯಯನ"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು **ಡಾ॥ ಬೋರೇಗೌಡ ಚಿಕ್ಕಮರಳಿ** ರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಯಾವುದೇ ಅಧ್ಯಾಯವನ್ನಾಗಲಿ, ಬೇರೆ ಯಾವ ಗ್ರಂಥ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್ (ಕನ್ನಡ) ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ : ಮಂಡ್ಯ.

ದಿನಾಂಕ : 31/08/2015

ಸಂಶೋಧನಾ ವಿದ್ಯಾರ್ಥಿ

ರಿ.ನಂ ೧೪೨೦೧೦೩೦೦೫೦

ಕರ್ನಾಟಕ ಸಂಘ (ರಿ), ಮಂಡ್ಯ

ಪರಿವಿಡಿ

ಅಧ್ಯಾಯ–1

ಅಧ್ಯಾಯ–1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಕಥನ ಪರಂಪರೆ ಯಾವಾಗಲೂ ಸೃಜನಶೀಲವಾದದು, ಅನೇಕ ಕಥೆಗಾರರನ್ನು ತನ್ನೊಡಲೊಳಗೆ ತಬ್ಬಿಕೊಂಡು ನಿತ್ಯನಿರಂತರ ಹೊಸ ಹೊಸ ಪ್ರಕಾರಜನ್ಯವಾಗಿ ಬೆಳೆಯುತ್ತಿದೆ. ಇದರ ಬೇರುಗಳು ಕಥಾಸರಿತ್ಸಾಗರ ಪಂಚತಂತ್ರ ಜಾತಕ ಜೈನ ಜೆನ್ ಸೂಫಿ ಜನಪದ ಹೀಗೆ ವಿವಿಧ ಪ್ರಾಚೀನ ಕಥಾ ಬಿತ್ತಿಗಳಲ್ಲಿವೆ.

ಆಧುನಿಕ ಕಥೆಗಳಲ್ಲಿ ಈ ಹಳೆಯ ಕಥೆಗಳ ವಿವಿಧ ವಿನ್ಯಾಸಗಳು ಹಾಸುಹೊಕ್ಕಾಗಿ ಬೆರೆತುಕೊಂಡಿವೆ. ಅಯಾಯ ಕಾಲಘಟ್ಟಗಳಲ್ಲಿ ಪ್ರಸ್ತುತ ದಿನಗಳ ಬದುಕಿನ ಸಮಸ್ಯೆಗಳ ಅನ್ವಯ ಅಗಾಧವಾದ ಬದಲಾವಣೆ ಹಾಗೂ ಬೆಳವಣಿಗೆಗಳನ್ನು ಕಾಣಬಹುದು.

ಹೀಗೆ ಬಂದಂತಹ ಸಾಹಿತ್ಯವನ್ನು ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ–ದಲಿತ ಎಂಬುದಾಗಿ ವಿಭಾಗಮಾಡಿಕೊಳ್ಳಬಹುದು. ಕನ್ನಡದ ಆರಂಭದ ದಶಕಗಳ ಸಣ್ಣಕಥೆಗಳಲ್ಲಿ ಕಥೆಗಾರರು ಇಂಗ್ಲಿಷ್ ಶಿಕ್ಷಣ, ವಿಧವಾ ವಿವಾಹ, ನೈತಿಕತೆ, ಸ್ತ್ರೀಸ್ವಾತಂತ್ರ್ಯ, ಸಮಾನತೆಯ ಪ್ರಶ್ನೆಗಳನ್ನು ಎದುರಿಸಿರುವುದನ್ನು ಪ್ರಧಾನವಾಗಿ ಕಾಣಬಹುದು. 20ನೇ ಶತಮಾನದ ಕೊನೆಯ ವೇಳೆಗೆ ಸ್ತ್ರೀ ಸಂವೇದನೆ, ದಲಿತ ಸಮಸ್ಯೆ, ಪಟ್ಟಣ ಮತ್ತು ಹಳ್ಳಿಗಳ ಸಂಘರ್ಷ, ಗ್ರಾಮೀಣ ಬದುಕು. ಪರಿಸರ ಹಾಗೂ ಜಾಗತಿಕ ವಿದ್ಯಾಮಾನಗಳ ನಡುವಿನ ಸಂಬಂಧ, ಸಮಾಜ ಮತ್ತು ಸಾಮಾಜಿಕ ಪ್ರಜ್ಞೆ, ವಿವಿಧ ಪ್ರಗತಿಪರ ಚಳುವಳಿಗಳ ಮಹತ್ವದ ಸಮಸ್ಯೆಗಳು ಸಂವೇದನೆಗಳು ಹಾಗೂ ಸವಾಲುಗಳು ಕಾಣಿಸಿಕೊಂಡವು. ಈ ನಿಟ್ಟಿನಲ್ಲಿ ಸಣ್ಣಕಥೆಯ ವ್ಯಾಪ್ತಿ ಹಾಗೂ ಮಹತ್ವವನ್ನು ಹಿಂದಿಗಿಂತ ಮತ್ತಷ್ಟು ಹೆಚ್ಚಿನ ಜವಾಬ್ದಾರಿಯಲ್ಲಿ ವಿಸ್ತರಿಸಿದೆ.

ನಾಗತಿಹಳ್ಳಿ ಚಂದ್ರಶೇಖರ್ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ೭೦ ರ ದಶಕದ ಹೊಸ ತಲೆಮಾರಿನ ಕಥೆಗಾರರಾಗಿ ತಮ್ಮ ಬರವಣಿಗೆಯನ್ನು ಆರಂಭಿಸಿದವರು. ಅವರು ಸಮಕಾಲಿನ ಸ್ಪಂದನೆ. ನವನಾಗರಿಕತೆಯ ಸವಾಲುಗಳನ್ನು ತನ್ನ ಭಾವಗಳ ಪರಿಪೂರ್ಣ ಅಭಿವ್ಯಕ್ತಿಯ ವಿಷಯವಾಗಿ ಮಾಡಿಕೊಂಡಿದ್ದಾರೆ. ತನ್ನದೇ ವ್ಯಕ್ತಿತ್ವದಲ್ಲಿ ಜೀವ ತುಂಬುವ ಆತ್ಮ ಚರಿತ್ರೆಯ ಪುಟಗಳನ್ನು ಕಥೆಯಾಗಿಸಿ ಕಥೆಯೊಳಗಿನ ಪಾತ್ರವಾಗಿ ಬದುಕಿನ ನೈಜತೆಯನ್ನು ನಿರೂಪಣೆ ಮಾಡುವಂತಹ ನಾಗತಿಹಳ್ಳಿ ಇದುವರೆವಿಗೂ ಏಳು ಕಥಾ ಸಂಕಲನಗಳಲ್ಲಿ ಎಂಬತ್ತು ಕಥೆಗಳನ್ನು ಬರೆದಿದ್ದಾರೆ.

ನಾಗತಿಹಳ್ಳಿಯವರ ಕಥೆಯ ಒಡಲಾಳದಲ್ಲಿ ಹುದುಗಿದ ಕಥಾದಾರೆಯನ್ನು ಓದಿದ ಹಿರಿಯ ಸಾಹಿತಿ ಡಾ : ಯು.ಆರ್. ಅನಂತಮೂರ್ತಿ ಅವರು "ಸತ್ಯ ಪಕ್ಷಪಾತಿಯೊಬ್ಬನ ಸಂಕಟ ಅವರ ಉತ್ತಮ ಬರವಣಿಗೆಯಲ್ಲಿ ಕಾಣುತ್ತದೆ ಎಂಬುದು ನಾನು ಅವರ ಬರವಣಿಗೆಯನ್ನು ಇಷ್ಟಪಡಲು ಕಾರಣ"[1] ಎಂಬ ನುಡಿಯನಿಡುತ್ತಾರೆ.

ನಾಗತಿಹಳ್ಳಿಯವರು ತಮ್ಮ ಕಥಾ ಹಂದರಗಳನ್ನು ಕಥಾಯಾತ್ರೆಯೊಳಗೆ ವಿಭಾಗಿಸಿ ಗ್ರಾಮಮುಖಿಯಾಗಿ ನಗರಮುಖಿಯಾಗಿ ಪ್ರೇಮಮುಖಿಯಾಗಿ ಸಮಾಜಮುಖಿಯಾಗಿ ಸ್ತ್ರೀಮುಖಿಯಾಗಿ ಒಟ್ಟಾರೆ ಬಹುಮುಖಿಯಾಗಿ ನವ ನಾಗರೀಕತೆಯ ಸವಾಲುಗಳನ್ನು, ಸಮಕಾಲಿನ ಸ್ಪಂದನೆಯಲ್ಲಿ ಅಡಗಿರುವ ಎಲ್ಲಾ ಮಜಲುಗಳನ್ನು ಅಧ್ಯಯನ ಮಾಡಿ ಅವರ ಚಿಂತನೆ ನಿಲುವು ಅಸಕ್ತಿ ತತ್ವಗಳನ್ನು ಅನಾವರಣಗೊಳಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ನಾಗತಿಹಳ್ಳಿ ಚಂದ್ರಶೇಖರ್ ಅವರ ಕಥೆಗಳ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ನಿಂಬಧವು ಮುಖ್ಯವಾಗಿ ಹತ್ತು ಅಧ್ಯಾಯಗಳನ್ನು ಒಳಗೊಂಡಿರುತ್ತದೆ.

ಅಧ್ಯಾಯ–2. ನಾಗತಿಹಳ್ಳಿ ಚಂದ್ರಶೇಖರ್ ಅವರ ಬದುಕು – ಬರಹ

ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಎಂಬತ್ತರ ದಶಕದಿಂದೀಚೆಗೆ ಗಮನ ಸೆಳೆದವರಲ್ಲಿ ನಾಗತಿಹಳ್ಳಿಯವರೂ ಒಬ್ಬರು. ಶಾಲಾ ದಿನಗಳಲ್ಲೆ ಪ್ರತಿಭೆ ಪರಿಶ್ರಮಗಳನ್ನು ವ್ಯಕ್ತಪಡಿಸಿದವರು. ಬಾಲ್ಯದಲ್ಲೆ ಕಥನಕಟ್ಟುವ ನಟನಾ ಪ್ರತಿಭೆಯುಳ್ಳವರಾಗಿದ್ದರು. ಸಂಜೆ ಕಾಲೇಜಿನ ಶಿಕ್ಷಣ ದಿನಗೂಲಿ ದುಡಿಮೆ ಹಗಲು ಓದು ರಾತ್ರಿ ನೌಕರಿಯಲ್ಲೇ ಓದು ಮುಂದುವರಿಸಿ ಸ್ನಾತಕ ಪದವಿ ಪಡೆದು ಉಪನ್ಯಾಸಕರಾಗಿ, ಸಿನಿಮಾ ಕಸುಬುದಾರಿಕೆ ಹೀಗೆ ಬದುಕಿನ ಭಿನ್ನ ಅನುಭವಗಳನ್ನು ದಾಟಿ ಬಂದ ಇವರು ಏಳು ಕಥಾ ಸಂಕಲನದಲ್ಲಿ ಎಂಬತ್ತು ಕತೆಗಳನ್ನು ಪ್ರಕಟಿಸಿದ್ದಾರೆ. ಕಾದಂಬರಿ ಪ್ರವಾಸ ಕಥನ ಅಂಕಣ ಬರಹಗಾರರಾಗಿ ಪ್ರಕಾಶಕರಾಗಿ ನಿರ್ದೇಶಕರಾಗಿ ಸಂಭಾಷಣಕಾರರಾಗಿ ತಮ್ಮ ಆತ್ಮ ಬದುಕಿನ ಚಿತ್ರಣಗಳನ್ನು ನೀಡುವುದರ ಜೊತೆಗೆ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಜಗತ್ತಿಗೆ ತನ್ನದೇ ಆದ ದಾಖಲೆಗಳನ್ನು ಕಟ್ಟಿಕೊಡುತ್ತಾರೆ. ಇದರೊಳಗೆ ಚಳುವಳಿಗಳನ್ನು ನಡೆಸುವ ಭಾಗವಹಿಸುವ. ಸಾಂಸ್ಕೃತಿಕ ಸಂಘಟಕರಾಗಿ ಸಂಸ್ಕೃತಿ ಹಬ್ಬದ ನೇತರರಾಗಿ ಸಾಮಾಜಿಕ ಕೈಂಕರ್ಯ ಪ್ರವೃತ್ತಿ ಹೊಂದಿದ ನಾಗತಿಹಳ್ಳಿಯವರ ಚಿಂತನೆ ಹಲವು ಶೋಧಗಳಿಗೆ ದಾರಿ ಮಾಡಿಕೊಡುವ ಬರಹಗಳನ್ನು ಬದುಕನ್ನು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಕಾಣುವಂತದಾಗಿದೆ.

ಅಧ್ಯಾಯ-3. ನಾಗತಿಹಳ್ಳಿ ಅವರ ಕಥೆಗಳಲ್ಲಿ ಗ್ರಾಮೀಣ ಬದುಕು.

ಗ್ರಾಮೀಣ ಬದುಕಿನ ಪರಿಸರವನ್ನು ವಸ್ತುವಾಗಿಸಿಕೊಂಡು ಗ್ರಾಮ್ಯ ಜನರ ನೋವು. ನಲಿವುಗಳನ್ನು ತನ್ನ ನೆಲದ ಮಣ್ಣಿನ ವಾಸನೆಯ ವೈಶಿಷ್ಟ್ಯಗಳ ವಿಭಿನ್ನ ಆಯಾಮಗಳೊಡನೆ ನಾಗ ... ಅನುಭವ ಜೀವನ ಪ್ರೀತಿ ಗ್ರಾಮ್ಯ ಚಿಂತನೆ ಜೀವನ ಮೌಲ್ಯಗಳ ಧೋರಣೆ ಅಂತಃ ... ಘಟ್ಟಗಳಲ್ಲಿ ತೆರೆದು ಸೂಕ್ಷ್ಮ ಸಹಜಾಭಿವ್ಯಕ್ತಿಗಳನ್ನು ಒರೆಹಚ್ಚಿ ಬಿಂಬಿಸುವ ನಿಲುವಿನ ಆಶಯವನ್ನು ವ್ಯಕ್ತಪಡಿಸಿದೆ.

ಅಧ್ಯಾಯ-4. ನಾಗತಿಹಳ್ಳಿಯವರ ಕಥೆಗಳಲ್ಲಿ ನಗರ ಜೀವನದ ಸಂಕೀರ್ಣ ಮುಖಗಳು

ನಗರ ಜೀವನದ ಸಂಕೀರ್ಣ ಮುಖಗಳು ಎಂಬ ಧೋರಣೆಯನ್ನು ಆಯ್ದುಕೊಂಡು ತನ್ನ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುವ ನಿಲುವು, ಯಾಂತ್ರಿಕ ಬದುಕಿನಲ್ಲಿ ನೈತಿಕ ಪ್ರಜ್ಞೆಯ ವಿಕಾಸ ಮನೋವಿಜ್ಞಾನದ ತಾಂತ್ರಿಕ ನಡವಳಿಕೆಗಳ ಶೋಧನೆ. ಕೆಲಸದ ಒತ್ತಡ ನಗರೀಕರಣದ ನೋವು ಭಾವನಾತ್ಮಕ ಅವಲಂಬನೆಯ ಕುರಿತ ಇಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ಬಡವ ಶ್ರೀಮಂತರ ನಡುವಿನ ಅಂತರ ಶೋಷಣೆ ... ಸಿಟ್ಟುಗಳನ್ನು ಅಭಿವ್ಯಕ್ತಿಸುವ ಆಶಯಗಳು ಇಲ್ಲಿವೆ.

ಅಧ್ಯಾಯ-5. ನಾಗತಿಹಳ್ಳಿಯವರ ಪ್ರೇಮ : ಪ್ರಕೃತಿ ಮತ್ತು ಪ್ರವೃತ್ತಿ

ಪ್ರೇಮ : ಪ್ರಕೃತಿ - ಪ್ರವೃತ್ತಿ ಎಂಬ ಚಿಂತನೆಗಳು ಆಧುನಿಕ ವಿದ್ಯಾವಂತ ಸಮಾಜದ ಪ್ರೀತಿ ಪ್ರೇಮವು ನೆನಪುಗಳಾಗುತ್ತವೆ. ದುರಂತಗಳಾಗಿ ಮೈದಾಳುತ್ತವೆ. ಸಹಜ ಪ್ರಕೃತಿ ಪ್ರೀತಿಯ ನಡುವೆ ಕೃತಕವಾಗಿಸುವ ಮಾನವ ಪ್ರವೃತ್ತಿಯ ಪ್ರೀತಿ ಧೋರಣೆಗಳು ಇವರ ಕಥೆಗಳಲ್ಲಿ ವ್ಯಕ್ತವಾಗುತ್ತವೆ. ಪ್ರೀತಿ ಪ್ರೇಮ ಪ್ರಣಯಗಳ ಸುತ್ತ ಹೆಣದ ಕಥೆಗಳ ಪಾತ್ರದ ನಿಲುಮೆಯನು ಕಥೆಗಾರರಾಗಿ ನಿರೂಪಕರಾಗಿ ಕಥೆಯೊಳಗಿನ ನಾಗತಿಹಳ್ಳಿಯವರ ಆಶಯಗಳನ್ನು ಸೂಕ್ಷ್ಮ ಸಹೃದಯಿಗಳ ಭಾವತರಂಗಗೊಳೊಡನೆ ಪ್ರೇಮ ಪ್ರವೃತ್ತಿಗೆ ಬಲಿಯಾಗಿ ಬದುಕನ್ನು ಕಟ್ಟಿಕೊಳ್ಳುವ ತುಡಿತದ ಪ್ರಶ್ನೆಗಳು ಈ ಆವರಣದಲ್ಲಿ ಕಾಡುತ್ತದೆ.

ಅಧ್ಯಾಯ-6. ನಾಗತಿಹಳ್ಳಿಯವರ ಕಥೆಗಳಲ್ಲಿ ಸ್ತ್ರೀ ಸಂವೇದನೆ

ಸ್ತ್ರೀ ಸಂವೇದನೆ ಪ್ರಸ್ತುತ ದಿನದಲ್ಲಿ ಹೆಚ್ಚು ಅಧ್ಯಯನಕ್ಕೆ ಒಳಪಟ್ಟ ವಿಷಯ. ಇದು ನಾಗತಿಹಳ್ಳಿಯವರ ಕಥೆಗಳಲ್ಲಿಯೂ ಇದೆ. ಈ ಹಿನ್ನೆಲೆಯಲ್ಲಿ ಬರುವ ಪಾತ್ರದೊಳಗೆ ವಾಸ್ತವಿಕ ನಿಲುವು ದಿನಚರಿಯ ಚರಿತ್ರೆಯಾಗಿ ಕಟ್ಟಿಕೊಳ್ಳುವ ಸ್ತ್ರೀಗೆ ನ್ಯಾಯ ಒದಗಿಸುಲ್ಲಿ ಕಥೆಗಾರರ ನಿಲುವೇನು?

ಹೆಣ್ಣಿನ ಹೋರಾಟ ಹೆಚ್ಚಾದಂತೆಲ್ಲ ಪುರುಷ ದೌರ್ಜನ್ಯ ಹೆಚ್ಚಾಗುತ್ತದೆ. ಇಲ್ಲಿ ಬರುವ ಕಥೆಗಳಲ್ಲಿ ಹೆಣ್ಣೊಬ್ಬಳು ಅನುಭವಿಸುವ ಯಾತನೆಗಳು ವಿಭಿನ್ನವಾದರೂ ಕೇಂದ್ರ ಪಾತ್ರದ ಆಶಯಗಳು ಸಾಮಾಜಿಕ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ತನ್ನಾದಾಗಿಸುವ ಪ್ರಯತ್ನಗಳ ಧೋರಣೆಯನ್ನು ವ್ಯಕ್ತಿಸಲಾಗಿದೆ. ಪುರುಷನ ದಮನಕ್ಕೆ ಸ್ತ್ರೀ ಒಳಗಾಗುತ್ತಾಳೆ. ಇಂದು ಪ್ರಸ್ತುತ ನ್ಯಾಯ ಹಾಗೂ ಪಕ್ಕುಗಳ ದಿಕ್ಕೇನು? ಲೇಖಕರ ನಿಲುವನ್ನು ಹೊರಗೆಡಹುವ ಪ್ರಯತ್ನ ಇದಾಗಿದೆ.

ಅಧ್ಯಾಯ-7. ನಾಗತಿಹಳ್ಳಿಯವರ ಕಥೆಗಳಲ್ಲಿ ಸಾಮಾಜಿಕ ಪ್ರಜ್ಞೆ

ಸಮಾಜದಲ್ಲಿ ನಡೆಯುತ್ತಿರುವ ಹಿಂಸೆ ಅಸಮಾನತೆ ಬಲಿಷ್ಠರಿಂದ ದುರ್ಬಲರ ಶೋಷಣೆಗೆ ಕಥೆಯ ಸಂದರದಲ್ಲಿ ಲೇಖಕನದ ಮಿಳಿತಗಳೇನು ನಿರ್ಮಲ ಸಾಮಾಜಕ್ಕೆ ಸಂಘಟನೆಯೊಂದೇ ಸಾಕ. ವಾಸ್ತವ ಸಂಗತಿಗಳು ಕಲಾತ್ಮಕ ಸಂಗತಿಯ ಕಥೆಗಳಾಗಿ ಜಾತಿ ಪದ್ಧತಿ ಮತಾಂತರ ಕೊಮುವಾದ ರಾಜಕಾರಣಥ ನೋವುಂಡವರ ನ್ಯಾಯದ ಧ್ವನಿಗೆ ಅಭಿವ್ಯಕ್ತಿಯಲ್ಲಿನ ಚಿಕಿತ್ಸ ಕ್ರಮಗಳೇನು? ಸಮಸ್ಯೆಯನ್ನು ಕಲಾತ್ಮಕತೆಯ ಕಗ್ಗಂಟಾಗಿ ವ್ಯಕ್ತವಾಗಿಸುವ ಬದಲು ಹೋರಾಟದ ಬಂಡಾಯ ಧ್ವನಿಗೆ ವ್ಯವಸ್ಥೆಯ ಬಲಿಷ್ಠತೆಯಲ್ಲಿ ಅಂತ್ಯಕಾಣಿಸುವ ಧೋರಣೆಯ ಗುಣ ಹಾಗೂ ಋಣಾತ್ಮಕತೆ ಮನಗಾಣಬೇಕಾದದು ಅಗತ್ಯ. ಸಾಮಾಜಿಕ ವ್ಯಕ್ತಿಗಳ ಡಾಂಬಿಕತೆ ಮೋಸ ವಂಚನೆ ಮೊದಲಾದ ಸಂಗತಿಗಳನ್ನೆಲ್ಲಾ ಆಯ್ದು ಲೆಕ್ಕಿಸಿ ಮಿಳಿತ ಬಾವದ ಸರಾಸರಿಗೆ ಲೇಖಕರ ಪಾತ್ರ ಯಾವುದು? ಎಂಬ ಪ್ರಭಾವಗಳನ್ನು ಬಯಲುಗೊಳಿಸಲಾಗುವುದು.

ಅಧ್ಯಾಯ-8. ನಾಗತಿಹಳ್ಳಿಯವರ ಕಥೆಗಳಲ್ಲಿನ ಜಾಗತೀಕ ವಿದ್ಯಮಾನಗಳು:

ಜಾಗತೀಕರಣವನ್ನು ತೆಗಳುತಾ ಕೂರುವುದನ್ನು ಬಿಟ್ಟು ಅದನ್ನು ಧನಾತ್ಮಕವಾಗಿ ವಿಶ್ವಮಾನವತೆಯಲ್ಲಿ ಸ್ವೀಕರಕ್ಕೆ ಸಿದ್ದರಾಗುವ ಲೇಖಕರು ಮುಕ್ತ ವ್ಯಾಪಾರವನ್ನು ನೆಪಮಾಡಿ ಉಪಭೋಗ ಸಂಸ್ಕೃತಿಯನ್ನು ವೈಭವೀಕರಿಸುವ ಹಾಗೂ ದೈಹಿಕ ಲೊಲುಪತೆಯೇ ಮುಖ್ಯವಾಗಿರುವ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ನಮ್ಮ ಮೇಲೆ ಹೇರಲ್ಪಡುವುದರ ವಿರುದ್ದವು ಮುಖ ಮುಖಿಯಾಗುತ್ತಾರೆ.

ಹೈವೆ ಪ್ರವೇಶದಲ್ಲಿನ ಜಾಗೃತಿ ನೆಲೆಗಟ್ಟು ಸಂಸ್ಕೃತಿಗಳ ಚಿಂತನೆಯೊಳಗೆ ಉದಾರೀಕರಣ ಖಾಸಗಿವಲಯದ ಹೆಸರಿನಲ್ಲಿ ಉದ್ಯೋಗದ ಅವಕಾಶ ಐಶಾರಾಮಿತನಗಳಲ್ಲಿ ಹೆಣ್ಣು ಗಂಡಿನ ಸ್ವೇಚ್ಛಾಚಾರಗಳೊಳಗೆ ಸಾಮಾಜಿಕ ಸಾಂಸ್ಕೃತಿಕ ಪಲ್ಲಟಗಳ ನಡುವೆ ನುಸುಳುವ ಚಿಂತನೆಯನ್ನು ಧೋರಣೆಯೊಳಗೆ ಬಂಧಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ– 9. ನಾಗತಿಹಳ್ಳಿಯವರ ಕಥೆಗಳಲ್ಲಿ ಭಾಷೆ ಮತ್ತು ಅಭಿವ್ಯಕ್ತಿ.

ಓದುಗನ ಸಂಹವನ ಕ್ರಿಯೆಗೆ ಅಭಿವ್ಯಕ್ತಿ ಅತ್ಯುತ್ತಮ ಮಾಧ್ಯಮ ಇಲ್ಲಿ ಕಥೆಗಾರ ನಿರೂಪಕನಾಗಿ ಒಮ್ಮೊಮ್ಮೆ ಪಾತ್ರವಾಗಿ ಕಥೆಯೆಣೆವ ವಾಸ್ತವತೆಯನ್ನು ಚಿತ್ತರಿಸುವ ಕ್ರಮಗಳ ಭಿನ್ನತೆಯನ್ನು ಚಿತ್ತರಿಸುವ ಕ್ರಮಗಳ ಭಿನ್ನತೆಯ ವಿಭಿನ್ನ ಲೇಖಕರು ಗ್ರಾಮೀಣ ದೇಶಿ ಸೊಗಡಿನ ಭಾಷೆಯಲ್ಲಿ ಪಾಶ್ಚ್ಯಾತ್ಯ ರಾಷ್ಟ್ರದ ಸೋಗಿನಲ್ಲಿ ಪ್ರವಾಸಾನುಭವದ ಬರವಣಿಗೆಗಳಲ್ಲಿ ದಟ್ಟ ಸಿನಿಮಾಗಳ ಬದುಕಿನ ಹಂದರದೊಳಗಿನ ಅಭಿವ್ಯಕ್ತಿ ಓದುಗನಿಗೆ ಮುಖಮುಖಿ ನಿಲ್ಲುತ್ತವೆ. ಇವೆಲ್ಲಾ ವಸ್ತು ಹಾಗೂ ಕಥಾವ್ಯಾಪ್ತಿಯ ದೃಷ್ಟಿಯಿಂದ ವಿಭಿನ್ನವಾಗುತ್ತವೆ. ಅಶ್ಲೀಲ ನುಡಿಗಳಾದರೂ ಅದೊಂದು ಸೃಜತೆ ಎಂಬಂತೆ ವ್ಯಕ್ತ ಪಡಿಸುವ ದಾಟಿ. ಏಕ–ಅನೇಕಗಳನ್ನು ಬೆಸೆಯುವ ವಿಧಾನಗಳನ್ನು ಅಭಿವ್ಯಕ್ತಿಯ ವಿನ್ಯಾಸಗಳು ವ್ಯಕ್ತ ಸಂಗತಿ, ವೃತ್ತಿ ಅನುಭವ, ಪ್ರವಾಸಾನುಭವಗಳ ಅಭಿವ್ಯಕ್ತಿಗಳನ್ನು ಮಾನಗಾಣಬೇಕಾದದು ಅಗತ್ಯ.

ಅಧ್ಯಾಯ– 10. ಉಪ ಸಂಹಾರ

ಹೀಗೆ ಇವರ ಕಥೆಗಳನ್ನು ಸಹೃದಯ ಓದುಗನಾಗಿ ನಾನು ಓದಿದ ನಂತರ ಹಲವು ಪ್ರಶ್ನೆ ತಾಕಲಾಟಗಳು ನನ್ನನ್ನು ಕಾಡ ತೊಡಗಿದವು ಅಯಾಯ ಘಟ್ಟಗಳಲ್ಲಿ ವ್ಯಕ್ತವಾಗುವ ಧೋರಣೆ ನಿಲುವು ಒತ್ತಾಸೆಗಳನ್ನು ಗ್ರಹಣಮಾಡಿ ತನ್ನ ಕಕ್ಷೆಗೆ ತೆಗೆದುಕೊಂಡಿದೆನೆ. ಎಲ್ಲವನ್ನೂ ಸಮಗ್ರವಾಗಿ ಶೋಧಿಸುವೆ ಎಂಬ ಉಂಬತನವಿಲ್ಲದಿದ್ದರೂ ಅಧ್ಯಯನ ಅಂತಿಮವಲ್ಲ. ತಿಳಿದ ವಿಚಾರಗಳನ್ನು ಗ್ರಹಿಸುತ್ತಾ ಈ ಹಿನ್ನೆಲೆಯಲ್ಲಿ ನಿಬಂಧಕ್ಕೆ ತನ್ನದೇ ಆದ ಸ್ವೋಪಜ್ಞತೆ ಸಿಗಲಿ ಎಂಬುದು ನನ್ನ ಉದ್ದೇಶ.

****

ಅಡಿ ಟಿಪ್ಪಣಿ

1. ಚಂದ್ರಮಾನ, ಸಂಪಾದಕರು: ಶಿಲ್ಪಶ್ರೀ ಹರವು, ಶಿವಕುಮಾರ ಕಾರೆಪುರ. ಕನ್ನಡ ಸಾಹಿತ್ಯ ಪರಿಷತು: ಮಂಡ್ಯ 2013. ಪುಟ 178

ಅಧ್ಯಾಯ–2

ಅಧ್ಯಾಯ–2

ನಾಗತಿಹಳ್ಳಿ ಚಂದ್ರಶೇಖರ್‌ರವರ ಬದುಕು – ಬರಹ

ಎಂಬತ್ತರ ದಶಕದಲ್ಲಿ ಅಕ್ಷರವನ್ನು ಮಾಧ್ಯಮವಾಗಿಸಿಕೊಂಡು, ಕನ್ನಡ ಸಾಹಿತ್ಯದಲ್ಲಿ ತನ್ನದೆ ಚಾಪನ್ನು ಮಾಡಿಸಿದವರು ನಾಗತಿಹಳ್ಳಿ ಚಂದ್ರಶೇಖರ್. ಸಾಹಿತ್ಯದ ಯಾವುದೇ ಘಟ್ಟಗಳ ಪಟ್ಟಿಕಟ್ಟಿಕೊಳ್ಳದೇ ತನ್ನದೇ ಬದುಕಿನ ವೈಶಿಷ್ಟ್ಯಗಳೊಡನೆ, ತನ್ನ ಪರಿಸರದಲ್ಲೇ ಸಿಕ್ಕ ಅನುಭವವನ್ನು ಸಂಗತಿಗಳನ್ನು ತನ್ನ ಸಾಹಿತ್ಯದಲ್ಲಿ ಸೃಜನಶೀಲಗೊಳಿಸಿದವರು.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ನಾಗತಿಹಳ್ಳಿಯ ಶ್ರೀ ತಿಮ್ಮಶೆಟ್ಟಿಗೌಡ ಮತ್ತು ಪೂರ್ವತಮ್ಮನ ಮಗನಾಗಿ 1958 ಆಗಸ್ಟ್ 15 ರಂದು ಜನಿಸಿದರು. ಮಾಧ್ಯಮಿಕ ಶಾಲೆಯನ್ನು ತನ್ನದೇ ಆದ ಊರಾದ ನಾಗತಿಹಳ್ಳಿಯಲ್ಲಿ, ಪ್ರೌಢ ಶಿಕ್ಷಣವನ್ನು ಕದಬಹಳ್ಳಿಯಲ್ಲಿ, ಕಾಲೇಜುಶಿಕ್ಷಣವನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ, ಮೈಸೂರಿನ ಮಾನಸಗಂಗೋತ್ರಿಯಲ್ಲಿ ಕನ್ನಡ ಎಂ.ಎ ಪದವಿಯನ್ನು ಎಂಟು ಸ್ವರ್ಣಪದಕಗಳೊಂದಿಗೆ ಗಳಿಸಿದರು. ನಂತರ ಹಲವು ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸಿ 15–08–1985ರಲ್ಲಿ 'ಶೋಭ' ಎಂಬುವವರನ್ನು ಸರಳ ವಿವಾಹವಾಗಿ 'ಕನಸು' ಹಾಗೂ 'ಸಿಹಿ' ಎಂಬ ಇಬ್ಬರು ಮಕ್ಕಳೊಂದಿಗೆ ತುಂಬು ಜೀವನ ನಡೆಸುತ್ತಿದ್ದಾರೆ.

ಇವರಿಗೆ ಒಲಿದ ಅಕ್ಷರ ಮಾಧ್ಯಮವು ಬೆಳೆಯುವ ಸಿರಿ ಮೊಳಕೆಯಲ್ಲೇ ಎಂಬಂತೆ ಎಂಟನೇ ತರಗತಿ ಓದುವ ಸಂದರ್ಭದಲ್ಲೇ ಕಥೆಯನ್ನು ರಚಿಸಿ, ಬಹುಮಾನ ಪಡೆದವರು. ಆಗಿನ ಉಪನ್ಯಾಸಕರಾದ ಆನಂತ ಪೆಷ್ವ ಹಾಗೂ ಮುಖ್ಯೋಪಧ್ಯಾಯರಾದ ರಾಮಕೃಷ್ಣೇಗೌಡರ ಪ್ರೀತಿಗೆ ಪಾತ್ರರಾಗಿ, ತರಗತಿಗಳಲ್ಲಿ ಇವರ ಕಥೆಗಳನ್ನು ಓದಿಸಿ ಕಥಾ ಬರವಣಿಗೆಗೆ ನಾಂದಿ ಹಾಡಿದರು. ಅಂತೆಯೆ ಓದಿನ ಸಂದರ್ಭದಲ್ಲೇ ಗಾಯನ ಗೀತೆ ನಾಟಕದ ಅಭಿರುಚಿ ಉಳ್ಳವರಾಗಿ, ಶ್ರೀಕೃಷ್ಣನ ಪಾತ್ರ ಮಾಡಿ ಸೈ ಎನಿಸಿಕೊಂಡವರು. ತುಂಬು ಕುಟುಂಬದಲ್ಲಿ ಇವರ ತಂದೆ ಶಿಕ್ಷಕರಾದ ತಿಮ್ಮಶೆಟ್ಟಿಗೌಡರವರು ಮನೆಯಲ್ಲಿ ಎಲ್ಲರನ್ನು ಕೂರಿಸಿಕೊಂಡು ರಾಮಾಯಾಣ ಮಹಾಭಾರತದ ಕಥೆಗಳನ್ನು ಹೇಳುವಾಗ ನಾಗತಿಹಳ್ಳಿರವರು ಅದನ್ನು ಊಹಿಸಿ ಕಥನದ ಸನ್ನಿವೇಶಗಳನ್ನು ನಿರ್ಮಾಣ ಮಾಡಿಕೊಡುತ್ತಿದ್ದರು. ಹೀಗೆ ಗ್ರಾಮೀಣ ಬದುಕಿನ ನೋವು ನಲಿವು ಸಾಮಾಜಿಕ ಕಟ್ಟುಪಾಡುಗಳು ಜಾತಿವೈಷಮ್ಯಗಳು ರಾಜಕೀಯದ ತಲ್ಲಣಗಳು. ಸ್ತ್ರೀ ಬದುಕಿನ ಹಲವು ಮುಖಗಳು ಇವರನ್ನು ಕಾಡತೊಡಗಿದವು. ಇವರು ಕಂಡ ಬದುಕಿನ ನೋವು ಬಡತನ ಹತಾಶೆಗಳು ಕಿತ್ತುತಿನ್ನುವ ಬಡತನದ

ಮಧ್ಯೆ, ಸಂಜೆ ಕಾಲೇಜಿನ ಓದು. ಹಗಲಿನಲ್ಲಿ ಹೆದ್ದಾರಿಯ ಮೈಲಿಗಲ್ಲುಗಳಿಗೆ ಬಣ್ಣ ಬಳಿಯುತ್ತಾ ಅಂಕಿ-ಸಂಖ್ಯೆ ಊರಿನ ಹೆಸರು ಬರೆಯುತ್ತಾ ಚಿತ್ರಮಂದಿರದ ದ್ವಾರಪಾಲಕನಾಗಿ ನಿಲ್ಲುತ್ತಾ, ಹಾಲಿನ ಡೈರಿ ದಿನಗೂಲಿ ನೌಕರನಾಗಿ ರಾತ್ರಿನುಡಿದು ಎಂ.ಎ ಪದವಿ ಗಳಿಸಿದರು. ಉಪನ್ಯಾಸಕ ವೃತ್ತಿ ಆರಂಭಿಸಿ ಸಿನಿಮಾದಲ್ಲಿ ಚಿತ್ರಕಥೆ ಸಂಭಾಷಣೆ ಗೀತೆಗಳನ್ನು ರಚಿಸುವುದರ ಮೂಲಕ ಭಿನ್ನ ವೃತ್ತಿ ಪ್ರವೃತ್ತಿ ಹಾಗೂ ಅನುಭವನ್ನು ದಾಟಿ ಬಂದ ಇವರು ಎಂಬತ್ತರ ದಶಕದಿಂದೀಚೆಗೆ ತಮ್ಮ ಕಥೆ, ಕಾದಂಬರಿ, ಪರಿಸರ ಗೀತೆಗಳು, ಚಿತ್ರಗೀತೆಗಳು ಸಿನಿಮಾದಿಂದ ಧಾರಾವಾಹಿಗಳಿಂದ ಕನ್ನಡಿಗರ ಜನಮಾನಸದಲ್ಲಿ ಹೆಸರಾದರು. ಎಲ್.ಮುಕುಂದರಾಜು ಹೇಳುವಂತೆ: "ಎಲ್ಲಿ ಹಸಿವು ಅವಮಾನ ನೋವು ಸಂಕಟ ಗಳಿರುತ್ತವೆಯೋ ಅಲ್ಲಿ ಪ್ರತಿಭೆಗಳು ಹುಟ್ಟುತ್ತವೆ ಎಂಬುದಕ್ಕೆ ನಾಗತಿಹಳ್ಳಿಯವರೇ ಒಂದು ಸಾಕ್ಷಿ."[1] ಓದುವ ಸಂದರ್ಭದಲ್ಲೇ ಲಂಕೇಶ್ ಹಾಗೂ ತೇಜಸ್ವಿರವರ ಪ್ರಭಾವಕ್ಕೆ ಒಳಗಾಗಿ, ಪತ್ರಿಕೆಗಳಲ್ಲಿ ರವಿಬೆಳಗೆರೆ ನಾಗತಿಹಳ್ಳಿ ಜಯಂತ ಕಾಯ್ಕಿಣಿರವರು ತಮ್ಮ ಕಥೆಗಳನ್ನು ಪ್ರಕಟಿಸುವುದರ ಮೂಲಕ ಅಂದಿನ ಪತ್ರಿಕೆಗಳ ನಾಯಕರಾದರು. ಇಂತಹ ಇವರ ಕಥೆಗಳನ್ನು ಕಂಡ ಚಂದ್ರಶೇಖರ್ ಕಂಬಾರರವರು "ನಾಗತಿಹಳ್ಳಿ ಚಂದ್ರಶೇಖರ್‌ರವರ ಭಾಷೆ ಹೆಚ್ಚು ಆಳ ಮತ್ತು ಹರವುಗಳನ್ನುಳದ್ದು, ಕಥನಕ್ಕೆ ಹೇಳಿಮಾಡಿದ ಕಾವ್ಯ ಭಾಷೆ ಪಚನವಾಗಿ ರಕ್ತವಾಗಿ ಹುಟ್ಟುಗುಣಗಳ ಮ್ಯಾಲೆ ಒತ್ತಡ ತರುವಂಥದ್ದು. ಇವರ ಬರವಣಿಗೆ ಚೇತೋಹಾರಿಯಾದದ್ದು ಮಳಲನ್ನು ಚಿಗುರಿಸುವಂಥದ್ದು."[2] ಎನ್ನುತ್ತಾರೆ.

ಇವರು ಒಟ್ಟು ಏಳು ಕಥಾ ಸಂಕಲನಗಳಲ್ಲಿ, ಎಂಬತ್ತು ಕಥೆಗಳನ್ನು ಬರೆದಿದ್ದಾರೆ. 1981 ರಲ್ಲಿ ಪ್ರಥಮ ಕಥಾ ಸಂಕಲನ ಹದ್ದುಗಳು ಪ್ರಕಟಗೊಂಡಿತು, ಹಾಗೆಯೇ 1985 ರಲ್ಲಿ ನನ್ನ ಪ್ರೀತಿಯ ಹುಡುಗನಿಗೆ, 1986ರಲ್ಲಿ ಮಲೆನಾಡಿನ ಹುಡುಗಿ ಬಯಲು ಸೀಮೆಯ ಹುಡುಗ, 1990 ರಲ್ಲಿ ಸನ್ನಿಧಿ, 1995 ರಲ್ಲಿ ಪ್ರೇಮ ಕಥಾ ಸಂಪುಟ. ಅದೇ ವರ್ಷ ಅಕಾಲ, 2013 ರಲ್ಲಿ ಛಿದ್ರ ಇವೆಲ್ಲವುಗಳನ್ನು ಒಳಗೊಂಡಂತೆ ಪ್ರಾತಿನಿಧಿಕವಾಗಿ ನಲವತ್ತು ಕಥೆಗಳನ್ನು ಆಯ್ದು ಕಥಾಯಾತ್ರೆಯನ್ನು 2010 ರಲ್ಲಿ ಹೊರತಂದರು. ನಾಗತಿಹಳ್ಳಿಯವರು ಒಟ್ಟು ಕಥೆಗಳಲ್ಲಿ 2013 ರಲ್ಲಿ ನಿಮ್ಮ ಮೆಚ್ಚಿನ ಕಥೆಗಳು ಎಂಬ ಕಥಾ ಸಂಕಲನಗಳನ್ನು ಅಭಿವ್ಯಕ್ತಿ ಪ್ರಕಾಶನದಲ್ಲಿ ಪ್ರಕಟಗೊಳಿಸಿದರು.

ಇಷ್ಟಲ್ಲದೆ 'ಅಮೇರಿಕಾ!ಅಮೇರಿಕಾ' ಸಿನಿಮಾಚಿತ್ರಕಥೆಯನ್ನು 2010ರಲ್ಲಿ ಹೊರತಂದರು. ಕಾದಂಬರಿ ಗಳಾದ 'ಬಾ ನಲ್ಲೆ ಮಧುಚಂದ್ರಿಕೆ' 1987 ರಲ್ಲಿ, 'ಚುಕ್ಕಿ ಚಂದ್ರಮರ ನಾಡಿನಲ್ಲಿ' 1988ರಲ್ಲಿ, 'ವಲಸೆಹಕ್ಕಿಯ ಹಾಡು' 1995ರಲ್ಲಿ ಪ್ರಕಟಗೊಂಡವು. ಇರುವುದೆಲ್ಲವ ಬಿಟ್ಟು ಇಲ್ಲದಿದ್ದರ ಕಡೆಗೆ ಸೆಳೆವುದೇ ಮನಸ್ಸು ಎಂಬುದು, ಬಾಲ್ಯದಿಂದಲೇ ಪ್ರವಾಸಮಾಡುವ ಹಂಬಲವನ್ನು ಹೊತ್ತು,

ಲಾರಿಚಾಲಕನಾಗಿ ಇಡೀ ದೇಶವನ್ನೇ ನೋಡುವ ಹಂಬಲ ಹೊತ್ತ ನಾಗತಿಹಳ್ಳಿ 36ರಿಂದ ನಲವತ್ತು ರಾಷ್ಟ್ರಗಳನ್ನು ಪ್ರವಾಸಮಾಡಿ ಪ್ರವಾಸ ಸಾಹಿತ್ಯವನ್ನು ರಚಿಸಿದರು. ಅದರಲ್ಲಿ 1992ರಲ್ಲಿ 'ಅಯಾನ', 1997ರಲ್ಲಿ 'ಅಮೇರಿಕಾ!ಅಮೇರಿಕಾ', 2004ರಲ್ಲಿ 'ದಕ್ಷಿಣ ಧ್ರುವದಿಂ', 2008ರಲ್ಲಿ 'ನನ್ನ ಗ್ರಹಿಕೆಯ ಈಜಿಫ್ಟ್,' 2009ರಲ್ಲಿ 'ಸಿಕ್ಕಿಂ', 2010ರಲ್ಲಿ 'ನನ್ನ ಗ್ರಹಿಕೆಯ ನೇಪಾಳ' ಎಂಬ ಕೃತಿಗಳನ್ನು ಹೊರತಂದರು.

ಪತ್ರಾಂಕಣ ರೂಪದ 'ನನ್ನ ಪ್ರೀತಿಯ ಹುಡುಗಿಗೆ' ಲೇಖನ ಆತ್ಮಕಥನವಾಗಿ 2002ರಿಂದ ಪ್ರತಿವರ್ಷದಂತೆ ಆರು ಸಂಪುಟಗಳನ್ನು ಸರಣಿಯಲ್ಲಿ ಪ್ರಕಟಿಸಿದರು. ಅಂಕಣಮಾಲೆ 'ಹೊಳೆದಂಡೆ ನೋಟ'ವನ್ನು 2009ರಿಂದ ಪ್ರತಿವರ್ಷ ಒಂದರಂತೆ ನಾಲ್ಕು ಸಂಪುಟಗಳನ್ನು ಹೊರತಂದರು. 'ರೆಕ್ಕೆಬೇರು' ಎಂಬ ಪ್ರಜಾವಾಣಿ ಅಂಕಣಮಾಲೆ ಭಾಗ 1 ನ್ನು 2014ರಲ್ಲಿ ಪ್ರಕಟಿಸಿದರು. 1999ರಲ್ಲಿ 'ಶತಮಾನ ದಂಚಿನಲ್ಲಿ' 2008ರಲ್ಲಿ 'ಕಾಲಾತೀತ', 2011ರಲ್ಲಿ 'ತರಳಬಾಳು ಹುಣ್ಣಿಮೆ' ಎಂಬ ಸಂಪಾದಿತ ಕೃತಿಗಳನ್ನು ನೀಡಿದರು. ಹೀಗೆ 1986ರಲ್ಲಿ 'ಕಾಡಿನಬೆಂಕಿ' ಚಿತ್ರಕ್ಕೆ ಚಿತ್ರಕಥೆ ಸಂಭಾಷಣೆ ಹಾಗೂ ಗೀತ ಸಾಹಿತ್ಯ ರಚಿಸುವ ಮೂಲಕ ಸಿನಿಮಾ ರಂಗಕ್ಕೆ ಕಾಲಿರಿಸಿದ ನಂತರ ಸಂಕ್ರಾಂತಿ, ಪ್ರಥಮ ಉಷಾಕಿರಣ, ಉದ್ಭವ ಚಿತ್ರಗಳಿಗೆ ಚಿತ್ರಕಥೆ ಹಾಗೂ ಸಾಹಿತ್ಯ ರಚಿಸುವ ಮೂಲಕ ಗಮನ ಸೆಳೆವರು. ಸಾಹಿತ್ಯದಿಂದ ಸಿನಿಮಾ ನಂಟನ್ನು ಕಟ್ಟಿ ಸಿನಿಮಾರಂಗದಲ್ಲಿ ಮೇಷ್ಟ್ರು ಎಂದು ಗುರುತಿಸಿಗೊಂಡರು. ತನ್ನ ಸದಭಿರುಚಿಯ ಚಿತ್ರಗಳಿಂದ ಕಲಾತ್ಮಕ ಹಾಗೂ ಮನೋರಂಜನಾತ್ಮಕ ಚಿತ್ರಗಳ ನಡುವೆ, ಕನ್ನಡ ಸಿನಿಮಾ ಲೋಕಕ್ಕೆ ಹೊಸ ದಿಕ್ಕು ಅವಿಷ್ಕಾರಗಳನ್ನು ತಂತ್ರಗಳನ್ನು ಅಳವಡಿಸಿಕೊಂಡರು. ಇವರ ನಿರ್ದೇಶನದ ಮೊದಲ ಸಿನಿಮಾ 'ಉಂಡು ಹೊದ ಕೊಂಡು ಹೊದ' ಚಿತ್ರದಲ್ಲಿ ಗ್ರಾಮಭಾರತದ ಕಥೆಯನ್ನು ನಿರುದ್ಯೋಗತಂಹ ಸಾಮಾಜಿಕ ಸಮಸ್ಯೆಯನ್ನು ನವಿರು ಹಾಸ್ಯದಲ್ಲಿ ನಿರೂಪಿಸಿ ಗಮನ ಸೆಳೆದರು. ಅಮೇರಿಕಾ! ಅಮೇರಿಕಾ, ನನ್ನ ಪ್ರೀತಿಯ ಹುಡುಗ, ಪ್ಯಾರಿಸ್ ಪ್ರಣಯ, ಚಿತ್ರಗಳಲ್ಲಿ ಪ್ರೇಮ ಕತೆಗಳ ಜೊತೆಗೆ ಪಾಶ್ಚಾತ್ಯ ಮತ್ತು ಭಾರತೀಯ ಬದುಕು ಹಾಗೂ ಸಂಸ್ಕೃತಿಯ ಬಗೆಗಿನ ಪೂರ್ವಾಗ್ರಹವನ್ನು ಪಲ್ಲಟಗೊಳಿಸಿದರು. ಇವರ 'ಕೊಟ್ರೇಶಿ', ತನ್ನ ಊರಿನ ದಲಿತ ಬದುಕಿನ ಪಾತ್ರದ ಚಿತ್ರವಾದರೆ, 'ಹೂಮಳೆ' ಈಶಾನ್ಯ ರಾಜ್ಯದಲ್ಲಿನ ಭಯೋತ್ಪಾದನೆ ಗಡಿಸಮಸ್ಯೆಯನ್ನು ಚಿತ್ರಿಸುತ್ತದೆ. 'ಸೂಪರ್‌ಸ್ಟಾರ್' ನೇಪಾಳದ ರಾಜ ಮನೆತನದ ದುರಂತವನ್ನು, 'ಅಮೃತಧಾರೆ' ದಾಂಪತ್ಯದ ಮಧುರ ಪ್ರೇಮವನ್ನು 'ಮಾತಡ್ ಮಾತಡ್ ಮಲ್ಲಿಗೆ' ಭಾರತದ ರೈತನ ಪರಿಪಾಟಲನ್ನು, 'ಒಲವೇ ಜೀವನ ಲೆಕ್ಕಾಚಾರ' ಹುಸಿ ಕ್ರಾಂತಿಕಾರತನವನ್ನು ಚಿತ್ರಿಸಿರುತ್ತಾರೆ. 'ನೂರು ಜನ್ಮಕೂ' ಸಿನಿಮಾ ಯುವ ಜನತೆಯ ನಿರುದ್ಯೋಗ. ಉದ್ಯೋಗದ ಆಕಾಂಕ್ಷೆ ಪ್ರೇಮದ ಜಾಗತೀಕರಣಗಳ ಆರ್ಥಿಕ ಹಿಂಜರಿತ ಮುಂತಾದ ವಸ್ತುಗಳನ್ನು ಒಳಗೊಂಡಿದೆ.' ಬ್ರೇಕಿಂಗ್

ನ್ಯೂಸ್'ನಂತಹ ಸಮಕಾಲೀನ ವಸ್ತು ಸಂಗತಿಗಳು ಇಲ್ಲಿ ಪರಿಣಾಮಕಾರಿಯಾಗಿವೆ. ಇಷ್ಟಲ್ಲದೆ ದೈನಂದಿನ ಧಾರವಾಹಿಯನ್ನು ಕಿರುತೆರೆಗೆ ತಂದು ಸಾಮಾಜಿಕ ಕೌಟುಂಬಿಕ ಸಮಸ್ಯೆಯನ್ನು, ಬದುಕಿನ ತಾಕಲಾಟಗಳನ್ನು ಪ್ರತಿಬಿಂಬಿಸಿದರು. ಇವರ ವಠಾರ ಧಾರವಾಹಿ ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ 1001 ಸಂಚಿಕೆಯ ದಾಖಲೆ ಸೃಷ್ಟಿಸಿರುವುದು ಇವರ ಸೃಜನಶೀಲತೆಗೆ ಉದಾಹರಣೆಯಾಗಿದೆ. ಒಟ್ಟಿಗೆ ಸಾವಿರಾರು ಕಲಾವಿದರಿಗೆ ಬದುಕನ್ನು ಕಲ್ಪಿಸಿದು ಮತ್ತೊಂದು ಸಾಧನೆಯೇ ಸರಿ. ಇದೇರೀತಿ ಪ್ರತಿಬಿಂಬ, ಕಾವೇರಿ, ಪುಣ್ಯ, ಅಪಾರ್ಟ್‌ಮೆಂಟ್, ಬೆಳ್ಳಿಚುಕ್ಕೆ, ಒಲವೆ ನಮ್ಮ ಬದುಕು, ನಿತ್ಯೋತ್ಸವದಂತಹ ಇವರ ದೈನಂದಿನ ಧಾರಾವಾಹಿಗಳು ಕಿರುತೆರೆಯಿಂದ ಸಮಾಜಕ್ಕೆ ನೀಡಿದ ಸೃಜನಶೀಲ ಕೊಡುಗೆಯಾಗಿವೆ.

ಬಾಲ್ಯದಿಂದಲೂ ಸಂಘಟನೆ ನಾಡುನುಡಿ ಕಲೆಯ ಬಗ್ಗೆ ಸಾಂಸ್ಕೃತಿಕ ಸಂಘಟನೆಯನ್ನು ಕಟ್ಟಿದವರು ಅನಂತರದಲ್ಲಿ 1985 ಆಗಸ್ಟ್ 15 ರಂದು, ತನ್ನ ಸಮಾನ ವಯಸ್ಸಿನ ಗೆಳೆಯರೊಡನೆ ಮೈಸೂರಿನಲ್ಲಿ ಸಂಘಟನೆ ಮಾಡಿ 25 ವರ್ಷಗಳೇ ಸಂದಿವೆ. ಇಲ್ಲಿ ನಿರಂತರ ಚಟುವಟಿಕೆ ಆದರ್ಶಗಳನ್ನು ರೂಡಿಸಿಕೊಂಡು ಬಂದರು. ಇದೇ ವೇದಿಕೆಯ ಉದ್ಘಾಟನೆ ನಾಗತಿಹಳ್ಳಿ ಶೋಭ ರವರ ವಿವಾಹ ಒಂದೇ ದಿನ ಎಂಬುವುದು ವಿಶೇಷ ಆದರ್ಶಗಳನ್ನು ಕ್ರೂಢೀಕರಿಸಿಕೊಂಡು ಅಂತರಜಾತಿ ವಿವಾಹ ಅಂತರಧರ್ಮ ವಿವಾಹ, ವಿಚಾರ ಗೋಷ್ಠಿ, ಹೊರನಾಡ ಕನ್ನಡಿಗರ ಕೃತಿಗಳ ಜೊತೆಗೆ ಪ್ರತಿವರ್ಷ ಹಲವು ಪುಸ್ತಕಗಳನ್ನು ಪ್ರಕಟಿಸುತ್ತಾ 48 ಪುಸ್ತಕಗಳನ್ನು ಹೊರತಂದರು ಆರೋಗ್ಯಕರ ಚಿಂತನೆಗಳನ್ನು ಬಿತ್ತುವ, ಬೆಳಸುವ ಪ್ರಯತ್ನದಲ್ಲಿ ತೊಡಗಿರುವ ಈ ವೇದಿಕೆ ಹಿರಿಯ ಕಿರಿಯ ಗೆಳೆಯರೊಂದಿಗ ಸಂಗಾತಿಯೊಂದಿಗೆ ನಾಗತಿಹಳ್ಳಿ ಅವರು ನಿರಂತರ ಬದ್ಧತೆಯೊಂದಿಗೆ ಕ್ರಿಯಾಶಿಲಾರಾಗಿದ್ದಾರೆ.

ತಾನು ಹುಟ್ಟಿದ ಹಳ್ಳಿಯೊಂದಿಗೆ, ತನ್ನ ಹೆಸರನ್ನು ಬೆಳೆಸಿ ಬೆಳಗಿಸಿದರು. ತನ್ನ ಗ್ರಾಮ ಹಾಗೂ ಬದುಕಿನ ಚಿಂತನೆ, ಚಿಕಿತ್ಸೆ, ಚೈತನ್ಯ ಎಂಬ ಆಶಯದೊಂದಿಗೆ 2004ರಲ್ಲಿ ತಮ್ಮ ಊರಾದ ನಾಗತಿಹಳ್ಳಿ ಗ್ರಾಮ, ಸುತ್ತಲಿನ ಹತ್ತೂರು ಗ್ರಾಮಸ್ಥರ ಶಾಲಾ ಮಕ್ಕಳು, ಶಿಕ್ಷಕರು ಊರಿನ ಯುವಕ ಮಂಡಳಿ, ಮಹಿಳಾ ಸಂಘ, ಗೆಳೆಯರು ಹಾಗೂ ತನ್ನ ಹಿತೈಸಿಗಳೊಟ್ಟಿಗೆ ನಡೆಸಿಕೊಂಡು ಬರುತ್ತಿರುವ 'ಸಂಸ್ಕೃತಿ ಹಬ್ಬ' ಒಂದು ಇತಿಹಾಸವೇ ಸರಿ. ದೇಶದ ಬೆನ್ನೆಲುಬಾಗಿರುವ ಹಳ್ಳಿಗಳು. ಮೌಢ್ಯ ತಲ್ಲಣ ನಿಷ್ಕ್ರಿಯತೆ ಬಡತನಗಳಂತಹ ಸಾಂಸ್ಕೃತಿಕ ದಾರಿದ್ರ್ಯಗಳಿಂದ ಬಳಲುತ್ತಿವೆ. ಅಲ್ಲಿ ಹೊಸ ಆಲೋಚನೆಗಳ ಮೂಲಕ ಸಾಂಸ್ಕೃತಿಕ ಸೇವೆಗಳನ್ನು ಸೃಷ್ಟಿಸಿ ಅದೇ ಮಾರ್ಗದ ಬದುಕಿನ ಪ್ರಯತ್ನದಲ್ಲಿ ಗ್ರಾಮೀಣ ಬದುಕಿನ ಆರ್ಥಿಕ ಸದೃಢತೆ ಸ್ವಾವಲಂಬನೆಗೆ ನೆರವಾಗಿದ್ದಾರೆ. ಗ್ರಾಮೀಣ ಕ್ರೀಡೆ. ರಾಸು ಪ್ರದರ್ಶನ.

ಕೃಷಿ ಕುರಿತು ಉಪನ್ಯಾಸ, ಉಚಿತ ವೈದ್ಯಕೀಯ ಶಿಬಿರ, ಕವಿಗೋಷ್ಠಿ, ನಾಟಕೋತ್ಸವ, ಚಲನಚಿತ್ರೋತ್ಸವ, ಯಕ್ಷಗಾನ, ಪುಸ್ತಕ ಪ್ರದರ್ಶನ, ಇಂಗ್ಲಿಷ್ ಕಲಿಕಾ ಶಿಬಿರ, ಕಂಪ್ಯೂಟರ್ ತರಬೇತಿ ಶಿಬಿರ. ಕೃಷಿ, ಕಸುಬು, ಕಿರುಉದ್ದಿಮೆಗಳ ತರಬೇತಿ ಶಿಬಿರ, ಮಕ್ಕಳಿಗಾಗಿ ಕವಿಗೋಷ್ಠಿ, ಚಿತ್ರಕಲೆ, ಜಾನಪದ, ವಾದ್ಯಗೀತೆ ಕಲಿಕೆ ಶಿಬಿರಗಳಂತಹ ಕೌಶಲ್ಯತೆಗಳನ್ನ ಬೆಳೆಸುವ ಕಾರ್ಯವನ್ನು ನೀಡುತ್ತಿದ್ದಾರೆ. ಇಷ್ಟಲ್ಲದೆ ರೈತರಿಗಾಗಿ ಕೃಷಿ ಅಧ್ಯಯನ ಪ್ರವಾಸ ಕೈಗೊಂಡು, ರಾಜ್ಯದ ಹಲವು ಭಾಗಗಳಲ್ಲದೆ ವಿವಿಧ ರಾಜ್ಯಗಳ ಪ್ರವಾಸ ಮಾಡಿ, ಅಲ್ಲಿನ ತಂತ್ರಜ್ಞಾನವನ್ನ ಅಳವಡಿಕೆ ಮಾಡಿಕೊಳ್ಳುವುದರ ಜೊತೆಗೆ ಆರ್ಥಿಕ ಸ್ವಾವಲಂಬನೆಯನ್ನು ಮೈಗೂಡಿಸಿಕೊಂಡಿದ್ದಾರೆ. ಇವರ ಚಿಂತನೆಯ ಇವರ ಸಹಕಾರಗಳು ಸಾಮಾಜಿಕ ಸಹಕಾರಿಯಾಗಿ ಕೆಲಸ ಮಾಡಿವೆ.

ನಾಗತಿಹಳ್ಳಿರವರು ಸಿನಿಮಾ ಸಾಹಿತ್ಯರಂಗದ ಜೊತೆ ರಂಗಭೂಮಿಯ ಚಟುವಟಿಕೆಗಳನ್ನು ಮೈಗೂಡಿಸಿಕೊಂಡಿದ್ದು, ಸಂಸ್ಕೃತಿ ಹಬ್ಬದ ಪ್ರತಿದಿನ ರಾತ್ರಿ ನಾಡಿನ ಖ್ಯಾತ ರಂಗ, ಕಲಾವಿದರಿಂದ ಸಂಘಟನೆಗೊಂಡ ನಾಟಕ ಪ್ರದರ್ಶನ ಏರ್ಪಟಿಸಿ ತನ್ನೂರಿನ ಯುವಕ ಸಂಘಟನೆಯ ಸದಸ್ಯರಿಗೆ ರಂಗತರಬೇತಿ ನಡೆಸಿ ನಮ್ಮೂರ ಗಾಂಧಿ, ಇಗೋಪ್ರಚಾರ, ಅಂಗಿಬಟ್ಟೆ, ಹಳ್ಳಿಚಿತ್ರ, ಧನ್ವಂತರಿ ಚಿಕಿತ್ಸೆ ನಾಟಕಗಳನ್ನು ನಾಡಿನಾದ್ಯಂತ ಪ್ರದರ್ಶಿಸಲಾಗಿದೆ. ರಂಗಭೂಮಿಯ ಅರಿವೇ ಇಲ್ಲದ ಅಪ್ಪಟ ಗ್ರಾಮೀಣ ಮಹಿಳೆಯರಿಗೆ 'ಕರಿಭಂಟ' ನಾಟಕವನ್ನು ಕಲಿಸಿ ಅಭಿನಯಿಸಿದ್ದಾರೆ. ದೆಹಲಿಯ ಕರ್ನಾಟಕ ಸಂಘದ ಪ್ರದರ್ಶನ ಸೇರಿದಂತೆ. ಇನ್ನೂ ಹೆಚ್ಚು ಪ್ರದರ್ಶನವಾಗಿರುವುದು ಒಂದು ರಂಗಭೂಮಿ ಇತಿಹಾಸವೇ ಸರಿ. ಮಕ್ಕಳ ರಂಗಭೂಮಿ ಶಿಬಿರಗಳನ್ನು ನಡೆಸಿ ದೇವರಆಟ, ಹುಲಿಬಂತುಹುಲಿ, ಪಂಚತಂತ್ರ ನಮ್ಮೂರಮಕ್ಕಳು ಮತ್ತೆ ಬಂದವರು ಗಾಂಧಿ. ಬದುಕು ಬದಲಾಯಿಸಬಹುದು. ಹೀಗೆ ಹಲವು ನಾಟಕಗಳನ್ನು ಪ್ರದರ್ಶಿಸಿದ್ದಾರೆ. ನಾಗತಿಹಳ್ಳಿಯನ್ನು ಸಾಂಸ್ಕೃತಿಕ ಕೇಂದ್ರವಾಗಿ, ಗ್ರಾಮದಲ್ಲಿ ಸಂಸ್ಕೃತಿ ಹಬ್ಬವಾಗಿ ರೂಪುಗೊಳಿಸಿದವರಾಗಿದ್ದಾರೆ.

ಅರಸಿ ಬಂದ ಪ್ರಶಸ್ತಿ ಮತ್ತು ಮನ್ನಣೆಗಳು

ಇಷ್ಟೇಲ್ಲಾ ಕ್ರೀಯಾತ್ಮಕ ಚಟುವಟಿಕೆಗಳನ್ನು ವ್ಯಕ್ತಿಗತಮಾಡಿಕೊಂಡ, ನಾಗಹಳ್ಳಿರವರಿಗೆ ಸಮಾಜ ಸರ್ಕಾರಗಳು ಅವರನ್ನು ಆತ್ಮೀಯವಾಗಿ ಗೌರವಿಸಿ ಮನ್ನಣೆಯನ್ನು ನೀಡಿದೆ. ಅದರಲ್ಲಿ 1985ರಲ್ಲಿ ನವದೆಹಲಿಯಲ್ಲಿ ನಡೆದ "21ನೇ ಯ ಶತಮಾನದತ್ತ ಯುವಜನತೆ" ಎಂಬ ವಿಚಾರ ಗೊಷ್ಠಿಯಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ನಾಗತಿಹಳ್ಳಿಯವರು ಆಯ್ಕೆಯಾಗಿ ವಿಚಾರ ಮಂಡನೆ ಮಾಡುತ್ತಾರೆ. 1987ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ "ಕನ್ನಡ-ಗುಜರಾತಿ ತುಲನ್ಮಾತಕ ಅಧ್ಯಯನಕ್ಕಾಗಿ, ಗುಜರಾತ್ ರಾಜ್ಯ ಸಂದರ್ಶನವಲ್ಲಿ ಭಾಗವಹಿಸಿರುತ್ತಾರೆ. 1990ರಲ್ಲಿ "ಭಾರತ ಫ್ರಾನ್ಸ್

ಸಾಂಸ್ಕೃತಿಕ ವಿನಿಮಯ" ತಂಡದಲ್ಲಿ ಪ್ರತಿನಿಧಿಯಾಗಿ ಫ್ರಾನ್ಸ್ ಭೇಟಿಯಾಗಿ 'ಅಯಸ' ಕೃತಿ ರಚನೆ ಮಾಡಿರುತ್ತಾರೆ.

ಇವರ ಕಥೆಗಳು ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಹಾಗೂ ದಕ್ಷಿಣಧ್ರುವದಿಂ ಪ್ರವಾಸ ಕಥನ ಜೆ.ಎಸ್.ಎಸ್ ಕಾಲೇಜು ಮೈಸೂರುಗಳಲ್ಲಿ ಪಠ್ಯ ಪುಸ್ತಕಗಳಾಗಿವೆ. 2013ರ ಸಾಲಿನಿಂದ ಪದವಿಪೂರ್ವ ತರಗತಿಗೆ "ಬುದ್ಧ ಬಿಸಲೂರಿನವನು"ಲೇಖನ ಪಠ್ಯವಾಗಿದೆ. ಇಂತಹ ಸೇವೆಗೈದ ನಾಗತಿಹಳ್ಳಿಗೆ 1995ರಲ್ಲಿ "ಆರ್ಯಭಟ" ಸಾಹಿತ್ಯಪ್ರಶಸ್ತಿ, 2003ರಲ್ಲಿ ಶಿವಮೊಗ್ಗ ಕರ್ನಾಟಕ ಸಂಘದಿಂದ ಹಾ.ಮಾ. ನಾಯಕ ಪ್ರಶಸ್ತಿ, 2005ರಲ್ಲಿ ಧರ್ಮಸ್ಥಳದ 73ನೇ ಅಧಿವೇಶನದ ಸಾಹಿತ್ಯ ಸಮೇಳನದ ಉದ್ಘಾಟನಾಕಾರರಾಗಿ ಗೌರವ ಸ್ವೀಕರಿಸಿದರು. 2008ರಲ್ಲಿ ಮೂಡಬಿದಿರೆಯ ಆಳ್ವಾಸ್ "ನುಡಿಸಿರಿ" ಪ್ರಶಸ್ತಿಯನ್ನು ಪಡೆದುಕೊಂಡರು. 2009ರಲ್ಲಿ ಚಲನಚಿತ್ರದ ರಾಜ್ಯ ಪ್ರಶಸ್ತಿಯ ಆಯ್ಕೆಸಮಿತಿಯ ಅಧ್ಯಕ್ಷರಾಗಿದ್ದರು. 2010ರಲ್ಲಿ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು. 2011ರಲ್ಲಿ ಮಂಗಳೂರಿನ ಪ್ರೊ.ಎಸ್.ವಿ. ಪರಮೇಶ್ವರಭಟ್ಟ ಪ್ರಶಸ್ತಿ, 2012ರಲ್ಲಿ ಮಂಡ್ಯದ ಸೀತಾಸುತ ಸಂಸ್ಮರಣೆಯ ಸಾಹಿತ್ಯ ಸೇವಾ ಪ್ರಶಸ್ತಿಗಳನ್ನು ಸ್ವೀಕರಿಸಿ ಗೌರವಕ್ಕೆ ಬಾಜನರಾದರು. 2012ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರಾಷ್ಟ್ರೀಯ ನೀತಿ ಒತ್ತಾಸೆಯ, ದೆಹಲಿ ಆಯೋಗದ ಸದಸ್ಯರಾಗಿ ಅದೇ ವರ್ಷ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯ ಆಯ್ಕೆ ಸಮಿತಿಗೆ ಸದಸ್ಯರಾಗಿ ಗೌರವ ಕಾರ್ಯಗಳನ್ನು ನಿರ್ವಹಿಸಿದ್ದಾರೆ.

2013ರ ಕೀನ್ಯಾದಲ್ಲಿ ನಡೆದ 10ನೇ ವಿಶ್ವಕನ್ನಡ ಸಂಸ್ಕೃತಿ ಸಮೇಳನದ ಅಧ್ಯಕ್ಷರಾಗಿ. 2015ರಲ್ಲಿ ಮಂಡ್ಯ ಜಿಲ್ಲಾ 13ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ನಾಡಿನ ಗೌರವ ಸ್ವೀಕರಿಸಿದ್ದಾರೆ 2015ರಲ್ಲಿ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ನಾಗತಿಹಳ್ಳಿಯವರಿಗೆ ನೀಡಿ ಗೌರವಿಸಿದೆ. "ಕನ್ನಡ ಚಿತ್ರರಂಗಕ್ಕೆ ನಾಗತಿಹಳ್ಳಿ ಚಂದ್ರಶೇಖರ್ ರವರ ಕೊಡುಗೆ-ಒಂದು ಅಧ್ಯಯನ" ಎಂಬ ವಿಷಯದ ಮೇಲೆ ಮೈಸೂರು ವಿಶ್ವವಿದ್ಯಾನಿಲಯದ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದಿಂದ, ಪಿಎಚ್‌ಡಿ. ಪದವಿಗಾಗಿ ಮಹಾಪ್ರಬಂಧ ಮಂಡನೆಯಾಗಿರುವುದು ನಾಗತಿಹಳ್ಳಿಯವರ ಸಾಧನೆಗೆ ನೀಡಿದ ಗೌರವವಾಗಿದೆ.

ಅಡಿ ಟಿಪ್ಪಣಿ

1. ಚಂದ್ರಮಾನ. ಸಂಪಾದಕರು: ಶಿಲ್ಪಶ್ರೀ ಹರವು, ಶಿವಕುಮಾರ ಕಾರೆಪುರ. ಕ ಸಾ ಪ ಮಂಡ್ಯ 2013. ಪುಟ. 12.
2. ಅದೇ ಪುಟ. 167

ಅಧ್ಯಾಯ–3

ಅಧ್ಯಾಯ--3

ನಾಗತಿಹಳ್ಳಿಯವರ ಕಥೆಗಳಲ್ಲಿ ಗ್ರಾಮೀಣ ಬದುಕು

ಹಳ್ಳಿಗಳ ಭವ್ಯ ಪರಂಪರೆಯಿಂದ ಕೂಡಿರುವ ಭಾರತ ದೇಶ ತನ್ನ ಒಡಲೊಳಗೆ ಸಮೃದ್ಧ ಸಂಸ್ಕೃತಿಗಳನ್ನು ಮೈತಳೆದಿದ್ದಾಗಿದೆ. ಇಂತಹ ಸಂಸ್ಕೃತಿಯ ಬದುಕನ್ನು ಅವರಿಸಿರುವ ಹಳ್ಳಿಗಳಲ್ಲಿ, ತನ್ನದೇ ಆದ ಬದುಕನ್ನು ವಿಸ್ತರಿಸಿ ಧರ್ಮ, ದೇವರು, ಜಾತಿ, ನಂಬಿಕೆ, ರೂಢಿ, ಸಂಪ್ರದಾಯ ಆಚಾರ ವಿಚಾರಗಳನ್ನು ತಲತಲಾಂತರದಿಂದ ಬದಲಾವಣೆಯಾಗಿ ನ್ಯಾಯ, ಅನ್ಯಾಯ, ಮೌಲ್ಯ, ನೈತಿಕತೆ, ಮಾನವಿಯತೆಗಳು ಮಿಳಿತಗೊಂಡಿರುವಂತಹಗಳು ಅದರದೇ ಸಾಂದ್ರ ವಿಸ್ತೀರ್ಣಗಳಲ್ಲಿ ನೆಲೆಗಟ್ಟಿರುವ, ಸೊಗಡನ್ನು ನಿರೂಪಿಸುವ ಕಥನಗಳನ್ನು ಇಲ್ಲಿ ನಾವು ಕಾಣಬಹುದು.

ಅಂತೆಯೇ ಇಂತಹ ಬದುಕನ್ನು ಹತ್ತಿರದಿಂದ ಕಂಡ ಅನುಭವವೇ ಕಥನವಾಗಿ ತನ್ನ ನೆಲೆಯ ಸ್ವಾನುಭವದಲ್ಲಿ ತಾನುಂಡ ನೋವು ನಲಿವುಗಳೇ ಅಕ್ಷರ ರೂಪ ತಾಳುವುದು ನಾಗತಿಹಳ್ಳಿರವರ ಕಥನಗಳಲ್ಲಿ ಗ್ರಾಮೀಣ ಬದುಕಿನ ದೃಷ್ಟಿಕೋನವನ್ನು ತಮ್ಮದಾಗಿಸಿಕೊಂಡು ಹಳ್ಳಿಯ ಕಥಾಲೋಕದಲ್ಲಿ ಪಾತ್ರವಾಗಿ ಮಿಳಿತವಾಗಿಬಿಡುತ್ತಾರೆ.

ಹಳ್ಳಿಯ ಬದುಕಿನ ಚಹರೆಗಳು ಮರೆಯಾಗುತ್ತಿರುವ ಸಂಸ್ಕೃತಿಗಳ ಕಡೆಗೊಂದು ಬೆಳಕನ್ನು ನೀಡಿ ಧೃಢಗೊಳಿಸುವ ದಾರುಣ ಕ್ರಿಯೆ ಲೇಖಕರದಾಗಿದೆ. ಕನ್ನಡ ಸಾಹಿತ್ಯದಲ್ಲಿ ಈಗಾಗಲೆ ಇಂತಹ ಪರಂಪರೆ ಮಾಸ್ತಿಯಿಂದ ಆರಂಭವಾಗಿ ಲಂಕೇಶ, ತೇಜಸ್ವಿ, ಬೇಸಗರಹಳ್ಳಿ ರಾಮಣ್ಣನವರಂತೆ ಪ್ರೇರಣೆಗಳು ಪ್ರಭಾವಗಳು ಇಡೀ ಕನ್ನಡ ಸಾಹಿತ್ಯದ ಗ್ರಾಮೀಣ ಕಥೆಗಳ ಮೇಲಿನ ಪ್ರೇರಣೆಯಾಗಿ ಇಡೀ ಕಥಾಲೋಕವನ್ನು ಆವರಿಸಿಕೊಳ್ಳುತ್ತದೆ.

ಗ್ರಾಮೀಣ ಮೌಲ್ಯಗಳನೇ ವ್ಯಕ್ತಿತ್ವಗಳಾಗಿ ಸೃಷ್ಟಿ ಮಾಡುವ ನಾಗತಿಹಳ್ಳಿ, ಹೊಸದನ್ನು ಹುಡುಕುವ ಹೊಸ ಅನಿವ್ಯಾರಗಳನ್ನು ಕಂಡು ವ್ಯಕ್ತಪಡಿಸುವ, ಕಸುವಿನ ದಟ್ಟ ನೇಯ್ಗೆಯನ್ನು ಗ್ರಾಮ್ಯ ನೆಲೆಯಲ್ಲಿ ತರುತ್ತಾರೆ. ದಟ್ಟವಾದ ನೈತಿಕತೆಯನ್ನು ಕೇಂದ್ರವಾಗಿಸಿ ತನ್ನೊಳಗಿನ ಸಮುದಾಯದ ವಿವಿಧ ಮಜಲುಗಳನ್ನು ಬಿತ್ತರಿಸುವ ನೈಪುಣ್ಯತೆಗಳನ್ನು ಇವರ ಗ್ರಾಮೀಣ ಕಥೆಗಳಲ್ಲಿ ಕಾಣಬಹುದು. ಗ್ರಾಮೀಣ ಬದುಕಿನಲ್ಲಿ ಆಧುನಿಕತೆಯ ಆಡಂಬರವಿಲ್ಲದ, ದುಡಿಮೆಯ ಆಡಂಬರಗಳಿಗಾಗಿ ಹೊಸ ಜಗತ್ತಿನ ಸೊಖಿಗಳ ಸೊಂಕು ಹಳ್ಳಿಗಳಿಗೆ ತಗುಲಿ ಚುನಾವಣೆ, ರಾಜಕಾರಣ, ಪೇಟೆ, ಹೋಟೆಲ್, ನಡುವೆ ತನ್ನ ಬೆವರಿನ ಫಲಗಳನ್ನೇಣಿಸುವ ವರ್ಗಗಳ ಸಂಘರ್ಷಗಳು ಮುಖಾಮುಖಿಗಳಾಗುತ್ತವೆ. ಭೌತ್ತಿಕ ಜಗತ್ತಿನಲ್ಲಿ ಗ್ರಾಮ ಭಾರತದ ಮೇಲೆರಗುವ ಜಾಗತೀಕರಣ ಪ್ರಭಾವದೊಳಗೆ ಗ್ರಾಮೀಣ

ಜೀವನದ ಬರ್ಬರತೆಯ ಚಿತ್ರಣಗಳು, ಮಾನವಿಯತೆಯ ನಡುವೆ ಸುಳಿವ ಕ್ರೌರ್ಯ, ನೋವನ್ನು ಬಂಡವಾಳವಾಗಿಸುವ ಮನೊವೃತ್ತಿ, ಬಡವರ ನೋವನ್ನು ಬಂಡವಾಳವಾಗಿ ರಾಜಕೀಯ ಮಾಡುವ ಮನೋಧರ್ಮ, ಮುಗ್ಧ ಮೌಢ್ಯಗಳನ್ನು ಅಕ್ಷರಬಲ್ಲವನ ಅಕ್ಷಯವಾಗಿ ಶೋಷಿಸುವ ಹಾದರ, ನಡೆಸುವ ಮನೊವಿಕಲ್ಪನೆಗಳನ್ನು ತನ್ನಾದಾಗಿಸಿ ಕಥೆಯಾಗಿಸಿಕೊಳ್ಳುತ್ತಾರೆ. ನಾಗತಿಹಳ್ಳಿ ಗ್ರಾಮ್ಯ ಬದುಕಿನಲ್ಲಿನ ನೋವು, ನಲಿವು, ಮೋಸ, ವಂಚನೆ, ದುಡಿಮೆ, ನಂಬಿಕೆ, ನೈತಿಕಪ್ರಜ್ಞೆ, ಮೌಲ್ಯ, ಕಾಮ, ಪ್ರೇಮಗಳನ್ನು ಇಲ್ಲಿನ ಸಂಸ್ಕೃತಿಗಳ ಎಳೆಯನ್ನೇ ವಸ್ತುವಾಗಿಸಿ ಕಥೆಯನ್ನು ಒಸೆಯುತ್ತಾರೆ.

ಇಂತಹ ಕಥೆಯಲ್ಲಿ 'ಬನ್ನೇರಿ' ನಾಗತಿಹಳ್ಳಿರವರ ಕಥೆಗಳಲ್ಲಿ ಹೆಚ್ಚು ಪ್ರಭಾವ ತಲ್ಲಣಗಳನ್ನು ಗ್ರಾಮ್ಯ ಬದುಕಿನ ವಿವಿಧ ಸ್ತರಗಳನ್ನು ಬನ್ನೇರಿ ಎಂಬ ಗ್ರಾಮೀಣ ಮಹಿಳೆಯರಿಗೆ ಹೊರಸೂಸುತ್ತಾರೆ. ಒಂದರ್ಥದಲ್ಲಿ ಲಂಕೇಶರ ಅವ್ವನನ್ನು ದಿಟ್ಟಿಸುವ ಈ ಕಥನ ಗ್ರಾಮೀಣ ಬದುಕಿನ ಪ್ರಾತಿನಿಧಿಕ ಪಾತ್ರ ಬನ್ನೆರಿ. ಗ್ರಾಮ್ಯ ಬದುಕಿನ ದ್ಯಾವಸೂರು ಒಕ್ಕಲುತನದಿಂದಲೇ ಬೆಳಕಾಗುವ ಕಥೆಯ ಆರಂಭ. ಹಳ್ಳಿಯ ಹೆಣ್ಣೊಬ್ಬಳ ಒಕ್ಕಲತನದ ಬೆಳಗಿನಲ್ಲಿ "ಕೆದರಿದ ಮೋಟು ಕೂದಲನ್ನು ಒಮ್ಮೆ ಕೊಡವಿ ಉಂಡೆ ಮಾಡಿ ಕಟ್ಟಿ, ತಾಮ್ರದ ಚೊಂಬಿನಿಂದ ನೀರು ಮೊಗೆದು ಹಟ್ಟಿಗೆ ಚಿಮುಕಿಸಿದಾಗ ಧೂಳಡಗಿ ಎದ್ದ ಮಣ್ಣಿನ ಹಿತವಾದ ವಾಸನೆ ಹೀರಿ ರಂಗೋಲಿ ಬಿಟ್ಟು ಕೊಟ್ಟಗೆಗೆ ನಡೆದಳು. ಹಸುವಿನ ಬಳಿಗೆ ಕರು ಬಿಟ್ಟೊಡನೆ ಅದು ಗುಮ್ಮತೊಡಗಿ ಸ್ವರ ಬಿಟ್ಟಿತು ಕರುವನ್ನು ದರದರನೆ ಎಳೆದು ಗೂಟಕ್ಕೆ ಕಟ್ಟಿ ಚೊರ್ ಚೊರ್ ಅಂತ ಹಾಲು ಕರೆದು ಕೊನೆಯಲ್ಲಿ ಕರುವಿಗೊಂದಿಷ್ಟು ಹಾಲು ಮಿಗಿಸಿ ಕೋಣೆ ಸೇರಿದಳು."[1] ಇಲ್ಲಿನ ಗಟ್ಟಿಯಾದ ವಾಸ್ತವ ಪ್ರಜ್ಞೆಯ ಕ್ರೀಯಾಶೀಲತೆಯು ಹಳ್ಳಿ ಒಕ್ಕಲು ತನದ ಹೆಣ್ಣಿಗೆ ನಿತ್ಯಕಾಯಕದ ಬದುಕನ್ನು ಅರಿಯುವಂತೆ ಮಾಡುತ್ತಾರೆ.

ಬನ್ನೇರಿ ಮಾಡಿದ ಎರಡು ರೊಟ್ಟಿಗೆ ಗಟ್ಟಿ ಚಟ್ನಿ ಮೊಸರು ಕಪ್ಪಡಿಸಿ ಸಿದ್ರಾಮ. "ಯಾರದ್ರು ಬಂದ್ರ ಹೆರ್ನಳ್ಳಿ ನಾಟಕಕ್ಕೆ ಹೊದ್ರು ಅಂತೇಳು"[2] ಎಂದು ನೀಲಿ ಜುಬ್ಬ ಸಿಗಾಕಿ ಜೇಬಿಗೆ ಒಂದು ರಟ್ಟೆ ಗಾತ್ರದ ಪೆನ್ನು ಸಿಗಿಸಿ ಜುಬ್ಬದ ಜೋಬಿಗೆ ಸೀಲು ಪ್ಯಾಡು ಇಟ್ಟಗೊಂಡು ಊರೂರು ತಿರುಗುವ. ಕೆಲಸಕ್ಕೆ ಬಾರದ ಸಮಾಜ ಸೇವೆ ನೆಪದ ಸಿದ್ರಾಮನಂತಹ ಗಂಡನೊಡನೆ ಬದುಕಿನ ಅಂತರಾಳಗಳನ್ನು ಬಿಚ್ಚಿತ್ತವೆ. ಗ್ರಾಮ್ಯ ಬದುಕಿಗೆ ರಾಜಕಾರಣದ ಕರಿ ನೆರಳಿಂದ ಬದುಕಿನ ನೆಮ್ಮದಿ ಕಳೆಯುವಂತಾಗುತ್ತದೆ. ಇಂತಹ ಬದುಕಿನಲ್ಲಿ ಬಲಿಪಶುವಾಗಿ ಬದುಕಿನ ಹಂಬಲ ಹೊತ್ತ ತನ್ನ ನೆಲದ ಮೇಲಿನ ಒಡೆತನ ಮತ್ತು ದುಡಿಮೆಯನ್ನು ನಂಬಿ ಬದುಕುವ ಹಂಬಲವುಳ್ಳ ದಿಟ್ಟ ಮಹಿಳೆ ಬನ್ನೇರಿ. ಸಿದ್ರಾಮ ನಂತಹ ಮನೆಗೆ ಮಾರಿಪರರಿಗೆ ಉಪಕಾರಿಯಂತೆ ತನ್ನ ಮನೆಯ ಬಗ್ಗೆ ಜವಬ್ದಾರಿ ಇಲ್ಲದವನಾಗಿ ಊರಿಗೆ ಉಪಕಾರಿ ಎನ್ನುವಂತೆ ತಿರುಗುವ ಸಿದ್ರಾಮ. ತನ್ನ ತೋಟ ತುಡಿಕೆ ನಿರ್ಲಕ್ಷಿಸಿ

.ರಾಜಕಾರಣ ಆಸೆ ಹೊತ್ತು, ರಾಜಕೀಯ ಪುಡಾರಿಯಾಗಿ ಚುನಾವಣೆಗೆ ನಿಲ್ಲುತ್ತಾನೆ. ಇತ್ತ ಬನ್ನೇರಿಯ ತನ್ನ ತೋಟ ತುಡುಕಿ ಭೂಮಿಯೊಂದಿಗೆ ಒಡನಾಟವನ್ನು, ತನ್ನೆಲ್ಲ ಸರ್ವಸ್ವವೆಂಬಂತೆ ನಿರ್ವಹಿಸುತ್ತಾಳೆ. ಅಲ್ಲೇ ಸುಖವನ್ನು ಕಾಣುತ್ತಾಳೆ. ಇತ್ತ ಗಂಡನ ನಿರ್ಲಕ್ಷ್ಯ ತಾನು ದುಡಿದು ತಂದ ಬೆಳೆ, ಕಾಯಿ ಎಲ್ಲವನ್ನು ಸೋಖಿಲಾಲನಂತೆ ಕಬಳಿಸುತ್ತಾನೆ. ಬನ್ನೇರಿ ತಾನು ಬೆಳೆದಿದ್ದನ್ನೆಲ್ಲಾ ಒಬ್ನೇ ತಿಂದ್ರೆ ಮೈಗೆ ಇಡೀತದಾ ಅಂತ, ಅನ್ನಿಸಿ ವಸಿ ವಂದರೀಲಿ ತುಂಬಿಕೊಂಡು ಚಮಲಾಪುರದಮ್ಮನಿಗೆ ಪರ್ಸೆಕಟ್ಟೆ ಅಮ್ಮನಿಗೆ, ಈಶ್ವರಾಚಾರ್ ಮನೆಗೆ, ಒಲೇರ ಸಿದ್ದಿಗೆ ಕೊಟ್ಟು ಬರಾನ ಅಂತ ವೊಂಟಳು. ಪರ್ಸೆಕಟ್ಟೆ ಅಮ್ಮ ಬನ್ನೇರಿಗೆ ಅವಳ ಮನೆ ಪಡ್ಲುಕಾಯಿ ಕೊಟ್ಟು "ಗೇಮೆ ಕಮ್ಮಿ ಮಾಡಿಕೊಳ್ಳೆ ಬನ್ನೇರಿ. ನಾಳೆ ಮನಿಕಂಡ್ರೆ ಯಾರು ನೋಡ್ತಾರೆ ? ನಿನ್ನ ಗಂಡ ಊರ ಬಸವ. ಕೂತ್ಕೊ ಅಕ್ಕಿ ರೊಟ್ಟಿ ಹಾಕಿವ್ನಿ"[3] ಅಂದಳು ಇಲ್ಲಕಣಕ್ಕಾ ಸಂತೆಗೆ ವೋಗ್ಬೇಕು. ಅಂತ ಗಡಿ ಬಿಡಿಯಿಂದ ಹೊರಟು ಸಂತೆದಾರಿ ಹಿಡಿದಳು. ಇಲ್ಲಿ ಗ್ರಾಮೀಣ ಬದುಕಿನ ವಿಸ್ತಾರವಾದ ಸ್ವಾಭಾವೋಕ್ತಿಯನ್ನ ಕ್ರಿಯಾನ್ಮೂಖಿಗಳ ಚಲನೆಗಳನ್ನು ಕುಟ್ಟಿಕೊಡವುತ್ತಾರೆ. ಹಂಚಿ ತಿನ್ನುವ ಸಮುದಾಯ ಬದುಕಿನ ಪರಿಗಳಿವು ಗ್ರಾಮ್ಯ ಬದುಕಿನಲ್ಲಿ ತನ್ನಲಿರುವುದನ್ನು ಮತ್ತೊಬ್ಬರಿಗೆ ಹಂಚಿ ಸುಖಪಡುವ ವ್ಯಕ್ತಿತ್ವಗಳು ಇಲ್ಲಿ ವ್ಯಕ್ತವಾಗಿದೆ.

ದಾರಿಯಲ್ಲಿ ಬನ್ನೇರಿ ಅಪ್ಪ "ನೀನು ಬುಡು, ಸತಿ ಸಾವಿತ್ರಿ ಕಾಲದೋಳು, ಕಾರು ಬೈಕು ಇಟ್ಟುಕೊಂಡು ದಿಲ್ಲಾಗಿ ತಿರುಗೋದು ಬಿಟ್ಟು ಊರ ಸುತ್ತು ಜಮೀನು ಮಡಿಕ್ಕೊಂಡು ಸನಿವಾರ ಸಂತೆಗೆ ತಮ್ಮಟೆ ಹಣ್ಣು ಮಾರೊಕ್ಕೆ ಬಂದಿದ್ದಿಯಲ್ಲ. ..... ವೋಗ್ಲಿ ಬಾ ಊರಿಗೆ ವೋಗಾನ, ಎಲ್ಡ ದಿನ ಇದ್ದು ಬರೀವಂತೆ "[4] ಅಪ್ಪನ ಮಾತಸಲ್ಲಿ ಮಗಳ ಸುಖವನ್ನು ಕಂಡರೆ ಇಲ್ಲಿ ಮಗಳು ನೀನು ಸರಿ ಬುಡಪ್ಪ ಅವ್ರ ಬೆಂಗಳೂರಿಗೆ ಹೋಗವ್ರೆ ಮನೆ ದನ ಕರುಗಳನ್ನು ನೋಡವರು ಯಾರು? ಎಂಬ ದುಡಿಮೆಯೆ ಬದುಕಾಗಿ ಕಾಣುವ ಬನ್ನೇರಿಯ ಜೀವನ್ಮುಖಿ ಆಶಯಗಳನ್ನಕಥೆಯಲ್ಲಿ ಹೆಜ್ಜೆ ಹೆಜ್ಜೆಗೂ ಸಹಜವಾಗಿ ತರುತ್ತಾರೆ. ಸಂತೆಯಲ್ಲಿ ಬೆಳೆದ ಟಮೊಟೊಗೆ ಬೆಲೆ ಕೊಟ್ಟು ಕೊಂಡುಕೊಳ್ಳುವ ಸಾಬಿ ಮತ್ತೊಬ್ಬ ಗಿರಾಕಿ ಮಾಡುವ ರೈತಶೊಷಣೆಯ ಮುಖಗಳನ್ನು ಅನಾವರಣ ಮಾಡುತ್ತಾರೆ. ದಾರಿಯಲ್ಲಿ ಹಸಿದು ಬಳಲಿ ಪ್ರಜ್ಞೆತಪ್ಪಿ ಬಿದ್ದಿದ್ದ ರಂಗಣ್ಣನನ್ನು ಉಪಚರಿಸುವ ಮೌಲಿಕ ಪ್ರಜ್ಞೆ ಇಡೀ ಕಥೆಯಲ್ಲಿ ಮಿಳಿತವಾಗಿರುವ ಮಾನವೀಯ ಮೌಲ್ಯದ ಗ್ರಾಮೀಣ ತಿರುಳು ಬನ್ನೇರಿಯಲ್ಲಿ ಹೆಪ್ಪುಗಟ್ಟಿರುವುದನ್ನು ವ್ಯಕ್ತಪಡಿಸುತ್ತಾರೆ.

ರಂಗಣ್ಣನ ಕಥೆ ಕೇಳಿ ದಾಯದಿಗಳು ಮಾಡಿದ ಮೋಸ ಅಪ್ಪ ಅಮ್ಮ ಇಲ್ಲದ ರಂಗಣ್ಣನನ್ನು ಮಕ್ಕಳಿಲ್ಲದ ಬನ್ನೇರಿ ಮಗನಂತೆ ಕಂಡು "ಬಾ .. ರಂಗಣ್ಣ ನಮ್ಮನೇಲೇ ಇದ್ದು ಬುಡು" ತನ್ನ ಮನೆಗೆ ಕರೆದಳು "ನಮ್ದು ಕೀಳು ಜಾತಿ" ಎಂದ ಬನ್ನೇರಿ. "ಶಿವನಿಗೆ ಒಂದೇ ಜಾತಿ"[5] ಎಂದು ಹೇಳುವ

ಬನ್ನೇರಿಯ ನುಡಿಗಳು ಜಗತ್ತಿಗೆ ಮೌಲಿಕ ಸಮಾನತೆಯ ವಿಶ್ವ ಮಾನವತೆಯಲ್ಲಿ ಜಗತ್ತಿನಲ್ಲೇ ಜಾತಿ ಎಂಬುದು ಒಂದೇ, ಅದು ಮಾನವನಲ್ಲಿರಬೇಕಾದ ನಿಜವಾದ ಧರ್ಮಿಯ ಗುಣ. ಅನಕ್ಷರತೆಯ ಗ್ರಾಮೀಣ ಮಹಿಳೆಯಲ್ಲಿರುವ ಬಹುದೊಡ್ಡ ಗುಣವನ್ನು ಇಲ್ಲಿ ಚಿತ್ರಿಸುತ್ತಾರೆ. ಮನಷ್ಯನಲ್ಲಿರಬೇಕಾದ ನಿಜವಾದ ಗುಣಗಳೆಂದರೆ, "ಮೋಸ ತಟವಟ ನನಗಾಗಕಿಲ್ಲ ಕೇಳಿ ಈಸ್ಕೊಂಡು ತಿನ್ನು, ಕಳ್ಳತನ ಮಾಡಬಾರ್ದು ಕಷ್ಟಪಟ್ಟು ಭೂಮ್‌ತಾಯಿ ಸೇವೆ ಮಾಡಬೇಕು ಹೂಟ್ಟೆ ತುಂಬಾ ಉಣ್ಣಬೇಕು ನಿನ್ನ ಕೈಲಿ ಎಷ್ಟಾಗುತ್ತೊ ಅಷ್ಟು ಮಾಡಿಕೊಂಡಿರು ಯಾರನ್ನೂ ದೋಚಬಾರ್ದು"[6] ಯಾರನ್ನು ಬೇಡಬಾರ್ದು ಎಂಬಲ್ಲಿನ ಮಾನವನ ನಡತೆಗಳನ್ನು ನೈತಿಕ ಪ್ರಜ್ಞೆಗಳಲ್ಲೆ ನಿಜವಾದ ಜಾತಿ ಧರ್ಮಗಳಲ್ಲಿನ ಆಶಯ ಇಲ್ಲಿ ವ್ಯಕ್ತವಾಗುತ್ತದೆ.

ಸಿದ್ರಾಮನನ್ನು ಊರಲ್ಲಿ ಪೆದ್ರಾಮ ಅಂತಲೂ ಅನ್ನುತ್ತಿದ್ದರು. ಮನೆ ಆದಾಯವನ್ನು ಊರೂರು ಸುತ್ತಲಿಕೆ ನೀಗಿ ನೀಡು ಕುಡೀತಿದ್ದ. ಕುರಿಸಾಲ ಕೋಳಿಸಾಲ ಎಮ್ಮೆಸಾಲ, ಹಂದಿಸಾಲ, ಪಂಪ್‌ಸೆಟ್‌ಸಾಲ, ಟ್ರಾಕ್ಟರ್‌ಸಾಲ, ಮೋಳೆಸಾಲ ಅಂತ ಸಾವಿರದೆಂಟನ್ನು ಸರ್ಕಾರದಿಂದ ತೆಗೆದುಕೊಂಡು ಅದೊಂದನ್ನೂ ಕೊಂಡಿಗಲಿಲ್ಲ, ತಾಲ್ಲೊಕಾಫೀಸಿನಲ್ಲಿ ತಹಸೀಲ್ದಾರಿಗೆ ರೋಪು ಹಾಕೋದು ಸ್ಕೂಲ್ ಹೈಕಳಿಗೆ ಇನಕಮ್ ಸರ್ಟಿಪಿಕೆಟ್ ಮಾಡ್ಸಿಕೊಡೋದು, ನಾಕೈದು ಜನ ಬಾಲ ಕಟ್ಟಿಕೊಂಡು ಘೂಟ್ ಲಾಯರ್‌ಗಿರಿ ಮಾಡೋದು ಅಪನ ಕುಲಕಸುಬಾಗಿತ್ತು. ಇದು ಸಿದ್ರಾಮನಂತಹ ಗ್ರಾಮ್ಯ ಬದುಕಿನಲ್ಲಿ ಸಿಗುವ ರಾಜಕಾರಣದ ಕರಿ ನೆರಳಿನ ವ್ಯಕ್ತತೆ, ಇಲ್ಲಿನ ಕಟುವಾಸ್ತವ ಚಿತ್ರಣಗಳನ್ನು ನೈಜವಾಗಿಸುತ್ತಾರೆ. ಊರಿಗೆ ಉಪಕಾರಿಯೆನ್ನುವ ಸೋಮಾರಿತನ ಬದುಕಿ ತೋಟ ತುಡಿಕೆ ಕಾಣದೆ ಸ್ವಸ್ಥಗ್ರಾಮಗಳ ನೆಮ್ಮದಿಯನ್ನು ಹಾಳುಮಾಡಿದ ಭ್ರಷ್ಟ ರಾಜಕಾರಣದ ವಾಸ್ತವ ಸ್ಥಿತಿಗಳು ಇಲ್ಲಿ ಬೆಳಕು ಕಾಣುತ್ತವೆ. ಇದೇ ಬದುಕನ್ನು ನಾಶಮಾಡುವ ರಾಜಕಾರಣವೇ ಇಲ್ಲಿ ಮುಖ್ಯ ಕಾರಣವಾಗಿ ದುಡಿವ ಜನರ ಬದುಕಿನ ಅದಃಪಥನಕ್ಕೆ ಮೂಲವಾಗುತ್ತಿದೆ. ಇತ್ತ ನಿರ್ಲಕ್ಷಿಸಿದ ತೋಟ ತುಡಿಕೆಯನ್ನು ಬನ್ನೇರಿಯೊಬ್ಬಳೆ ಗಂಡಸೆನ್ನುವಂತೆ ನಿರ್ವಹಿಸುವ ಭೂಮಿ ತನ್ನ ಬದುಕಾಗಿ ಭೂಮಿಯಲ್ಲೇ ತನ್ನ ಎಲ್ಲಾ ಸರ್ವ ಸುಖಗಳನ್ನು ಕಾಣುವಂಥಳಿಗೆ ರಂಗಣ್ಣನಂತಹ ಅನಾಥ ಸಿಕ್ಕಾಗ ಬಳ್ಳಿಗೆ ಆಸರೆಯಾಗುತ್ತದೆ. ಆತನ ಹಸಿವು ಪ್ರೀತಿಗೆ ವಾತ್ಸಲ್ಯಗಳನ್ನು ತುಂಬಿದ ಬನ್ನೇರಿಯಾ ಮಾತೃತ್ವ ನಾಗತಿಹಳ್ಳಿಯವರ ತಾಯಿತನದ ಅನಿಮಾ ಗುಣವನ್ನು ಕಾಣಬಹುದಾಗಿದೆ.

ಬನ್ನೇರಿಗೆ ಗೊತ್ತಿಲ್ಲದ ಹಾಗೆ ಎಲೆಕ್ಷನ್‌ಗೆ ನಿಲ್ಲಲೆಂದು ತೋಟ ಮಾರಿದ ಸಿದ್ರಾಮ. ಎಲೆಕ್ಷನ್‌ಗೆ ನಿಂತು "ಕೆರೆ ಪಕ್ಕದ್ದು ಒಂದೂ ಕಾಲು ಏಕ್ಕರೆ ಜಮೀನು ಕ್ರಯಕ್ಕೆ ಬರಕೊಡಾನ ಅಂತ"[7] ಎಂಬ ಮಾತಿಗೆ ಹಾವು ತುಳಿದವಳತರ ಎದ್ದು ಕೆಂಡವಾಗಿ ಕ್ಯಾಣ ಮಾಡಿ ಕೊಡುವ ಬದುಕಿನ

ಜಾಗೃತಿಯನ್ನು, ಭೂಮಿ ನಂಬಿ ಬದುಕುವವರ ಜೀವಕಾಗುವ ಆತಂಕ ತಳಮಳಗಳ ನೈಜತೆಯನ್ನು ಸ್ವಾಭಾವಿಕ ನೆಲೆಯನ್ನು

ಎಲೆಕ್ಷನ್‌ನಲ್ಲಿ ಸೋತು ಕೆರಮೇಗಳ ಪಕ್ಕದ ಒಂದೂ ಕಾಲು ಏಕರೆ ಜಮೀನನ್ನು ಜೈ ನಿಂಗಣ್ಣನಿಗೆ ಮಾರಿದಾಗ, ಬನ್ನೇರಿ ಕಣ್ಣಲ್ಲೇ ಜೈನಿಂಗಣ್ಣನನ್ನು ಸುಟ್ಟಳು. ಮೈ ಕೈ ಎಲ್ಲಾ ನಿಮಿರಿ ಸೆಟ್ಟಗೊಂಡವು. ಕನಕಾಲಿನ ಮೇಲೆ ಗಂಡ ಮಚ್ಚಿನಿಂದ ಹೊಡೆದಂತಾಗಿ ಉಕ್ಕೆ ಸೀಳಿನಲ್ಲಿ ಕುಸಿದು ಬಿದ್ದಳು. ಎರಡು ಬೊಗಸೆ ಮಣ್ಣ ತುಂಬಿಕೊಂಡು ಎದೆಯೊಳಗೆ ಸುರಿದುಕೊಂಡು ಕುತ್ತಿಗೆಗೆಲ್ಲಾ ಉಜ್ಜಿಕೊಂಡಳು. ಸಸಿಮರವನ್ನು ತಬ್ಬಿಗೊಳಾಡಿದಳು. ಇಲ್ಲಿ ಬನ್ನೇರಿಯ ನೆಲ ಹಾಗೂ ದುಡಿಮೆಯ ಮೇಲಿನ ಪ್ರೀತಿ, ನೆಲದ ಮೇಲಿನ ಒಡೆತನ ನಿಜವಾದ ಭಾವಗಳ ವ್ಯಕ್ತತೆಯನ್ನು ಚಿತ್ರಿಕರಿಸಿ ಕೊಡುತ್ತಾರೆ.

ನೀರಿಲ್ಲದ ಹೊಲಕ್ಕೆ ಬಾವಿ ತೆಗೆಯುತ್ತಿದ್ದ ಬನ್ನೇರಿ ರಂಗಣ್ಣನ ಸ್ನೇಹವನ್ನು ತಪ್ಪಾಗಿ ತಿಳಿದ ಸಿದ್ರಾಮ ಕೊಲ್ಲಲ್ಲು ಯತ್ನಿಸುತ್ತಾನೆ ಬೇಸತ್ತ ರಂಗಣ್ಣ ಅವರ ಕುಟುಂಬದಿಂದ ಹೊರಗುಳಿಯುವ ಸಿದ್ರಾಮ ಎಲ್ಲವ್ನು ಕಳೆದುಕೊಂಡವನಂತೆ ಮನೋರೋಗಿಯಂತಾದ ಗಂಡನ ಈ ನಿಷ್ಕ್ರಿಯತೆ, ಮನೆಯ ಆಳಾಗಿ ಬಂದವ ಮಗನಂತೆ, ಸ್ನೇಹಿತನಂತೆ ಇದ್ದಂಥ ರಂಗಣ್ಣನನ್ನು ನಿಷ್ಕ್ರಮಣಗೊಂಡ ಗಂಡ ಕೈಬಿಟ್ಟ ತೋಟ ಗದ್ದೆಗಳಿಂದ ಸ್ಥೈರ್ಯ ಕಳೆದುಕೊಂಡ ಬನ್ನೇರಿಯ ಮೌನ ಹೋರಾಟವು ಒಂದು ಬಂಡಾಯವೇ ಗ್ರಾಮೀಣ ಮಹಿಳೆಯ ಹೋರಾಟದಂತಹ ಬಂಡಾಯ ಈ ಕಥೆಯೊಳಗೆ ಮಿಳಿತವಾಗಿದೆ. ಗಂಡನ ಸೋಮಾರಿತನ ಬಂಡತನದ ಅಮಾನವಿಯ ವರ್ತನೆಗಳ ಶೋಷಿತ ಮನಗಳ ನಡುವೆ ಜಮೀನನ್ನು ಕಳೆದು ಕೊಳ್ಳುವಾಗಿನ ಈಕೆಯ ಉದ್ವಿಗ್ನತೆ, ಜೈನಿಂಗಣ್ಣನ ಮೇಲೆತೋರುವ ಆಕ್ರೋಷ ಬನ್ನೇರಿಯ ಅಂತರಂಗದ ನೋವು, ಎಲ್ಲವನ್ನು ದಾಟಿ ಪುರುಷ ಸಮಾನಾಗಿ ದುಡಿವ ಅವಳ ಬದುಕಿನ ದಾರಿ ಒಂದು ಬಂಡತನವೇ ಸರಿ. ಮೌನ ಆಕ್ರೋಶ ನೋವು ಎಲ್ಲದರ ಗುರಿ ಮೋನೆ ಬನ್ನೇರಿಯಾಗಿ ಕಂಡು ಬರುತ್ತಾಳೆ .

'ಪುಟ್ಟಕ್ಕನ ಮೆಡಿಕಲ್ ಕಾಲೇಜು' ಎಂಬ ಕಥೆಯಲ್ಲಿ ಪುಟ್ಟಕ್ಕ ಎಂದರೆ–ಗಂಡಸು ಅದಮ್ಯ ಧೈರ್ಯ, ಹೋರಾಟದ ಚಲಗಾತಿಯಾಗಿ ದುಡಿದು ಹೋದವಳು. ಪುಟ್ಟಕ್ಕ ಚಿಕ್ಕ ವಯಸ್ಸಿನಲ್ಲೆ ದುಡಿಯಲಾರದ ಸೊಂಬೇರಿ ಗಂಡನನ ಕಟ್ಟಿಕೊಂಡು ಆತ ಸತ್ತಾಗಲ್ಲೇ ಶಾಂತಿ ನೆಮ್ಮದಿಯನ್ನು ಕಂಡವಳು. ಭೂಮಿಯನ್ನು ತಾನೆ ಗಂಡಸಿನಂತೆ ಒಂದು ಜೊತೆ ಬುಡ್ಡೆತ್ತನೊ ಇಟ್ಟಕೊಂಡವಳೇ. ಈ ಸುತ್ತಲಿಗೆ ಹೊಲ ಉಳುಮೆ ಮಾಡುವ ಹೆಂಗಸು ಕಷ್ಟದಿಂದ ಜೀವನ ನಡೆಸಿದಳು.ಅಲ್ಲಿ ಸಮಾಜ ಲೋಕ ಎನ್ನಾದರೂ ಅಂದುಕೊಂಡರು ಎಲ್ಲದಕ್ಕೂ ತಿಲಂಜಲಿ. ತನ್ನ ಭೂಮಿ. ತನ್ನ ದುಡಿಮೆ. ತನ್ನ

ತಂಟೆಗೆ ಬಂದವರ ಪಾಲಿನ ರಾಕ್ಷಸಿಯಾಗಿ ಬಿಡುತ್ತಿದ್ದವಳು ಪುಟ್ಟಕ್ಕ. ಹಳ್ಳಿಯ ಹರೆಯದ ಹುಡುಗರಿಗೆ ಹೊಲ ಉಳಲು ಬರುವುದಿಲ್ಲ, ಸಾಲು ಕೇಡಿಸುತ್ತಾರೆ ಇಲ್ಲದೆ ದಿಂಡು ದಪ್ಪಗೆ ಬಿಡುತ್ತಾರೆ. ವಡ ಕಟ್ಟಿ ಕೊಂಡು ಉಳುವುದಿಲ್ಲ. ಅಂಥವನನ್ನು "ಹೋಗಿ ಪುಟ್ಟಕ್ಕನ ಕಾಲು ಸಂದೀಲಿ ನುಸೀರಿ."[8] ಎಂಬಲ್ಲಿನ ಒಕ್ಕಲು ತನದ ಕಾಯಕಗಳ ಕ್ರಮ, ತಾವುಂಡು ಬೆಳೆದ ಬಾವಣಿಗಳಿಂದ ಸಾಲು. ದಿಂಡು ಉಳುಮೆಯ ಬಗ್ಗೆಯು.

ಪುಟ್ಟಕ್ಕನ ಬೇಸಾಯ ಕ್ರಮಗಳಲ್ಲಿ ಗ್ರಾಮೀಣ ಬದುಕಿನಲ್ಲಿ ಹರಳೆಣ್ಣೆ ತೆಗೆವ ಪರಿ ಹಾಗೂ ಹೊಲದಲ್ಲಿ ಬಿತ್ತುವ ಗೆರೆ ಸೇರುವ ಬೀಜ ಹಾಕುವ ನಂತರ ಗೊಬ್ಬರ ಕೊಡುವ ನಡುನಡುವೆ ಈಚಲ ಅವರೆ ತಗಣಿ ಎಳ್ಳು ಏನಾದರೂ ಹಾಕಿ ಹರಳೆಗಿಡ ರಟ್ಟೆ ಗಾತ್ರ ಬರುವುದು. ಹೊಲ ಕಾಡಿನಂತೆ ಸಮೃದ್ಧಗೊಳ್ಳುವ ವಿವರಣೆ ಕೃತಕವಲ್ಲ. ಬರೀ ವೀಕ್ಷಣೆಗೆ ಎಟುಕದ ಸ್ವಾನುಭವದ ಬದುಕನ್ನು ನೈಜವಾಗಿ ನಿರೂಪಿಸುತ್ತಾರೆ.

ಇಂತಹ ಬದುಕಿನಲ್ಲಿ ಪುಟ್ಟಕ್ಕನಿಗೆ ಒದಗಿದ ಕಷ್ಟ ಎಂದರೆ, ಮಠದ ಆಂಜನೇಯಸ್ವಾಮಿ ಮೆಡಿಕಲ್ ಕಾಲೇಜು ಕಟ್ಟಲು ಒಂಟಿ ಹೆಂಗಸಿನ ಆಸ್ತಿಯನ್ನು ಕಬಳಿಸಲು ಹೊಂಚು ಹಾಕಿದ್ದನ್ನು ಕಂಡ ಪುಟ್ಟಕ್ಕ ಸಿಡಿದ್ದೆದ್ದು, ಅವನ ವಿರುದ್ಧ ಯುದ್ಧವನ್ನು ಸಾರುತ್ತಾಳೆ. ಆದರೆ ಒಂದು ದೊಡ್ಡ ಮೆಡಿಕಲ್ ಕಾಲೇಜನ್ನು ಕಟ್ಟಿ ಅಲ್ಲಿ ಬರುವ ಆದಾಯದ ನಿರೀಕ್ಷೆಯಲ್ಲಿ, ಇಲ್ಲಿನ ವಿಧವೆಯ ಹೊಲವನ್ನು ಬಾಲತ್ಕಾರದಿಂದಲೇ ಆಕ್ರಮಿಸಿಕೊಳ್ಳುತ್ತಾರೆ. ಅಲ್ಲಿನ ಸರ್ಕಾರದ ಅಧಿಕಾರ ಹಾಗೂ ರಾಜಕಾರಣವನ್ನು ಬಲಿಷ್ಠ ಪ್ರಭಾವಗಳಿಂದ ಪೂರ್ಣ ಸ್ವಯತ ಗೊಳಿಸಿಕೊಡುವ ಭ್ರಷ್ಟತೆಯ ತೀವ್ರತೆಯನ್ನು ಕೃತಕವಲ್ಲದೆ ಸಹಜವಾಗಿಸುತ್ತಾರೆ.

ರಾತ್ರಿ ವಿಲೇಜ್ ಅಕೌಂಟೆಂಟು ನಂಜುಂಡನನ್ನು ದರಗುಟ್ಟಿಕೊಂಡು ಪಂಚಾಯಿತಿ ಕಟ್ಟೆಗೆ ಎಳೆದುಕೊಂಡೇ ಬಂದಳು "ಗೌರ್‌ಮೆಂಟ್ ಸರ್ವೆಂಟು ಮೇಲೆ ಕೈ ಮಾಡಬಾರದು ಪುಟ್ಟಕ್ಕೊ"[9] ಎಂದು ಅವನು ಪರಿಪರಿಯಾಗಿ ಬೇಡಿಕೊಂಡರೂ " ನಿನ್ನ ಗೋರ್ ಮೆಂಟ್‌ಗಿಷ್ಟು ಬೆಂಕಿ ಹಾಕ ಮೊದ್ಲು ಊರ ಹಿರೀರ ಮುಂದೆ ರಿಕಾಡ್ನು ತೊರ್‍ಸು, ನನ್ನ ನೆಲದ ಮೇಲೆ ಕಾಲೇಜು ಕಟ್ಟಿಸೋಕೆ ಯಾವನಿಗೈತೆ ದಾಸತ್ತು? ಮಹಿಳೆ ತನಗಾದ ಅನ್ಯಾಯದಲ್ಲಿ ಬಂದ ರೋಷದ ಆವೇಗ ಹೋರಾಟವನ್ನು ಚಿತ್ರಿಸಿದರೆ. ನ್ಯಾಯ ಅನ್ಯಾಯವನ್ನು ಕೇಳುವುದರಲ್ಲಿ ಪುರುಷರಷ್ಟೇ ಹೆಣ್ಣು ಸಾಮರ್ಥ್ಯಳು ಆದರೂ ಈ ಸಮಾಜದ ದಬ್ಬಾಳಿಕೆ ಬಲ್ಲಷ್ಠ ಸಮುದಾಯದ ಭ್ರಷ್ಟತೆಯ ವಿಸ್ತಾರಗಳ ಮಧ್ಯೆ ಪುಟ್ಟಕ್ಕನ ಹೋರಾಟದಬಲ ಸಾರ್ಥಕ್ಯವನ್ನು ಕಳೆದು ಕೊಂಡು ಅಂತ್ಯಗೊಳುತ್ತದೆ.

"ತಲೆಗೂದಲನ್ನು ಗಂಟು ಹಾಕಿದ್ದಳು. ಕಾಲಿನ ಹಿಮ್ಮಡಿಗಳು ಮತ್ತು ಅಂಗೈ ಒಡೆದಿದ್ದವು ಸಂಜೆಯವರೆಗೂ ಕಾಯಿಸಿದ ಮರಿಸ್ವಾಮಿ, ಕತ್ತಲಾದ ಮೇಲ ಹೋಗೋಗು.... ಸ್ವಾಮಿಗಳು ವಿಶ್ರಾಂತಿಯಲ್ಲಿದ್ದಾರೆ."[10] ಎಂದು ಗದರಿಸಿದಾಗ ಮತ್ತೆ ಭುಸ್ ನಾಗಪ್ಪನ ಅವತಾರ ತಾಳಿ "ಅಯ್ಲೋಏವ್...... ಮೈ ಮೇಲೆ ನಿಗಾ ಇಟ್ಕೊಂಡು ಮಾತಾಡು. ನನ್ನ ಇಪ್ಪತ್ತೇಕರೇ ಭೂಮಿ ಮೇಲೆ ಕಾಲೇಜು ಕಟ್ಟಿತ್ತಾ ಅವ್ರ ನಿಮ್ಮ ಸ್ವಾಮಿಗಳು. ವಸಿ ಕೇಳಾವ ಅಂತ ಬಂದಿದ್ದೀನಿ .... ಬಿಡಯ್ಯದಾರಿ ಎಂದು ಪಕ್ಕಕ್ಕೆ ತಳಿ ಒಳಗ ನುಗ್ಗಿಯೇ ಬಿಟ್ಟಳು ಮೈಲಿಗೆಯಾಗುತ್ತದೆ ಎಂದು ಹೆದರಿದ ಆ ವಟು ಹಾರಿ ನಿಂತ. ಗ್ರಾಮೀಣ ಬದುಕಿನ ನುಡಿ, ಭಾವಣೆಗಳನ್ನು ಚಿತ್ರಿಸುವುದರ ಜೊತೆಗೆ ಅವರ ಮಾನಸಿಕಸ್ಥಿತಿ ದೇಹಿಕ ವ್ಯವಸ್ಥೆಯನ್ನು ವಿವರಿಸುತ್ತಾರೆ. ರೈತನ ಬದುಕನ್ನು ಅರ್ಬಟಿಸಿ ತಿಮಿಂಗಲದಂತೆ ಬಾಯಿತೆರದು ತಿಂದ್ದು ತೇಗುವ, ಗ್ರಾಮೀಣ ಬದುಕನ್ನು ಹಾಳು ಮಾಡುತ್ತಿರುವ ಜಾಗತೀಕರಣದ ಎಂ.ಆರ್, ಐ ಗಳನ್ನು. ಸಹವರ್ತಿಯಾಗಿರುವ ಮಠದ ಸ್ವಾಮಿಜೀಯ ಕೈವಾಡಗಳು ಸಹಜವಾಸ್ತವವಾಗಿ ಬಡ ಹಾಗೂ ರೈತರ ಸಮಾದಿಯ ಮೇಲೆ ಮಹಲು ಕಟ್ಟಡಗಳ ಕಟ್ಟಿಕೊಳ್ಳುವುದರ ಉದಾಹಾರಣೆಯಾಗಿದೆ. ಈ ನಡುವೆ ದೂರನೇ ಸ್ವೀಕಾರ ಮಾಡದ ಸರ್ಕಲ್ ಇನ್ಸ್‌ಪೆಕ್ಟರ್, ಗಮನಿಸದೆ ಅಸಡ್ಡೆ ತೋರುವ ಜಿಲ್ಲಾಧಿಕಾರಿ. ಸರ್ಕಾರ ಬಲಿಷ್ಠರಿಗೆ ಬಲಿಯಾಗುವುದರ ಒಂದು ನೈಜ ವಾಸ್ತವದ ಮಾರ್ಮಿಕ ಚಿತ್ರಣವನ್ನು ತಂದಿದ್ದಾರೆ.

ಕೃಷ್ಣಪ್ಪ ಕೂಪಿತನಾಗಿ ರಾತ್ರಿ ಸಿಕ್ಕಾಬಟ್ಟೆ ಕುಡಿದು ಬೀದಿಯಲ್ಲಿ "ಆ ಪುಟ್ಟಕ್ಕನನ್ನು ನಾನು ಇಟ್ಕೊಂಡಿದಿನಿ.. ಇಸಂಪುರಿ ಹಳ್ಳದಲ್ಲಿ ಮಲಗಿದ್ದೊ... ಅಂತ ತೋಟದಲ್ಲಿ ಊರೆಲ್ಲಾ ಗುಲ್ಲಾಗುವಂತೆ ಮಾಡಿದ."[11] ಕೃಷ್ಣ ನಂತಹ ಉಸರವಳ್ಳಿ ಪುಗಸಟ್ಟೆಯಂತಹ ಚಾರಿತ್ಯಯಗಳ ನಾಡಿನ ತುಂಬಾ ಇದ್ದು, ಇವುಗಳು ಮಾಡುವ ಲೈಂಗಿಕ ಕಿರುಕುಳ ನೋವು ಅಸಹನೆಗೆ ಎಡೆಮಾಡಿ ಕೊಂಡು ಜೀವನದಲ್ಲಿ ದೊಡ್ಡ ಆಟವಾಡಿ ಅನುಭವಿಸಿ ಆರ್ಭಟಿಸುವ ಗೊಸುಂಬಿಗಳೇ ಹೆಚ್ಚು. ಇಂತಹ ಸಂದರ್ಭದಲ್ಲಿ ಲೈಂಗಿಕ ಶೋಷಣೆಯನ್ನು ಅನುಭವಿಸಿ ಛಲದಿಂದಲೇ ಎದುರಿಸಲು ತನ್ನ ನ್ಯಾಯ ದೊರಕಿಸಿಕೊಳ್ಳಲು ಮಾಡುವ ಹೋರಾಟ ಕಾಲಾತೀತವಾದ ಬಂಡಾಯವಾಗಿದೆ. ಮೂರು ಜನ ಬಿಳೀ ಕೋಟಿನ ಹುಡುಗಿಯರು ಪುಟ್ಟಕ್ಕನ ಗುಡಿಸಿಲ್ಲಿಗೆ ಬರುತ್ತಾರೆ. "ಅಮ್ಮ ಕುಡಿಯಲು ನೀರಿದೆಯಾ?"[12] ಎಂದು ಕೇಳುತ್ತಾರೆ. ಪುಟ್ಟಕ್ಕ ಕೆಂಪು ಮಡಿಕೆಯಲ್ಲಿ ನೀರನ್ನು ಕಂಚಿನ ಗ್ಲಾಸಿಗೆ ಸುರಿದುಕೊಡುತ್ತಾಳೆ. ಇಷ್ಟೆಲ್ಲಾ ಅದರೂ ಇಲ್ಲಿನ ಗ್ರಾಮೀಣ ಅಸರೆಗೆ ಹೊರಗಿನವರು ಬರಲೇಬೇಕು ಇವರಿಗೆ ಎಷ್ಟೊ ಅನ್ಯಾಯ ಅದರೂ ಇವರದೇ ನೈತಿಕ ಮೌಲ್ಯಗಳಲ್ಲಿ ನಡೆದೇ ಕೊಳ್ಳುತಾರೆಂಬ ಗ್ರಾಮೀಣ ಬದುಕಿನ ಮಾನವೀಯತೆಯನ್ನು ಚಿತ್ರಿಸುತ್ತಾರೆ.

ಇಲ್ಲಿಯ ಮೆಡಿಕಲ್ ಕಾಲೇಜಿನ ಅವ್ಯವಸ್ಥೆಯನ್ನು ವಿದ್ಯಾರ್ಥಿಗಳು ಮಾತನಾಡಿಕೊಳ್ಳುವ ಕಟ್ಟುವಾಸ್ತವತೆಯನ್ನು ತೆರೆದಿಡುತ್ತಾರೆ. ಕೊನೆಗೆ "ಈ ಕಾಲೇಜಿಗೆ ಇಪ್ಪತ್ತು ಏಕರೆ ಭೂಮಿಯನ್ನು ಉದಾರವಾಗಿ ದಾನ ಮಾಡಿದ ಶ್ರೀಮತಿ ಪುಟ್ಟಕ್ಕನವರ ಹೆಸರನ್ನು, ಈ ಆವರಣದಲ್ಲಿ ಮುಂದೆ ಕಟ್ಟಿಸಲಾಗಿರುವ ಉಪಹಾರ ಗೃಹಕ್ಕೆ ಸ್ಮರಣಾರ್ಥವಾಗಿ ಇಡಲಾಗುವುದು". ಆಂಜನೇಯಸ್ವಾಮಿಯವರ ಮಾತು ಇಲ್ಲಿನ ಸಾಮಾಜಿಕ ವ್ಯವಸ್ಥೆಯ ವ್ಯಂಗ್ಯತನ ತಾಂತ್ರಿಕ ಜ್ಞಾನದ ಸ್ವಾಮಿಜಿಯ ಕೃತಕ ಮಾತುಗಳು ನೋವು ತರುವ ಸ್ವಾಭಿಮಾನದ ಬದುಕಿನ ಹೊರಾಟಧ ಪುಟ್ಟಕ್ಕನ ತೃಪ್ತಿಗೆ ಉಪಗೃಹಕ್ಕೆ ಹೆಸರಿಡುವುದು ಎಷ್ಟು ಸರಿ ? ಸ್ವಾಮೀಜಿಯ ವ್ಯಂಗ್ಯ ನಡವಳಿಗಳ ಚಿತ್ರಣತಂದರು ಅಲ್ಲಿ ಪುಟ್ಟಕ್ಕನ ಜೀವವಿರುವುದಿಲ್ಲ ಕಳೆದ ಜಮೀನಿನಲ್ಲೆ ಜೀವ ಕಳೆವ ಪುಟ್ಟನ ಮೂಲಕ ಪ್ರತಿ ರೈತನ ಬದುಕಿನ ಚಿತ್ರವನ್ನು ನೀಡಿದ್ದಾರೆ.

ಒಟ್ಟಾರೆ ಗ್ರಾಮೀಣ ರೈತ ಬದುಕಿನ ಭೂಕಬಳಿಯಲ್ಲಿನ ಜಾಗತಿಕ ಪ್ರವೇಶದಿಂದಾಗವ ಸಮಾನ್ಯ ರೈತಪಿ ವರ್ಗದ ಮೇಲಿನ ದಬ್ಬಾಳಿಕ ಶೋಷಣೆಯಲ್ಲಿ ಬದುಕನ್ನು ಕಳೆದುಕೊಳ್ಳುವ ರೈತ ಮಹಿಳೆಗೆ ಆಗುವ ಅನ್ಯಾಯಗಳ ಕುರುಹಿದೆ. ಜನರ ಸಾಮಾನ್ಯರ ಬದುಕಿಗೆ ಅಸರೆಯಾಗ ಬೇಕಾಗಿದ್ದ ಸ್ವಾಮಿ ರೈತರ ಒದುಕನ್ನು ಅಸನಗೊಳಿಸ ಬೇಕಾಗಿದ್ದ ಮಠ, ರೈತ ಮತ್ತು ರೈತಮಹಿಳೆ ಬದುಕನ್ನು ನುಂಗಿದಂತಹ ಜೀವಗಳನ್ನು ನಾಶ ಮಾಡಿದ್ದರ ವರದಿಯಾಗಿ ನಿರೂಪಿಸುತ್ತಾರೆ.

ಇಲ್ಲಿ ನಾಗತಿಹಳ್ಳಿ ಬದುಕನ್ನು ಪ್ರಜ್ಞಾಪೂರ್ವಕವಾಗಿ ನೋಡುವ ಸಮಾಜವಾದಿ ನೆಲೆಯಲ್ಲಿ ಚಿಂತಿಸುವ ಬರಹಗಾರರಾಗಿ ಕಾಣುವುದನ್ನು ನೋಡಬಹುದು.

'ಮನೆ' ಎಂಬ ಗ್ರಾಮೀಣ ಬದುಕಿನ ಕಥೆಯಲ್ಲಿ ಗುರುವೇಗೌಡರಿಗೆ ತಮ್ಮ ಜೀವಿತದ ಅವಧಿಯಲ್ಲಿ ಹೆದ್ದಾರಿ ಮೊಗ್ಗಲಲೇ ಮನೆ ಕಟ್ಟಬೇಕೆಂಬ ಆಸೆ. ಆದರೆ ಸರ್ಕಾರದವರು ಇವರ ಜಮೀನನ್ನು ಸ್ವಾದೀನತೆಕೊಂಡು ಹೆಲ್ತ್‌ಸೆಂಟ್ರು, ಹೈಸ್ಕೂಲು ಎಲ್ಲ ಇಲ್ಲೆ ಆಗಬೇಕೆಂದು ತಿರ್ಮಾನಿಸಿಬಿಡ್ತಾರೆ. ರಸ್ತೆ ಕರೆಂಟ್‌ಗಳಿಲ್ಲ ಹಳೆ ಊರನ್ನ ಬಿಟ್ಟು, ರಸ್ತೆ ಪಕ್ಕವಲ್ಲಿ ತಕಲ್ಲು ಹೊಲದಲ್ಲಿ ಮನೆಕಟ್ಟಬೇಕೆಂಬ ನಾಗರಿಕ ವ್ಯವಸ್ಥೆಗೆ ಹಳ್ಳಿಗಳು ಬದಲಾಗುವ ವ್ಯವಸ್ಥೆಗಳ ಅನಾವರಣ ಪ್ರಾತಿನಿಧಿಕವಾಗಿ ಚಿತ್ರಿಸಿದ್ದಾರೆ.

ಸಿದ್ಲಿಂಗ್ನನೂ ಗುರುವೇಗೌಡರು ಜಮೀನು ವಿಷಯದಲ್ಲಿ ಜಗಳವಾಡಿ ಕಚ್ಚಾಡಿದಾಗ ಪಂಚಾಯ್ತಿಯಲ್ಲಿ "ಜಡಿದಾಡಿ ಸಾಯ್ಲಿ ಇಬ್ರಿಗೂ ಮೊಗರು. ಈ ಸಿರಿಗೆ ಪಂಚಾಯ್ತಿ ಯಾಕೆ ಸೇರಿಸ್ಬೇಗಿತ್ತು?"[13] ಅಂತ ಭೈರಜ್ಜ ಹಾಲಪ್ಪ ಮಾವ ಗೊಣಕಿಗೊಂಡು ಲಾಟಿನು ಹಿಡಕೊಂಡು ಮನೆ ಕಡೇ ಹೊಂಟರು ಎಂಬಲ್ಲಿ ಗ್ರಾಮೀಣ ಬದುಕಿನ ಬಡಿದಾಟ. ನ್ಯಾಯ. ತಿರ್ಮಾನಗಳಲ್ಲಿ ವಿವಿಧ

ಮುಖಗಳನ್ನು ಬಿಚ್ಚಿಡುತ್ತಾರೆ. ಹಳ್ಳಿ ಬದುಕಿನ ಪರಿಸರದ ಬದುಕಿನ ಮಜಲುಗಳ ವಿಸ್ತಾರ ಸ್ವರೂಪಗಳನ್ನು ಪ್ರತ್ಯಕ್ಷಪಡಿಸುವ ಮಾರ್ಗದಲ್ಲಿ ನಿರೂಪಿಸುತ್ತಾರೆ.

ಮನೆ ಕಟ್ಟುವ ಸಂದರ್ಭದ ಕಷ್ಟ ನಿಕೃಷ್ಟಗಳ ನಡುವೆ ಸಿದ್ಲಿಂಗನ ಜೊತೆ ಗುರುವೇಗೌಡ, ಕಬ್ಬಾಡಿ ಪೋಲಿಸ್ ಸ್ಟೇಷನ್‌ಗೆ ಹೋಗಿ, ಮನೆಕಟ್ಟುವ ಕೆಲಸ ಅರ್ಧಕ್ಕೆ ನಿಂತು ಮನೆಕಟ್ಟಿದ ಸಾಮಾನುಗಳನ್ನು ಎಲ್ಲರೂ ಕದ್ದೊಯ್ದು ನೋಡಿ, ಗುರುವೇಗೌಡರ ಎದೆಗೆ ಸಿಡ್ಲು ಹೊಡೆದಂತಾಗಿ ಮಾನಸಿಕ ವೇದನೆಯೊಳಗೆ ಸಾಮಾಜಿಕ ಭ್ರಷ್ಟ ದೂರಸೆಗಳನ್ನು ಚಿತ್ರಿಸುವ ಸಂದರ್ಭ ವಾಸ್ತವ ಜಗತ್ತಿನ ನೈಜ ಘಟನೆಯನ್ನು ನಿರೂಪಣೆ ಮಾಡುತ್ತಾರೆ.

ಮನೆಯ ಮರದ ಕೆಲಸ ಮಾಡಬೇಕಾದ ರಂಗಚಾರಿಯ ಅವಾಂತರಗಳು ಜಗಳಗಳ ಜೊತೆ ಮರು ಪಂಚಾಯ್ತಿ ಮಾಡಿ. ಸಿದ್ಲಿಂಗನ ಜಾಗನ ವತ್ರಿಸಿಕೊಂಡಿರುವುದು ಸರಿ. ಅದರೆ ಮನೆ ಕೆಡುವುದೇ ಬ್ಯಾಡ ಇನ್ನೂರವೈತ್ತು ಕೊಟ್ಟುಬುಡಲೇ ಗೌಡ. ಒಂದೇ ಮಾತು ಹೇಳಿ ಹಾಲಪ್ಪ ಮಾಮ ಪಂಚಾಯ್ತಿ ಖತಂ ಮಾಡಿದರು. ಹೀಗೆ ನ್ಯಾಯ ಅಂದರೆ ಯಾರಿಗೂ ಅನ್ಯಾಯವಾಗದ ಹಾಗೇ ಒಂದೇ ಸಮಾನದ ಗ್ರಾಮೀಣ ತೀರ್ಮಾನದ ಚಿತ್ರಣ. ನವ ನಾಗರಿಕ ಸಮಾಜ ಗ್ರಾಮೀಣ ಬದುಕಿನ ಮಾದರಿಗಳನ್ನು ಬಿತ್ತರಿಸಿದ್ದಾರೆ. ದಂಡದ ಹಣಕ್ಕಾಗಿ ಸಾವಿರ ರೂಪಾಯಿ ಬಾಳೊ ಎಮ್ಮೆನ ಸಂತೇಲಿ ಏಳು ನೂರ ಐವತ್ತಕ್ಕೆ ಮಾರಿ ಹೆಂಡತ್ತಿಯಿಂದ ಬೈಸಿಕೊಂಡ. ಭೈರಜ್ಜನ ಕೈಗೆ ಸಿದ್ಲಿಂಗನ ಬಾಬ್ತು ನೀಡಿ, ಮನೆ ಹತ್ರ ಇರಬೇಕಾದರೆ ಮರಿಸಿದ್ದನ ಕಪ್ಲೆಂಟ್ ತಂದು ಸ್ಟೇಷನ್ಗೆ ಕರೆದೂಗಿ, ಗೌರ್‍ನಮೆಂಟ್ ಅಫಿಸಿಯಲ್‌ಗೆ ಅದೂ ಅನ್‌ಡೂಟಿ ಮ್ಯಾಗೆ ಕೈ ಮೊಡೋದಾ, ನಿನ್ನ ಮೇಲೆ ಕೇಸು ಹಾಕಬೇಕಾಗುತ್ತದೆ. ಎಂದು ಸಬ್‌ಇನ್ಸ್‌ಪೆಕ್ಟರ್ ಬಾಳ ಹೊತ್ತು ಯೋಚ್ನೆ ಮಾಡಿದರು ಗುರುವೇಗೌಡರನ್ನು ದಿಟ್ಟಿಸಿ ನೋಡಿದರು. ಅಯ್ಯೋ ಅನ್ನಿಸ್ತು, ಒಂದ್ ಮನೆ ಕಟ್ಟಾಕೆ ಈ ಜೀವ ಎಷ್ಟೊಂದು ನೋವು ತಿಂತಾಇದೆ ಅನ್ತಾ ಅಂದು ಕೊಂಡ್ರು, ಟೇಸನ್ನಿಂದ ಹೊರಗೆ ಬಂದರು. ಗೌಡರು ಹಿಂಬಾಲಿಸಿದರು ಶಥಪಥ ತಿರುಗಿದರು. ಗೌಡರು ತಿರುಗಿದರು. ಒಮ್ಮೆ ಇನ್ಸ್‌ಪೆಟ್ಟರು ತಮ್ಮ ಟೇಸನನ್ನು ದಿಟ್ಟಿಸಿ ನೊಡಿದರು, ಬಣ್ಣ ಗೆಟ್ಟು, ಅಂದಗೆಟ್ಟು, ಗೋಡೆ ಕಿಟ್ಕಿ ಬಾಗ್ಲು ಮಂಕಾಗಿದ್ದೊ ಬಕೇಟಿನ ಮೇಲೆ ಬರೆದಿದ್ದ ಫೈರ್ ಅಳಿಸಿ ಹೋಗಿತ್ತು. ಆರಕ್ಷಕ ಠಾಣೆ ಆಂತ ಬೋರ್ಡಿರ್ತದಲ್ಲ ಅದರಲ್ಲಿ ಠಾ ಮಧ್ಯ ಇರೋ ಚುಕ್ಕಿ ಅಳಿಸಿಹೊಗಿತ್ತು. ಎಂಬಲ್ಲಿ ಸಮಾಜ ಭ್ರಷ್ಟತೆಯಲ್ಲಿ ಮುಳುಗಿರುವುದರ ಕುರುಹು ವ್ಯವಸ್ಥೆಗಳ ಅಧಪಥನಗಳನ್ನು ಠಾಣೆ ರಾಣಿಯಾಗುವ ವ್ಯಂಗ್ಯ ಸ್ಥಿತಿಗಳನ್ನು ಇಲ್ಲಿ ನಿರೂಪಣೆ ಮಾಡಿದ್ದಾರೆ.

ಕೊನೆಗೂ ಇನ್ಸ್‌ಪೆಕ್ಟರ್ ಹೇಳಿದ್ರು, " ಒಂದು ಪೈಸೆ ಲಂಚಾಗಿಂಚ ನಮ್ಮ ಟೇಸಾನ್ನಾಗಿ ನಡೆಯೋ ಹಂಗಿಲ್ಲ. ನಮ್ಮ ಠೇಸನ್‌ಗೆ ಒಂದು ಬಾರಿ ಸುಣ್ಣ ಬಣ್ಣ ಬಡಿಸ್ಬುಡು ಏನೊಂಥ್ಯೆ ನೂರು ಆಯ್ತದೆ ಅಮ್ನೂ ನಿನ್ನ ಮನೆಕೆಲ್ಸದ ಖರ್ಚಿಗೆ ಸೇರಿಸ್ಕೋ, ನನ್ಗೇನು ದುಡ್ಡು ಬೇಡ."[14] ಎನ್ನುವ ನುಡಿಗಳಲ್ಲಿನ ವ್ಯವಸ್ಥೆ ಸಾಮಾನ್ಯ ಜನರ ಬದುಕಿನ ಶೋಷಣೆಯ ಶೋಚನೆಯ ಸ್ಥಿತಿಯನ್ನು ಅನಾವರಣ ಮಾಡುತ್ತಾರೆ. ಈಗಾಗಲೇ ಈ ಬಡಜೀವ ಮನೆ ಕಟ್ಟಿಕೊಳ್ಳಲು ಎಷ್ಟೊಂದು ಪರಿತಪಿಸಬೇಕಾಗಿತ್ತು. ಸಮಾಜದಲ್ಲಿ ಭ್ರಷ್ಟತೆ ಹೇಗೆ ಬೇರೂರಿ ಕೊಂಡಿದೆ ಎಂಬುದನ್ನು ಬಿಂಬಿಸಿದ್ದಾರೆ.

ಕೊನೆಗೆ ಗುರುವೇಗೌಡ ಠೇಸ್ಸನ್‌ಗೆ ಬಣ್ಣ ಹೊಡಿಸಿದ, ಒಡೆದಾಗ ಮ್ಯಾಲೆ ಇಡೀ ಠೇಸ್ಸನ್ ಗೌಡರಿಗೆ ಭಯಂಕರವಾಗಿ ಕಾಣಿಸತೊಡಗಿತ್ತು. ಕೆಂಪು ಹಳದಿ ಬಣ್ಣಗಳು ಕಣ್ಣಿಗೆ ಚುಚ್ಚತೊಡಗಿತ್ತು. ಮಿಂಚು ಹೊಡೆದಂತೆ ಪಳಪಳಾಂತ ಮಿನುಗ ತೊಡಗಿದವು. ಮಾರಮ್ಮನ ಸೋಮದಂಗೆ, ಉಡುಸ್ಲಮ್ಮನ ಹಸಿರು ಬಂಡಿ ಹಂಗೆ, ಹುಲ್ಲಿಕೆರೆಅಮ್ಮನ ಸಿಡಿಹಂಗೆ, ಚೌಡೇಶ್ವರಿ ಕಳಸದಂಗೆ ನನ್ನೈಲಾಕ್ಕಿಲ್ಲ ಅಂತ ಗುರುವೇಗೌಡ್ರು ಎರಡು ಕೈನಿಂದ ಕಣ್ಣಚ್ಚಿ ಕೊಂಡ್ರು .... ಎಂಬಲ್ಲಿ ಕಥೆ ಅಂತ್ಯವಾಗುತ್ತದೆ.

ಗುರುವೇಗೌಡನ ಒಂದು ಮನೆ ಕಟ್ಟಕೊಳ್ಳು ಆತನ ಕನಸ್ಸು ಅರ್ಧಕ್ಕ ನಿಂತ್ರು ಮನೆಯಕಟ್ಟುವ ಬಾವಣೆಗಳ, ಅನುಭವಿಸಿದ ಶೋಷಣೆಗಳ ಏಳವಳೆಗಳನ್ನು ನವಿರಾಗಿ ಮನಕಲಕುವಂತೆ ತೀಕ್ಷ್ಣ ಮನೋಬಾವದ ಕಥೆಯ ನೇಯ್ಗೆಯನ್ನು ಹಳ್ಳಿ ಬದುಕಿನ ವಾಸ್ತವತೆಯನ್ನು ತಂದಿದ್ದಾರೆ.

ಗ್ರಾಮೀಣ ಬದುಕಿನಲ್ಲಿ ಅಣ್ಣ ತಮ್ಮಂದಿರು ಸಮಸ್ತ ಆಸ್ತಿಯನ್ನು ಭಾಗಮಾಡಿ ಹಂಚಿಕೊಳ್ಳುವ ಸನ್ನಿವೇಶದ **'ಪಾಲು'** ಕಥೆಯ ಚಿತ್ರಣವಾಗಿದೆ. ಶಾಲೆಯ ಮಾಸ್ತರೊಬ್ಬರು ಶಾಲಾ ಶಿಕ್ಷಕರಾಗಿ ಮೂರು ಮಕ್ಕಳನ್ನು ಸಾಕಿ, ಒಂದಷ್ಟು ಜಮೀನು ಮಾಡುತ್ತಾರೆ. ಆದರೆ ಮಕ್ಕಳು ಓದದೆ ಇತ್ತಕಡೆ, ಆರಂಭವೂ ಮಾಡದ. ಹಿರಿಯವನು ಕಂಟ್ರಾಕ್ಟ ಮಾಡಿಸ್ತೀನಿ ಅಂತ ಕಾಸು ಸಂಪಾದನೆಗೆ ಹೊರಟ, ಎರಡನೆಯವನಿಗೆ ತೆಂಗಿನಕಾಯಿ ವ್ಯಾಪಾರದ ಹುಚ್ಚು. ಮೂರನೇಯವನಿಗೆ ಸಿನಿಮಾ ಕಿಯಾಲಿ. ಮಾಸ್ತರಿಗೆ ಮಕ್ಕಳ ಚಿಂತೆಯಾಗಿ ಕೊನೆಯವವನ್ನಾದರೂ ಓದಿಸುವ ಹಂಬಲದಲ್ಲಿ ಕಾಲೇಜಿಗೆ ಸೇರಿದರೆ, ಇವನು ಎಕನಾಮಿಕ್ಸ್ ಮೇಡಂಗೆ ಹಿಂದಿನಿಂದ ಇಂಕು ಚೆಲ್ಲಿ ಕಾಲೇಜಿನಿಂದ ಓಡಿಸಿದರು. ಮಾಸ್ತರು ಶಾಲೆ ಬಿಡಿಸಿ 'ಗೇಯ್ಕೊಂಡು ಬಿದ್ದಿರು'[15] ಅಂತ, ಇನ್ನೊಂದು ಜೊತೆ ಹೊರಿ ತಂದರು.

ಇಲ್ಲಿ ಗ್ರಾಮೀಣ ಬದುಕಿನ ನೈಜ ಚಿತ್ರಣದೊಂದಿಗೆ, ಮಕ್ಕಳ ಸಾಕುವ ಬವಣೆ ಒಂದಡೆಯಾದರೆ ಅವರನ್ನು ಸಮಾಜದಲ್ಲಿ ಸರಿದಾರಿಗೆ ತರುವ ಮತ್ತೊಂದು ಜವಾಬ್ದಾರಿಯುತ್ತದ ಸಂಕಷ್ಟಗಳ ಚಿತ್ರಣವನ್ನು ತರುತ್ತಾರೆ. ದೊಡ್ಡ ಮಗನ ಕಂಟ್ರಾಕ್ಟು ಕೆಲಸ, ಎರಡನೇಯವನು

ವ್ಯಾಪರದಲ್ಲಿ ತೊಡಗಿದರೆ, ಮೂರನೇಯವನು ಮನೆ ತೋಟದ ಕೆಲಸ ಇವನ ಮೈಮೇಲೆ ಬಿಳುತ್ತದೆ ಇವ ಮೈಗಳ್ಳ ಹೆಂಗೋ ಜುಲ್ಮಕಿ ರಾಮ್‌ರಾಮ್ ಅನ್ನುತ್ತಿದ್ದ. ಕೊನೆಗೂ ಮಾಸ್ತರಿಗೆ ನಿವೃತ್ತಿಯಾದ ಮೇಲೆ ಪಾಳು ಬಿದ್ದ ಹೋಲ ತಾನೆ ಉಳುಮೆ ಮಾಡುವುದು, ಜನ ಇವರನ್ನ ಕಂಡು. ತೊಲೆ ಗಾತ್ರದ ಮಕ್ಕಳಿದ್ದರೂ ಇವಯ್ಯನ ಅಣೆ ಬರಹ ನೋಡು. ಎಂದು ಅಂಗಿಸುವುದನ್ನು ಚಿಂತಿಸಿದ. ನನ್ಮಕ್ಕಳಿಗೆ ಚಿಕ್ಕಸೂ ಇಡದೆ ಬಿಕಾರಿಯಾಗಿ ಮಾಡ್ಬೇಕಿತ್ತು, ಅಂತ ತಮಗೆ ತಾವೇ ರೇಗಿ ಕೊಳ್ಳುತ್ತಿದ್ದರು. ಎಂಬಲ್ಲಿನ ಮಕ್ಕಳನ್ನು ಸಾಕುವಾಗ ಅವರಿಗೆ ಹಣದ ಅವಶ್ಯಕತೆ, ಹಣದ ಬಳಕೆ ನೋವುಗಳ ಅರಿವಿರ ಬೇಕಿತ್ತು. ನಾವು ನೋವನ್ನು ನೀಡಿ ಮಕ್ಕಳನ್ನು ಸಾಕಬೇಕಿತ್ತು. ಇದು ಸಮಾಜದಲ್ಲಿ ಮಕ್ಕಳ ಸಾಕುವ ಮಾದರಿಯನ್ನು ಕಥೆಯ ನಿರೂಪಣೆಯಾಗಿ ಚಿತ್ರಿಸಿದ್ದಾರೆ.

ಕೊನೆಗೆ ಮಕ್ಕಳ ಮದುವೆ ಮಾಡಲು ಹಿರಿಯೋನ ಮದುವೆ ಮಾಡಿದ. ಸೊಸೆಗೆ ಮನೆಯಲ್ಲಿ ಕೆಲಸ ಹೆಚ್ಚುಂತಾ ಮೂರು ದಿನಕ್ಕೊಮ್ಮೆ ತವರಿಗೊಗುವ, ಇಲ್ಲಿ ವಯ್ಸಾದ ತಾಯಿ ತಂದೆಗೆ ಕಿರಿಯವರಿಗೆ ಉಪವಾಸವೇ ಗತಿ. ಪಕ್ಕದ್ಮನೆಯೋರು ಯಾವಾತ್ತೊ ಒಂದು ದಿನ ಬಂದು ಮಾಡಿಕೊಟ್ಟು ಹೊಗ್ತಿದ್ರು ದಿನಾ ಅದೇ ರಾಗ ಯಾರು ಕೆಳ್ತಾರೆ, ಕೊನೆಗೊಂದು ದಾರಿ ಇವರಿಗೂ ಮದುವೆ ಮಾಡಿ ಬಿಡುವ ಚಿಂತೆ. ಆದರೂ ಬಂದ ಸೊಸೆಯರು ಅಡಿಗೆಮಾಡಿ, ಅತೆ ಮಾವರನ್ನ ನೋಡಿಕೊಳ್ಳವ ಬದಲು ಅವರವರ ಹಣ ಸಂಪಾದನೆ ಅವರನ ದೂರಿ. ಇವರನ್ನ ದೂರಿ, ಮಾಸ್ತರಿಗೆ ಮತ್ತಷ್ಟು ನೋವುಂಟು ಮಾಡುವುದಾಗಿತ್ತು . ಹಿರಿಯಾನು, ಅತ್ತೆ ಮನೆಗೆ ಸಂಪತ್ತೆಲ್ಲಾ ಸಾಗಿಸಿದ್ದಾನೆ, ಮಧ್ಯದೊನು ಬಡ್ಡಿಯಾಪಾರ ಮಾಡಕೊಂಡು ಹೆಂಡ್ತಿ ಹೆಸರಲ್ಲಿ, ಬ್ಯಾಂಕಲ್ಲಿ ದುಡ್ಡ ಮಡಗವ್ನೆ 'ನಿಂಗೆ ಇಂಗಾದ್ರೆ ತೆಳ್ಗತೇದು ಬೆಳ್ಗೆ ಇಕ್ಕಾರೆ.'[16] ಅಂತ ಹೆಂಡ್ತಿ ಕಿರಿಯವನ ಎಚ್ಚರಿಸಿದಾಗ, ನನ್ನ ಪಾಲು ನನಗೆ ಬಿಸಾಕು ಯಾವನಹಂಗೂ ನಂಗೆ ಬ್ಯಾಡ, ಎಂದು ಪಾಲುಗಾರಿಕೆಗೆ ಮುಂದಾದ, ಗ್ರಾಮೀಣ ಚಿತ್ರಣದ ಬದುಕಿನ ಸಹಬಾಳ್ವೆಯ ಸಮಸ್ಯೆಗಳನ್ನು ಅನಾವರಣಗೊಳಿಸುತ್ತಾರೆ.

ಇಡೀ ರಾತ್ರಿ ಮಾಸ್ತರು ದುಃಖದಿಂದ ಕಣ್ಣೀರ ಹಾಕುವಾಗ "ಅದಕ್ಯಾಕೆ ಅಳ್ತೀ ಬಿಡು. ಶಿವ ಕೋಟ್ಟಿದಾ ಬೇಡಾ ಅನುಬರ್ಾದು. ಬರೋ ಪಿಂಚಣಿ ನಮ್ಮ ಜೀವನಕ್ಯಾಗ್ತಾದೆ ಯಾವನ ಕಾಲ ಸಂದಿಗೂ ಬೀಳಗಿಂಲ, ಹುಟ್ಟುವಾಗ ಅಣ್ಣತಮ್ಮಗಳು ಬೆಳೀತಾ ದಾಯಾದಿಗಳು."[17] ಗ್ರಾಮೀಣ ಬದುಕಿನ ದಿಕ್ಕು ದೆಸೆಗಳನ್ನ, ಅಲ್ಲಿನ ಭಾಷೆ ನುಡಿ ಬದುಕಿನ ಬಾವನೆಗಳು ಸಮುದಾಯ ಬದುಕನ್ನು ಉಳಿಸುವ, ಮಾಸ್ತರ ಹಂಬಲ ತಲ್ಲಣಗಳು ಒಂದೆಡೆಯಾದರೆ, ವಯಸ್ಸಾದ ಜೀವಗಳನ್ನ ಕಾಪಾಡುವ, ಮಕ್ಕಳಿಗಾಗಿ ಕೊರಗುವ ಜೀವಗಳ ಬದುಕಿನ ಮಾರ್ಮಿಕತೆಯನ್ನು ಚಿತ್ರಿಸಿದ್ದಾರೆ.ಎಚ್ಚರಿಸುವ ಸಲುವಾಗಿ ತರುವ ಪುಟ್ಟನ ಪಾತ್ರ, ಕಥೆಗಾರರ ಸಾಮಾಜಿಕ ಪ್ರಜ್ಞೆಯಾಗಿ ಸಂದೇಶ ರವಾನೆಗಾಗಿ ಚಿತ್ರಿಸಿದ ಪುಟ್ಟನ

ಪಾತ್ರ ಮೌಲಿಕ ಪ್ರಜ್ಞೆಯಾಗಿದೆ. ಕೊನೆಗೂ ಮನೆ ಛಿದ್ರವಾಯಿತು. ಮೂರು ನಾಲ್ಕುಹಳ್ಳಿ ಹಿರಿಯರು ಬಂದು ಹೊಲ, ಮನೆ, ಬ್ಯಾಂಕ್‌ಸಾಲ, ಪಂಪ್‌ಸೆಟ್, ಬಾವಿ, ಗಬ್ಬದಹಸ ತನ್ನದ್ದು ನನ್ನದು ಎಂದು ಹಂಚಿಕೊಂಡರು. ಎತ್ತುಗಾಡಿ ಹಂಚುವುದು ಕಷ್ಟವಾಗಿ ಮಾರಿ ಹಣ ಹಂಚಿಕೊಳ್ಳುವುದು ಅಲ್ಲದೆ ಬಾರುಕೋಲು, ಹಲಬೆ, ಗಳ, ಕಲ್ಲು, ಚೆಂಬು, ಚಪ್ಪಡಿ, ಲೋಟ, ವಂದರಿ, ಕುಡ್ಲು ಪೊರಕೆಯಾದಿಯಾಗಿ ಮೂರು ಹೋಳಾಗಿ ಸಿಡಿದು ಹೋದವು ಮಾಸ್ತರು ಹಾಗೂ ಮುದುಕಿಯ ಹೃದಯಗಳೂ ಸಿಡಿದು ಸುಟ್ಟು ಕರಕಾದವು. ಎಂಬ ರೂಪಕಗಳೊಡನೆ ಹಳ್ಳಿಯ ಬದುಕಿನ ಪರಿಕರಗಳು, ಅವುಗಳೊಳಗಿನ ಬದುಕು ಹಾಗೆ, ತನ್ನಬಿಟ್ಟು ದೂರಾಗುವ ಮಕ್ಕಳ ಕುಟುಂಬ. ಜೀವನ ಪೂರ್ತಿ ಸಂಗ್ರಹಿಸಿದ ವಸ್ತುಗಳು ತಾನೆತ್ತ ಮಕ್ಕಳು, ಬದುಕು ಮೂರುದಿಕ್ಕು ಹಂಚುವುದು, ಯಾವ ತಂದೆ ತಾಯಿಗೆ ನೋವಾಗದಿರದು ಇಂತಹ ಸಂದರ್ಭ ಎಲ್ಲಾ ಕುಟುಂಬಗಳಲ್ಲಿಯು ಸರ್ವೆ ಸಾಮಾನ್ಯ. ಇಂತಹ ಬದುಕಿನ ಚಿತ್ರಣಗಳನ್ನು ಸಾದೃಶ್ಯಕರಿಸುವ ನಾಗತಿಹಳ್ಳಿಯವರು ಗ್ರಾಮೀಣ ಬದುಕಿನ ಕಥೆಗಳ ವಿಶೇಷವಾಗಿದೆ.

ಮಾಸ್ತರು ಮದುಕಿಗೂ ಅಜ್ಜನ ಪಾಲು ಅಂತ ಕೊಟ್ಟರು. ದಿಣ್ಣೆಹೊಲ ಅರ್ಧ ಎಕರೆ. ಊರಿಗೆ ಮೂರು ಮೈಲಿದೂರದಲ್ಲಿರುವ ಇಪ್ಪತ್ತೈದು ತೆಂಗಿನಮರ ಮಾಸ್ತರಿಗೆ ಬಿಟ್ಟು ಕೊಟ್ಟರು. ಮಾಸ್ತರು ಪತ್ನಿಯೊಂದಿಗೆ ಅಜ್ಜನಪಾಲಿಗೆ ಬಂದಿದ್ದ ಮನೆಯ ರೂಮಿಗೆ ಬಂದರು. ಪಂಚಾಯಿತಿಗೆ ಬಂದಿದ್ದ ಬಾಳಗಂಚಿ ಗೋಪಾಲಗೌಡರು, "ಮಾಸ್ತರೇ ಇಷ್ಟು ಕಷ್ಟಪಟ್ಟು ಮಕ್ಕಳನ್ನು ಸಾಕಿದ್ದೀರಿ ಸಾಯೋ ಕೋನೆಲಿ ಬೇರೆ ಇದ್ದು ಯಾವ ಸುಖಾ ಉಣ್ಣೀರಿ ಯಾವ ಮಗನ ಜೋತೆಗಾದರು ಸೇರ್‍ಕೊಳ್ಳಿ ಈ ಇಳಿ ವಯಸ್ಸಿನಲ್ಲಿ ಆ ಮುದುಕಿ ಕಟ್ಕೋಂಡು ಯಾಕೆ ಪೇಚಾಡ್ತೀರಿ."[18] ಮಾಸ್ತರು ಸಿಟ್ಟಿಗೆದ್ದರು, ಅದುಮಿಟ್ಟು ಬ್ಯಾಡಿ ಇಷ್ಟೊಂದು ಆಸ್ತಿ ಮಾಡಿಟ್ಟೆ. ನನಗೊಂದು ಮಾಸ್ತರ್ ಕೆಲಸ ಸಿಗದಿದ್ದರೆ ನನ್‌ಗತಿ, ಇವತ್ತು ನಾಯಿಪಾಡಾಗುತ್ತಿತ್ತು. ಗಳಿಸಿದ ಮಾಸ್ತರ್ ಕೆಲಸವೇ ಕೊನೆಯಲ್ಲಿ ಕಾಯುವಂತಾದಾದ್ದು, ಆಸರೆಯಾದದ್ದು, ಸಂಪಾದಿಸಿದ ಆಸ್ತಿ ಮಕ್ಕಳು ನನಗೆ ಆಸರೆಯಾಗಲಿಲ್ಲ ಎಂಬ ನೋವು ವ್ಯಕ್ತವಾಗಿದೆ. ಕೊನೆಗೆ ಮುದುಕ ಮುದುಕಿಯ ಬದುಕು ಪುಟ್ಟ ರೊಮಿನಲ್ಲಿ ಶುರುವಾಯಿತು. ಯಾವೊಬ್ಬ ಮಗನು ತನ್ನ ತಂದೆ ತಾಯಿಯನ್ನು ಜೋತೆಗೂಡಿ ಬದುಕುವ ಹಂಬಲ ವ್ಯಕ್ತವಾಗಲಿಲ್ಲ. ಈ ನೋವಿನಲ್ಲೇ ಮಾಸ್ತರರಿಗೆ ಅಮಶಂಕೆ ಕಾಣಿಸಿಕೊಂಡು ನಿಶ್ಯಕ್ತಿಯಾಗಿ ಕೃಷವಾದರು. ಮಕ್ಕಳನ್ನ ಅವರದ ಆಸ್ತಿ ಪಾರಿಕತ್ತು ಖಾತೆ ಮಾಡಿಸುವ ಉತ್ಸಾಹದಲ್ಲಿ ಮಾಸ್ತರ ಆರೋಗ್ಯ ಎನೆಂದು ತಿಳಿಯಲ್ಲ ಅವರಪಾಲಿನ ಮನೆಗೆ ಕಿಟಕಿ ಬಾಗಿಲು ಒಲೆ ಹಾಕಿಸಬೇಕಿತ್ತು. ಬೆಳಿಗ್ಗೆಯೇ ಮನೆಬಿಟ್ಟರು. ಆದರೆ ಇಲ್ಲಿ ಮಾಸ್ತರ ಬದುಕಲಿಲ್ಲ. ಮಾಸ್ತರನ್ನ ಅವರ ತೋಟದಲ್ಲಿ ಮಣ್ಣುಮಾಡಿ, ಹಿರಿಮಗ ಕಂಟ್ರಾಕ್ಟದಾರ ಅಪ್ಪನ ತಿಥಿಗೆ ಬಹಳ ದುಡ್ಡು ಖರ್ಚುಮಾಡಿ. ಊರಿಗೆಲ್ಲಾ

ಊಟಹಾಕಿ, ಸಿಮೆಂಟ್‌ನಲ್ಲಿ ದೊಡ್ಡಗೋರಿ ಕಟ್ಟಿಸಿದ. ಇಲ್ಲಿ ಮಕ್ಕಳಿಗೆ ಇರಬೇಕಾದ ತಂದೆಯ ಋಣ. ತಿಥಿಗಿಂತಲೂ ಬದುಕಿರುವಾಗ ಅವರ ನೋವನ್ನು, ಸಂತೋಷ, ತೃಪ್ತಿಯನ್ನ ಅರಿತು ಕೊಳ್ಳುವುದಕಿಂತ ಆಡಂಬರದ ತೋರಿಕೆ. ಕಷ್ಟ ತಿಳಿಯಲ್ಲ ಬಹುತೇಕರ ಬದುಕಿನ ಕನ್ನಡಿಯಾಗಿ, ವಾಸ್ತವತೆಯ ನೈಜ ಘಟನೆಯಾಗಿ, ತರುವ ಮೌಲಿಕ ಪ್ರಶ್ನೆಗಳನ್ನು ದಾಖಲಿಸಿದ್ದಾರೆ. ಅಜ್ಜಿ ಪೋಸ್ಟ್ ಮಾಸ್ತರ ಶಿವನಂಜಪ್ಪ ಹಾಗೂ ಮತ್ತೊಬ್ಬರ ಸಹಾಯದಿಂದ ಪಿಂಚಣಿಗೆ ಹೆಬ್ಬೆಟ್ಟು ಒತ್ತಿ, ಯಾರ ಆಶ್ರಯ ಬೇಡ ಎಂದವಳು ಮತ್ತೇ ತನ್ನ ಮೊಮ್ಮಕ್ಕಳನ್ನ ಕರೆದು ಜೇಬಿಗೆ ಚಿಲ್ಲರೆ ತುರುಕುತ್ತಿದ್ದಳು. ಎಂಬ ಕಥೆಯ ಅಂತ್ಯವನ್ನು ಕಂಡರೆ ಅಜ್ಜಿಯ ಬದುಕು ಮಾಸ್ತಿಯವರ 'ಮೊಸರಿನ ಮಂಗಮ್ಮ'ನಂತೆ ಅದೇ ಪ್ರೀತಿ ವಾತ್ಸಲ್ಯ ಮಕ್ಕಳ ಮಮಕಾರಕ್ಕೆ ಒಳಗಾಗುತ್ತದೆ. ಮಕ್ಕಳ ಪ್ರೀತಿ ಬಾಂಧವ್ಯವು ಹೀಗೆ ಬಿಟ್ಟೆ ನೆಂದರೆ ಬಿಡದು ಮಾಯೆಯ ವಿಭಿನ್ನ ಮುಖಗಳ, ಗ್ರಾಮೀಣ ಬದುಕಿನ ಚಿತ್ರಣವನ್ನು ನಾಗತಿಹಳ್ಳಿ ನೀಡುತ್ತಾರೆ.

ಏಕಕಾಲದಲ್ಲಿ ಕಾಲರಾ-ಎಲೆಕ್ಷನೂ ಎರಡು ಒಂದೇ ಗಳಿಗೆ ಊರಿಗೆ ಹೊಕ್ಕ ಮಾರಿಗಳು. ಕಾಲರಕ್ಕಿಂತ ಎಲೆಕ್ಷನ್ ಹೆಚ್ಚು ಜನರನ್ನು ಬಲಿತೆಗೆದು ಕೊಳ್ಳುವ ಗ್ರಾಮೀಣ ಬದುಕಿನ ರಾಜಕೀಯದ ಚಿತ್ರಣವೇ **'ಎಲೆಕ್ಷನೂ ಕಾಲರಾ ಮಾರಿಯಾ'** ಕಥೆ. ಚುನಾವಣೆಯ ಅಬ್ಬರ ದೊಂಬರಾಟಗಳ ನಡುವೆ ಸಾಮಾನ್ಯ ಜನರ ಬಲಿತೆಗೆದು ಕೊಳ್ಳುವ, ವಾಸ್ತವಿಕ ಬದುಕಿನ ಅನಾವರಣವನ್ನು ಇಲ್ಲಿ ಚಿತ್ರಿಸಿದ್ದಾರೆ. ಇದೊಂದು ದಲಿತ ಸಂವೇದನೆಯ ಗ್ರಾಮೀಣ ಕಥೆಯಾಗಿದೆ. ಹರಿಜನರ ಮುಖಂಡ ಚಲುವಯ್ಯ ಅವನ ಹೆಂಡತಿ ಚಿಕ್ಕೀರಿ ಅವರಿವರ ತೋಟದಲ್ಲಿ ಕೆಲಸಮಾಡಿ ಜೀವನ ನಡೆಸುತ್ತಿದ್ದವರು. ರಾಜಕೀಯ ಇವರ ಕೇರಿಗೆ ಪ್ರವೇಶ ಮಾಡಿ. ಈದರಿದ್ರ ಎಲೆಕ್ಸನ್ನು ಬಂದರೆ ನಮ್ಮ ಚಡ್ಡೀ ನಾವು ಕಟ್ಕೊಳ್ಳೊ ಕೂ ಈ ಜನ ಬಿಡಾಕಿಲ್ಲ ಅನ್ನಿಸ್ತು. ಆದ್ರು ಇವನ ಕೈ ಕುಲಿಕಿ "ಯೋಚ್ನೆ ಮಾಡು ಚಲುವಯ್ಯ ನಿಮ್ಮ ಜಾತಿಗೆ ನಾನು ಮಾಡಿರೋ ಉಪಕಾರ ಯಾರುಮಾಡವ್ರೇ, ನಮ್ಮ ಪಕ್ಷ ಇರೋದು ನಿಮ್ಮ ಜನರ ಉದ್ಧಾರಕ್ಕೆ ನೀಸು ಮನಸ್ಸು ಮಾಡಿದ್ರೆ ನಿಮ್ಮ ಹಟ್ಟೀ ಓಟ್ಟೇಲ್ಲಾ ನನಗೆ ಕೊಡಿಸಬಹುದು. ನೀನು ಹಟ್ಟೀಗೇ ಮುಖಂಡ. ಸ್ವಲ್ಪ ಮನಸ್ಮಾಡಿದ್ರೆ ಒಂದು ಓಟೂ ಪೋಲಾಗದಂತೆ ನೋಡ್ಕೊಬಹುದು."[19] ನಮ್ಮ ಹಳ್ಳಿಗೆ ಎಲೆಕ್ಷನ್ನು ಕಾಲರ ಮಾರೀನು ಒಂದೇ ದಪ ಬಂದೈತಲ್ಲ? ಚಲುವಯ್ಯ. ದಿಕ್ಕೆಟ್ಟು ಹೆಂಗೋ ನಾಕುದಿನ ಕಾರಲ್ಲಿ ಕೂತು ಬಾಡು ಬಳ್ಳೆ ತಿಂದು ಕಳ್ಳು ತುಂಬ ಕುಡ್ದು ಜೈಕಾರ ಹಾಕ್ಕೊಂಡು ಮಜಾ ಮಾಡೋ ಕಾಲದಲ್ಲಿ ದರಿದ್ರ ಕಾಲಾರ ಮಾರಿ. ಇನ್ನೇನು? ಮನೆ ಮಂದೆ ತಿಪ್ಪೆಗುಂಡಿ ಮಡ್ಕೊಂಡು ದುರ್ವಾಸನೆ ತುಂಬ್ಕೊಂಡು ಸೋಳ್ಳೇ ನೊಣ ಜೀಯೋ ಅಂತಾವೇ, ರೋಗ ಬಾ ಅಂದ್ರೆ ಬರಕ್ಕಿಲ್ವ ಎಂಬಲ್ಲಿ ಕಾಲರ ರೋಗ ಒಂದಡೆಯಾದರೆ, ಎಲಕ್ಷನ್ ಮತ್ತೊಂದು ರೀತಿಯ ರೋಗದ ಆಹ್ವಾನವನ್ನು ವ್ಯಕ್ತಮಾಡುತ್ತಿರುವ ಸಾಮಾಜಿಕ ದುರ್ಬಲಗಳ ಅಭಿವ್ಯಕ್ತತೆ ಇದಾಗಿದೆ. ಕೆಂಪಯ್ಯ ಬಂದಾಗ ಅವನ ಬಾವುಟ ಕಟ್ಟಿ, ಶಿವಪ್ಪ ಬಂದಾಗ ಅವನ ಬಾವುಟ ಕಟ್ಟಿ

ಇಬ್ಬರ ಹತ್ತಿರ ಹಣ ಪಡೆದು, ಬಾಡು ತಿಂದು ಹೆಂಡ ಕುಡಿಯೋ ಚಲುವಯ್ಯ ಕಂಡು ಚಿಕ್ಕೀರಿ. "ನಿನ್ದೂ ಒಂದು ಬಾಳ? ಎಲಕ್ಸನ್ ಬಂತು ಅಂದ್ರೆ ರಾಜ ಆದಂಗೆ ಆಯ್ತಿ, ಒಂದು ಹುಲ್ಲುಕಡ್ಡಿ ಎತ್ಮಡಗಿಂಗಲ್ಲ, ಒಂದು ಕೂಲಿ ಕೆಲಸಕ್ಕೆ ವೋಗಾಂಗಿಲ್ಲ ಬಂದೂರಿಗೆಲ್ಲ ಓಟು ಕೊಡಿಸ್ತೀನಿ ಅಂತ ಅವರ್ಹಿಂದೆ ನಾಯಂಗೆ ಅಲಿತಿ ಒಂದು ಖಂಡುಗಾ ಕುಡ್ದು ತೂರಾಡ್ತಿ, ಕಂಡೋರ ಕಂಬ್ಳೀವೊದ್ಕಂಡು ನಸ್ಗಾಂಡನ ದಿಮಾಕು ನೋಡು ಅಂದಂಗೆ. ಅವೆಲ್ಲ ಯಾಕೆ? ಆ ಕಾರ್ನಲ್ಲಿ ಬರೋ ಅಪ್ಪನೆ ನಮ್ಗೆ ದಿನ ಅನ್ನಾಕೊಡ್ತಾನ, ಅವನ ತೀಟೆ ತೀರದ್ಮೇಲೆ ನಮ್ಮ ಹಟ್ಟೀಕಡೆ ತೀಕಾನೂ ಆಕಲ್ಲ."[20] ಅಂತ ಚಿಕ್ಕೀರಿ ಗೋಣಗಿತ್ತಾ ಹುಗುಳುತ್ತಾ ಬೈದರೆ, ಕಳ್ಳಸಗು ಹೆಜ್ಜೆ ಹಿಟ್ಟು ನೀಲಿ ಹಾಕಿ ಕರೆ ಮುಚ್ಚಿದ ಜುಬ್ಬಾ ಸಿಗ್ಗಾಗಿಹಾಕೋಂಡು ಚಲುವಯ್ಯ ಹೋರಟೇ ಹೊರಡುತ್ತಾನೆ. ಇಲ್ಲಿನ ರಾಜಕೀಯ, ಕುಟುಂಬ ಹಾಗೂ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳು ಮಾಡುದರ ವಾಸ್ತವಿಕ ಸತ್ಯವನ್ನು, ಗ್ರಾಮ್ಯಬದುಕಿನ ಅಧಃಪಥನದ ತಿರುಳನ್ನು ಕಥೆಗಾರರು ನೇರವಾಗಿ ಮಾರ್ಮಿಕವಾಗಿಯೇ ಚಿಕ್ಕೀರಿಯಿಂದ ವ್ಯಕ್ತಪಡಿಸಿದ್ದಾರೆ.

ಇತ್ತ ಕೆಂಗನ ಮಗನಿಗೆ ಹಾಸ್ಟೆಲ್ಲಿನಲ್ಲಿ ಸೀಟು ಕೋಡಿಸಿದೆನೇಂದು, ಕೆಂಪಯ್ಯ ಹೇಳುವಾಗ ಮಾತಿಗೆ ತಿರುಗೇಟುನೀಡಿ. ಸರ್ಕಾರಿ ಹಾಸ್ಟೇಲು ಬಡವರ ಪಾಲಿನ ಹಕ್ಕು.ಇದಾಗಲೇ ಎಂಟು ದಿನವಲ್ಲೇ ಸೇರಿ ಹಾಯ್ತು. ಆದರೆ ಅಲ್ಲಿನ ವ್ಯಪಸ್ಥೆ ಅನ್ಯಾಯಗಳನ್ನು ಹೇಳ್ದಾಗ ಕೆಂಪಯ್ಯನಿಗೆ ಮುಖಭಂಗವಾಯಿತು. ಗ್ರಾಮ್ಯ ಬದುಕಿನಲ್ಲಿ ಸರ್ಕಾರಿ ಸವಲತ್ತು, ಅರಿವು, ಅನ್ಯಾಯವನ್ನು ಎದುರಿಸುವ ಸಾಮರ್ಥ್ಯ. ನ್ಯಾಯ ಕೇಳುವ ಸಾಮರ್ಥ್ಯಗಳನ್ನು ಬೆಳೆಸಿಕೊಂಡಿರುವ ಬಂಡಾಯಗಾರನಂತೆ ಕೆಂಗನಪಾತ್ರ ಚಿತ್ರಿತವಾಗಿದೆ. ಚುನಾವಣೆ ಬಂತೇಂದ್ರೆ ಬಡಜನರ ಕಾಯುವ. ರಸ್ತೆಗೆ ಮಣ್ಣಾಕುವ, ಆಸ್ಪತ್ರೆ ಶಾಲೆ, ಹೆಸರೇಳುವ, ಜನರ ಆರೋಗ್ಯ ವಿಚಾರಿಸುವ ಹಾಗು ಕುಟುಂಬ, ವ್ಯಕ್ತಿ ವ್ಯಕ್ತಿಗಳ ನಡುವೆ ಕಲಹ ತಂದು ಗುದ್ದಾಡುವ, ಗ್ರಾಮೀಣ ಸಮಾಜದ ಸಮುದಾಯವನ್ನು ಹಾಳುಮಾಡುವ, ಎಲ್ಲಾ ಚಿತ್ರಣವನ್ನು ನಿರೂಪಿಸಿದ್ದಾರೆ.

ಜನಾ ಒಂದೆಡೆ ತೊಳು, ತೊಡೆ. ಮಚ್ಚು, ಕೊಡಲಿ ಬಳಸಿ ಹೊಡೆದಾಡಿದರೆ ಕಾಲರಾ ರೋಗ ಮೆಲ್ಲಗೆ ಹರಡುತ್ತಾ ಎಳೆಯರಿಂದ ವೃದ್ದರನ್ನು ಕರಗಿಸ್ತಾ ಹೊಯ್ತು. ಎಂಬ ವಾಸ್ತವತೆ, ಕಾಲರಾದಷ್ಟೆ ಚುನಾವಣೆ, ಚುನಾವಣೆಯು ಒಂದು ಭಯಾನಕ ರೋಗವಾಗಿದೆ. ಇನ್ನು ಚುನಾವಣೆ ಮುಗಿದು ಕೆಂಪಯ್ಯ ಗೆದ್ದದಕ್ಕೆ ಶಿವಪ್ಪ ಬಂದು ಹಾರಹಾಕಿ, ವಿಶಾಲ ಹೃದಯದಲ್ಲಿ ಶುಭಕೋರಿದಾಗ, ಚುನಾವಣೆಗಾಗಿ ಹೊಡೆದಾಡಿ ಜೀವ ಕಳೆದು ಕೊಂಡವರು ಸತ್ತವರಿಗೆ ಯಾವ ಲೆಕ್ಕವೂ ಇಲ್ಲ. ಬಡ ಹಾಗೂ ಸಾಮಾನ್ಯರ ಸಮಾಧಿಯ ಮೇಲೆ ಬಂಡವಾಳ ಶಾಹಿಗಳ ಅಧಿಕಾರ ದರ್ಪಗಳ ಪ್ರತಿಬಿಂಬವಾಗಿ ರಾಜಕಾರಣಿಗಳು ಕಾಣುತ್ತಾರೆ. ದಿನಪತ್ರಿಕೆಯ ಸುದ್ದಿಯಲ್ಲಿ ಇದೇ ಊರಿನಲ್ಲಿ

ಕಾಲರಾದಿಂದ ಹತ್ತು ಸಾವು ಎಲೆಕ್ಷನಿಂದ ಹನ್ನೆರಡು ಕಗ್ಗೊಲೆ ಅನೇಕರಿಗೆ ಗಾಯ. ಈ ಜನರ ಸಾವಿನಲ್ಲಿ ಚಿಕ್ಕೇರಿ ಹರಿಜನ ಮುಖಂಡ ಚಲುವಯ್ಯನವರ ಪತ್ನಿ ಎಂಬಲ್ಲಿ ಕಥೆ ಅಂತ್ಯವಾಗುತ್ತದೆ ಇಲ್ಲಿನ ಕಥೆಗಾರರೆ ಹೇಳುವ ಹಾಗೆ ಕಾಲಾರ ಹಾಗೂ ಎಲೆಕ್ಷನನ್ನು ತಕ್ಕಡಿಯಲಿಟ್ಟು ತಾಳೆ ನೋಡಿ, ಮಹಾಮಾರಿ ಸಾಂಕ್ರಾಮಿಕ ಕಾಯಿಲೆಗಿಂತ ಎಲೆಕ್ಷನ್ನು ಎಷ್ಟು ಅಪಾಯ. ಇದು ಹಳ್ಳಿಯೊಂದರ ಸಮಸ್ಯೆಯಲ್ಲ ಇಡೀ ಭಾರತದ ವ್ಯವಸ್ಥೆಯಲ್ಲಿ, ಚುನಾವಣೆ ಬಂದು ಸಾಮಾಜಿಕ ಸ್ವಾಥ್ಯ ಹಾಳು ಮಾಡುತ್ತಿರುವ ಕಟು ವಾಸ್ತವತೆಯನ್ನು ಚಿತ್ರಿಸುತ್ತಾರೆ.

ಸಾಮಾನ್ಯನಾವ ಹರಿಜನ ಚಲುವಯ್ಯ ತನ್ನ ಹೆಂಡತಿಯ ಸಾವಿನ ಅರಿವಿಲ್ಲದೆ ಹೆಂಡಕುಡಿದು ಚುನಾವಣೆಯಲ್ಲಿ ಸಂಭ್ರಮಿಸುವ ವ್ಯಕ್ತಿಗಳೇ ಸಮಾಜದಲ್ಲಿದ್ದು, ತನ್ನ ಕುಟುಂಬವನ್ನು ಹಾಳು ಮಾಡಿಕೂಳ್ಳುತ್ತಿದ್ದಾರೆ. ಹಳ್ಳಿ–ಸಮಾಜ–ದೇಶದ ಅಧ:ಪಥನವಾಗಿರುವ ನಿರೂಪಣೆ ಇದಾಗಿದೆ.

'ಕಮಂಗಿಪುರದ' ಕಥೆಯಲ್ಲಿ ಮೊಸಹೊದ, ಕಮಂಗಿಪುರ, ಕೋತಿಪುರ ಗುಬ್ಬಳ್ಳಿ ಮಂಕೇನಹಳ್ಳಿ ಊರಿನ ಜನರ ದಡ ಮುಗ್ದ ತನಗಳ ಕತೆಯೇ ಕಮಂಗಿಪುರದ ಕಥೆ. ಲಕ್ಷಣರಾಯನೆಂಬ ನಿರುದ್ಯೊಗಿ ಯುವಕ, ಕರ್ನಾಟಕ ಹೈನು ಅಭಿವೃದಿ ಮಂಡಳಿಯಲ್ಲಿ ಕೌ ಇನ್ಸ್ ಪೆಕ್ಟರ್ ಎಂಬ ಸೋಗಿನಲ್ಲಿ ಬಂದು. ಸರ್ಕಾರದ ಹತ್ತಾರು ಯೋಜನೆಗಳಲ್ಲಿ ಸಿ.ಎಚ್.ಎಫ್. ಸಿ.ಎಚ್.ಕೆ, ಸಿ.ಹೆಚ್.ಡಿ, ಜಾತಿ ಹಸುಗಳನ್ನು ತರಸಿ ಕೊಡುತ್ತೇವೆ. ಒಂದೊಂದು ಹಸುವೊ ದಿನಕ್ಕೆ ಐವತ್ತು ಲೀಟರ್ ಹಾಲುಕೊಡುತ್ತದೆ. ಐವತ್ತು ಲೀಟರ್‌ಗೆ ನೊರೈವತ್ತು ರೂಪಾಯಿ ಸಿಗುತ್ತದೆ. ತಿಂಗಳಿಗೆ ನಾಲ್ಕುವರೆ ಸಾವಿರಾ ಸಂಪಾದನೆ ಮಾಡಬಹುದು. ಇದು ಸರ್ಕಾರದ ಯೊಜನೆ ಎಂದು ಎಲ್ಲರನ್ನು ನಂಬಿಸಿ, ಊರಿನ ಎಲ್ಲಾ ಕಾರ್ಯಕ್ರಮಗಳಿಗೂ ಮುಖ್ಯ ಅಥಿತಿಯಾಗಿ ಎಲ್ಲರ ಮದುವೆ ತಿಥಿ, ನಾಟಕ ಹರಿಕಥೆಗಳ ಸಭೆಯ ಅಧ್ಯಕ್ಷತೆಯನ್ನು ವಹಿಸಿ, ಕ್ಷೀರ ಪ್ರವಾಹ ಕುರಿತು ಭಾಷಾಣ ಮಾಡಿ. ಗೋವಿಂದ–ರಾಯರ ಮಗಳು ಅನುಸೂಯಳ ಪ್ರೇಮವನ್ನು ಕಬಳಿಸಿದ ಪ್ರತಿಯೊಬ್ಬರಿಂದ ಹನ್ನೊಂದು ರೂಪಾಯಿ ಅರವತ್ತು ಪೈಸೆ, ಹರಿಜನರಿಗೆ ಅರವತ್ತು ಪೈಸೆ ಮಾತ್ರ ವಾಸುಲಿ ಮಾಡಿ ಸಾವಿರರೂ ರೂಪಾಯಿ ವಂಚಿಸಿದ. ಲಕ್ಷ್ಮಣ ರಾಯ ಮೈಸೂರಿನ ಗಾಂಧಿ ಸ್ಕ್ವೇರಿನಲ್ಲಿ ಹೊಟೇಲ್ ಕೆಲಸ ಮಾಡುತ್ತಿದ್ದವನನ್ನು, ಅಪ್ಪಾಜಿ ಅವನ ಹೆಂಡ್ತಿ ಪೋಲೀಸ್‌ಗೆ ಹಿಡಿದಕೊಟ್ಟು, ಊರಿಗೆ ಕರೆ ತಂದು, ಪಂಚಾಯ್ತಿ ಮಾಡಿ ಊರಿನ ಋಣ ತೀರಿಸುವ ಲಕ್ಷ್ಮಣರಾಯನ ಕಥೆ ಇದಾಗಿದೆ.

ಇದು ಕಥೆಗಾರರ ಊರಿನಲ್ಲಿ ನಡೆದ ಘಟನೆ ಮೊಸಹೊದ ತನ್ನೂರಿನ ಜನರ ಕಥೆಯಾಗಿದೆ. ಗ್ರಾಮೀಣ ಮುಗ್ದ ಜನರನ್ನು, ಸರ್ಕಾರಿ ಸವಲತ್ತುಗಳ ಹೆಸರಿನಲ್ಲಿ ಮೋಸ ಹೋಗುತ್ತಿರುವ ಬದುಕಿನ ಹಲವಾರು ಸಂದರ್ಭಗಳಲ್ಲಿ ಕಾಣುವುದಾಗಿದೆ. ಒಂದಲ್ಲ ಒಂದು ರೀತಿ ಮೋಸ ಮಾಡುವ ಚಾಣಕ್ಷರ

ನಡುವಿನ ಲಕ್ಷ್ಮಣರಾಯ ಮತ್ತು ಆತನಿಗೆ ವಿಶೇಷ ಅತಿಥಿ ಸತ್ಕಾರ ಮಾಡಿ ತಮ್ಮ ಲಾಭ ಪಡೆದುಕೊಳ್ಳಲು ಯತ್ನಿಸುವ ಗ್ರಾಮ ಬದುಕಿನ ಸಾಂಸ್ಕೃತಿಕ ಮಜಲುಗಳು ಇಲ್ಲಿ ವ್ಯಕ್ತವಾಗುತ್ತದೆ. ಗೋವಿಂದರಾಯರು ತಮ್ಮ ಮಗಳನ್ನು ಕೊಟ್ಟು ವಿವಾಹ ಮಾಡುಬೇಕೆಂಬ ಹಂಬಲಗಳಲ್ಲಿ ಕಳ್ಳನಾದ ನಿರುದ್ಯೋಗಿ ಲಕ್ಷ್ಮಣರಾಯ ಎಂಟು ವರ್ಷ ನಿರುದ್ಯೋಗದ ಬವಣೆಯಲ್ಲಿ ಯಾವುದೋ ಡೈರಿಯಲ್ಲಿ ಕೆಲಸಮಾಡಿ, ಅರ್ಧಂಬರ್ದ ತಿಳಿದು ಅನಿವಾರ್ಯ ವಂಚನೆ ಮಾಡುವುದು. ದೇಶದ ನಿರುದ್ಯೋಗ ಬಡತನದ ನಡುವೆ ಸಮಾಜ ವ್ಯಕ್ತಿಗಳನ್ನು ಅನಿವಾರ್ಯದಿಂದಲೇ ವಂಚನೆ ಮಾಡಿಸುವುದರ ದಟ್ಟ ವಾಸ್ತವತೆಯನ್ನು ನಿರೂಪಿಸುತ್ತಾರೆ.

ವಂಚನೆ ಮಾಡಿ ಮೋಸಮಾಡಿ ಬಂದ ಲಕ್ಷ್ಮಣನನ್ನು ಪೋಲೀಸರ ಕಪಿಮುಷ್ಟಿಯಿಂದ ಬಿಡಿಸಿ ಊರಿನಲ್ಲಿ ಇಟ್ಟು ಕೊಳ್ಳುವ ಮಾನವೀಯಮೌಲ್ಯ ಗ್ರಾಮ ಬದುಕಿನ ಸಂಸ್ಕೃತಿಗೆ ಹಿಡಿದ ಕನ್ನಡಿಯಾಗಿದೆ. ಅಂತೆಯೇ ಲಕ್ಷ್ಮಣರಾಯನು ಋಣತೀರಿಸಿ ಕೊಳ್ಳುವ ಅವನ ಗುಣಗಳ ಮೌಲಿಕಪ್ರಜ್ಞೆಯು ಇಲ್ಲಿ ವ್ಯಕ್ತವಾಗುತ್ತದೆ.

'ಬಾಣಲೆಯಿಂದ ಬೆಂಕಿಗೆ ' ಇದೊಂದು ದಲಿತ ಸಂವೇದನೆಯ ಗ್ರಾಮೀಣ ಕಥೆ ಯಾಗಿದ್ದು ಕಥಾನಾಯಕ ಕರಿಯ! ಗೌಡರ ಮನೆಯ ಜೀತದಾಳು ಅಪ್ಪಮಾಡಿದ ಸಾಲಕ್ಕೆ ತಾನು ಜೀತ ಮಾಡುತ್ತಾನೆ. ಅಪ್ಪ ಮಾಡಿದ ಸಾಲ ಎಷ್ಟು ಅಂತ ಲೆಕ್ಕ ಗೊತ್ತಿಲ್ಲದಿದ್ದರು ಗೌಡರ ಕುರಿ ಎಷ್ಟು ಎಂಬುದರ ಲೆಕ್ಕ ಗೊತ್ತು ಇವನಿಗೆ. ಇವನ ಅಪ್ಪ ಹೆಂಡ ಗುಡುಕ ಸೀಗೆ ಮುಳ್ಳಿನ ಥರ ಮನಷ್ಯ, ಎಮ್ಮೆ ಸತ್ತೋಯ್ತು ಅಂತಸುದ್ದಿ ಗೋತ್ತಾಗುತ್ತಿದ್ದಂತೆಯೇ ಓಡಿ ಹೊಗುತ್ತಿದ್ದ ಸತ್ತ ಎಮ್ಮೆ ಸಾಗಿಸಿ ಚರ್ಮ ಸುಲಿದು ಹಣ ಮಾಡಕೊಂಡು ಕಳ್ಳು ಕುಡಿದು ತೂರಾಡಿ ಕೊಂಡು ಬರುತಿದ್ದ. ಇವನಿಂದ ತಿಮ್ಮಿಯೊಬ್ಬಳೆ ವದೆ ತಿನ್ನದೆ ತಪ್ಪಿಸಿ ಕೊಳ್ಳುತ್ತಿದುದ್ದು. ತನಗೂ ಅವ್ವನಿಗೂ ಮೈ ಬಾಸುಂಡೆ ಬರುವವರೆಗೆ ಯದವಾತದ್ವಾ ಬಾರುಸುತ್ತಿದ್ದ. ಅಪ್ಪ ಸತ್ತಿದ್ದರೂ, ಅಪ್ಪನ ವದೆಗಳನ್ನು ನೆನೆಸಿಕೊಂಡರೆ ಕರಿಯನ ಎದೆಯಲ್ಲಿ ಈಗಲೂ ನಡುಕ. ಅಪ್ಪ, ಗೌಡ್ರು ತವ ಸಾಲ ಮಾಡಿ ಸತ್ತೋದ. ಈ ದುಡ್ಡ ಹೊಂಚಾಕಾಗದಿದ್ರೆ ನನ್ಮೇಲಿ ಜೀತಕ್ಕಿರು ಮೂರು ಹೊತ್ತು-ಊಟ, ವರ್ಷಕ್ಕೆರ್ಡು ಜತೆ ಬಟ್ಟೆ ಕೊಟ್ಟು ವರ್ಷಕ್ಕೆ ನೂರ್ರಂಗೆ ಮರಾಯ್ಕತ್ತಿನಿ ಅಂದ್ರು ಕರಿಯ ಯೋಚ್ನೆ ಮಾಡೋಕು ಹೊತ್ತಿಲ್ಲದೆ ಸೂರು ದಿಟ್ಟಿಸಿದ, "ಯಕ್ಲೇ ಕಿವಿ ಕೇಳ್ಸಾಕಿಲ್ವ? ನಿನ್ನ ಸಟ್ಟೀತಾಕೆ ಹುಡುಕ್ಕೊಂಡ್ಬಂದಿವ್ನಿ ದಿಮಾಕಾ? ತಟ್ಟಿ ಎಬ್ಬುಸ್ಬಿಡ್ತೀನಿ, ಹುಸಾರ್."[21] ಅಂತ ಹುಲಿಥರಾ ಗರ್ಜಿಸಿಬಿಟ್ಟರು.

ಇಲ್ಲಿನ ಮೇಲು ವರ್ಗದವರ ಶೋಷಣೆಯ ದಲಿತತೆಯ ಧೋರಣೆಗಳು ವ್ಯಕ್ತವಾಗಿದೆ.ಇಲ್ಲಿ ಕರಿಯ ಗೌಡರ ಮನೆ ಜೀತಕ್ಕೆ ಸೇರಿ ಅವರ ಕುರಿಗಳನ್ನು ಕಾಯುವ ಕಾಯಕ ಮಾಡಿ. ಅವರು

ಕೊಟ್ಟ ತಂಗಳ ಅನ್ನನೇ ಪರಮನ್ನವಾಗಿ ಸ್ವೀಕರಿಸಿದ. ಆದರೆ ಇಲ್ಲಿ ಶಾಲೆಗೊಗುವ ಮಕ್ಕಳನ್ನು ಕಂಡು ತಾನು ಕಲಿವ ಆಸೆ ವ್ಯಕ್ತವಾಗುತ್ತದೆ. ಐನೋರ ಮಗ, "ಯೋಗಿ ತಂದದ್ದು ಯೋಗಿಗೆ ಜೋಗಿ ತಂದದ್ದು ಜೋಗಿಗೆ"[22] ಅಂತ ಹೇಳಿ "ಕರ್ರ್ಯಾ ಸುಮ್ನೆ ಕುರಿ ಮೇಸು" ಅಂತ ಅಣಕಿದಾಗ ಹೊಟ್ಟೇಲಿ ಸಂಕಟವಾದರೂ ತೋರಿಸಿಕೊಳ್ಳದೆ ಐನೋರ ಮಗ ಆಡಿದ ಮಾತು ದಿಟ್ಟ ಇರಬಹುದು ಅಂತ ಅಂತರ್ಮುಖಿಯಾದ. ಕೆಳವರ್ಗದವರಿಗೆ ಓದುವ ಹಂಬಲವಿದ್ದರೂ ಅವಕಾಶವಿಲ್ಲದೆ ಅಪ್ಪ ಮಾಡಿದ ಸಾಲಕ್ಕೆ ಬಲಿಯಾಗುವ ಕರಿಯನ ನೋವುಗಳು ದಟ್ಟ ಸಾಮಾಜಿಕ ಅಸಮಾನತೆಯನ್ನು ಹೈನೊರ ಮಗನಿಂದಲೇ ಹೇಳಿಸುವ ಕಥೆಗಾರ ತಾಂತ್ರಿಕ ನಿಲುವು ಸಹಜತೆಯ ಕನ್ನಡಿಯಾಗಿದೆ,

ಕರಿಯನ್ನಾ ತಂಗಿ ತಿಮ್ಮಿನ ಕಬ್ಬಿನ ಗದ್ದೆ ತವ ಕೆಂಪಣರಸ್ವಾಮಿ ಕೆಡಿಸುವುದಕ್ಕೆ ಪ್ರಯತ್ನ ಪಟ್ಟಾಗ, ಊರ ಪಂಚಾಯ್ತಿಗೆ ದೂರು ಕೊಡುತ್ತಾನೆ, ಪಂಚಾಯ್ತಿಗೆ ಕರಿಯನೇ ಸಾರಣಿ ಕೊಡುವಾಗ ಆತನ ಮನದಲ್ಲಿನ ವೇದನ ಮನೋಜ್ಞಾನಿಕ ಚಿತ್ರಣಗಳನ್ನು ತರುತ್ತಾರೆ. ಊರ ಪಂಚಾಯ್ತಿಲಿ ನ್ಯಾಯಮಾಡಿ ಸ್ವಾಮಿ ತನ್ದು ತಪ್ಪಾಯ್ತು ಅಂತ ಐನೂರು ರೂಪಾಯಿ ದಂಡ ಕೊಟ್ಟ. ಊರಟ್ಟಿ ದುಡ್ಡಿನ ಲೆಕ್ಕಕ್ಕೆ ಸೇರಿಸಿಕೊಂಡು ಆ ದುಡ್ಡಿನಲ್ಲಿ ಮಾರಮ್ಮನ ಗುಡಿಗೆ ಗೋಪುರ ಕಟ್ಟೋದು ಅಂತ ತೀರ್ಮಾನವಾಯ್ತು. ಕರಿಯನ ಸಾರಣೆ ಕೊಟ್ಟಿದ್ದಕ್ಕೆ, "ಎಂಟಾಣಿ ಕೊಟ್ಟಿದೆ, ಸಿಕ್ಕಿದ ನ್ಯಾಯ". ಗ್ರಾಮೀಣ ಬದುಕಿನಲ್ಲಿ ನ್ಯಾಯ ತಿರ್ಮಾನಗಳಲ್ಲದೆ, ಹಾಕಿದ ದಂಡ ಊರಿಗೆ ಸೇರುತ್ತದೆ. ಕೆಳವರ್ಗದ ಅಸ್ಪಶ್ಯ ಕರಿಯನಿಗೆ ಸಿಕ್ಕ ನ್ಯಾಯದ ಬೆಲೆ ಇಲ್ಲಿ ಮಾರ್ಮಿಕವಾಗಿ ಚಿತ್ರಣಗೊಂಡಿದೆ.

ಈ ಘಟನೆಯಿಂದ ತಿಮ್ಮಿ ಮದುವೆಯ ಹಂಬಲಹೊತ್ತು ಮತ್ತೆ ಗೌಡ್ರ ಹತ್ತಿರ ಸಾಲ ಕೇಳಬೇಕೆಂದು ಅನ್ನಿಸಿತು. ಆ ವೇಳೆಗೆ ಸ್ನೇಹಿತನಾಗಿದ ಸಾಬ್ರು ಸಫಿ ಅಲ್ಲಿಗೆ ಬಂದು "ಎಂಥಾ ನಮಕ್ ಹರಾಮ್ ಜನಾ ಐತೆ ನಿಮ್ಮ ಊರಿನಾಗೆ"[23] ಎಂದು ಅಚ್ಚರಿಪಟ್ಟ. ನಮ್ಗೆ ಒಂದೇ ದೇವರು ನಾವು ಅಲ್ಲಾನ ಮಾತ್ರ ಬೇಡ್ತಿವಿ ನಮ್ಮೂದ್ಗೆ ಬಡವ್ರು ಸಿರಿವಂತ್ರು ಅನ್ನೋ ಹಂಗಿಲ್ಲ. "ಅಲ್ಲಾ ಮುಂದೆ ಎಲ್ರೂ ಒಂದೇ"[24] ಅಂದ ಸಫಿ. ಇಲ್ಲಿ ಕರಿಯನಿಗಾದ ಅನ್ಯಾಯವನ್ನು ಹೀಗಳಿತ ತನ್ನ ಧರ್ಮದ ಪರಿಸರ ದೈವ ಸಂಸ್ಕೃತಿಯನ್ನು ಬಿತ್ತಿದ. "ನೀನೂ ಸಾಬರಾಗಿ ಬಿಡಯ್ಯ"[25] ಆರಾಮವಾಗಿ ಇರ್ತೈತಿ ಅಂದ 'ಅದ್ಹೆಂಗೆ'? ಎಂದು ವಿಚಾರಿಸಿ, ನಮ್ಮವ್ವನ ಕೇಳಿ ನಾಳೆ ಹೇಳ್ತೀನಿ ಅಂದ . ಅವ್ವನಿಗೆ ಉಷಾರಿಲ್ಲ ಹಟ್ಟಿತಕ ಹೋಗಿದ್ದು ಬತ್ತೀನಿ ಅಂತ ಸುಳ್ಳು ಹೇಳಿ ಅನುಮತಿ ಪಡೆದು. ಅವ್ವನ ಹತ್ರ, ಏಟು ದಿನಾ ಅಂತಾ ಈ ಕಸ್ಟ ಅನುಬೋಗಿಸೋದು. ಈ ಜಾತಿನೇ ಬೇಡ. ನಾವೆಲ್ಲ ಸಾಬರಾದ್ರೆ ಜಮೀನ್ ಕೊಟ್ಟಾರಂತೆ. ನಾನು ಕರೀಮಾ ಅಂತ ಹೆಸರಿಟ್ಕಾಬೇಕಂತೆ. ಮಸೀದೆಗೆ ಹೋಗ್ಬೇಕಂತೆ. ಅಲ್ಲಾನ ಪೂಜೆ ಮಾಡಬೇಕಂತೆ. ಅವರ ಜಾತಿಗೆ ಸೇರ್ಕಂಡ್ರೆ ಕೇಳಿದಸ್ಟು ದುಡ್ಡು ಕೊಡ್ತಾರಂತೆ. ನಂಗೆ ಅವರ ಜಾತೀಲಿ

ಎಣ್ಣು ಕೊಡ್ತಾರಂತೆ. ಓದ್ತಿನಿ ಅಂದ್ರೆ ಓದಿಸ್ತಾರಂತೆ. ನೌಕ್ರಿ ಕೊಡುಸ್ತಾರಂತೆ ನಾವು ಯಾಕೆ ಮುಸಸ್ಮಾನನಾಗಬಾರ್ದು? ಏನವ್ವ? ಮತಾಂತರದಿಂದ ಅವ್ವ ಜಗಳಕ್ಕೆ ಬಿದ್ದು ಕೆನ್ನೆಗೆ ಎರಡು ಬಿಗಿದ್ದಳು, ತಿಮ್ಮಿ ಕೂಡ ಜಗಳಕ್ಕೆ ಬಿದ್ದಳು. ಹುಟ್ಟಿದೂರು, ನಮ್ಮ ಜಾತಿ, ನಮ್ಮ ಜನ ಬುಟ್ಟು, ಜಾತಿಕೆಟ್ಟು, ಬಾಳೋಕಾಯ್ತದ? ಸ್ವಾಮಿ ತಪ್ಪು ಮಾಡಿದ್ಕೆ ದಂಡಾ ಕೊಡ್ಲಿಲ್ವಾ? ನಾವು ಉಟ್ಟಿರೊಂದೇ ಅಪನ ಮನೆ ಜೀತ ಮಾಡೋಕೆ. ಕಸ್ಟ ಬಂತು ಅಂತ ಕುಲಗೆಟ್ಟು ಬಾಳೋಕಾಯ್ತದ ಎಂದು ಕರಿಯನ ತರಾಟೆಗೆ ತೆಗೆದು ಕೊಂಡ್ರು. ತನಗಾದ ನೋವು ಅಶ್ಪಸ್ಯತೆ ಎಲ್ಲವನ್ನ ಕರಿಯ ಅವರು ಮಡ್ಡಳ್ಳೂರು ಮಾನ ಮರ್ಯೋದೇನ ದುಡ್ಡಿನಲ್ಲಿ ಅಳೀತಾರೆ. ನಾನೇ ಒಂದು ಗೌಡ್ರು ಹುಡ್ಗೀಸ ಮುಟ್ಟಿದ್ರೆ ನನ್ತಾವಲೂ ಐನೂರು ರೂಪಾಯಿ ದಂಡ ಕಟ್ಟಿಸಿಕೊಂಡು ಸುಮ್ನೆ ಬಿಡ್ತಿದ್ದರೆ.? ಎಂದು ಮರು ಪ್ರಶ್ನೆ ಇಟ್ಟ ಅದರೂ ತಿಮ್ಮಿ ಅವ್ವ ಒಪ್ಪದೆ. "ಹಂಗೆ ಮಾಡಿದ್ರೆ ನನ್ಹೊಟ್ಟೇಲೇ ಹುಟ್ಟಲ್ಲಾ ಅನ್ಕೊತೀನಿ."[26] ಎಂದು ಕಡ್ಡಿ ಮುರಿದಂಗೆ ಹೇಳಿದಳು. ಕರಿಯ ಹೊರಬಂದ ಕುರಿಕೊಪ್ಪಲಿಗೆ ಸೇರುವಷ್ಟರಲ್ಲಿ ಎರಡು ಟಗರು ಕಳ್ಳುವಾಗಿದ್ದೊ, ಸುದ್ದಿ ಕೇಳಿ ಗೌಡ್ರು ಕರ್ಯನಿಗೆ "ಸೂಳೆಮಕ್ಳಾ, ನಿಮೆಲ್ಲಾ ಮುದ್ದೆ ಜಾಸ್ತಿಯಾಯ್ತು ಅನೆ ಥರಾ ಇದ್ದ ಟಗರು ಮರಿ ಕಳಿದ್ಯಲ್ಲೋ ಭಡವಾ"[27] ಅಂತ ಚಚ್ಚಿ ಬಾಸುಂಡೆ ಬರಿಸಿದರು'. 'ಅದರ ದುಡ್ಡು ನಿಮಪ್ಪ ಕೊಡ್ತಾನೇನೋ ಹೊಲೆ ನನ್ಮಗನೇ"[28] ಎಂದು ಹಣೆ ಚಚ್ಚಿಕೊಂಡರು' ಇದರಿಂದ ಮತ್ತಷ್ಟು ಬೇಸರಪಟ್ಟು ಖತಿಗೊಂಡ. ತನ್ನ ಅವ್ವ, ತಂಗಿ ಸಾಯಿಲಿ ಮುಂಡೇವು ಅಂತ ಶಫಿಸಿಕೊಂಡ, ವಿಮೋಚನೆಯ ದಾರಿ ಕಂಡವನಂತೆ ಹಿಗ್ಗಿದ ತಾನಿನ್ನು ಅಪ್ಪನ ಸಾಲಕ್ಕೆ ಜೀತ ಮಾಡಬೇಕಾಗಿಲ್ಲ, ತಮಟೆ ಬಡಿಯುವಂತಿಲ್ಲ, ಕೊಳಕು ಚಡ್ಡಿ ಹಾಕಿಕೊಂಡು ಕುರಿಗಳ ಹಿಂದೆ ಊರಿ ಬಿಸಿಲಿನಲ್ಲಿ ಅಡ್ಡಾಡುವಂತಿಲ್ಲ ಆ ಬಿಡಗಡೆಯ ಸಂಭ್ರಮದಲ್ಲಿ ಉನ್ಮಾದಗೊಂಡು ಸಫಿಯ ಸೈಕಲ್ಲಿನ ಹಿಂದೆ ಕೂತ. "ಬೈಠೋ ಕರೀಂ ಬೈ"[29] ಎಂದು ಸಫಿಯ ಸೈಕಲ್ ಮಸೀದಿಯತ್ತ ಉರುಳುತ್ತಿತ್ತು. ಇಲ್ಲಿನ ಅಸ್ಪಶ್ಯತೆ ನೋವು ಕರಾಳತೆಯಿಂದ ಕರಿಯ ಕರೀಂ ಆಗಿ ಮತಾಂತರನಾಗುವ ಸಂದರ್ಭವನ್ನು, ಕಾರಂತರ ಚೋಮನ ದುಡಿಯ ಕಥೆ ನೆನಪಿಗೆ ತರುತ್ತದೆ. ಅಲ್ಲಿ ಚೋಮ ಆಸೆಗಾಗಿ ಹೋರಾಟವಾದರೆ, ಇಲ್ಲಿ ಕರಿಯ ಸಾಲ ಜೀತ ಹಸಿವಿನ ಬಂಧನದಿಂದ ಮುಕ್ತನಾಗಲು ಬಳಲುತ್ತಾನೆ. ಆದರೆ ಅಲ್ಲಿ ಚೊಮ ಮತಾಂತರನಾಗುವುದಿಲ್ಲ, ಇಲ್ಲಿ ಕರಿಯನ ವಿಮೋಚನೆಗೊಂಡವನಂತೆ ಮತಾಂತರಗೊಳ್ಳುತ್ತಾನೆ. ಅದರೆ ಬಣಲೆಯಿಂದ ಬೆಂಕಿಗೆ ಎನ್ನುವ ಕಥೆಯ ಶಿರ್ಷಿಕೆಯಲ್ಲಿ, ಇಲ್ಲಿನ ಅಸಮಾನತೆ ಅಲ್ಲಿಯೂ ಇದೇ ಇದೆ. ಎಂಬ ಕಥೆಗಾರರ ತಾರ್ತಿಕ ನಿಲುವನ್ನು ಕಾಣಬಹುದು. ಒಟ್ಟಾರೆ ಕಥೆಯೊಳಗೆ ದಲಿತತೆಯಲ್ಲಿ ಮಡುಗಟ್ಟಿದ ದುಃಖ, ಅಸ್ಪಶ್ಯತೆ ಹಾಗೂ ಜೀತದ ಮುಕ್ತತೆಗೆ ಬಳಲುವ ಮಲ್ಲವರ್ಗದ ಶೋಷಣೆಗಳ ಅಭಿವ್ಯಕ್ತತೆಯನ್ನು ನೈಜವಾಗಿ ತಂದಿದ್ದಾರೆ.

'ಗಾಯ' ದುರಂತಗಳನ್ನು, ನೋವನ್ನು ಸೂಚಿಸುವ ತಲೆ ಬರಹದಲ್ಲಿಯೇ, ಓದುಗನ ಅಂತರ್ಯವನ್ನು ಹೊಕ್ಕಿ ತಳಮಳ ತವಕದಲ್ಲೆ ವಾಸ್ತವಕ್ಕೆ ಇಡುಮಾಡುವ ಪರಿಹರಿಸಲಾಗದ ಸಮಸ್ಯೆಗೆ ಎಳೆದೊಯ್ಯುವ ಕಥೆ ಇದಾಗಿದೆ. ಇಲ್ಲಿ ಕಥೆಗಾರರು ಕಥಾ ನಿರೂಪಕ ಮೂರ್ತಿ ತನ್ನೂರಿನ ಸಮಸ್ಯೆಯನ್ನು ವ್ಯಕ್ತಪಡಿಸುತ್ತಾರೆ. ತನ್ನೂರು ಹೈವೆ ರಸ್ತೆಯಲ್ಲಿರುವ ಊರಿಗೆ ಹೋಗುವಾಗಲಿನ ಪೇಚಾಟದೊಂದಿಗೆ ಪ್ರಾರಂಭವಾಗಿ ಅಲ್ಲಿನ ಪುಂಡರು ಮಾಡುವ ಉಪಟಳಗಳ ಪಟ್ಟಿ ನೀಡುತ, ಊರಿನಲ್ಲಿ ಪೋಲಿಸ್ ಪ್ಯಾದೆಗಳಿದ್ದು ಅವರು ಅಡ್ಡಗಟಿ ಪೋಲಿಸ್ ಕಾವಲಿನಲ್ಲೆ ಮನೆ ತಲುಪೊ ಸ್ಥಿತಿ, ಪೋಲಿಸ್‌ನವರು ಹಳ್ಳಿ ಕಾವಲಿದ್ದು ಅವರ ವನವಾಸ ವಿವರಿಸುತ್ತಾರೆ.? ಇದೆಲ್ಲಾ 'ಮಂಡ್ಲು ಪಂಚಾಯ್ತಿ ಬಂದು ಇಂಗಾಯ್ತು ಕಣೋ ಮಗಾ.. ಅಪ್ಪಾ-ಮಕ್ಕಳಿಗೆ, ಅತ್ತೆ-ಸೊಸೆಗೆ, ಅಣ್ಣ-ತಮ್ಮಗೊಳ್ಗೆ ಜಿನ್ನಾ ಭೇದಾ ತಂತು. ಪೂರು ಎಣಾಬಿತ್ತು. ಎಂಬಲ್ಲಿ ಗ್ರಾಮೀಣ ಪ್ರದೇಶಕ್ಕೆ ರಾಜಕೀಯ ಬಂದು ಸಮುದಾಯ ಕುಟುಂಬಗಳ ಅಧಃಪತನದ ಕಾರ್ಯಗಳನ್ನು ನಿರೂಪಿಸುತ್ತಾರೆ.

ಮಂಡಲ ಪಂಚಾಯ್ತಿ, "ವರಾ ಅನ್ತೀಯೋ ಶಾಪ ಅನ್ತೀಯೋ"[30] ಸದ್ಯಕ್ಕೆ ಶಾಪ ಅಂತೀನಿ. ಯಾಕೆ ಗೊತ್ತಾ?. ಅದು ಆಳೋರ ನಿಜವಾದ ಜನಪರ ನೀತಿಯಾಗಿ ಬರಲಿಲ್ಲ. ಒಂದು ಪಕ್ಷದ ಪ್ರಚಾರ ತೆವಲಿನಥರಾ ಬಂತು ತಲತಲಾತರದಿಂದ ಆಳಿಸಿಕೊಂಡು ಅಭ್ಯಾಸವಾಗಿದ್ದ, ಈ ಹಳ್ಳಿ ಲೌಡಿ ಗಂಡರಿಗೆ ಅಧಿಕಾರ ಬಂದ್ರು ಆಳೋಕೆ ಬರಲಿಲ್ಲ. ಆ ಮಯೂರಿ ಮಂಡಲ ಪಂಚಾಯ್ತಿ ಎಲೆಕ್ಷನ್ನಿಗೆ ಐವತ್ತು ಸಾವಿರ ಖರ್ಚು ಮಾಡ್ತಾಳೆ ಅಂಬ್ರೆ ಎನರ್ಥ ಹೇಳು? ಹರಿಜನರಿಗೆ ಹೆಂಡ ಕುಡಿಸಿದ್ದೆ ಕುಡಿಸಿದ್ದು. ಸರಿ ಅವಳು ಬೇಡ ಬೇರೆಯವರನ್ನು ಗೆಲ್ಸೋಣ ಅಂದ್ರೆ, ಅವರೋ ಅಪಳಪ್ಪ. ಎಂಬಲ್ಲಿ ರಾಜಕೀಯ ಕೆಟ್ಟ ವಾಸ್ತವತೆಯನ್ನು ಅನಾವರಣ ಮಾಡಿ ನೈಜತೆಯನ್ನು ನಿರೂಪಿಸುತ್ತಾರೆ. ಚುನಾವಣೆಯಲ್ಲಿ ಖರ್ಚು ಮಾಡಿ ಹೆಂಡ ಕುಡಿಸಲಿಲ್ಲ ಅಂದರೆ ಯಾರು ಗೆಲ್ಲಲ್ಲ, ರಾಜಕೀಯದಲ್ಲಿ ಎಲ್ಲರೂ ಅನ್ಯಮಾರ್ಗಿಗಳೇ, ರಾಜಕೀಯ ಜನರ ಬದುಕನ್ನು ಹಾಳು ಮಾಡಿದೆ. ಮಂಡಲ ಪಂಚಾಯ್ತಿ ಹೆಸರಿನಲ್ಲಿ ಊರು ಪಾರ್ಟಿಗಳಾಗಿ ಒಕ್ಕಲಿಗರಿಗೂ, ಹರಿಜನರಿಗೂ, ಮಾರಮಾರಿಯಾಗಿದ್ದು. ಇದರೊಳಗೆ ಹರಿಜನ ಯುವಕನಿಗೂ ಒಕ್ಕಲಿಗ ಯುವತಿಯಾದ ಭವಾನಿಯನ್ನ ಅವಳ ತಾಯಿ ಮಯೂರಿನೇ ಮದುವೆ ಮಾಡಿಸಿದಳು. ಸಾಲದಕ್ಕೆ ಮಂಡಲ ಪಂಚಾಯ್ತಿ ಚುನಾವಣೆಯಲ್ಲಿ ಇವಳೇ ಗೆದ್ಲು ಆದರೆ ಇದೇ ದೊಡ್ಡ ಅಪರಾಧವಾಗಿ ಊರಿನ ಶಾಂತಿ ಅದಗೆಟ್ಟಿರುತ್ತದೆ. ಸಂವಿದಾನದ ದುರ್ಬಳಕೆ ಮಾಡಿಕೊಂಡು. ಆಗ ನಾವು ಇಕ್ಕಿಸಿಕೊಂಡೇ ಅನುತಿದ್ದ ದಲಿತರು ಈಗ ಇತರಿಗೆ ಇರ್ಯಕ್ಕ ತೊಡಗಿದ್ದಾರೆ. ನಿರೂಪಕರು ಮತ್ತು ಮೂರ್ತಿ ಸೇರಿ ಶಾಂತಿ ಸಭೆಗೆ ಯಲ್ಲೇಗೌಡ, ತೀರ್ಥೆಗೌಡ, ಮೇಸ್ಟರು, ಟೈಲರ್ ಅಪ್ಪಾಜಿ ಮತ್ತೊಂದು ಕಾರಣ ಕೊಟ್ಟು ತಪ್ಪಿಸಿಕೊಂಡರು. ಮಾರ ದಲಿತ ಅಸ್ತ್ರಗಳ ಬಳಕೆ ಮಾಡಿ ಗದ್ದಲ ಮಾಡಿದರೂ, ಶಾಂತಿ ಸಭೆಗೆ ಕರೆದರೆ, ಒಳಗಿದ್ದ ಮಯಾರಿ - ಭವಾನಿ

ಇಬ್ಬರೂ ದೊಡ್ಡಗಂಟಲಿನಲ್ಲಿ, ವೋಗಯ್ಯ ಕಂಡಿವ್ನಿ....ಬಂದ್ ಬಿಟ್ಟಾ ಶಾಂತಿ ಸಭೆ ಮಾಡೋಕೆ....ಇಷ್ಟ ದಿನ ಎಲ್ಲಿದ್ದೇ? ಮೊದಲು ನಿನ್ನ ತಮ್ಮನಿಗೆ ಬುದ್ದಿ ಹೇಳು....ನಿನ್ನ ಮನೆ ತೂತು ಸರಿ ಮಾಡ್ಕೊ... ಸಭೆ ಮಾಡ್ತನಂತೆ ಸಭೆ... ಸಭೆ ಮಾಡ್ತೀವಂತ ನಮ್ಮನ್ನ ರಂಗದ ಮುದಂಕ್ಕೆ ಕರ್ದು ಕೂಡಿ ಹಾಕಿ ಗೂಸ ಕೊಡೋದಿಕ್ಕೆ ಪೀಲಾನ್ ಮಾಡ್ಕೊಂಡು ಬಂದಿದ್ದಾರೆ. ವೋಗೋಗಿ. ಅಂದಾಗ ನಿರೂಪಕರು ತನ್ನ ಮನೆ. ತಮ್ಮ, ಅಪ್ಪನ ಸರಿದಾರಿಗೆ ತರಬೇಕು. ಅಂಗಡಿ ಮುಚ್ಚಿ ಜಮೀನು ಮಾರಿ ನಗರಕ್ಕೆ ಕರೆತರಬೇಕು. ಎಂಬ ಆಲೋಚನೆ ಗ್ರಾಮ್ಯ ಬದುಕಿನ ಸಾಮಾಜಿಕ ಬದುಕು ಹಾಗೂ ಕುಟುಂಬ ಬದುಕಿನ ಮುಖಾಮುಖಿಯಾಗುವುದ ವಿಸ್ತಾರ ಸ್ವರೂಪಗಳನ್ನು ನಿರೂಪಿಸುತ್ತಾರೆ.

ತನ್ನ ಕುಟುಂಬದಲ್ಲಿ ಬದಲಾದ ಪ್ರವೃತ್ತಿಯಿಂದ ಪ್ಯಾಟೆಗೆ ಹೋಗಿ ಬದುಕಲು ವಲ್ಲದ ಅಪ್ಪ "ಹಿರೇರು ಮಾಡಿದ್ದನ್ನ ಮಾರ್ತೀನಿ ಅಂತಿಯಲ್ಲೋ? ನೀನು ಬೇರೆ ಜಾಗದಾಗ ಬೇರು ಬಿಟ್ಟೆ ಅದಕ್ಕೆ ಹಂಗಂತಿ. ನಮ್ಮ ಬೇರು ಇಲ್ಲೇ ಅವೇ, ನಾವಿಲ್ಲೇ ಸಾಯ್ತಿವಿ, ನಾವು ಸತ್ತ ಮ್ಯಾಲೆ, ಭೂಮಿನಾ ಪಿಸಾಂದ್ರು ಮಡ್ಕೊಳ್ಳೀ ನಾವು ಬದುಕಿರೋವರ್ಗೂ ಒಂದಿಂಚೂ ಮಾರ ಕೂಡ್ದು. ಆ ಪ್ಯಾಟಿಲಿ ಬಂದು ನಾವೆಂಥ ಸುಖ ಉಣ್ಣೋದು ಯೇಳು."[31] ತಂದೆ ತನ್ನ ಹಳ್ಳಿ ನೆಲೆಯ ಜೀವ ನುಡಿಗಳನ್ನು ಬದುಕಿನ ಸಾರ್ಥಕತೆಯೊಳಗೆ ಕಂಡು ಕೊಂಡ ಹೊಲಾ ಮನೆ ತೋಟವನ್ನು ಬಿಟ್ಟು ಬದುಕಲಾರದ ಅವ್ವ ಅಪ್ಪನಿಂದ ಗ್ರಾಮ್ಯ ಸಂಸ್ಕೃತಿಯನ್ನು ಅನಾವರಣಗೋಳಿಸುತ್ತಾರೆ. ಭೂಮಿಲೀ ದುಡಿದು ಬೆಳೆದು ತಿನ್ನು ನಾವು, ಅಪೇಟಿಲಿ ರೇಷನ್‌ಅಕ್ಕಿ ತಿನ್ನೋಕೆ ನಮ್ಮ ಕೈಯಿಂದ ಸಾಧ್ಯವಿಲ್ಲ. ಎಂಬಲ್ಲಿ ನೇಗಿಲಯೋಗಿಗಳ ಭೂತಾಯಿ ತಪಸ್ಸಿನಾ ಕಾಯಕ ಯೋಗಿಗಳ ಕಲ್ಪತೆಯನ್ನು, ಇಂದಿನ ಸರ್ಕಾರ ಹಾಗೂ ನಾಡಿನ ಜನತೆಗೆ ವ್ಯಕ್ತವಾಗುವಂತೆ ನಿಷ್ಠೂರವಾಗಿದ್ದರು ಕಟುವಾಸ್ತವತೆಯನ್ನು ಸಾಧರಪಡಿಸುತ್ತಾರೆ.

ಹೀಗೆ ಊರಿಗೆ ಗಾಯವಾಗಿದೆ ಗುಣವಾಗುವುದು ಕಷ್ಟ ಎಂದು ಪ್ಯಾಟೆಗೆ ಹೋರಟರು ಎಸ್ಸೈ ನಾಗರಾಜು ರಾತ್ರಿ ದೊಂಬಿ ಮಾಡಿದವರನ್ನು ವ್ಯಾನ್‌ಗೆ ತುಂಬುತ್ತಿದ್ದರು, ಜಾತಿಯನ್ನು ಬಂಡವಾಳ ಮಾಡಿ ರಾಜಕಾರಣ ಮಾಡುವ ಇಂದಿನ ವಾಸ್ತವ ಸಂಗತಿಯಿಂದ ಹಳ್ಳಿಗಳು ಗಾಯವಾಗಿ ಸಮಾದಾಯವನ್ನು ಹಾಳುಮಾಡಿ ಗಾಯಗೊಳ್ಳುತ್ತಿವೆ. ಇದು ಕೇವಲ ಹಳ್ಳಿ ಮಾತ್ರವಲ್ಲ ರಾಷ್ಟ್ರದ ಸ್ಥಿತಿಯು ಇದೇ. ರಾಜಕಾರಣದ ಕೆಟ್ಟ ರೋಗ ಗಾಯವಾಗಿದೆ. ಗಾಯ ವಾಸಿಮಾಡಲಾಗದೆ ಕೆಎಸ್ಸಾರ್.ಟೀ.ಸೀ. ಮೆಕ್ಯಾನಿಕ್ ಪೋಸ್ಟ್‌ಗೆ ಅರ್ಜಿಯಾಕಿ, ವೃತ್ತಿಗಿಟ್ಟಿಸಿ ಊರುಬಿಡುವ ಮೂರ್ತಿಯಾ ತಿರ್ಮಾನ ನಿರೂಪಕರಿಗೆ ತಿಳಿಸುವುದರ ಸಂಕೇತ ಗಾಯವಾಗಿರುವ ಗ್ರಾಮೀಣ ಬದುಕು ವಾಸಿಯಾಗದು ಎಂಬ ಕಾಲಾತೀತ ಉತ್ತರವನ್ನು ನೀಡತ್ತಲೇ ಕಥೆ ಮುಕ್ತಾಯವಾಗುತ್ತದೆ.

'ಬೆಪ್ಪಳ್ಳಿಯ ಜಗದೀಶರು' ಅಕ್ಷರ ಸಹ ಗ್ರಾಮೀಣ ಹುಡುಗ ಜಗದೀಶ ಬೆಪ್ಪಳಿಯವ, ಕಥೆಗಾರರ ಊರಿನ ಆಯ್ಕೆ ಹೆಸರಿನಲ್ಲಿಯೆ ಅಕ್ಷರವಾಗಿಸಿ, ಗ್ರಾಮ್ಯ ಬದುಕಿನ ವಿಲಕ್ಷಣ ಚಟುವಟಿಕೆಗಳನ್ನು ತನ್ನ ಕಥೆಗಳಲ್ಲಿ ಕೇಂದ್ರವಾಗಿಸುತ್ತಾರೆ. ಜಗದೀಶನ ತಂದೆ ರಿಟೈರ್ಡ್ ಲೈನ್ಮಾನ್ ತನ್ನ ಮಗನನ್ನು ನಗರದಲ್ಲಿ ಓದಿಸ ಬೇಕೆಂದು, ಹರಕು ಚೆಡ್ಡಿಯ ಹರಳೆಣ್ಣೆ ಮೆತ್ತಿದ ಜಗದೀಶನನ್ನು ನಗರದಲ್ಲಿದ ಕಥೆಗಾರ ಬಳಿ ಕರೆ ತಂದು ಓದಿಸುವ ಹಂಬಲಕ್ಕೆ ಸಂಬಂಧಗಳ ಕಡಿವಾಣ ಹಾಕಿ ಕಾಲೇಜು ಸೇರಿಸಿ ಓದಿಸುವಂತೆ ಬಿಟ್ಟಾಗ. ಎಸ್‌ಎಸ್‌ಎಲ್‌ಸಿ ಮೂವತ್ತೈಂದು ಪರ್ಸೆಂಡು ತೆಗೆದವನಿಗೆ ಕಾಲೇಜಿನಲ್ಲಿ ಸಿಟ್ಟು ಸಿಗದಿದ್ದಾಗ ಪ್ರಿನ್ಸಿಪಾಲರ ಕೈ ಕಾಲ ಹಿಡಿದು ಕಾಲೇಜು ಸೇರಿಸುತ್ತಾರೆ. ಹತ್ತು ಗಂಟೆಯವರೆಗೆ ಹೊಲಾ ಉತ್ತು ಮಣ್ಣು ಮೆತ್ತಿದ ಕಾಲಗಳಲ್ಲೆ ಹೈಸ್ಕೂಲು ಮುಗಿಸಿದ್ದಾನೆ. ಹೈಸ್ಕೂಲಿನಲ್ಲಿ ಒಂದು ಪೀರಿಯಡ್ ಕ್ಲಾಸಿಗೆ ಹೋಗಿ ಇಡೀ ದಿನ ನಂಜಪ್ಪ ಮಾಸ್ತರ್ ಕುರಿಗಳನ್ನು ಸ್ಕೂಲ್ ಮೈದಾನದಲ್ಲಿ ಮೇಯಿಸಿ, ಹುಲ್ಲು ಕೊಯ್ದು ಕೊಟ್ಟ ಅತ್ಯಂತ ವಿದೇಯ ವಿದ್ಯಾರ್ಥಿಯಾಗಿದ್ದ ಎಂಬಲ್ಲಿ ಗ್ರಾಮೀಣ ಶಿಕ್ಷಣದ ವ್ಯವಸ್ಥೆಯನ್ನು ಮುಂದಿಟ್ಟಿದ್ದಾರೆ. ನಗರವನ್ನೇ ಕಾಣದ ರೈಲನ್ನೇ ನೋಡದ ಈ ಜಗದೀಶ ನಗರ ಸುತ್ತಿ ರೈಲು ನೋಡಿ ಸಂತೋಷಪಡುತ್ತಾನೆ. ಚಡ್ಡಿಯಲ್ಲಿದ್ದು ಹರಳೆಣ್ಣೆ ಒತ್ತಿದ ತಲೆಲೇ ಕಾಲೇಜಿಗೆ ಹೊದಾಗ, ಇಂಗ್ಲೀಷ ಮೆಡಂ ಅಣಕಿಸ್ಸಿದರಿಂದ ಪ್ಯಾಟೆ ಬ್ಯಾಡ, ಊರಿಗೆ ಹೋಗುತ್ತೇನೆ. ಇಂಗ್ಲೀಷ್ ಬರಾದ ನಾನು ಕಲಿಲ್ಲಿಕೆ ಆಗದ ಎಂದ. ನಾಗರಿಕ ಬದುಕಿಗೆ ಗ್ರಾಮೀಣ ಬದುಕಿನ ಅಸ್ಪಷ್ಟತೆ ಇಲ್ಲಿ ವ್ಯಕ್ತವಾಗುತ್ತದೆ. ರಂಗು ರಂಗಿನ ಬದುಕಿನ ನಗರಗಳ ಮಧ್ಯೆ, ಬೆಪ್ಪಳ್ಳಿಶಾಲೆಯ ಪರಿಸರಕ್ಕೂ ಇಲ್ಲಿನ ಪರಿಸರದ ವ್ಯವಸ್ಥೆಯನ್ನು ಹೊಲಿಸಿ ನಿರೂಪಿಸುತ್ತಾರೆ. ಕೂನೆಗೆ ಊರಿನ ಗೆಳೆಯ ರಾಜು ಹಣ ಕೋಟ್ಟು ಸಹಾಯ ಮಾಡಿದ. ಇದರಿಂದ ಹಾಸ್ಟೆಲ್ ಸೇರಿ ಹರಳೆಣ್ಣೆ ಜಗದೀಶ ಕುರುಚಲಗಡ್ಡ ಬಿಟ್ಟು ಕಣ್ಣಿಗೆ ಕಪ್ಪು ಕನ್ನಡಕ ಹಾಕಿದ್ದ. ಹರಳೆಣ್ಣೆ ಶೀಷ್ಯ ಹಳೆಯ ತೇಪೇ ಶರಟುಗಳ ಬಿಟ್ಟು ಪ್ಯಾಂಟು ಹಾಕಿದ. ಅದೇ ಕಾಲೇಜಿನ ಚುನಾವಣೆಯಲ್ಲಿ ಗೆದ್ದು ಪ್ರಸಿಡೆಂಟಾದ, ಜಗದೀಶ ವಿದ್ಯಾರ್ಥಿಗಳ ನಾಯಕನಾದ. ಎಡಗೈನಲ್ಲಿ ವಾಚ್ ಜೀನ್ಸ್‌ಪ್ಯಾಂಟ್ ಷೂಗಳಲ್ಲದೆ ಬೈಕ್ ಹಿಂದೆ ಹುಡುಗಿ. ಹೀಗೆ ನಾಗರಿಕ ಜೀವನದ ಉತ್ತುಂಗದಲ್ಲಿ ಮಿಂಚುತ್ತಿದ್ದ. ಎಂಬಲ್ಲಿ ನಗರ ಬದುಕು ಸಾಮಾನ್ಯರನ್ನು ಬಾಹ್ಯ ಬದುಕಿನ ಬದಲಾವಣೆಗೆ ಚಾಚಿಕೊಳ್ಳವ ಸ್ವರೂಪದ ಚಿತ್ರಣ ಇದಾಗಿದೆ. ಕಥೆಗಾರರು ಇವನಿದ್ದ ಹಾಸ್ಟಲ್ಲಿಗೆ ಹೊಗಿ ನೋಡಿ ಅಲ್ಲಿ ಅವನು ಚೆಲ್ಲಾಡಿದ ಇಸ್ಪೀಟಿನ ಎಲೆಗಳು ಮಂಚದಮೇಲಿನ ಅರಬೆತ್ತಲೆಯಾದ ಹುಡುಗಿ. ಇನ್ನಿಬ್ಬರು ಹುಡುಗರ ಕುಡಿತ ಅಷ್ಟರಲ್ಲಿ ಬಾಗಿಲು ಬಿಚ್ಚಿಕೊಂಡಿತ್ತು. ಜಗದೀಶ ತೂರಾಡುತ್ತ ಬಂದು "ಹಾವ್ ಯು ನೋ ಕಾಮನ್ ಸೆನ್ಸ್?"[32] ಎಂದ ಆತ ನನ್ನನ್ನು ಗುರ್ತಿಸಿರಲ್ಲಿಕ್ಕಿಲ್ಲ, ನನಗೆ ನಿಜಕ್ಕೂ ಸಂತೋಷವಾಯಿತು. ಬೇಪ್ಪಳಿಯ ಜಗದೀಶ ಎಷ್ಟು ಚೆನ್ನಾಗಿ ಇಂಗ್ಲಿಷ್ ಕಲಿತಿದ್ದಾನೆ.........? ಇಲ್ಲಿನ ಜಗದೀಶನ ಬೆಳವಣಿಗೆ ನಾಗರೀಕ ಸಮಾಜ ಎಲ್ಲವನ್ನು

ಕಲಿಸುವ ವಾಸ್ತಾವತೆಯನ್ನು ವಿಶ್ಲೇಷಿಸುತ್ತಾರೆ. ಆದರೆ ಜಗದೀಶ ಬಡಾವಣೆಯ ದೊಡ್ಡ ರೌಡಿಯಾಗಿದ್ದ. ಈ ವಿಷಯ ಕಥೆಗಾರರಿಗೆ ಎಸ್ ಐ ಇಂದು ತಿಳಿದು, ಆತನ ಹಳ್ಳಿಯ ಬಡತನ ತಂದೆ ಬಗ್ಗೆ ವಿವರಿಸಿದರು. ಅವರು ಇವನ ದುರ್ಗುಣಗಳ ಪಟ್ಟಿ ನೀಡುತ್ತಾರೆ. ಆತನಿಗೆ ಚಪ್ಪಲಿಯಲ್ಲಿ ಹೊಡೆಯುತ್ತಾಳೋ ಅಂತವಳ ಜೊತೆ ತನಗೆ ಪ್ರೇಮವಿದೆ ಎಂದು ಸುದ್ದಿ ಹಬ್ಬಿಸುತ್ತಾನೆ. ಅಂತಹ ಚಮತ್ಕಾರದಲ್ಲಿ ಡಾ॥ ಮಲ್ಲಿಕಾರ್ಜುನರವರ ಮಗಳು ನಳಿನ ಚಪ್ಪಲಿ ತೋರಿಸಿದ ಬೆಳಿಗ್ಗೆಯೇ, ತಾವಿಬ್ಬರು ಪ್ರೇಮಿಗಳೆಂದು ಸ್ವಯಂ ಘೋಷಿಸಿಕೊಂಡ. ಅವಳದೇ ಕೈ ಬರಹದಂತೆ ಪ್ರೇಮ ಪತ್ರ ಬರೆದು ಕಾಲೇಜು ಮ್ಯಾಗಜಿನ್‌ಗೆ ಜೊಡಿಯಲಿ ತೆಗೆಸಿದ ಘೋಟೋ ರೆಡಿಮಾಡಿ ಎಲ್ಲರಿಗೂ ಹಂಚಿ ನೋಟ್ಸ್ ಬೋರ್ಡ್‌ಗೂ ಅಂಟಿಸಿದ. ವಿದೇಶ ವ್ಯಾಸಂಗ ಮುಗಿಸಿ ಬಂದವರೆ, ನಳಿನ ಒಲ್ಲನೆಂದ, ಆದರೆ ಇದಕ್ಕೆಲ್ಲಾ ಬೆಪ್ಪಳ್ಳಿ ರಾಜುನೆ ಕಾರಣ. ಇವನು ಕೇಳಿದಷ್ಟು ಹಣಕ್ಕೆ ಟೆಲಿಗ್ರಾಂ ಕೊಟ್ಟರೆ ಸರಿ ರಾತ್ರಿ ಎನ್ನದೆ ಹೇಣ ಕಳುಹಿಸುತ್ತಿದ್ದ. ಇವನು ಮಜಾ ಮಾಡುತ್ತಿದ್ದ .ಬಂದಿದ್ದ ಇನ್ನೊಂದು ವರನ ಮನೆಗೆ ಹೋಗಿ, ನಳಿನಗೆ ಅಬಾರ್ಷನ್ ಆಗಿದೆ ಅಂತ ಹೇಳಿ ಅಮದುವೆಯನ್ನು ಮುರಿದ. ಇಂತಹ ವಿಕೃತ ಗುಣಗಳನ್ನು ಹೊಂದಿದ ಮುಖವೂ ವಿಕೃತ ಗಾಯಗಳಾದವು. ಜಗದೀಶ ಊರಿಗೆ ಬಂದ ಜಗದೀಶ ಕಾಲೇಜು ಬಿಟ್ಟು ತನ್ನ ಹಳ್ಳಿಗೆ ಹೋದ ಸುದ್ದಿ ತಿಳಿದ ನಿರೂಪಕರಿಗೆ ರಾಜು ಪತ್ರ ಬರೆದು ಸಾರ್ ನಾನು ಹಾವಿಗೆ ಹಾಲೆರೆದೆ ಸಾರ್ ಜಗದೀಶ ಓದಲಿಲ್ಲ ಎಂದೂ, ಊರಿಗೆ ಬಂದು ಹುಡುಗರ ಗುಂಪುಕಟ್ಟಿ ಸ್ಟ್ರೈಕು ಮಾಡಿಸಿ ಕಾಯಿಕದ್ದು ಮಾರಿ ಪಾರ್ಟಿಮಾಡಿ ಒಂದು ತಲೆಮಾರಿನ ಯುವ ಜನಾಂಗವನ್ನೇ ಹಾಳು ಮಾಡುತ್ತಿದ್ದಾನೆ. "ಕೆಟ್ಟು ಪಟ್ಟಸೇರ್‍ತು. ತ್ತಿರಿ? ಪಟ್ಟದಲ್ಲಿ ಕೆಟ್ಟು ಹಳ್ಳಿಗೆ ಸೇರ್‍ತು, ಹಳ್ಳಿನೂ ಕೆಡಿಸ್ತು."[33] ವಾಸ್ತವತೆಯಲ್ಲಿ ಸಹಜವೆಂಬಂತೆ ನಗರದಿಂದ ಹಳ್ಳಿಗೆ ಬಂದು ಸೇರುವ ಜನಾಂಗದ, ಬದುಕಿನ ಅನಾವರಣ ಇದಾಗಿದೆ. ಊರಿನಲ್ಲಿ ನಗರದ ವರ್ಣನೆ ತಾನು ಮಾಡಿದ ಸ್ಟ್ರೈಕ್‌ಗಳು ಕಾಲೇಜಿನ ನಾಯಕ ನಾನೆ ಕಾಲೇಜು ನಡಗುತಿತ್ತು. ಇವನ ಮಾತಕೇಳಿ ಉತೇಜನಗೊಂಡ ಹುಡುಗರು ಕಲ್ಲುತೊರುತ್ತಿದ್ದರು. ಓದಿದವರು ಈ ದೇಶಕ್ಕೆ ಎಷ್ಟು ಅಪಾಯ ಅಂತ ನನಗೆ ಈಗಲೇ ಅರ್ಥವಾದದ್ದು ಇದು ಕಥೆಗಾರರ ಎದೆಯಾಳದ ನೈಜ ನುಡಿಯಾಗಿ ಸಮಾಜಘಾತಕ ಕ್ರಿಯೆಯಲ್ಲಿ ನಾಡು ನುಡಿ ದೇಶ ಮಾನವೀಯತೆ ಅಕ್ಷರ ಕಲಿತ ವ್ಯಕ್ತಿಯಲ್ಲಿರ ಬೇಕಾದ ಮೌಲ್ಯ. ಬದಲಾಗಿ ಶಿಕ್ಷಣ ಕಲಿತ ಓದು ಬರಹ ಬಲ್ಲ ನಾಗರಿಕ ಸಮಾಜದಿಂದ ಅಪಾಯವಾಗುತ್ತಿರುವ ಎರಡು ಸ್ವರೂಪಗಳನ್ನ ಬೆಪ್ಪಳಿಯ ಜಗದೀಶ ಹಾಗೂ ಬದಲಾದ ಜಗದೀಶನಿಂದ ವ್ಯಕ್ತಪಡಿಸುತ್ತಾರೆ.

ಜಗದೀಶ ಈಗ ಹಳ್ಳಿಗೆ ಬಂದು ಹೆಚ್ಚು ರಾಕ್ಷಸನಾಗಿ ಇಡೀ ಹಳ್ಳಿಯನ್ನೆ ದುರ್ನಾತಗೊಳಿಸಿದ ನೈತಿಕ ಅಧಃಪತನವನ್ನೂ, ಬೆಪ್ಪಳಿಯ ಮೂಖ ಅಸಹಾಕತೆಯನ್ನೂ ಸ್ಪಷ್ಟವಾಗಿ ಸಾರುತಿತ್ತು. ರಾಜುವಿನ ತಂಗಿ ಮದುವೆ ನಿಶ್ಚಯವಾಗಲಿದೆ ಈ ಮಧ್ಯೆ ಇವನ ತಂಗಿನ ತನಗೆ ಕೂಡಿ ಎಂದು. ಆಗಲಪ್ಪ ನಿನ್ನ

ಸಂಬಂಧ ಬೇಡ ಎಂದಿದಕ್ಕೆ, ಅವಳಿಗೂ ನನಗೂ ಸಂಬಂಧ ಇದೆ. ಅದಕ್ಕೆ ಅವನು ನನ್ನನ್ನು ಓದೊಕೆ ಕಳಿಸ್ದ. ಈಗ ನನಗೆ ಮದುವೆ ಮಾಡಲಿಲ್ಲ ಎಂದರೆ, ಚಪ್ಪರಕ್ಕೆ ಬೆಂಕಿ ಇಟ್ಟು ಅಕೇನ ಹೊತ್ತು ಕೊಂಡು ಪೊಗ್ತಿನಿ ಅಂತ ಹೇಳ್ಕೊಂಡು ತಿರುಗಿದಿನ್ದ, ಈ ವಿಷಯ ನಿರೂಪಕರಿಗೆ ತಿಳಿಸಿ, ಅವರು ಬುದ್ದಿ ಹೇಳುಕ್ಕೆ ಬಂದಾಗ "ನಿಮಗೇನ್ರಿ ಗೊತ್ತು? ಯಾವೂದೋ ತರಕಲಾಂಟಿ ಅಫೀಸ್ನಲ್ಲಿ ಗುಮಾಸ್ತೆ ಕೆಲಸ ಮಾಡೋದು ಗೊತು. ನಾನೂ ಅವಳೂ ಚಿಕ್ಕಂದಿನಿಂದ ಪ್ರೀತೀಸ್ತಿದ್ದೀವಿ. ಅವರ ಅಣ್ಣ ಅವಳನ್ನು ಕೊಡಿ ಹಾಕಿದ್ದಾನೆ. ಅವಳನ ಈಚೆಗೆ ಬಿಟ್ರೆ ನನ್ನ ಜೊತೆ ಓಡಿ ಬರ್ತಾಳೆ. ನಾನು ಲಾಯರ್ ಕನ್‌ಸಲ್ಟ್ ಮಾಡಿದ್ದೀನಿ. ನಾವು ರಿಜಿಸ್ಟರ್ ಮ್ಯಾರೇಜ್ ಮಾಡಿಕೋತೀವಿ"[34] ಎಂಬಲ್ಲಿನ ನುಡಿ ಕಥೆಗಾರರ ಎದೆಯಲ್ಲಿ ಜಗದೀಶ ನುಡಿಗಳು ಬಡಗುಟ್ಟುತ್ತದೆ. ಮನ್ಯುಷನ ಒಳ ಹೃದಯದಲ್ಲಿ ಕೆಟ್ಟ ಅವ್ಯವಸ್ಥ ಮನಸ್ಸುಗಳ ಕ್ರಿಯ, ಹೇಗೆ ಹೊರ ಬರುತ್ತದೆ. ಎಂಬುದಕ್ಕೆ ಸಾಕ್ಷಿಯಾಗಿ ಜಗದೀಶ ನಿಲ್ಲಿತ್ತಾನೆ. ಜಗದೀಶ ನಿನ್ನನ್ನು ಪ್ರೀತಿಸುತ್ತಾನಂತೆ ಹೌದೆ ? ಎಂದಾಗ, ರಾಜನ ತಂಗಿ ಕೆರಳಿ ನಮ್ಮ ಮನೆ ಎಂಜಲು ತಿಂದ ನಾಯಿ ನನ್ನನ್ನು ಕಚ್ಚುಕ್ಕೆ ಬರುತ್ತಾ ಎಂದು ಓಬವ್ವೆಯಾಗುವ ಸನ್ನಿವೇಶ, ತನ್ನ ಬಾಳು ಹಾಳು ಮಾಡುವ ಯಾವ ಪುರುಷನನ್ನು ಬಿಡದೆ, ತನ್ನ ಗೌರವ ಮಾನ ಉಳಿಸಿಕೊಳ್ಳುವ ಗ್ರಾಮೀಣ ಸ್ತ್ರೀ ಯ ರೊಚ್ಚು, ರೋಷಗಳು ಇಲ್ಲಿ ಧ್ವನಿ ಮಾಡುತ್ತದೆ. ಇತ್ತ ಶಿವಮೊಗ್ಗದಲ್ಲಿ ರಾಜುತಂಗಿ, ಮದುವೆಯಾಗುವ ಹುಡುಗನ ಬೇಟಿಮಾಡಿದಾಗ, ಬಂದ ಸತ್ಯ ಹುಡುಗಿಗಿಂತಲು ಅವನ ಅಣ್ಣ ರಾಜು ಕೊಡುವ ವರದಕ್ಷಿಣಿಯೇ ಮುಖ್ಯವಾಗುವ, ಸಮಾಜದ ಮತ್ತೊಂದು ಲಾಭಗಳಿಕೆಯ ವ್ಯಕ್ತಿತ್ವವನ್ನು ಸ್ವಾಭಾವಿಕವಾಗಿಯೇ ಚಿತ್ರಿಸುತ್ತಾರೆ..

ಕೊನೆಗೂ, ರಾಜುವಿನ ತಂಗಿ ಶಿವಮೊಗ್ಗದ ಹುಡುಗನ ಜೊತೆ ಮದುವೆಯಾಗುತ್ತಾಳೆ. ಮೂರ್ತದ ಕಡೆಗಳಿಗೆ ವರೆಗೂ ನಿರಿಕ್ಷಿಬ ಜಗದೀಶ ಬರುವುದಿಲ್ಲ. ಇತ್ತ ಕಡೆಗೆ ಎಲ್ಲಿಗೆ ಹೋದ ಎನ್ನುವುದೇ ರಹಸ್ಯವಾಗಿ ಉಳಿದುಬಿಡುತ್ತದೆ. ಮುಗ್ದ ಅಮಾಯಕ ನಂತಹ ವ್ಯಕ್ತಿತ್ವವದ ಜಗದೀಶ ನಗರಕ್ಕೆ ಹೋಗಿ.ಕೆಟ್ಟು, ಹಳ್ಳಿಯ ಬದುಕನ್ನೂ ನಾಶಮಾಡುವ ಪ್ರವೃತಿ. ಇಂದು ಗ್ರಾಮೀಣ ಭಾಗದಲ್ಲಿ ಬೆಳೆದು ವಿಷಮಯವಾಗುವುದರ ಚಿತ್ರಣವನ್ನು ನೈಜತೆಯಲ್ಲಿ ತರುತ್ತಾರೆ.

ಸಮಾಜದ ಕೊಳಕು ಪ್ರವೃತಿಗಳು ಅನ್ಯಜೀವಿಗಳ ಬದುಕನ್ನು ಅನುಭವಿಸಿ ಉಂಡು ಕೆದಕಿ ಹಾಳು ಮಾಡುವ ಕಥೆಯೇ **ನೋಣಗಳು**. ಊರು ಕೇರಿ ಎಲ್ಲಾ ಪ್ರವಾಹದಲ್ಲಿ ಕೊಚ್ಚಿ, ಕಳೆದುಕೊಂಡು ಬಂಗ್ಹಾರಯ್ಯ ತನ್ನ ಮಗಳು ಜಯನೊಡನೆ ಆಂಧ್ರದಿಂದ ಬಂದನು. ದಂತದ ಬೊಂಬೆಯಂತಹ ಹರೆಯದ ಮಗಳೊಟ್ಟಿಗೆ ತಾನ್ನೊಂದು ಈ ಮೂಲೆಯಲ್ಲಿ ಷೆಡ್ಡುಕಟ್ಟಿ ಹೋಟೆಲ್ ಪ್ರಾರಂಭಿಸಿದ. ಬೆಳ್ಳೂರಿನ ಮೂರು ರಸ್ತೆ ಕೂಡುವ ಜಾಗ ಅದು. ಬೆಂಗಳೂರಿನಿಂದ ಮಣಿಗೂ, ಇನ್ನೊಂದು

ಮಂಗಳೂರಿಗೂ ಹೋಗುತ್ತವೆ. ಅಲ್ಲಿ ಕೆಂಪನೆಯ ಹುಡುಗಿ ಅದೇ ಬಣ್ಣದ ದಾವಣಿ. ತೋಳಿನ ಮೇಲೆ ಮೀನಿನ ಬಲೆಯ ರೀತಿ ತೂತುಗಳಿರುವ ರವಿಕೆ, ಪುಟಾಣಿ ಕಣ್ಣುಗಳು. ನೀಳನಾಸಿಕ ಗುಲಾಬಿ ಕೆನ್ನೆ, ಪಾದರಸದ ಚಟುವಟಿಕೆ ಉಳ್ಳವಳು ಗಿರಾಕಿಗಳೆದುರಿಗೆ ನಿಂತಾಗ ಅವರಿಗೆ ತಿಂಡಿ ಬದಲಾಗಿ "ನೀನೇ ಬೇಕು"[35] ಅಂತ ಅಂದು ಬಿಡುವಷ್ಟು ಆಸೆಯಾಗಿ ಬಿಡುತ್ತದೆ,ಎಂದು ಕಥೆಗಾರ ಅವಳ ಸೌಂದರ್ಯವರ್ಣನೆ ಮಾಡುವ ದಾಟಿ ಸೌಂದರ್ಯ ಆರಾಧನೆ ತೀಕ್ಷ್ಣ ನೋಟವನ್ನು ದೃಶ್ಯೀಕರಿಸುವ ನಿರೂಪಣೆಯ ವಿಶಿಷ್ಟ ಶೈಲಿ ಭಿನ್ನವಾಗಿದೆ. ಬಾಂಬೆಗೆ, ಮಂಗಳೂರಿಗೆ ಹೋಗುವಂತೆ ದೂರದ ಪ್ರಯಾಣದಲ್ಲಿ ಇಂತಹ ಎಷ್ಟೋ ಹೋಟೆಗಳಿವೆ, ಆದರೆ ಜಯನಂಥವಳು ಇರುವುದು ಇಲ್ಲಿ ಮಾತ್ರ. ಇದು ಲಾರಿಯವರು ಅಥವಾ ಚಂಗಲುಗಳೂ ಹೇಳುವ ಅಭಿಪ್ರಾಯವೆಂಬುದು ಕಥೆಗಾರರ ನುಡಿ. ಕಪ್ಪನೆ ಹುಲಿಥರಾ ನುಸುವ ಮೋಟರ್ ಹೊಂದಿರುವ ಸುತ್ತಮುತ್ತಲಿನ ಹಳ್ಳಿಗೆಲ್ಲಾ ಹೆಸರುವಾಸಿಯಾಗಿರುವ ನಿಂಬಳ್ಳಿಯ ಪಟೇಲರ ಮಗ ರಾಮ ಗಿರಾಕಿಯಾಗದಿದ್ದರೆ ಅದು ಅವಮಾನವಲ್ಲವೇ ಎಂಬಲ್ಲಿ ನೋಣದ ಜಾತಿಯ ರಾಮ ಜಯಳಂತಹ ಸಿಹಿಯ ಸಲುವಾಗಿ ಇಂತಹ ಹೋಟೆಲ್‌ಗೆ ಹೋಗದೇ ಇರುತ್ತಾನೆಯೇ? ರಾಮ ಮೊದಲೇ ಹದ್ದಿನ ಬುದ್ಧಿಯವನು, ಪಂಚನಗಿರಿಯಲ್ಲಿ ಓದುವಾಗ ಫಿನ್ಸಿಪಾಲರಿಗೆ ಭೇದಿ ಔಷಧಿ ಕೊಟ್ಟದ ವೈದ್ಯ. ಜೈನರ ಹುಡುಗಿಯೊಬ್ಬಳನ್ನು ಬಸುರಿ ಮಾಡಿ ಪೊಲಿಸರ ಮೊರೆ ಹೊಕ್ಕು, ಎಲ್ಲರಿಗೂ ತಿನಿಸಿ ಬಿಡಿಸಿಕೊಂಡ ಬಂದಿದ್ದವ. ರಾಮ ಎಂಬ ಹೆಸರಿಟ್ಟದವನ್ನು ಚೆನ್ನಾದಂತಹ ಹೆಸರೆಂದು ಕಥೆಗಾರರ ವ್ಯಂಗ್ಯಗಳನ್ನು, ಹೆಸರಿನಲ್ಲಿ ರಾಮ ಎಂದಾದರೆ ಗುಣದಲ್ಲಿ ರಾವಣನಾಗಿದ್ದ. ಇವು ಎಂ. ಎಲ್.ಎ ಆಗುವವನ ಅರ್ಹತೆಯಲ್ಲವೆ.? ಇಲ್ಲಿನ ಸಾಮಾಜಿಕ ವಿಡಂಬನೆ. ರಾಷ್ಟ್ರ ರಾಜಕಾರಣಿಗಳ ಒಳಬದುಕಿನ ಅಂತರ್ಯಗಳಲ್ಲಿ ಅವರ ನೈತಿಕ ಪ್ರಜ್ಞೆಗಳಿಲ್ಲದೆ ಜನರಾಳುವ ಅವರ ಗುಣಗಳ ಕಟುವಾಸ್ತವತೆಯನ್ನು ಬಿಂಬಿಸುತ್ತಾರೆ,

ಸಿನಿಮಾಕೆ ಹೊಗಿದ್ದ ಜಯಳನ್ನು ಬೈಕಿನಲ್ಲಿ ಕುತ್ಕೊ ನಿನ್ನತ್ರ ಮಾತನಾಡಬೇಕು ಎಂದು ತೊಟದ ಮನೆಗೆ ಕರೆದೊಯ್ದ. ಸನ್ನಿವೇಶ ಅರ್ಥವಾದ ಜಯ "ನಿನ್ನ ದಮ್ಮಯ್ಯ ರಾಮಣ್ಣಾ ನಾನು ಬಡವಿ. ನನ್ನ ಮುಟ್ಟಬ್ಯಾಡ ನಿನ್ನ ಕಾಲ್ಹಿಡಿತೀನಿ"[36] ಎಂದು ಹಲುಬಿದಳು ಅಂಗಲಾಚಿದಳು ಗೋಗರೆದಳು. ಹೆಣ್ಣೊಬ್ಬಳು ಕಾಮಕ್ಕೆ ಮೈಯುಡ್ಡುವ ಹಾಗೂ ಬಲಿಯಾಗುವ ಹೆಣ್ಣತನದ ಶೀಲ ಕಾಪಾಡಿಕೊಳ್ಳುವ ನೋವು, ಆತಂಕ, ತಲ್ಲಳಗಳು ಇಲ್ಲಿ ವ್ಯಕ್ತವಾಗುತ್ತದೆ.

ತಾನು ಚುನಾವಣೆಗೆ ನಿಲ್ಲುವ ಎಂ.ಎಲ್.ಎ ಆಗುವ ಸನ್ನಿಹವನ್ನು "ನಾನು ನಿನ್ನನ್ನು ಮದುವೆ ಮಾಡ್ಕೋತೀನಿ" ಎಂದು ಅರ್ಧರಾತ್ರಿಯ ಮದುವೆಯ ಆಶ್ವಾಸನೆ ನೀಡುತ್ತಾನೆ. ಕಾಮದ ಬಾವನೆಗಳು

ಇಬ್ಬರಿಗೂ ಬೇಯುತ್ತಿತ್ತು ಇಬ್ಬರು ಸೇರಿದರು. ಒಮ್ಮೆ ಪಂಪ್ಹೌಸ್, ಒಮ್ಮೆ ಪ್ರವಾಸಿ ಮಂದಿರ, ಒಮ್ಮೆ ಮುಸ್ಸಂಜೆ ಹೊಲ, ಎಲ್ಲೆಂದರಲ್ಲಿ ಆತ ಕಬಳಿಸುತ್ತಾ ಹೋದ. ಆಕೆ ಕರಗುತ್ತಾ ಬಂದಳು. ಆತ ಅವಳ ದೇಹಕ್ಕಾಗಿ ಒತ್ತಾಯ ಮಾಡಿದಂತೆ ಆಕೆ ಬಾಳಿನ ಆಶ್ರಯಕ್ಕಾಗಿ ಹಲುಬಿದಳು. ಹೆಣ್ಣುಬ್ಬಳು ಕಾಮಕ್ಕೆ ಮೈಯೊಡ್ಡಿದ ಮೇಲೆ ಅದರ ಬೆಂಗಾವಲು ಸಮಾಜದ ಹೊರೆ, ಇವೆಲ್ಲಾ ಸಂಸ್ಕೃತಿಯಾಳಗಿನ ಕಟ್ಟುಪಾಡು, ಸ್ತ್ರೀ ಬಯಸುವ ಈ ಪ್ರಕೃತಿಯನ್ನು ಕಥೆಗಾರರು ನೈಜವಾಗಿ ನಿರೂಪಿಸುತ್ತಾರೆ. ಆದರೆ ಇವರ ಸರಸ ಸಲ್ಲಾಪಗಳನ್ನ ಕಂಡ 'ಮುಷ್ತಾಕ್' ತಾನು ಆಸೆಪಟ್ಟು, ಜಯಳಿಂದ ಉಗಿಸಿಕೊಂಡು ರಾಮನ ದೆಸೆಯಲ್ಲಿ ಪೋಲಿಸರಿಂದಲೂ ಒದೆತಿಂದ. ಇನ್ನು ರಾಜಕೀಯದ ಷಡ್ಯಂತ್ರ ಕುತಂತ್ರಗಳ ಮೂಲಕ ಚುನಾವಣೆ ಸಾಗುತ್ತವೆ. ರಾಮು ಹೊಟೆಲ್ ಕಡೆ ಬರಲಿಲ್ಲ, ಕಾದು ಕಾದು ಎಲೆಕ್ಷನ್ ಜೀಪಿನಲ್ಲೆ ರಾಮು ಮನೆಗೆ ಹೋದರೆ, ಪಟೇಲರಿಗೆ ಕೊಪ ಬಂದು ಒಳ್ಳೆ ಅನಿಷ್ಟ ಮುಂಡೇದು ಎಲೆಕ್ಷನ್ ಟೇಮಿನಲ್ಲಿ ಮಾನ ತೆಗೆಯೋಕ್ಕ ಬಂದಿದ್ದಾಳೆ,

ಇಲ್ಲಿ ವ್ಯಕ್ತಿ ಹಾಗೂ ವ್ಯಕ್ತಿಗತ ಮಾನಗಳ ಬೆಲೆಯ ಮುಖಾಮುಖಿಯನ್ನು ತಂದು, ಮಾನವಿಕ ಸಮಾಜಮುಖಿ ಮೌಲ್ಯಗಳ ವಿಡಂಬನೆ ಮಾಡುತ್ತಾರೆ, ಕೊನೆಗೆ ಹೋಟ್ಲು ಹುಡ್ಗಿ ಪಟೇಲರ ಸೊಸೆಯಾಗುವುದೇ? ಎಂಬ ಕಥೆಗಾರರ ಪ್ರಶ್ನೆಯಾಗಿ ಸಾಮಾಜಿಕ ನಾಯ್ಯವನ್ನು ಓದುಗನ ತಿರ್ಮಾನಕ್ಕೆ ನೀಡುತ್ತಾರೆ. ಮನೆಯಿಂದ ಆಚೆ ದಬ್ಬಿಸಿ ಬಂದ ಜಯಳ ಎದೆಯೊಳಗಿನ ಸಂಕಟಕ್ಕೆ ಹೋದ-ಬಂದವರ ಹತ್ತಿರ "ನನ್ನನ್ನು ರಾಮ ಹಾಳುಮಾಡ್ದ"[37] "ಈ ಮಗು ರಾಮನ್ದು" ಅಂತ ಹುಚ್ಚು ಹಿಡಿದವಳ ಥರಾ ನಿಂಬಳ್ಳಿ ಜನರಿಂದ ಹಿಡಿದು ಬಾಂಬೆ ಲಾರಿಯರಿಗೆಲ್ಲಾ ಹೇಳಿದರೆ, ಒಂದು ಯಃಕಶ್ಚಿತ್ ಹೊಟೆಲ್ ಹುಡುಗಿಯಿಂದ ಒಬ್ಬ ಎಂ.ಎಲ್.ಎ. ಸಹಿಸಿಕೊಂಡಿರಲು ಸಾಧ್ಯವೇ? ಎಂಬ ಪ್ರಶ್ನೇಯ ಮೂಲಕ ಕಥೆಗಾರರೇ ಒಬ್ಬ ರಾಜಕಾರಣಿ ಮಾಡುವ ವಾಸ್ತವ ಸತ್ಯವನ್ನು, ದಿಟ್ಟತನ್ನದಲೇ ಅನಾವರಣ ಮಾಡುತ್ತಾರೆ.

ಈ ಹೊಟೇಲಿನಲ್ಲಿ ಸೂಳೆಗಾರಿಕೆ ನಡೀತದೆ, ಎಂದು ಬೆಳ್ಳೂರು ಪೊಲೀಸರಿಂದ ಹೊಟೇಲನ್ನ ನೆಲಸಮ ಮಾಡಿಸಿದರು. ಸಾಮಾನ್ಯರ ಮೇಲಿನ ಆರೋಪವರಿಸಿ ನೆಲೆಕಾಣಿಸಿದ ರಾಜಕೀಯವನ್ನು ಇಲ್ಲಿ ದೃಶ್ಯೀಕರಿಸಿ ಕೊಡುತ್ತಾರೆ. ಮುಂದೆ ರಾಮು ರಾಮಪ್ಪನಾಗಿ ಸಮಾಜ ಕಲ್ಯಾಣ ಮಾಡುವ, ಸಮಾಜ ಕಲ್ಯಾಣ ಇಲಾಖೆ ಸಚಿವರಾಗುತ್ತಾನೆ. ಇಲ್ಲಿ ಒಂದು ಹೆಣ್ಣು ಜೀವ ಹಾಳು ಮಾಡಿ ಅವಳ ಕುಟುಂಬ ಸರ್ವನಾಶ ಮಾಡುವ ಸಾಮಾಜಿಕ ವಿಡಂಬನೆ ಇದಾಗಿದೆ, ಜಯಳ ನೆನಪಾಗಿ ಇವಳು ವೇಶ್ಯೆಯಾದ ಸುದ್ದಿ ಶಿಷ್ಯನಿಂದ ತಿಳಿದು ನಗಲೆತ್ನಿಸುವ, ನಗಲಾಗದೇ ಇರುವ ಇಂತಹ

ರಾಜಕಾರಣಿಗಳ ದೇಶವನ್ನಾಳುವ ಸಮಾಜದ ದುಷ್ಕ್ರಿಯೆಯನ್ನು ಮಾರ್ಮಿಕವಾಗಿ ಅದರಲೂ ಜಯಳ ಬದುಕಿನ ಶೋಚನಿಯತೆಯುಲ್ಲಿ ವ್ಯಕ್ತವಾಗಿದೆ.

ಒಟ್ಟಾರೆ ಗ್ರಾಮೀಣ ಬದುಕಿನ ಕಥೆಗಳಲ್ಲಿ ಬರುವ ಕಟುವಾಸ್ತವತೆಯ ಸೂಕ್ಷ್ಮಾತಿಸೂಕ್ಷ್ಮ ನೆಲೆಯಲ್ಲಿ ನಿಂತು, ನೈಜ ದಟ್ಟ ನಿರೂಪಣೆಯೊಡನೆ ಕಾರ್ಯ ಶೋಷಣೆ, ನೋವು, ಹಂತಕಗಳನ್ನು ಈ ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ ಒಂದೆಡೆ ಬಂಡಾಯ ಮತ್ತೊಂದೆಡೆ ಜಾತಿ. ದಬ್ಬಾಳಿಕೆ, ಮತಾಂತರ, ಚುನಾವಣೆ, ಅನೈತಿಕತೆ ಮೌಲ್ಯಗಳ ಮಾನವೀಯ ನೆಲೆಗಳು ಹಾಗೂ ಗ್ರಾಮೀಣ ಬದುಕಿನ ಜಲ್ವಂತ ಸಮಸ್ಯೆಗಳನ್ನು ಅನಾವರಣ ಮಾಡುತ್ತವೆ.

ಅಡಿ ಟಿಪ್ಪಣಿಗಳು

ಅಕಾಲ, ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 1995. ಪುಟ 45.

1 ಅದೇ ಪುಟ. 46
2 ಅದೇ ಪುಟ. 51
3 ಅದೇ ಪುಟ. 52
4 ಅದೇ ಪುಟ. 54
5 ಅದೇ ಪುಟ. 54
6 ಅದೇ ಪುಟ. 58
7 ಅದೇ ಪುಟ. 73
8 ಅದೇ ಪುಟ. 75
9 ಅದೇ ಪುಟ. 79
10 ಅದೇ ಪುಟ. 83
11 ಅದೇ ಪುಟ. 85
12 ನನ್ನ ಪ್ರೀತಿಯ ಹುಡುಗನಿಗೆ. ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2009 ಪುಟ. 142
13 ಅದೇ ಪುಟ. 147
14 ಅದೇ ಪುಟ. 124
15 ಅದೇ ಪುಟ. 125
16 ಅದೇ ಪುಟ. 126
17 ಅದೇ ಪುಟ. 126
18 ಮಲೆನಾಡಿನ ಹುಡುಗಿ ಬಯಲುಸೀಮೆಯ ಹುಡುಗ, ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು. 2009 ಪುಟ123
19 ಅದೇ ಪುಟ. 124
20 ನನ್ನ ಪ್ರೀತಿಯ ಹುಡುಗನಿಗೆ. ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2009 ಪುಟ. 64
21 ಅದೇ ಪುಟ. 65
22 ಅದೇ ಪುಟ. 67
23 ಅದೇ ಪುಟ. 67
24 ಅದೇ ಪುಟ. 67
25 ಅದೇ ಪುಟ. 68

26 ಅದೇ ಪುಟ. 68
27 ಅದೇ ಪುಟ. 68
28 ಅದೇ ಪುಟ. 69
29 ಛಿದ್ರ. ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2003 ಪುಟ 27
30 ಅದೇ ಪುಟ. 29
31 ನನ್ನ ಪ್ರೀತಿಯ ಹುಡುಗನಿಗೆ. ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2009 ಪುಟ. 30
32 ಅದೇ ಪುಟ. 31
33 ಅದೇ ಪುಟ. 32
34 ಮಲೆನಾಡಿನ ಹುಡುಗಿ ಬಯಲುಸೀಮೆಯ ಹುಡುಗ, ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು. 2009 ಪುಟ 19
35 ಅದೇ ಪುಟ. 22
36 ಅದೇ ಪುಟ. 26

ಅಧ್ಯಾಯ–4

ಅಧ್ಯಾಯ-4.

ನಾಗತಿಹಳ್ಳಿಯವರ ಕಥೆಗಳಲ್ಲಿ ನಗರ ಜೀವನದ ಸಂಕೀರ್ಣ ಮುಖಗಳು

ನಾಗತಿಹಳ್ಳಿಯವರ ಕಥೆಗಳ ರಚನೆಯಲ್ಲಿ ಸಮಾಜಿಕರು ಆಧುನಿಕ ಬದುಕಿಗೆ ತೆರೆದುಕೊಂಡ, ನಗರ ಬದುಕಿನ ಸಂಬಂಧಗಳ, ಹುಡುಕಾಟಗಳಲ್ಲಿ ತೆರೆದುಕೊಳ್ಳುತ್ತವೆ. ನಗರ ಬದುಕಿನೊಳಗಿನ ದಿನಚರಿಯಲ್ಲಿ ಬರುವ ಅಘಾತ ನೋವು, ಅತಂತ್ರತೆ, ತಾಕಲಾಟಗಳು ವೈಚಾರಿಕ ನೆಲೆಗಟ್ಟಿನಲ್ಲಿ ಇವರ ಕಥೆಯ ಅಭಿವ್ಯಕ್ತಿಗಳು ತೆರೆನು ಕೊಳ್ಳುತ್ತದೆ.

ನಗರ ಬದುಕಿನ ಸಮಾಜದ ಪ್ರಕ್ರಿಯೊಳಗಿನ ಒತ್ತಡ ಸಾಂಸ್ಕೃತಿಕ ಪರಂಪರೆಗಳು, ಇಲ್ಲಿ ಅನಾಯಾಸವಾಗಿ ಸಾಮಾಜಿಕ ನೆಲೆಯಲ್ಲಿ ಅನಾವರಣವಾಗುತ್ತದೆ. ಇಲ್ಲಿ ಬೌದ್ಧಿಕ ವಲಯಗಳು ವೈಜ್ಞಾನಿಕ ಮನೋಧರ್ಮಗಳು ಆರ್ಥಿಕ ಅಸಮಾನತೆಯ ವಿರುದ್ಧದಲ್ಲೆ, ಬದುಕಿನ ಅನ್ವೇಷಣೆಗೆ ಸ್ವತಹ ಕಥೆಗಾರರೆ ಒಳಗಾಗುತ್ತಾರೆ. ಬದುಕಿನ ಹೊಸ ಹುಡುಕಾಟದಲ್ಲಿನ, ವಾಸ್ತವ ಮಾರ್ಗದ ಎಲ್ಲಾ ಅನುಭವಗಳು ಕಥೆಯೊಳಗ ಪ್ರವೇಶ ಮಾಡುತ್ತವೆ. ನಗರವೆಂದರ ಉದ್ಯೋಗೀಕರಣದ ಹಣ ಸಂಪಾದನೆ ಮಾಡಿ ಎಲ್ಲವೂ ಸುಖಮಯ ಎನ್ನುವರ ಬದುಕಿನ ತಾಕಲಾಟಗಳು ಇಲ್ಲಿ ಗರಿಗೆದರುತ್ತವೆ. ಸಂಸ್ಕೃತಿಯ ಚೌಕಟ್ಟುಗಳನ್ನು ದಾಟಲಾರದೆ, ನಗರ ಬದುಕಿನ ಬೂಟಾಟಿಕೆಗೆಗೂ ಬಗ್ಗದೆ. ಅತಂತ್ರ ಜೀವನಯಾತ್ರೆಯ ಸಂಕೀರ್ಣತೆಗಳು ಇಲ್ಲಿ ಮುಖ ಮಾಡಿ ನಿಲ್ಲುತ್ತವೆ. ಇಂತಹ ಕಥೆಗಳಲ್ಲಿ **'ಛಿದ್ರ'** ಇದೊಂದು ನಗರ ಬದುಕಿನ ಸಾಮಾಜಿಕ ಕಥೆಯಾಗಿದೆ. ಅಡುಗೆ ಭಟ್ಟರಾದ ಕುಳ್ಳ ಭಟ್ಟರು ಮನೆ ಕಟ್ಟುವ ಹಂಬಲ ಹೊತ್ತು ಕಷ್ಟಪಟ್ಟು ಸೈಟ್ ಕೊಂಡು, ಮನೆ ಕಟ್ಟಿಸುತ್ತಾರೆ. ನಗರದ ಆ ಬಡಾವಣೆಯಲ್ಲಿ ಕಟ್ಟಿಕೊಂಡ ಮನೆಯನ್ನು ಸರ್ಕಾರ ಕೆಡುವುತ್ತದೆ ಎಂಬ ಭಯದಲ್ಲೇ ನಿತ್ಯ ಬದುಕು ಸಾಗಿಸುವ ಕಥೆಯ ಹಂದರದಲ್ಲಿ, ಬದುಕಿನ ಅನ್ವೇಷಣೇಯ ಸ್ಥಿತ್ಯಂತರಗಳು ಇಲ್ಲಿ ದಾಖಲಾಗಿವೆ. ಯಾರ ಮದುವೆ ಶ್ರಾದ್ದವಿರಲಿ, ಗೃಹಪ್ರವೇಶವಿರಲಿ, ಅಲ್ಲಿ ಊಟವೇ ಮುಖ್ಯ ಎಂದು ಬಲ್ಲ ಭಟ್ಟರು ರುಚಿಕಟ್ಟಾಗಿ ಅಡುಗೆ ಮಾಡುವುದೇ ಇವರ ಕಾಯಕ. ಹೀಗೆ.....ವಪ್ಪನ ಮಗಳ ಮದುವೆ ಕಾರ್ಯದಲ್ಲಿ ಅಡುಗೆ ಮಾಡಿ ಬರಬೇಕಾದ ಬಾಕಿ ಒಂದು ಸಾವಿರಕ್ಕೆ ಸೈಟ್ ತೆಗೆದುಕೊಂಡರು. ಬಾಡಿಗೆ ಮನೆಯಲ್ಲಿ ಇರುವುದಕ್ಕಿಂತ, ಸೂರು ಕಟ್ಟಿಕೊಳ್ಳುವುದೇ ಸರಿ ಅಂತ, ದುಡ್ಡುಕಾಸು ಹೊಂಚು ತೊಡಗಿದರು. ತನ್ನ ಮಗಳು ರುದ್ರಾಂಬೆ ಒಡವೆ ಬಿಚ್ಚಿಕೊಟ್ಟಳು. ಸಿಮೆಂಟ್, ಹಂಚು, ಇಟ್ಟಿಗೆ, ಗಾರೆ ಕೆಲಸದವರು ಎಲ್ಲವನ್ನು ಸಿದ್ದಗೊಳಿಸಿ ಜಮೀರುಲ್ಲನ ಗಾಡಿಗೆ ಡ್ರಮ್ಮು ಕಟ್ಟಿಕೊಂಡು, ಕೆರೆಯಿಂದ ನೀರು ತಂದು, ಹೆಂಗಸರು ಮಕ್ಕಳೂ ಸಣ್ಣ - ಪುಟ್ಟ ಕೆಲಸಮಾಡಿ, ಮನೆಯನ್ನು ಕಟ್ಟಿ ಬಣ್ಣ ಹೊಡಿಸಿದರು. ಮನೆಗೊಂದು ದೇವರ ಹೆಸರಿಟ್ಟು, ಬಾಗಿಲ ಮೇಲೆ ನಾಳೆ ಬಾ! ಅಂತನು ಬರೆದರು. ನಗರ

ಬದುಕಾದರೂ ದೈವ ನಂಬಿಕೆಗಳು ಸದಾ ಮನುಷ್ಯನಲ್ಲಿನ ಭಯವನ್ನು ಹೋಗಲಾಡಿಸುವ ಹಾಗೂ ಭಯವನ್ನು ಸೂಚಿಸುವ ಸಂಕೇತಗಳಾಗಿವೆ. ಭಟ್ಟರು ಮನೆಕಟ್ಟುತ್ತಿದ್ದಂತೆಯೆ, ಬಡಾವಣೆಯಲ್ಲಿ ಹಲವು ಮನೆ ಎದ್ದವು. ಸಾಬರಿರುವ ಏರಿಯಾಕ್ಕೆ .... ಸಿಯಾನಗರವೆಂದು, ಹಿಂದೂಗಳಿರುವ ಏರಿಯಾಕ್ಕೆ ....ಗಿರಿ ನಗರ ಎಂದು ನಾಮಕರಣಮಾಡಿದರು. ಇಲ್ಲಿ ಜಗತ್ತಿನ ಯಾವ ಭಾಗದಲ್ಲಿ ಇದ್ದರು ತಮ್ಮ ಧರ್ಮ ಬಿಡದ ಧರ್ಮ ಸಂಘಟನೆ. ಮಾನವನ ಸ್ವಾಭಾವತಂಹ ವಾಸ್ತವ ಸಂಗತಿಗಳ ನೈಜತೆಯನ್ನು ಚಿತ್ರೀಕರಿಸುತ್ತದೆ. ಭಟ್ಟರು ತಮ್ಮ ಗ್ಯಾಂಗಿನವರನ್ನು ಕರೆದು ಗೃಹಪ್ರವೇಶ ಮಾಡಿದರು, ಆದರೆ ಊಟಕ್ಕೆ ಬಂದ ಸೇಠ್, ಎಲ್ಲರಿಗೂ ನೋಟೀಸ್ ಕೊಟ್ಟವ್ರೆ, ನಾಳೆ ಬೆಳಿಗ್ಗೆಯಿಂದ ಮನೆಗಳನ್ನು ಬೀಳಿಸ್ತಾರಂತೆ, ಇಲ್ಲಿ ನೋಡಿದ್ರೆ ನಿಮ್ಮುದು ಹೊಸಮನೆ ಊಟ, ಇಲ್ಲಿಂದ ಕುಳ್ಳಭಟ್ಟರ ಆತಂಕದ ಮಿಡಿತಗಳು ಶುರುವಾದವು. ಇಂತಹ ನಗರದಲ್ಲಿ ದುಡಿದು ಮನೆಕಟ್ಟಿ ಇಂಥ ಗಾಚಾರ ಬಂತಲ್ಲಾ ಎಂದು ನೊಂದುಕೊಂಡರು ಈ ದೆಸೆಯಲ್ಲಿ, ಈ ಬಡಾವಣೆಯಲ್ಲಿ ಸಂಘ ಕಟ್ಟಿದೇವೆ, ಮನೆ ಕೆಡುವುದನ್ನು ತಪ್ಪಿಸಲು ಮೆಂಬರ್ರಾಗಿ, ನೂರು ರೂಪಾಯಿ ಚಂದಾ ಕೊಡಿ, ಎಂದು ನೂರು ಪಡೆದು ಮನೆಗೆ ಕರೆಂಟು ಪೋನ್ ಹಾಕಿಸಿ ಎಂದು ಸಲಹೆ ಕೊಟ್ಟರು. ಸಹಾಯ ಮಾಡುವ ಹೆಸರಲ್ಲಿ ಹಣ ವಸೂಲಿ ಮಾಡುವ ಸಂಘಗಳು ಸಮಾಜದಲ್ಲಿ ತಲೆ ಎತ್ತುವ, ಅನ್ಯರ ನೋವನ್ನು ಬಂಡವಾಳ ಮಾಡಿಕೊಳ್ಳುವ ವಾಸ್ತವತೆಯನ್ನು ನಿರೂಪಿಸುತ್ತಾಳೆ.

ಕೆ.ಇ.ಬಿಯವರು ಕರೆಂಟು ಕೊಡದೇ ಸಿ.ಎಮ್ಮ್ ಆ ಮನೆ ಒಡೆದು ಹಾಕಿಂತ ಆರ್ಡರ್ ಮಾಡಿದ್ದಾರೆ. ಕರೆಂಟು ಕೊಡಲ್ಲ ಅಂದ್ರು ಆದರೆ ಈ ಏರಿಯದಲ್ಲಿ ಅಯ್ಯರ್ ಮನೆಗೆ ಲೈಟ್ ಕೊಟ್ಟಿದ್ದೀರಿ ಅಂದರೆ "ಅವ್ರು ನಮ್ಮ ಸ್ವಾಮಿ ಕಣ್ರೀ ನಿಮ್ದು ನೀವು ನೋಡ್ಕೊಳ್ಳಿ"[1] ಎಂದು ಮೇಲೆದ್ದರು. ನಮ್ಮ ಸಮಾಜದಲ್ಲಿ ಅಧಿಕಾರಶಾಹಿಗಳ ಭ್ರಷ್ಟತೆಯೊಳಗಿನ ಕುತಂತ್ರತೆಯ ಕಟುವಾಸ್ತವಗಳು ಈ ಕಥೆಯಲ್ಲಿ ನಿರೂಪಿತವಾಗಿದೆ.

ಎಲ್ಲೂ ಮನೆ ಒಡೆಯುವ ಸುದ್ದಿಯೇ "ಸಿಟೀ ಸೌಂದರ್ಯ ಎಲ್ಲಾ ಹಾಳಾಗುತ್ತೆ ಕಂಪ್ಲೀಟ್ ನೆಲಸಮ ಮಾಡಬೇಕು"[2] ಎಂದವರೆ ಎಂದು ಭಟ್ಟರಿಗೆ ನಿದ್ದೆ ಬಾರದೆ ರಾತ್ರಿ ಬುಲ್‌ಡೋಜರ್ ಊರುಳಿದ ಶಬ್ದ ಕೇಳಿ ಮನೆ ಮಂದಿಯಲ್ಲ ಕಣ್ಣೀರಿಟ್ಟರು. ಇಡೀ ಬಡಾವಣೆ ಕೋಲಾಹಲವಾಯಿತು. ಪೋಲಿಸ್ ವ್ಯಾನ್ ಬಂದು ಜಮೀರುಲ್ಲನ ಮನೆ ಸಾಮಾನುಗಳನ್ನು ಬೀದಿಗೆಸೆದುದ್ದು, ಬಟ್ಟರಿಗೆ ಭಯ ತನ್ನ ಮನೆಯನ್ನು ಸ್ಪರ್ಶಿಸತೊಡಗಿದ. ಇಲ್ಲಿ ನಗರ ಬದುಕಿನ ಅಮಾನವೀಯ ನಡತೆಗಳು ಕಾನೂನು ಸಂವಿಧಾನಗಳಲ್ಲಿ ಮುಗ್ಧ ಬಡಜನರನ್ನು ಸವಾರಿ ಮಾಡುವ ಕ್ರಿಯೆಗಳು ಅನಾವರಣಗೊಂಡಿವೆ. ಪತ್ರಿಕೆಯಲ್ಲಿ ಮನೆ ಒಡೆವ ವಿಷಯ ಬಡವರ ಪರವಾಗಿದದ್ದುಕ್ಕೆ ಮುಖ್ಯಮಂತ್ರಿಗಳು "ಈ ಮನೆಗಳಲ್ಲ

ನಾನು ಹೇಳಿದ್ದು. ದಾಖಲೆ ಇಲ್ಲದಿರುವ ಮನೆಗಳನ್ನು ಮಾತ್ರ"[3] ಎಂದು ಡಿ.ಸಿ.ನ ವರ್ಗಮಾಡಿದರು. ಇಲ್ಲಿನ ಅಧಿಕಾರ ಹಾಗೂ ರಾಜಕಾರಣಿಗಳ ಸ್ವಾರ್ಥ ಸಾಮಾನ್ಯನ ಮೇಲೆ ಬೀರುವ ಪ್ರಭಾವವನ್ನು ವಿಷಯಾನುಭವದಲ್ಲೇ ಕಥೆಗಾರರು ಕಥೆಯನ್ನು ಕಟ್ಟಿಕೊಡುತ್ತಾರೆ. ಆದರೆ ನಿತ್ಯವೂ ಮನೆಯನ್ನ ಕೆಡುವುತ್ತಾರೆ ಎಂಬ ಭೂತ ಭಟ್ಟನನ್ನು ಬಿಡದೆ ಕಾಡುವ ನೋವೂ ನಿರಂತರವಾಗಿರುತ್ತದೆ.

ನಗರಬದುಕಿನ ಅತಂತ್ರ ಜೀವನ ಕ್ರಿಯೆಗೆ ಅಧಿಕಾರ ವರ್ಗದವರ ಶೋಷಣೆಗಳು ಇಲ್ಲಿ ಮಿಳಿತಗೊಳ್ಳುತ್ತದೆ; ಸಾಮಾಜಿಕ ಅಧಃಪತನಗಳ ವಾಸ್ತವ ನೆಲೆಗಳನ್ನು ಎಳೆಯಾಗಿ ನಿರೂಪಿಸಿ, ಮನೋವೈಜ್ಞಾನಿಕ ತಲ್ಲಣಗಳ ಅನುಭವಗಳನ್ನು ಕಟ್ಟಿಕೊಟ್ಟಿದ್ದಾರೆ.

'ಸ್ಖಲನ' ಕಥೆ ಬದುಕನ್ನು ಅಂತರಮುಖಿಯಾಗಿ ಅರ್ಥೈಸುವ ವ್ಯಕ್ತಿತ್ವದ ಆಶಯವನ್ನು ಒಳಗೊಂಡಿದೆ. ಇಲ್ಲಿನ ಕಥಾನಾಯಕರಿರ್ವರು ಕಥೆಗಾರರ ಒಳಗಿನ ಕಥೆಗಾರನಾಗಿ ಹೊಮ್ಮುವ ಆದರ್ಶ ಕಥೆಗಾರ. ಈ ಕಥೆಗಾರರ ಒಳಗಿನ ಅಂತರ್ಮುಖಿಯಾಗಿರುವುದು ಹೊರಾಣವಾಗಿದೆ. ಮನೋವಿಜ್ಞಾನದ ಹಿನ್ನಲೆಯಲ್ಲಿ ತನೊಳಗಿನ ಬದುಕಿನ ತೆರೆ ಮತ್ತು ಮರೆಯ ಬದುಕಿನಲ್ಲಿ ಸಂದಿಸುವ ದ್ವಂದ್ವ ಪಾತ್ರಗಳ ಒಳ ಮನಸ್ಸಿನ ಜಿಜ್ಞಾಸೆಯೆ ಕಥೆಗಾರ. ಆದರ್ಶವ್ಯಕ್ತಿತ್ವವಾಗಿ ರೂಪಿಸಿಕೊಂಡ ಕಥೆಗಾರ ವಿಶ್ವನನ್ನು ನಿರೂಪಕರು ಬೇಟಿಯಾದಾಗ ಮಧ್ಯಮವರ್ಗದ ಬದುಕಿನ ಒಳ ಹಾಗೂ ಹೊರ ಕ್ರಿಯೆಗಳನ್ನು ತೆರೆದಿಡುತ್ತಾನೆ. ನಿರೂಪಕರು ಮೆಚ್ಚಿನ ಕಥೆಗಾರ ವಿಶುವಿನೊಡನೆ ಇಡೀ ರಾತ್ರಿ ಪಯಣಿಗರಾಗುತ್ತಾರೆ. ಕಥೆಗಾರು ವಿಶು ದಾರಿಯುದ್ದಕ್ಕೂ ಕಾರು ಚಾಲನೆ ಮಾಡುತ್ತಲೇ, ಮಧ್ಯವ್ಯಸನಿಯಾಗಿ, ಸಿಗರೇಟು ಸುಡುತ್ತಲೇ, ಅಸಭ್ಯ ಅಶುದ್ಧ ನಾಗರೀಕನಾಗಿ ಹೆದ್ದಾರಿ ಪಕ್ಕದಲ್ಲೆ ಸಿಕ್ಕ ವೇಶ್ಯೆಯನ್ನು ಕಾಮ ಭೋಗದಲ್ಲಿ ಅನುಭವಿಸುವತ್ತಾನೆ. ಹಣವಿಲ್ಲದ ಹುಡುಗನನ್ನು ಕಾರಿಗೆ ಹತ್ತಿಸಿಕೊಂಡು ಬರುತ್ತಾನೆ. ಅದೇ ಕಾರಿನಲ್ಲಿ ತನ್ನ ಹೆಂಡತಿಯ ಶವವಿದ್ದರೂ ಯಾವ ವಿಪ್ರತೆ ಪ್ರಲೋಭತೆಗೆ ಒಳಗಾಗದೆ ಕುಡಿತ, ಮೋಜು, ವೇಶ್ಯೆಯ ಕಾಮದಾಟ, ಹಣಕ್ಕಾಗಿ ಕಾರಿನಲ್ಲಿ ಪ್ರಯಾಣಿಗರನ್ನು ಕರೆದೊಯ್ಯುವ ಬಗೆ ಒಂದು ಕ್ಷಣ ಓದುಗನು ನಿರೂಪಕನಂತೆ ಮೂಖವಿಸ್ಮಿತನಾಗಿ ದಿಗ್ಭ್ರಮೆಗೊಳ್ಳುತ್ತಾನೆ. ಇಲ್ಲಿ ಯಾವುದು ನೈತಿಕ ಅನೈತಿಕಗಳ ಎಂಬ ದ್ವಂದ್ವ ನಿರ್ಧಾರಕ್ಕೆ ಲೇಖಕರು ಕೊಂಡೊಯ್ಯುತ್ತಾರೆ. ಸಾಮಾನ್ಯ ಡ್ರೈವರ್ ಮಾಡುವ ಕೆಲಸವನ್ನು ಸಾಮಾನ್ಯ ಕಥೆಗಾರ ಏಕೆ ಮಾಡಬಾರದು? ಪ್ರತಿಯೊಬ್ಬ ಮನುಷ್ಯನು ಮಾಡುವ ತಪ್ಪುಗಳು ಸುದ್ದಿಯಾಗದು. ಬೆಟ್ಟದ ಮೇಲೆ ಅರಮನೆ ಕಟ್ಟಿ ಅದರೊಳಗೆ ನನ್ನನ್ನು ಇಟ್ಟು ಬರೆಯಬೇಡಿ ಅಂದರೂ. ನಾನು ಬರೆದಿರಲಾರೆ "ಸಂಭೋಗವನ್ನು ಹೇಸಿಗೆ ಅಂದವರೂ ತಾಯ್ತನವನ್ನು ಗೌರವಿಸುತ್ತಾರೆ. ಇದು ಸೃಷ್ಟಿಯ ಕ್ರಿಯೆ ಎಷ್ಟೊಂದು ನಿಗೂಡ......." ಎಂದು ಸಾಮಾಜಿಕ ಚೌಕಟ್ಟನ್ನು ಮುರಿದು ಕಟ್ಟುವ ಮೌಲ್ಯಗಳನ್ನು

ಆವರಿಸಿಕೊಳ್ಳುತ್ತದೆ. ಆದರೆ ನೈತಿಕ ಮೌಲ್ಯಗಳ ನಡುವೆ ಜೀರ್ಣಿಸಿಕೊಳ್ಳಲು ಕಥೆ ತಡವರಿಸುತ್ತದೆ. ಹೆಂಡತಿಗೂ ವೇಶ್ಯೆಗೂ ಭಾವನಾತ್ಮಕ ಸಂಬಂಧದ ವ್ಯತ್ಯಾಸಗಳಿವೆ. ಒಂದೇ ತೆರೆನಾದ ಬಾವನೆ ವ್ಯಾಪಕವಾಗಿಸಲಾರದು. ಮನೋವೈಜ್ಞಾನಿಕವಾಗಿ ಹೆಂಡತಿಯ ಶವ ಕಾಲ್ಲಿದ್ದು ತಾನೋ ಬೇರೊಬ್ಬ ಮಹಿಳೆಯೊಡನೆ ಕಾಮದಾಟ ಒಂದು 'ವಿಕೃತವೇ'. ಕುಡಿತ ಇತರೆ ವ್ಯಸನ ನೋವಿನ ಅಗಲಿಗೆ ಬಯಸಿರಬಹುದು. ತನ್ನ ಹೆಂಡತಿಯ ಸಾವಿನಲ್ಲಿಯೂ ಈ ರೀತಿಯ ಭಾವ ಸಂಸ್ಕೃತಿ ಸಂಬಂಧಗಳ ಕಥೆ ಕೃತಕವಾಗಿಯೂ ಅತಿರೇಕದ ಉದ್ದೀಪನವಾದಂತೆ ವ್ಯಕ್ತವಾಗುತ್ತದೆ. ಸ್ಥಾಪಿತ ಮೌಲ್ಯವಾಗಲಿ ಮುರಿದು ಕಟ್ಟುವ ತಂತ್ರವಾಗಲಿ ಕೃತಕವಾಗುತ್ತದೆ. ಇದು ಭಾವನಾತ್ಮಕ ಸಂಬಂಧಕ್ಕೆ ತಾಕಲಾರದು. ಇಲ್ಲಿ ಮೌಲ್ಯಕ್ಕಿಂತ ಅನೈತಿಕ ಬಾವವನ್ನ ಸಮರ್ಥಿಸಿಕೊಳ್ಳುವುದನ್ನು ಕಾಣುವಂತಾಗಿದೆ. ಮಾದರಿ ಕಥೆಗಾರ ವಿಶುವಿನ ವಿಕೃತ ಗುಣಗಳು ವಾಸ್ತವಕ್ಕೆ ದೂರವಾಗಿದೆ.

'ಅಕಾಲ' ಕಾಲಾತೀತ ಬದುಕಿನ ಕ್ರಿಯೆಯೇ ಅಕಾಲ ಸಂಭವಿಸಬೇಕಾದು, ಸಂಭವಿಸಲಾರದೆ ತರ್ಕಕ್ಕೆ ಸಿಗಲಾರದ ವಸ್ತು ಸ್ಥಿತಿಯೊಳಗೆ ಸಾಮಾಜಿಕ ವ್ಯವಸ್ಥೆಯೊಳಗಿನ ಬಿನ್ನತೆಯ ಅನಾವರಣವೇ ಕಥೆಯ ಆಶಯ. ಇಲ್ಲಿ ಕಥೆಯ ನಿರೂಪಕರೂ ಕಾಲೇಜೊಂದರ ಅಧ್ಯಾಪಕರಾಗಿದ್ದ ಸಂದರ್ಭದಲ್ಲಿ ಸಾಂಸ್ಕೃತಿಕ ವಿಭಾಗದ ಸಂಚಾಲಕರಾಗಿ ಪ್ರವಾಸ ಮಾಡಲು ನಿಸರ್ಗಧಾಮ ಕಾಡು ಪರಿಸರಗಳನ್ನು ಆಯ್ಕೆ ಮಾಡಿದರೆ, ಆಡಂಬರ ಮೋಜು ಮಸ್ತುಗಳ ನಗರ ಮುಂಬೈಯನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುತಾರೆ. ಆಕರ್ಷಕ ಬದುಕಿನ ನಗರದ ವೈಭವಕ್ಕೆ ಮುಖಮಾಡುವ ಆಧುನಿಕ ಜಗತ್ತಿನ ಮನಸ್ಥಿತಿಗಳು ಇಲ್ಲಿ ವ್ಯಕ್ತವಾಗುತ್ತದೆ. ಪ್ರವಾಸದಲ್ಲಿನ ನಿರೂಪಕರ ಆಯಾಸ, ಮುಂಬೈ ಬದುಕಿನ ನಗರ ಪರಿಸರ ತಮ್ಮೊಳಗಿನ ಸಹೋದ್ಯೋಗಿ ಮಿತ್ರರ ವರ್ತನೆಗಳಾದ, ಸ್ವಾರ್ಥ ವ್ಯಕ್ತಿತ್ವದ ಸಕಲ ದುರ್ಗುಣಗಳನ್ನು ಮೈವೆತ್ತು ಸನ್ಯಾಸಿಯಾಗುವ ಕೃಷ್ಣಶಾಸ್ತ್ರಿಗಳು. ವ್ಯಕ್ತಿಗತ ಚಿತ್ರಣಗಳು ಇಲ್ಲಿ ಸಹಭಿವ್ಯಕ್ತಿಗೆ ಸಾಕ್ಷಿಯಾಗಿದೆ. ದುಷ್ಟ ಗುಣಗಳ ಮೈವೆತ್ತ ಇಂದಿನ ಸಮಾಜದ ಮಠ ಮಾನ್ಯರ ಮಹರ್ಷಿಗಳ ಗುಣಭಾವಗಳನ್ನು ಚಿತ್ರೀಕರಿಸಿಕೊಡುತ್ತಾರೆ.

ಪ್ರವಾಸದಲ್ಲಿನ ವಿದ್ಯಾರ್ಥಿಗಳ ಆಂತರ್ಯದ ಪ್ರತಿಭೆಗಳು, ಚೇಷ್ಟೆ – ಕುಚೇಷ್ಟೆಗಳಲ್ಲದೆ ನಗರ ಬದುಕಿನ ದುರ್ವ್ಯಾಸನದ ಬದುಕಿನ ವಾಸ್ತವತೆಗೆ ಕನ್ನಡಿಯಾಗಿದೆ. ಬಾಂಬೆಯ ಅಶ್ಲೀಲ ಜಗತ್ತಿನ ಕೆಂಪು ದ್ವೀಪದ ರಸ್ತೆಯ ಅನುಭವ. ಅನೈತಿಕ ಸಂಬಂಧದ ಮೃಗಾಲಯದಂತೆ ಕಾಣುವ, ಮಾರ್ಮಿಕ ಜಗತ್ತಿನ ಪರಿಚಯ ಮಾಡಿ ಕೊಡುತ್ತಾರೆ. ನಂತರ ಪ್ರವಾಸ ಮುಗಿಸಿ ಹೊರಟ ರೈಲಿನಲ್ಲಿ ನಕಲಿ ಅಧಿಕಾರಿಯಿಂದ ಮೋಸಕ್ಕೆ ಒಳಗಾದ ಸಂದರ್ಭ ಸಾಮಾಜದಲ್ಲಿನ ನಗರ ಬದುಕಿನ ಭ್ರಷ್ಟತೆಯ ಎಳೆ, ಹೊಸತನದ ತಂತ್ರವಾದರೂ ಕಟು ವಾಸ್ತವದ ಜಗತ್ತಿನ ಅನಾವರಣವಾಗಿದೆ. ರೈಲಿನಿಂದ

ಬಿದ್ದ ಅಮರ್‌ನ ಪ್ರಾಣಕ್ಕಾಗಿ ತವಕಿಸುವ, ಹುಡುಕುವ, ತಳಮಳ, ತಲ್ಲಣಗಳನ್ನು ದೃಶ್ಯೀಕರಿಸಿಕೊಡುವ ಕಥೆಗಾರರ ಸ್ವ ಅನುಭವದ ಮನೋವೈಜ್ಞಾನಿಕ ನಿರೂಪಣೆಯನ್ನು ನೈಜವಾಗಿ ತಂದಿದ್ದಾರೆ .

ಪೂನಾದ ಸೂಸನ್ ಆಸ್ಪತ್ರೆಯಲ್ಲಿ ಅಮರ್‌ನ ಜೀವ ಉಳಿಸಿಕೊಳ್ಳುವ ಪ್ರಾಧ್ಯಾಪಕನ ಹಂಬಲ, ನೋವು, ಮಿಳಿತ ಹಾಗೂ ಹಣವಿಲ್ಲದೆ ಬೆಂಗಳೂರಿಗೆ ಪ್ರಯಾಣಿಸುವ ಮೇಷ್ಟರ ಜವಬ್ದಾರಿ. ಬದುಕಿನ ನೈತಿಕ ಹೊಣೆಯಾಗಿ ಕಂಡರು, ಅಮರ್ ಕುಟುಂಬದ ಕೆಂಗೆಣ್ಣಿನ ಆರ್ಭಟಕ್ಕೆ ಬಲಿಯಾಗಿ, ತನ್ನ ತಾನು ಆತ್ಮ ವಿಮರ್ಶೆ ಮಾಡಿ ನೊಂದುಕೊಳ್ಳುವ ಭಾವತೀವ್ರತೆ ಮನೋಜ್ಞಾವಾಗಿ ಮೂಡಿಬಂದಿದೆ.

ಹುಟ್ಟುಹಬ್ಬದ ಸಂಭ್ರಮದಲ್ಲಿ ಎರಡು ಅಡಿ ಸ್ಟೂಲಿನಿಂದ ಪ್ರಾಣ ಬಿಡುವ ಅಮರ್‌ನ ಅಂತ್ಯ ಕಾಕತಾಳಿಯತೆಯು 'ಅಕಾಲ'ದ ಚಹರೆಯನ್ನು ತನ್ನ ಕಥೆಯಾಗಿಸಿದಾರೆ, ಜೀವನದ ಶೋಧನೆಯಲ್ಲಿನ ಹೊಸ ತಂತ್ರದ ಬಳಕೆ ನೈತಿಕ ನೆಲೆಯ ಶೋಧನೆ ವಿಷಾದದ ನಡುವೆಯೇ ಜಿಜ್ಞಾಸೆಗಳಲ್ಲಿ ಕಥೆಗೆ ಹೊಸ ಆಯಾಮ ನಿರ್ಮಿಸುತ್ತದೆ.

'ಮುತ್ತಾಲಯ್ಯನ ರಾಜೀನಾಮೆ ಪ್ರಕರಣ' ಇದೊಂದು ದಲಿತ ಸಂವೇದನೆಯುಳ್ಳ ಕಥೆಯಾಗಿದೆ. ನಗರ ಬದುಕಿನ ಮೇಲ್ವರ್ಗದವರು ಕೆಳವರ್ಗದವರ ಬದುಕಿನ ಶೋಷಣೆಯ ಅಮಾನವಿಯ ವರ್ತನೆ ಇಲ್ಲಿ ಮಿಳಿತವಾಗುತ್ತದೆ. ಮುತ್ತಾಲಯ್ಯ ಸರ್ಕಾರಿಯ ನೌಕರನಾಗಿದ್ದು ಅಯಾಯ ಬಡಾವಣೆಯ ಶೌಚಾಲಯವನ್ನು ಶುಚಿ ಮಾಡುವ ಕಾಯಕವಾದರು ಹೆಂಡದ ದಾಸನಾಗಿ ತನ್ನ ಆರು ಮಕ್ಕಳು ಹೆಂಡತಿಯನ್ನು ಸಾಕಬೇಕಾಗಿತ್ತು. ಆದರೆ ಹೆಂಡ ಸರಾಯಿ ಇಲ್ಲದೆ ಇದ್ದವರಲ್ಲ, ಹೆಂಡ ಕುಡಿದರೆ ಸಂಗೀತಗಾರ, ಚತುರ್ಭಾಷಾ ಪ್ರವೀಣಾನಾಗುವ. ಮುತ್ತಾಲಯ್ಯ ಕುಡಿದಾಗಲೆ ಹೆಚ್ಚು ಪ್ರಮಾಣಿಕ. ಮಾತಿನಲ್ಲಿನ ಉನ್ಮಾದವತೆ ಆಹೆಂಡವೋ, ಸಾರಾಯಿಯೋ ಗುಟುಕರಿಸಿದರೆ ಸಾಕು ಅದೇನು ಪವಾಡ?. ಅದೇನು ಅದ್ಭುತ! ವಿಶ್ವದರ್ಶನ? ಅದೇನು ಸುಖ! ಇದರ ಪೈಪೋಟಿಗೆ ಮುತ್ತಾಲಯ್ಯನ ಪತ್ನಿ ಬುಡ್ಡಿಯೇನು ಕಡಿಮೆಯಿಲ್ಲ. ನಗರಬದುಕಿನಲ್ಲಿ ಕಿತ್ತು ತಿನ್ನುವ ಬಡತನ, ಹಸಿವು, ಮಕ್ಕಳ ನೋವು, ಕೌಟುಂಬಿಕ ವ್ಯವಸ್ಥೆ, ಸಂಸಾರಿಕ ಚೌಕಟ್ಟುಗಳ ನಡುವೆ ಹೆಂಡದ ದಾಸ್ಯತನಗಳು. ಇಲ್ಲಿ ಸೂಕ್ಷ್ಮ ಸಂವೇದನಾ ನೆಲೆಯಲ್ಲೇ ನಿರೂಪಣೆಗೊಳ್ಳುತ್ತವೆ. ಕಛೇರಿ ಅಧಿಕಾರಿ ದೀವಾಕರ್ ಇನ್ಸ್‌ಪೆಕ್ಟರ್ ಎರಡು ತಿಂಗಳ ಸಂಬಳದ ಬಿಲ್ಲಮಾಡದೆ ಎಲ್ಲಾ ಕೆಲಸ ಮಾಡಿಸಿ ಸರ್ಕಾರಿ ಶೌಚಾಲಯದ ಪೇನ್ಯಾಲ್ ಅನ್ನು ಉಳಿಸಿ ತನ್ನ ಮನೆಗೆ ಬಳಸುವ, ಮುತ್ತಾಲಯ್ಯನಿಂದ ತನ್ನ ಮನೆ ತೋಟದ ಕೆಲಸ

ಮಾಡಿಸಿಕೊಳ್ಳುವ ಕ್ರಿಯೆ ಸಮಾಜದೊಳಗಿನ ದಬ್ಬಾಳಿಕೆ, ಸ್ವಾರ್ಥ ಅಧಿಕಾರಿ ದಿವಾಕರ್ ಶೋಷಣೆಯ ಮೆಲ್ಪಂಕ್ತಿ ವ್ಯಕ್ತಿತ್ವ ಇಲ್ಲಿ ಕಟು ವಾಸ್ತವದ ಸಮಾಜದಲ್ಲಿನ ವ್ಯವಸ್ಥೆಯನ್ನ ನಿರೂಪಿಸುತ್ತಾರೆ.

ದಿವಾಕರನ ಮಗನ ಮದುವೆಯಲ್ಲಿ ತಿಂದು ಬಿಟ್ಟ ಊಟ, ಮುತ್ತಲಯ್ಯ ಹಾಗೂ ಕುಟುಂಬದ ಹಸಿವಿನ ನೋವಿಗೆ ವ್ಯುಷ್ಟನ್ನವಾಗಿ ಮಗುವನ್ನು ಬಲಿತೆಗೆದುಕೊಳ್ಳುವ ಚಿತ್ರಣ. ವೈದ್ಯರಿಗೂ ತೋರಿಸಲು ಹಣವಿಲ್ಲದೆ. ಮಗುವನ್ನು ಕಾಪಾಡಿಕೊಳ್ಳಲಾಗದೆ. ಮುಗ್ಧ ಅಸಹಾಯಕರಾಗಿ ಮಗುವನ್ನು ಕಳೆದು ಕೊಳ್ಳಬೇಕಾಗುವುದು, ಕೆಳವರ್ಗದ ದಲಿತ ಪ್ರಜ್ಞೆಯ ಮಿಡಿತಗಳು ಸಹಜವಾದ ತಂತ್ರವಾಗಿದೆ.

ಮುತ್ತಾಲಯ್ಯ ತನ್ನ ಮಗನ ಸಾವಿನ ನೋವಿಗೆ ದಿವಾಕರ ಕಾರಣ ಎಂದು ಆತನ ಮೇಲೆ ರೊಚ್ಚಿಗೆದ್ದುದ್ದರಿಂದ ದಿವಾಕರ್, "ಮುತ್ತಾಲಯ್ಯ ನಿನ್ನ ದಮ್ಮಯ್ಯ ನಿನ್ನ ಮೂರು ತಿಂಗಳ ಸಂಬಳಾ ಬಿಲ್ ಮಾಡ್ತಿನಿ ತಪ್ಪಾಯ್ತು ಬಿಡಪ್ಪ, ತಗೋ ಈ ಪೆನ್ನ್."[4] ಸೈನ್ ಹಾಕೆಂದು ಸಹಿಮಾಡಿಸಿ, ಅದನ್ನೇ ರಾಜಿನಾಮೆ ಬರೆದು ಆತನ ಮೇಲಿನ ಸೇಡು ತೀರಿಸಿಕೊಳ್ಳುತ್ತಾನೆ. ಅಧಿಕಾರ ವರ್ಗದ ಶೋಷಣೆಯ ತಂತ್ರದ ಅಮಾನವೀಯತೆ, ದಲಿತರ ಶೋಷಣೆಯ ನೋವು, ನಗರ ಬದುಕಿನ ಕಛೇರಿಯಲ್ಲಿನ ದಬ್ಬಾಳಿಕೆ ಶೋಷಣೆಯ ನಿಕೃಷ್ಟ ಮುಖಗಳನ್ನು ಅನಾವರಣ ಮಾಡಿದ್ದಾರೆ.

'ಹಣತೆಗಳವೆ ಹಚ್ಚುವವರಿಲ್ಲ' ಎಂಬ ಕಥೆಯಲ್ಲಿನ ನಗರ ಬದುಕಿನ ದಾಂಪತ್ಯದ, ಸಾಮಾಜಿಕತೆಯ ಮೌಲ್ಯವನ್ನು ಶೋಧಿಸುತ್ತದೆ. ಸಾಮಾಜಿಕ ಅನುಭವಗಳಲ್ಲಿರುವ ಮೌಲ್ಯಗಳ ಸಂಬಂಧಗಳನ್ನು, ಕಥೆಗಾರ ತನ್ನ ಅನುಭವದ ಮೂಲಕವೇ ಗುರುತಿಸುತ್ತಾರೆ. ಜಯಂತ ಅಹಲ್ಯೆ ದಂಪತಿಗಳ, ಮದುವೆಯ 6ನೇ ವಾರ್ಷಿಕೋತ್ಸವಕ್ಕೆ ಶುಭಕೋರುವ ಅವಿವಾಹಿತ ನಿರೂಪಕ. ಜಯಂತ ಓದುವ ದಿನಗಳಲ್ಲಿ ಸರಳ ವಿವಾಹದ ಪರವಾಗಿ ಮೇಜು ಕುಟ್ಟಿ ಮಾತನಾಡಿ ಬಹುಮಾನಗಿಟ್ಟಿಸಿದವನು. ಅದ್ದೂರಿಯಾಗಿ ಸಪ್ತಪದಿ ತುಳಿದು ಮದುವೆಯಾದ. ಎಂಬಲ್ಲಿನ ಬಹುತೇಕರು ನುಡಿದಂತೆ ನಡೆದುಕೊಳ್ಳಲು ಅಸಾಧ್ಯವಾಗುವ ಕಾಲ. ವ್ಯಕ್ತಿಯ ಸಂದರ್ಭವನ್ನು ಉದಾರಿಸುವ ವ್ಯಕ್ತಿತ್ವಕ್ಕೆ, ಸಾಮಾಜಿಕ ಆದರ್ಶಗಳೆಂಬ ಬಣ್ಣ ಮಾಸಿದ ಗುಣಗಳನ್ನು ನಿರೂಪಿಸುತ್ತಾರೆ.

ನಗರ ಬದುಕಿನ ಕೌಟುಂಬಿಕ ಹಾಗೂ ಶ್ರೀಮಂತಿಕೆಯ ದಂಪತಿಗಳಿಗೆ ಆಡಂಬರ ಒಂದೆಡೆಯಾದರೆ, ಅದೇ ಶ್ರೀಮಂತಿಕೆಯನ್ನ ಉಳಿಸಿ ಕಾಪಾಡಿಕೊಂಡು ಬರುವ ಯತ್ನ. ಸಫಲ ಪ್ರಯತ್ನಗಳಿಗಾಗಿ ಲೊಭದ ದಾರಿ ತುಳಿದು ಲಂಚ ಭ್ರಷ್ಟತೆಯಲ್ಲಿ ಮುಳಗಬೇಕಾದ ಅನಿವಾರ್ಯತೆಯನ್ನು ಅಹಲ್ಯೆ ವ್ಯಕ್ತಪಡಿಸುತ್ತಾಳೆ. ಅದರಿಂದ ದೂರ ಉಳಿದ ಜಯಂತನ ತರ್ಕ ತತ್ವಗಳೇ ಭಿನ್ನ. ಇವರಿಂದ ದಾಂಪತ್ಯ ಬದುಕಿನ ವಿರಹಗಳ ನಡುವೆ, ಕಥೆಗಾರರ ಮನೋವಿಜ್ಞಾನಿಕ ಪ್ರಯತ್ನದಲ್ಲೆ, ಅಗಲಿಕೆಯಾಗಿ ನಂತರ ಒಬ್ಬರನೊಬ್ಬರ ಪ್ರೀತಿಯ ಮಹತ್ವ ತಿಳಿಯುತ್ತದೆ ಎಂದರೆ,

ಈಗಾಗಲೇ ಒಂದು ತಿಂಗಳ ನಂತರ ಅಗಲಿ ಬಂದುದ್ದಾಗಿದೆ. ಒಟ್ಟಾರೆ ಹೆಂಡತಿಯ ಶ್ರೀಮಂತಿಕೆಯಲ್ಲಿ ತಾವು ಮತ್ತಷ್ಟು ಸಿರಿವಂತರಾಗಬೇಕು, ಹೇಗೊ ಸಂಪಾದಿಸಿ ಕಾರು ಕೊಂಡರೆ ನನಗೆ ಸಂತೋಷವೆನ್ನುವ ಅಹಲ್ಯೆ. ಶ್ರೀಮಂತಿಕೆ ಸಮಾಜದಲ್ಲಿ ನಾವು ಎಲ್ಲರಂತೆ ಎಂಬ ಧೋರಣೆಯ ಸಾಮಾಜಿಕ ಹಂಬಲ, ಇರುವುದೆಲ್ಲವನ್ನ ಬಿಟ್ಟು ಇಲ್ಲದಿದ್ದರ ಕಡೆಗೆ ಹೊರಳುವ ಮನಸ್ಸಿನ ಹಂಬಲದ ಬದುಕಿನ ಶೋಧಕ್ರಿಯೆಯಾಗಿದೆ. ಬಿರುಕು ಮನಸ್ಸಿನ ಆಳದಲ್ಲಿರುವ ಸಾಮಾಜಿಕ ಸಂಪ್ರದಾಯಿಕ ಮದುವೆಗಳು ಮುರಿದು ಬೀಳುತ್ತವೆ ಎನ್ನುವುದಾದರೆ, ಲವ್ ಮ್ಯಾರೇಜ್‌ಗಳಲ್ಲಿ ಅಪಾಯವಿಲ್ಲವೇ? ಇದೆ. ಕಥೆಗಾರರೇ ಹೇಳುವಂತೆ "ಸಹನೆ ಪ್ರೀತಿಗಳಿಂದ ಮಾತ್ರ ಗೆಲ್ಲೋಕೆ ಸಾಧ್ಯ. ಒಳ್ಳೆಯ ಗೆಳೆಯರಲ್ಲದ ದಂಪತಿಗಳು ವ್ಯಭಿಚಾರಿಗಳು". ಎಂಬಲ್ಲಿನ ಕಥೆಗಾರರ ನೈತಿಕ ಸಂದೇಶ ನಗರ ಬದುಕಿನ ತಾಕಲಾಟದ ಶೊಕಿಲಾಲದಾಂಪತ್ಯ ಭಾವಕ್ಕೆ ಉತ್ತರವಾಗಿದೆ.

'ಮನೆಗೆ ಬಂದ ಮಹಾಲಕ್ಷ್ಮಿ' ಮನುಷ್ಯ ವೈವಾಹಿಕ ಬದುಕಿನ ಸುಖಕ್ಕಿಂತ ವೇಶ್ಯೆಯರ ನವೀನ ಸುಖದ ಕಾತುರತೆಯಲ್ಲಿ ಸಿಲುಕಿ ಜಾಗೃತನಾಗುವ ಮನೋವಿಜ್ಞಾನದ ಸಂವೇದನೆಯಾಗಿದೆ. ವೈವಾಹಿಕ ಸುಖ ನೀಡುವ ಸತಿಯ ಗೊರಕೆ ಅವಳ ದಪ್ಪ, ನಾಜೊಕಿಲ್ಲದ ಅವಳ ಉಡುಗೆ, ಕುಂಕುಮಗಳಿಂದ ಬೇರೊಂದು ಹೆಣ್ಣಿನ ಸುಖವನ್ನು ಕುತೂಹಲದಿಂದಲ್ಲೆ ಹಂಬಲಿಸುವ ರಸಿಕ ಗಂಡನ ಅವಾಂತರಗಳು ಇಲ್ಲಿ ವ್ಯಕ್ತವಾಗಿದೆ. ಇರುವ ಬಾವನಾತ್ಮಕ ದಾಂಪತ್ಯದ ಸುಖದ ಮಗುಲಲ್ಲೆ, ಇನ್ನಷ್ಟು ಪ್ರೇಮ ವಾಂಚೆಯನ್ನು ಅಂಬಲಿಸುವ ಮಾನವನ ಸಹಜತೆಗಳಾಗಿವೆ. ಆಸೆ ಕಾಮನೆಗಳು ಇಲ್ಲಿನ ದಾಂಪತ್ಯ ಬಿರುಕಿನ ನಿರ್ಲಿಪ್ತತೆಯ ಜಿಜ್ಞಾಸೆ ವ್ಯಕ್ತವಾಗಿದೆ. ತೌರಮನೆಗೆ ಹೊರಟ ಹೆಂಡತಿಯ ಹಿಂದೆ ಆತನ ಆಸೆಗಳು ಗರಿಗೆದರಿ ಮನೆಗೆ ವೇಶ್ಯೆಯೊಬ್ಬಳನ್ನು ಕರೆತರುತ್ತಾನೆ. ಬಹಳ ದಿನಗಳ ಆಸೆಯಂತೆ ಪ್ರೇಮದಾಟವಾಡಲು ಪತ್ನಿಯಂತೆಯೆ, ಪಾರ್ಕ್ ಹೋಟೆಲ್‌ಗಳನ್ನು ಸುತ್ತಿ ಮನೆಗೆ ಕರೆತರುವಲ್ಲಿನ ಸಾಮಾಜಿಕ ಲಜ್ಜೆ ಗೌರವ ಗಂಭೀರದ ಆತ್ಮಪ್ರಜ್ಞೆಗಳು ಮೌಲಿಕವಾದರೂ, ಕಾಮನೆಗಳಲ್ಲಿ ಅವುಗಳು ಮರೆಯಾಗುತ್ತದೆ. ಆದರೆ ವೇಶ್ಯೆ ಹೆಂಡತಿಯ ಸೀರೆಯುಟ್ಟು, ಅವಳದೇ ರೀತಿಯಲ್ಲಿ ಅಲಂಕಾರ ಮಾಡಿ ಕೊಂಡದ್ದು ಆತನ ಭ್ರಮೆ ನಿರಶನವಾಗುವ ಆತ, ಅತಂಕದಿಂದಲೇ ಅವಳನ್ನು ಕಳುಹಿಸಿ ಬಿಡುತ್ತಾನೆ. ಇಲ್ಲಿ ಎಲ್ಲಾ ಗೃಹಿಣಿ, ಮಹಿಳೆಯರು ಒಂದೇ ಎಂಬ ತಾತ್ವಿಕ ಅರ್ಥ ವ್ಯಕ್ತವಾದರೂ. ತಾನೊಬ್ಬ ಗೃಹಿಣಿಯಾಗುವ ವಿವಾಹಿತಳಾಗುವ ಹಂಬಲ, ವಿವಾಹಿತನ ವೇಶ್ಯೆಯ ಪ್ರೇಮವಾಂಚೆ ಮುಖಾಮುಖಿಯಾಗುತ್ತದೆ. ಬೀದಿಯಲ್ಲಿ, ಹೋಟೇಲ್‌ಗಳಲ್ಲಿ, ಕಾಮದಾಟವಾಡುವ ವೇಶ್ಯೆಗೆ ತಾನೊಬ್ಬ ಗೃಹಿಣಿಯಾಗಿ ಬದುಕುವ ಹಂಬಲ ಒಂದೆಡೆಯಾದರೆ ದಾಂಪತ್ಯ ಬದುಕಿನ ಪುರುಷ ಬೇರೊಂದು ಸ್ತ್ರೀಯೊಡನೆಯ ಸರಸ ಸಲ್ಲಾಪಾದ ಕಾಮವಾಚೆಯ ಸಂಕೀರ್ಣತೆಯನ್ನು ಕಥೆಯಲ್ಲಿ ನಿರೂಪಿಸುತ್ತಾರೆ. ಕಥೆಗಾರರು ಮಾನವನು ತನಗಿಲ್ಲದ ಬದುಕಿನ ಶೋಧನೆಯ ವ್ಯಕ್ತತೆಯಾಗಿದೆ.

'ಮೇ 3' ಕಥೆಯೊಳಗಿನ ಸಾಮಾಜಿಕ ನೈರ್ಮಲ್ಯದ ತಾತ್ವಿಕ ಧೋರಣೆಯ ನೆಲೆಯಲ್ಲಿನ ಮುಖ್ಯಕಥೆಯಾಗಿದೆ. ನಮ್ಮ ವ್ಯವಸ್ಥೆಯೊಳಗಿನ ಇಂದಿನ ಸ್ವಾಸ್ಥತೆಯನ್ನು ಮತ್ತು ಹಂಬಲಗಳನ್ನು ಹಾಸ್ಯಲೇಪನವಾಗಿ ಕಥೆಯಾಗಿಸಿದ್ದಾರೆ. ಹಾಲಿನ ಡೈರಿಯ 4 ಸಾವಿರ ಲೀಟರ್ ಹಾಲಿನೊಳಗೆ ಕಜ್ಜಿನಾಯಿ ಬಿದ್ದರು, ಅದನ್ನು ಎಳದಾಕಿ ಇಡೀ ನಗರಕ್ಕೆ ಅದೇ ಹಾಲು ಸರಬರಾಜಾಗುತ್ತವೆ. ಅದಕ್ಕಾಗಿ ಅಂಬಲಿಸಿ ಕಾದು ತಡವರಿಸಿ ಕುಡಿವ, ಯಜ್ಞ್ಯಾಯಾಗಾದಿಗಳಿಗೆ ಬಳಸಿ ತೃಪ್ತರಾಗುವ ಶಂಕರಭಟ್ಟರು, ಸ್ಲಂ ನ ತಾಯಿ ಮಗು. ಹಸ್ತಿನಾಪತಿಯ ಆಸ್ಪತ್ರೆಯ ರೋಗಿಗಳು. ಶಾಸಕ ಸೈಂದವರ ಪುತ್ರ ಘಟೋದ್ಗಜನ ಮದುವೆಯ ಬೀಗರು. ಲೇಡಿಸ್ ಹಾಸ್ಟೇಲ್‌ನ ದಾಕ್ಷಾಯಿಣಿ ದೇವಿ, ಕೀರು ಕುಡಿದು ಖುಷಿಪಟ್ಟ ಹುಡುಗಿಯರು, ಕಜ್ಜಿ ನಾಯಿ ಈಜು ಹೊಡೆದ ಹಾಲ ಕುಡಿದದ್ದು ಮೇ 3 ಸಂಜೆ ಐದರಲ್ಲಿ. ಇದನ್ನ ಎಳೆದು ಹಾಕಿದ ವಿದುರ ಕೀಚಕರೆಂಬ ಕಾರ್ಮಿಕರು ಸಹ ಇದೇ ಹಾಲನ್ನು ಈ ಮೊದಲು ತಿಳಿಯದೆ. ಅನೇಕ ಬಾರಿ ಕುಡಿದಿದ್ದನ್ನ ನೆನಪಿಸುತ್ತಾರೆ. ಇಂತಹ ಘಟನೆಗಳು ನಡೆಯುವ ವ್ಯವಸ್ಥೆಯೊಳಗೆ ಪ್ರಸ್ತುತ ವಾಸ್ತವಿಕ ಚಾರಿತ್ರಿಕ ಘಟನೆಯನ್ನು ನಾವುಗಳೆಲ್ಲ ತಿಳಿಯಬೇ ಅನುಭವಿಸುವ, ಡೈರಿ ಹಾಲಿನಂತಹ ಎಷ್ಟೆಲ್ಲಾ ಅನುಭವವನ್ನು, ವಾಸ್ತವತೆಯನ್ನು, ಹಾಸ್ಯ ದಾಟಿಯ ತಂತ್ರದಲ್ಲಿ ನಿರೂಪಿಸುತ್ತಾರೆ. ಸಾಮಾಜಿಕ ವ್ಯವಸ್ಥೆಯೊಳಗೆ ಅದೇಷ್ಟೊ ಸಂದರ್ಬಗಳನ್ನು ನೆನಪು ಮಾಡಿಕೊಡುತ್ತದೆ. ಇದು ನಗರ ಬದುಕಿನ ಅಪಾಂತರಗಳ ನೈಜ ಕಟ್ಟು ವಾಸ್ತವತೆಯನ್ನಿಡುತ್ತವೆ.

'ನಡುರಾತ್ರಿಯಲ್ಲಿ ಶಿಕ್ಕವರು' ಕಥೆಯೊಳಗೆ ನಗರ ಬದುಕಿನ ವರ್ಗ ಸಮಸ್ಯೆಯನ್ನು ಸಂವೇದನೆಗೊಳಿಸಿದ್ದಾರೆ. ಬದುಕಿನ ಅನ್ವೇಷಣೆಯನ್ನು ಕಥಾ ಆಶಯವಾಗಿ ಉತ್ತಮ ವರ್ಗದ ಅಧಿಕಾರಿಗಳ ಸಮಸ್ಯೆ ಒಂದೆಡೆಯಾಗಿ ಕಂದಾಯ, ತೆರಿಗೆ, ಸಾರಿಗೆ, ಕಪ್ಪು ಹಣ, ತೋಟ, ವಿದೇಶಿಕಾರು, ಸೀಳು ನಾಯಿ, ಶೇರು ಹಣ, ಅಮೇರಿಕಾದಲ್ಲಿ ಓದುವ ಮಗ ಹೀಗೆ ಇವರ ಸಮಸ್ಯೆಯಾದರೆ. ಮಧ್ಯಮವರ್ಗ ಹಿಂದೆ ಬಾರದೆ ಮುಂದೆ ಏರದೆ. ಬದುಕುವ ಬೆಲೆ ಏರಿಕೆ, ಲಂಚದ ಕಂತಿನಲ್ಲಿ ಫ್ರಿಜ್, ಟಿವಿ ಕೊಂಡು ಬಜೆಟ್‌ನ ಹಿಂದಿನ ದಿನ ಪೆಟ್ರೋಲ್ ತುಂಬಿ ಸುಖಿಸಿ, ಮಗ ಪಡೆದ ರ್‍ಯಾಂಕನ್ನು ಧಾರ್ಮಿಕವಾಗಿ ಆಚರಣೆ ಮಾಡುವ ಬದುಕು ಒಂದೆಡೆಯಾದರೆ. ಕೆಳವರ್ಗ ತಗ್ಗಿನಲ್ಲಿ ಹರಿವ ನೀರಿನ ಜಾಗದಲ್ಲಿ ಪೈಪಿನ ಒಳಗೆ ಹಸಿವು ಹಾಗೂ ನೋವಿನಲ್ಲಿ ಬದುಕಿ ಟಿವಿತಂದು ಜೋಪಾಡಿಗೆ ನೇತುಹಾಕಿ ಸುಖಿಸುವ, ಕೂಲಿಗಾಗಿ ಕಾದಡುವ, ತಾವಿರುವ ಜಾಗಕ್ಕಾಗಿ ಪೊಟೋ ಇಟ್ಟುಕೊಂಡು ತನ್ನದಾಗಿಸುವ, ಬದುಕಿನ ವಿವಿಧ ವರ್ಗದ ಮಜಲುಗಳನ್ನು ಚಿತ್ರಿಸುತ್ತಾರೆ. ವಾಸ್ತವಿಕ ಅತಂತ್ರತೆಯೊಳಗ ಶ್ರೀಮಂತ 'ಆಂಡ್ರೊಸ್' ಹಾಗೂ 'ಪ್ಯಾಟ್ರಿಕ್'ರಂತೆ ಅಭಿನಯಿಸಲು ಸೋತ. ಅಂದಾನಪ್ಪ ಹಾಗೂ ಪುಟ್ಟಾಚಾರಿಯ ಬದುಕಿನ ವಿವಿಧ ಮಜಲುಗಳ ಸೋಜಿಗ ಔಚಿತ್ಯಗಳಾಗಿ ನಿರೂಪಿತವಾಗಿದೆ.

ಶ್ರೀಮಂತರ ನಡೆನುಡಿಗಳನ್ನು ಅವರಲ್ಲಿನ ಕೆಲಸಗಾರರಾಗಿ ನೋಡಿ ಅನುಕರಿಸಿದರು. ಅವರಂತೆ ಬಾಳಲು ಸೋತು ವಿಡಂಬನೆ ಹಾಗೂ ಮುಜುಗರಕ್ಕೆ ಒಳಗಾಗುತ್ತಾರೆ. ಅವರ ಹಂಬಲಗಳಲ್ಲಿ ತನ್ನದೆನ್ನು ಯಜಮಾನನ ಕಾರಿಗೆ ಪೆಟ್ರೋಲ್ ಇಲ್ಲದೆ ಪೆಟ್ರೋಲ್ ತುಂಬಿಸಲು ಹಣವಿಲ್ಲದೆ ನಡೆದು ಸೋತು. ಸತ್ಯವೇಳುವ ಇಬ್ಬರ ಸಾಖ್ಯದ ಅಪೇಕ್ಷೆಗಳು ಈ ಕಥೆಯಲ್ಲಿನ ತಂತ್ರಕ್ಕೆ ಒಂದು ಉದಾಹಾರಣೆಯಾಗಿದೆ.

ಕಥೆಗಾರರೇ ಹೇಳುವಂತೆ ಇರುವುದೆಲ್ಲವನ್ನು ಬಿಟ್ಟು ಇಲ್ಲದಿದ್ದರ ಕಡೆಗೆ, ಮಾನವ ಬದುಕು ಸಹಜವಾಗಿ ತುಳಿವ ಒಳಮನಸ್ಸಿನ ಅತಂತ್ರತೆಗಳನ್ನು ನೈಜವಾಗಿ ಬಾವತೀವ್ರತೆಯಲಿ ಚಿತ್ರಿಸುತ್ತಾರೆ. ಅಲ್ಲಿನ ಸಾಮಾಜಿಕ ವಿಡಂಬನೆಯ ವ್ಯಕ್ತಿತ್ವದ ಡೋಲಾಯಮಾನತೆಯನ್ನು ಅನಾವರಣಗೊಳಿಸುತ್ತಾರೆ.

'ಲಹರಿ ಲಹರಿ ಲಹರಿ' ಇದೊಂದು ವಿನೋದ ಪೂರ್ಣ ಶೈಲಿಯ ಪ್ರಯೋಗಶೀಲತೆಯ ಕಥೆಯಾಗಿದೆ. ಕಥೆಯ ವಸ್ತು ಬಹುಮುಖಿಯಾಗಿ ಸೃಜನಾತ್ಮಕ ಪ್ರಕ್ರಿಯೇಯ, ಹೊಸ ತಂತ್ರವಾಗಿ ತಾತ್ವಿಕ ಚಿಂತನೆಯ ವಿನೋದವನ್ನು ನೀಡುತ್ತಾರೆ.

ಕಥೆಯ ಆರಂಭದಲ್ಲಿ ಸಂಗಾತಿಯೊಡನೆಯ ಸಾಂಗತ್ಯ ದಾಂಪತ್ಯದ ಬದುಕಿನ ಎಲ್ಲಾ ಸುಖ ಸಮಸ್ಯೆಗಳನ್ನು ನವಿರಾಗಿ ನಿರೂಪಿಸುತ್ತಾರೆ. ಇಲ್ಲಿ ಸಂಗಾತಿ ಇವರ ನೆಚ್ಚಿನ ಪ್ರಿಯಾ ಸ್ಕೂಟರ್ ಎಂದೊಡನೆಯೆ ಪ್ರೇಮದ ಸರಸ ಸಲ್ಲಾಪಗಳ ವಿನೋದ ಮರು ಓದಿಗೆ ಓದುಗನನ್ನು ಕರೆದೊಯ್ಯುವ ಉತ್ಕಟತೆ. ಇವರ ಬಾವತೀವ್ರತೆಗೆ ಉದಾಹಾರಣೆಯಾಗಿದೆ. ಯಂತ್ರಕ್ಕೊಂದು ಜೀವ ತುಂಬಿ ಪ್ರೀತಿಸುವ ಪ್ರೇಮಿಯಾಗುವ ಕಥೆಗಾರರು, ಸಿ.ಎ ಎಕ್ಸ್ ತೊಂಭತ್ತೇಳು ಅರವತ್ತು ಎಂಬ ಬಜಾಜ್ ಕಂಪನಿಯ ಮೂರುಗೇರಿನ ಪ್ರೀಯಾ ಸ್ಕೂಟರ್ ಕಥಾನಾಯಕಿ. ನಾಯಕ ಕಥೆಗಾರರೇ ಈ ಸ್ಕೂಟರ್‌ನೊಡನೆಯೆ ಜೀವಂತ ಹೆಣ್ಣಿನ ಸ್ವರೂಪದ ಬಾವನಾತ್ಮಕ ಸಂಬಂಧ. ಖಾಯಿಲೆ ಬಿದ್ದಾಗ ಇದರ ಆರೈಕೆ, ಚಿಕಿತ್ಸಾಲಯವಾಗಿ ಕಾಣುವ ನವಾಬ್ ಗ್ಯಾರೆಜ್, ತನ್ನ ತೊಡೆಗಳ ಸಂದಿಯಲ್ಲಿ ಸಿಕ್ಕಿಸಿಕೊಂಡು ಓಡಾಡುವಾಗ ಅವಳು ನಲ್ಲೆ. ಹೀಗೆ ರಮಿಸುವ, ಕೋಪಿಸುವ, ಮುನಿಸಿಕೊಳ್ಳುವ ಸಂಗಾತಿಯಾಗಿ ಹೆಂಡತಿಗೆ ಸ್ನಾನಮಾಡಿಸುವ ರೊಮಾಂಚನವನ್ನು ಕಂಡವರು. ನನ್ನ ಪ್ರಿಯಾಳಿಗೆ ಬೇರೊಬ್ಬ ಸಂಗಾತಿ ನೋಡಲು ಕೂಡಲು ಇಷ್ಟವಾದರೆ ಬೇಡವೆನ್ನಲ್ಲು ನಾನು ಯಾರು.? ಸೀತೆಯನ್ನು ಗಡೀಪಾರು ಮಾಡಿ, ದ್ರೌಪದಿಯ ಮೆಲ್ಪಂಕ್ತಿ ಹಾಕಿರೆಂಬುದೇ. ಸ್ತ್ರೀ ಸಮೂಹಕ್ಕೆ ನನ್ನ ಜೀವನ ಸಂದೇಶವಾಗಿರುವಾಗ? ಎಂದೇಳುವ ಕಥೆಗಾರರು ಸ್ತ್ರೀಗೆ ಸ್ವಾತಂತ್ರ್ಯವನ್ನು ನೀಡುವ ಮುಕ್ತ, ಸ್ತ್ರೀ ಸಂವೇದನೆಯನ್ನು ವ್ಯಕ್ತಪಡಿಸುತ್ತಾರೆ. 'ಸಾವು' ಎಂಬ ಪದವನ್ನು ಸ್ಕೂಟರನ ಹಿಂಬದಿಯಲ್ಲಿ ಬರೆಸಿ. ತಾತ್ವಿಕ ಚಿಂತನೆಯ ಸಾವು ಕಾಮಗಳ ಪರ್ಯಾಯ ಪದವಾಗಿ ಚಿಂತನೆಗೆ ಎಡೆಮಾಡಿ ಕೊಡುತ್ತಾರೆ.

ಕೊನೆಗೆ ಸ್ಕೂಟರ್‌ಗೂ ತಮಗೂ ಅಪಘಾತವಾದ ಸಂದರ್ಭದಲ್ಲಿ ನೈಜವಾದ ವಿವರಗಳೊಡನೆ, ಜೀವಂತ ಪ್ರೇಮಿಯಂತೆ ಸಂತೈಸುತ್ತಾರೆ. ಕಥನ ತಂತ್ರ, ಚಿಂತನೆಯ ಬೌದ್ಧಿಕ ಕ್ರಿಯೆಗೆ ಹೊಸ ಅಯಾಮುವನ್ನು ಸಾಹಿತ್ಯದ ಹೊಸ ಹೊಸ ಬೆಳವಣಿಗೆಯನ್ನು ಕಾಣಬಹುದಾಗಿದೆ.

'ಕನಸು ಹುಟ್ಟಿತು ಕೇಳಾ' ತನನ್ನು ತಾನೆ ಶೋಧಿಸುವ ಅದರೊಳಗಿನ ಅಂತರ್ಯವನ್ನು ಅನುಭವಿಸುವ ಕಥನ. ತನ್ನದೇ ಬದುಕಿನ ದಿನಚರಿಯಂತೆ ತನ್ನ ಮಗಳು 'ಕನಸು' ಕನಸನ್ನು ಹೊತ್ತು ಬಂದ ಸನ್ನಿವೇಶ ಕಥೆಯ ವಸ್ತು. ಮನುಷ್ಯನ ಆದರ್ಶ ತರ್ಕಗಳಿಗಿಂತಲೂ ಹೊಸ ತಪ್ಪುಗಳನ್ನು ಮಾಡುತ್ತಾ ಸಾಗುವ, ಶ್ರೀಸಾಮಾನ್ಯನ ಜೀವನ ಕ್ರಮವೇ ನನಗೆ ಚೆಂದ, ಎನ್ನುವ ಕಥೆಗಾರರ ಸಹಜತೆ ತತ್ವ ಸಿರಾಕರಣೆಯಾಗಿದೆ. ಸದಾ ಭಾವುಕರಾಗುವ ಕನಸುಕಾಣುವ ಕಥೆಗಾರರು, ನಿರ್ಭಾವುಕರಾಗಿ ವಾಸ್ತವತೆಯಲ್ಲಿರುವ ಮಡದಿ ಮುಖಾಮುಖಿಯಾಗುತ್ತಾರೆ. ಮಧ್ಯಮ ವರ್ಗದ ಎಲ್ಲಾ ಸುಖ ಸಂಕಟಗಳನ್ನು ವಿವರಿಸಿ ತಾನಗೊಂದು ಮಗು ಬೇಕೆಂಬ ನಿರೂಪಕರ ಹಂಬಲ ಸಾಮಾಜಿಕ ಬದುಕಿನಲ್ಲಿ ಹೆಣ್ಣು ತಾಯ್ತನದ ಸಂದರ್ಭದಲ್ಲಿ ಅನುಭವಿಸುವ ಯಾತನೆಗಳಿಗಿಂತ ಸಾರ್ವಜನಿಕ ಸಮಸ್ಯೆಗಳು ನಗರ ಬದುಕಿನ ವಾಸ್ತವತೆಯನ್ನು ನಿರೂಪಿಸುತ್ತಾರೆ.

ಪ್ರೀತಿ ಕ್ರಿಯಾತ್ಮಕವಾಗಿರದೆ ದಾಂಪತ್ಯ ದೇಹ ಸ್ಪಂದನ ನೀಗಲು ಕೂಡಿದ ಜಾನುವಾರುಗಳ ಕೂಟವಾಗಿ ವ್ಯಕ್ತವಾಗುವ ಧ್ವನಿ, ತಾತ್ವಿಕ ಚಿಂತನೆಯ ಆಲೋಚನೆ, ಹೊಸ ಜನಾಂಗದಲ್ಲಿನ ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. "ಗಂಡು ಹಡೆಯಲಾರ ಅವನಿಗೆ ಅದೊಂದು ಶಾಪ."[5] "ಹಡೆಯಲೇಬೇಕಾದ ಹೆಣ್ಣು ಅದೋಂದು ಘೋರ ಶಾಪ"[6] ಇಂಥದೊಂದ ಮಹತ್ವದ ಜಿಜ್ಞಾಸೆಯನ್ನು ಓದುಗನಲಿಟ್ಟ ತಾತ್ವಿಕ ಸ್ವರೂಪಗಳೆ ವಿಸ್ಮಯ. ನಿಸರ್ಗದಲ್ಲಿ ಹೆಣ್ಣು ತಾಯ್ತನಕ್ಕೆ ಹಾತೊರೆಯುವ ತವಕಿಸುವ ಹಂಬಲದ ಸೃಷ್ಟಿಯು ನಿಯಮವಾದರೆ. ಮದುವೆ ಆದ ವರ್ಷದೊಳಗೆ ಒಂದು ಮಗು ಹುಟ್ಟಿಸಿ ಗಂಡಸುತನ ಸಾಬೀತು ಮಾಡುವ ಹಠ.

ಮತ್ತೇ ಮತ್ತೇ ಕಥೆಗಾರರ ಮಗುವಿನ ಹಂಬಲದೊಳಗೆ ವ್ಯಕ್ತಪಡಿಸುತ್ತಾರೆ. "ಸ್ಟ್ರಿಂಡ್ ಬರ್ಗ್‌ನ ನಾಟಕ ನೆನಪಾಯಿತು. ಓ ಗಂಡಸೇ...... ನಿನೊಂದು ಮಿತ್ ಹೆಣ್ಣು ಮಾತ್ರ ಟ್ರುತ್ ಏಕೆಂದರೆ ಅವಳು ಹಡೆಯುತ್ತಾಳೆ. ಹಡೆಯುವುದರ ಮೂಲಕ ಅವಳು ಅಮರಳಾಗುತ್ತಾಳೆ. ಆದರೆ ನೀನು (ಗಂಡು) ಹಡೆಯಲಾರೆ. ನಿನಗೆ ಅಸ್ತಿತ್ವವಿಲ್ಲ ನೀನು ನಶ್ವರ"[7] ಎಂಬಲ್ಲಿನ ತಾಯ್ತನದ ಸ್ತ್ರೀ ಸಂವೇದನೆಗಳು ಗರಿಗೆದರಿ ಪ್ರಕೃತಿಕ ಚಿಂತನೆಗಳ ಸೈದಾಂತಿಕ ನಿಲುವುಗಳನ್ನು ಅನಾವರಣಗೊಳಿಸುತ್ತಾರೆ.

"ಹೆಣ್ಣು ಮಗುವಿನ ಹಂಬಲಗಳಲ್ಲಿ ಕಥೆಗಾರರು ಹೆಣ್ಣನ್ನು ಸೂಕ್ಷ್ಮಮತಿಯಾಗಿ ಪ್ರೀತಿಯ ಸಂಕೇತವಾಗಿ, ಕಾವ್ಯವಾಗಿ ತಂದು. ಗಂಡು ಗದ್ಯ, ಒರಟು, ಲಂಬ, ದೀರ್ಘ, ಕ್ಲಿಷ್ಟ ಆದರೆ ಪದ್ಯ ಹಾಗಲ್ಲ ನಮ್ಮ ಗಂಟಲಿಗೆ ಹರಿದು ಹಾಡಾಗುತ್ತದೆ."[8] ಇದರ ವಿರುದ್ಧವಾಗಿ ಮಡದಿಯ ಗಂಡುಮಗುವಿನ ಹಂಬಲವೆಂದರೆ, "ವರ್ಣನೆಗಳ ಬಲಿಪಶುವಾಗಿ ನೂರೆಂಟು ಅವತಾರಗಳನ್ನೆತ್ತುವ ಹೆಣ್ಣು ಜನ್ಮವನ್ನು ಬೇಡವೆಂದು. ಹೆಣ್ಣಿನ ಬಗ್ಗೆ ಗಂಡು ನೀಡುವ ಮೆಚ್ಚುಗೆ ಆರಾಧನೆ, ಭಕ್ತಿ ಎಲ್ಲವು ವಂಚನೆಯ ಜಾಲ, ಲೋಕದ ಗಂಡಸರಲ್ಲಿ ಶೇಕಡ 10ರಷ್ಟು ಜನ ಗಂಡಸರೂ ಕೂಡಾ, ಹೆಣ್ಣನ್ನು ತನ್ನ ಸಮಾನಾದ ಜೀವ ಎಂದು ಪರಿಭಾವಿಸುವುದಿಲ್ಲ". "ನೀನು ಎಲ್ಲಾವನ್ನು ಮಹಿಳಾ ವಿಮೋಚನೆಯ ಅರ್ಥದಲ್ಲೇ ಕಂಡರೆ ಹೇಗೆ"? "ಸಮಾನತೆ ಇಲ್ಲದ ಪ್ರೀತಿಗೆ ಯಾವ ಬೆಲೆಯು ಇಲ್ಲ." ಸ್ತ್ರೀಯ ಸಮಾನತೆ ನಿಲುವು ಇವರ ತಾತ್ವಿಕ ಬದುಕಿನ ನೆಲೆಯನ್ನು ಪೊಳ್ಳು ಆದರ್ಶಗಳಿಂದ ಬಾಳ್ವೆಯ ನೈಜ ಸ್ವೀಕಾರ ಸಾಮಾನತೆಯಲ್ಲಿ ಮಾತ್ರ ಸಾಕ್ಷಾತ್ಕಾರಗೊಳಿಸುತ್ತದೆ. ತನ್ನದೆ ಬದುಕಿನ ಅನಾವರಣವನ್ನು ವ್ಯಕ್ತಪಡಿಸಿದ್ದಾರೆ. ಕೊನೆ ಕನಸು ಮುದ್ದಾದ ಹೆಣ್ಣು ಮಗು ತವಕ ಆತಂಕ ಬಾದೆಗಳಲ್ಲಿ ಮಡದಿಗಿಂತ ಕಥೆಗಾರರ ಹೆರಿಗೆ ನೋವನ್ನು ಕನಸಿನಲ್ಲೇ ಅನುಭವಿಸುತ್ತಾರೆ. ಇಲ್ಲಿನ ಭಾವತೀವ್ರತೆಯ ಮಧ್ಯೆ, ಮನೋವಿಜ್ಞಾನದ ಸೂಕ್ಷ್ಮ ಕ್ರೀಯೆ, ಎಳೆಯಾಗಿ ತೊರೆಯಾಗಿ ಹರಿಯುತ್ತದೆ. ಆಸ್ಪತ್ರೆಯಲ್ಲಿನ ವ್ಯವಸ್ಥೆಯ ವಾಸ್ತವತೆಯನ್ನು ನಿರೂಪಿಸುತ್ತಾರೆ.

ಅಂತಿಮವಾಗಿ ಮಡದಿ ತಾಯ್ತನದ ಸುಖದಲ್ಲಿ ಮರೆಯಾಗಿ ಕನಸಿನ ಸುಖವನ್ನು ಅರಿಯುತ್ತಾರೆ. ನಾವಿಬ್ಬರು ಪ್ರೀತಿಸುತ್ತಿದ್ದೇವು ಈಗ ನಾವಿಬ್ಬರು ಕೂಡಿ ಮಗುವನ್ನು ಪ್ರೀತಿಸುತ್ತೀವಿ. ಎಂಬ ಸೂಕ್ತಿಯಲ್ಲಿನ ಅನೇಕ ಭರವಸೆಗಳ, ಬಾವನೆಗಳ, ಕನಸುಗಳ ಕೂಸು ಕನಸು ಹುಟ್ಟುತ್ತಾಳೆ ಬಾಳಿನ ಕೊಂಡಿಯಾಗಿ.

'ಸೆಂಕೆಂಡ್ ಡಿವಿಜನ್ ಕ್ಲರ್ಕನ ಸಾವಿನ ಉತ್ತರಾರ್ಧ' ಇದೊಂದು ನಗರ ಬದುಕಿನ ವ್ಯವಸ್ಥೆ ಅವ್ಯವಸ್ಥೆಗಳ ಬದುಕಿನ ಚಿತ್ರಗಳ ಅನಾವರಣ ಇದಾಗಿದೆ. ಈ ಕಥೆಯಲ್ಲಿ ಬರುವ ಮರಿಬಿಲ್ಲಯ್ಯನ ಆಕಸ್ಮಿಕ ಸಾವು ಕಛೇರಿಯಲ್ಲಿನ ಸಹದ್ಯೋಗಿಯ ಗುಣಗಾನ ಮತ್ತು ಈತನ ಕುಟುಂಬ ಪರಿಸರ ವರ್ಣನೆಗಳನ್ನು ಸಹಜವಾಗಿಯೇ ವಾಸ್ತವನಿಟ್ಟಿನ ಕಛೇರಿಯಲ್ಲಿನ ವ್ಯವಸ್ಥೆಗಳನ್ನು, ವ್ಯಕ್ತಿತ್ವ ನಿರೂಪಣೆಯನ್ನು, ಮನೋವೈಜ್ಞಾನಿಕ ಹಿನ್ನಲೆಯಲ್ಲೇ ಚಿತ್ರಿಸುತ್ತಾರೆ. ಸತ್ತ ಮರಿಬಿಲ್ಲಯ್ಯನಿಗೆ ಹನ್ನೆರಡು ಜನಮಕ್ಕಳು, ಅದರಲ್ಲಿ ಮೊಮ್ಮಕಳಿದ್ದೂ ಸಂತಾನಭಾಗ್ಯ ತಪ್ಪಿಲ್ಲ. ಈ ಕೂಡ ಮೂರುತಿಂಗಳ ಹಸುಗೂಸನ್ನು ಬಿಟ್ಟುಹೋಗಿದ್ದಾರೆ. ಅವರ ವ್ಯಕ್ತಿತ್ವಗಳನ್ನು ಕಲ್ಪಿಸಿ ಅವರ ಸಂಸ್ಕಾರಕ್ಕೆ ಹೋಗುವ ಸಲುವಾಗಿ ಅಟೆಂಡೇನ್ಸ್‌ನಲ್ಲಿ ಸಹಿ ಹಾಕಿ. ಆನ್‌ಡ್ಯೂಟಿ ಮೇಲೆ ರಜೆ ಗಿಟ್ಟಿಸುವ ಕ್ರೂರ

ಯೋಜನೆಮಾಡಿ, ಮೇಲಧಿಕಾರಿ ದಿವಾಕರ್ ರಾವ್ ಒಪ್ಪದ ಕಾರಣದಿಂದ ಚಳುವಳಿ ಮಾಡಿ, ಎರಡು ಅವಕಾಶಗಳನ್ನು ಪಡೆದು ಕೊಂಡರು. ಮರಿಬಿಲ್ಲಯ್ಯನವರ ಅಂತ್ಯಕ್ರಿಯೆಯಲ್ಲಿ ಆಸಕ್ತಿ ಇದ್ದವರು ಭಾಗವಹಿಸಿ, ಮಧ್ಯಹ್ನ ಹನ್ನೆರಡು ಘಂಟೆಯೊಳಗೆ ಆಫೀಸಿಗೆ ಹಿಂತಿರುಗಬೇಕು. ಎರಡನೇಯದಾಗಿ, ಸಿ ಎನ್ನೆಂ ಮೂವ್ವತ್ತೈದು ಐವತ್ತೇಳನೇಯ ನಂಬರಿನ ಡಕಲಾಂ ಜೀಪನ್ನು ಅಂತ್ಯಕ್ರಿಯೆಗೆ ಹೋಗುವರಿಗಾಗಿ ಕಳುಹಿಸಿ ಕೊಡಲಾಗುತ್ತದೆ. ಮರಿಬಿಲ್ಲಯ್ಯನ ಶವದರ್ಶನ ಮಾಡಿದ ಬಳಿಕ ಕಛೇರಿ ಜೀಪನ್ನು ಸೆಕೆಂಡ್ ಡಿವಿಜನ್ ಕ್ಲರ್ಕ ಸಾಯಲಾಗಿ ಹೆಗ್ಡೆ ಮನೆ ಗ್ಯಾಸು, ಸೊಬಗನ ಸಿನಿಮಾ ಸಿದ್ರಾಜನ-ಹೆಂಡ, ಉಮೇಶಣ್ಣನ ರೇಸ್ ಚಪಲ, ಸತೀಶನ ಹೆಂಡ್ತಿ ಹೊಟ್ಟೇನೋವುಲಾಗಯ್ತು, ಬಯಕೆಗಳೇಲ್ಲಾ ಈಡೇರಿದವು. ಆದರೆ ಹೀಗೆ ಬಳಕೆ ಮಾಡಿ ಕೊಂಡ ಜೀಪ್ ಬಗ್ಗೆ ಕಛೇರಿಯಲ್ಲಿ ಕೊಟ್ಟ ಮೆಮೋಗೆ, ಸುಳ್ಳು ಉತ್ತರ ಕೊಟ್ಟರು. ಸಹದ್ಯೋಗಿ ಸಾವಿನ ನೆಪದಲ್ಲಿ ನಿಮ್ಮ ಸ್ವಾರ್ಥಗಳಿಗಾಗಿ ಆಫೀಸಿನ ಸೌಲಭ್ಯವನ್ನು ದುರುಪಯೋಗ ಪಡಿಸಿಕೊಂಡ ಎಲ್ಲರನ್ನು, ಇಂದಿನಿಂದ ಸಸ್ಪಂಡ್ ಮಾಡಲಾಗಿದೆ. ಎಲ್ಲರಿಗೂ ಮೆಮೋ ಸರ್ಕಾರಿ ಕಾರ್ಯದ ಕ್ರೀಯಾತ್ಮಕ ಕಥೆಯಾಗಿದೆ. ಸಾಮಾಜಿಕ ಬದುಕಿನ ಕಛೇರಿಯ ದುಡಿಮೆಯನ್ನ ಸಾಧರ ಪಡಿಸಿದರು. ಇಲ್ಲಿ ಮ್ಯಾನೆಜರ್ ಪರ್ಸನಲ್ಲಾಗಿ ಹೆಗ್ಡೆಯನ್ನು ಕರೆದು, "ಏನು ಕೊಡ್ತೀರಿ ಹೇಳಿ? ಹದಿನೈದು ದಿನದಲ್ಲಿ ಎನ್‌ಕ್ವಯರಿ ನಾಟಕ ಮುಗ್ಸಿ ಮತ್ತೇ ಕೆಲಸಕ್ಕೆ ತಗೆದು ಕೊಳ್ಳೋ ಹಾಗೆ ಮಾಡ್ತಿನಿ."[9] ಎಂದಾಗ ಸಾವಿರ ಎಂಟು ನೂರು ಲಂಚಸೀಡುವ ಭ್ರಷ್ಟತೆಯ ಸರಪಳಿಯನ್ನು ವ್ಯಕ್ತಪಡಿಸುವ ನಗರ ಕಛೇರಿಗಳ ಸಾಮಾಜಿಕ ವಿಡಂಬನೆಯನ್ನು ನಿರೂಪಿಸಿದ್ದಾರೆ.

ಅಡಿ ಟಿಪ್ಪಣಿಗಳು

1 ಛಿದ್ರ ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2003 ಪುಟ 43
2 ಅದೇ. ಪುಟ 43
3 ಅದೇ. ಪುಟ 44
4 ಮಲೆನಾಡಿನ ಹುಡುಗಿ ಬಯಲುಸೀಮೆಯ ಹುಡುಗ, ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು. 2009 ಪುಟ 42
5 ಸನ್ನಿಧಿ, ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು. 2009 ಪುಟ 84
6 ಅದೇ. ಪುಟ 84
7 ಅದೇ. ಪುಟ 85
8 ಅದೇ. ಪುಟ 86
9 ಮಲೆನಾಡಿನ ಹುಡುಗಿ ಬಯಲುಸೀಮೆಯ ಹುಡುಗ, ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು. 2009. ಪುಟ 112

ಅಧ್ಯಾಯ–5

ಅಧ್ಯಾಯ–5

ನಾಗತಿಹಳ್ಳಿರವರ ಕಥೆಗಳಲ್ಲಿ ಪ್ರೇಮ: ಪ್ರಕೃತಿ ಮತ್ತು ಪ್ರವೃತ್ತಿ

ಪ್ರೇಮ ಎಂಬುದು ಗಂಡು ಹೆಣ್ಣಿನ ಯೌವನ ಸಹಜವಾದ ಬಯಕೆ ಪೋರತನದ ಆಕಾಂಕ್ಷೆಯ ಮೊದಲ ಹೆಜ್ಜೆ. ನಂತರದ ಬಯಕೆ. ಅದರ ಬೆಳವಣಿಗೆಗಳ ಸಾತ್ವಿಕತೆ ಕ್ಷಣಿಕವಾಗದೆ, ಅನಂತ ಬದುಕಿನ ಅನುಭವವನ್ನು ಮೂಡಿಸುತ್ತದೆ. ಬಯಸಿದ್ದು ಸಿಗದಾಗ ಅಗಲಿಕೆ ವಿರಹ ಜೀವನದ ದಾರಿಯ ಕವಲುಗಳನ್ನು ತೆರೆದು ಕೊಳ್ಳುತ್ತದೆ. ಲೌಕಿಕ ಬದುಕಿನ ಸಾಮಾಜಿಕ ಒಲಪುಗಳಲ್ಲಿ ನೈತಿಕ ಅನೈತಿಕತೆಗಳ ನಡುವಿನ ಸಂಘರ್ಷಗಳಾಗುತ್ತವೆ. ಬದುಕಿನ ಸಾಮರಸ್ಯವನ್ನು ಹಂಬಲಿಸುತ್ತಿರುವಂತೆ ಪ್ರೇಮಕಾಮಗಳ ನಡುವಿನ ಘರ್ಷಣೆಗಳು ಜೀವನದ ಪಕ್ವತೆಗೆ ಆತೊರೆಯುತ್ತವೆ.

ಪ್ರೇಮ_ಕಾಮಗಳ ಅಂಬಲದಲ್ಲಿ ಸಂಸ್ಕೃತಿ–ಬದುಕುಗಳನ್ನೆಲ್ಲಾ ಪಲ್ಲಟವಾಗುವ ಸಂಕ್ರಮಣತೆಗಳು ಸಹಜವಾಗಿವೆ. ಏಕೆಂದರೆ ಲೈಂಗಿಕ ಪ್ರಚೋದನೆಯಲ್ಲಿ ಅತ್ಯಂತ ಗಾಢವಾದ ಭೌತಿಕ ಆಸಕ್ತಿ ಭಾಗವಾದ ಲೈಂಗಿಕ ತತ್ವವನ್ನು ಎಷ್ಟೇ ಅನಾಯಾಸವಾಗಿ ಕಂಡರೂ, ಅದು ಲೌಕಿಕ ಜೀವನದಿಂದ ಹೊರಗಿಡಲು ಸಾಧ್ಯವಿಲ್ಲ. ಅದೇ ಪ್ರಕೃತಿ ಅದನ್ನು ಪಡೆದು ಆಂತರ್ಯದ ನಿಲುವುಗಳಲ್ಲಿ ಸುಖಿಸಿ, ಬೊಗಿಸಿ ಬದಲಾದ ಬದುಕಿನ ವರ್ತನೆಗಳ ಸಾಮಾಜಿಕ ಬದುಕಿನ ಸ್ವಾರ್ಥಜಗತ್ತಿನ ಪ್ರವೃತಿಯಾಗಿ ಸಹಜತಹಃ ಬದುಕಾಗಿಸುತ್ತವೆ. ಭಾವನೆಗಳು ಮಿಥ್ಯವಾಗುವ ಮತ್ತು ತತ್ವಗಳಾಗುವ ಸಂಘರ್ಷಗಳೊಂದಿಗೆ, ಸಾಫಲ್ಯ–ವೈಫಲ್ಯಗಳು ಸಾರವಾಗುತ್ತವೆ. ಪ್ರೇಮ ಜಡವನ್ನು ಚೈತನ್ಯವಾಗಿಸುತ್ತವೆ, ಒಲವನ್ನು ಮೂಡಿಸುತ್ತವೆ. ಅದೇ ಬದುಕು ಸಾಮರಸ್ಯವೆಂದಾದರೆ ಪ್ರೇಮ ಬದುಕಿನ ದುರಂತಕ್ಕೆ ನಾಂದಿಯು ಆಗುತ್ತದೆ.

ಅಂತಹ ಕಥೆಗಳಲ್ಲಿ **'ಮಲೆನಾಡಿನ ಹುಡುಗಿ ಬಯಲು ಸೀಮೆಯ ಹುಡುಗ'** ಒಂದು ದುರಂತ ಪ್ರೇಮಕಥೆಯಾಗಿ ವ್ಯಕ್ತವಾಗಿದೆ. ಬಯಲುನಾಡಿನ ಮಂಡ್ಯದ ಬಯಲುಸೀಮೆ ಹುಡುಗ ದೇವರಾಜು, ತನ್ನ ಅಕ್ಕ ಸುಮಿತ್ರಳ ಮದುವೆಯಾಗಿ ಕಾರವಾರಕ್ಕೆ ಹೋಗುವಾಗ, ಆಗತಾನೆ ಹೈಸ್ಕೂಲ್ ಮುಗಿಸಿ ಕಾಲೇಜಿಗೆ ಸೇರ ಬಯಸಿದ ತಮ್ಮನನ್ನು ಕಾರವಾರದ ಕಾಲೇಜಿಗೆ ಸೇರಿಸಿದರು.

ಇಂಗ್ಲೀಷ್ ಬಾರದ. ಚಡ್ಡಿಯಲ್ಲಿರುವ ಮುಗ್ಧ ಹುಡುಗ ದೇವರಾಜ ಬಾವನಿಗೆ ಇಂಗ್ಲೀಷನಲ್ಲಿ ಫಾದರ್–ಇನ್–ಲಾ ಎಂದು ಹೇಳಿ ನಗೆಪಾಟಲಗೆ ಗುರಿಯಾಗಿದ್ದವ. ಮಲೆನಾಡಿನ ಹುಡುಗಿ ಉಷಾಗೆ ಆಕಸ್ಮಿಕ ಸೈಕಲ್‌ನಿಂದ ಗುದಿದ್ದ ದೇವರಾಜನ ಕ್ಷಮೆಯನ್ನು ಲೆಕ್ಕಿಸದೆ ಕಪಾಳ ಮೋಕ್ಷಮಾಡಿ ಕಾಲೇಜಿನ ಪ್ರಿನ್ಸಿಪಾಲರಿಗೆ ದೂರು ನೀಡಿ ಬಾವನನ್ನ ಕರೆಸಿದರು. ಉಷಾಗೆ ಈ ಮೊದಲೇ

ಪರಿಚಯವಿದ್ದ ಶ್ರೀರಾಮನ ಭಾವಮೈದುನ ಎಂದು ತಿಳಿದ ಮೇಲೆ ಸಲಿಗೆ ಆತ್ಮೀಯತೆಯಲ್ಲಿ ಆತ ಮುಗ್ಧ ಎಂದು ತಿಳಿದ ಉಷಾ ಕ್ಷಮೆ ಕೇಳುತ್ತಾಳೆ.

ಒಂದೆಡೆ ಮಂಡ್ಯದ ಬಯಲುಸೀಮೆಯ ಹುಡುಗ ಕೆಂಪನೆಯ ಮುಗ್ಧ ಸ್ವರೂಪದ ಸುಂದರ ಹುಡುಗ. ಮಲೆನಾಡಿನ ಬಳುಕಿ ನಡೆವ ಉಷಾ ರಾಗಚೆಲುವ ಕೊಂಚ ಸಿಡಿಕಿನ ಚುರುಕಿನ ಸುಂದರ ಹುಡುಗಿ ಉಷಾ. ಹೀಗೆ ಸೈಕಲ್‌ನಿಂದ ಅವಮಾನಗಳಿಂದ ಕೊರಗುತಿದ್ದ ದೇವರಾಜನ ಎರಡು ಕೈಗಳನ್ನು ಎತ್ತಿಕೊಂಡು ತನ್ನೆರಡು ಕೈಗಳಿಂದ ಪಟಪಟನೆ ತನ್ನ ಕೆನ್ನೆಗೆ ತಾನೇ ಬಾರಿಸಿಕೊಂಡಳು, ಕೆನ್ನೆಗೆ ಹೊಡೆದ ಕೈಗಳು ದೇವರಾಜನವೇ ಆಗಿದ್ದರೂ ಬಲಪ್ರಯೋಗ ಉಷಾಳದೆ ಆಗಿತ್ತು. ಇದರಿಂದ ದೇವರಾಜನಿಗೆ ಏನೆನ್ನಿಸಿತೊ ಹುಚ್ಚನಾಗಿ ಉಷೆಯನ್ನು ತಬ್ಬಕೊಂಡಬಿಟ್ಟ, ಕಂಬನಿ ಒರಸಿ, ತಲೆನೇವರಿಸಿ, ಪಟಪಟನೆ ಕೆನ್ನೆ ಕಚ್ಚಿಬಿಟ್ಟ. ಆಮೇಲೆ ತಪ್ಪು ಮಾಡಿಬಿಟ್ಟೆ ಅನ್ನಿಸಿತು. ಇಲ್ಲಿನ ಮನುಷ್ಯ ಸ್ವಭಾವದ ಆಕಸ್ಮಿಕಗಳ ನಡುವೆ ಪ್ರೇಮ ಪ್ರವೃತ್ತಿಯನ್ನು ಕಥೆಗಾರರು ಸಿನಿಮಿಯ ರೀತಿಯಲ್ಲಿನ ನಿರೂಪಣೆಯಲ್ಲಿ ನೈಜಗೊಳಿಸುತ್ತಾರೆ.

ಕಾಲಾತೀತವಾದ ಈ ಕಥೆಯೊಳಗಿನ ದೇವರಾಜ ಹಾಗೂ ಉಷಾ ಪ್ರೇಮಿಗಳಾಗಿಬಿಡುತ್ತಾರೆ. ಅನ್ಯಲಿಂಗಗಳ ಆಕರ್ಷಣೆಯಲ್ಲಿ ಮುಳುಗಿಬಿಡುವ ಪ್ರೇಮಿಗಳು ಕಚ್ಚಿದ್ದನ್ನೆ ವಿದ್ಯುತ್ ಪ್ರವಾಹದಲ್ಲಿ ಆಘಾತಗೊಂಡು ಕನವರಿಸಿ ಹಂಬಲಿಸಿ ಪ್ರೇಮದಲ್ಲಿ ಮುಳುಗಿ ತೇಲುತ್ತಾರೆ. ಎಳೆಯ ಜೀವಗಳ ಪ್ರೀತಿಗೆ ಕಡಲಿನ ಪರಿಸರ ಬೆಂಬಲವಾಗಿ ನಿಂತಂತೆ ಕಾಣುತ್ತದೆ. ಆದರೆ ಇಲ್ಲಿ ಪ್ರೇಮದ ವಾಂಚೆಯಲ್ಲಿ ಸಮುದ್ರದ ಮರಳತೀರ ಅವರ ವೇದಿಕೆಯಾಗುತ್ತದೆ.

ಬಯಲುಸೀಮೆಯ ಜಗತ್ತಿಗೆ ಮತ್ತೆ ಹಿಂದಿರುಗಲಾಗದ ದೇವರಾಜ ಕಾಲೇಜಿನ ಟೂರ್ ಕಮಿಟಿಯಲ್ಲಿ ವಿಷ್ಣುನಾಯಕನ ಹಿಂಬಾಕಿ ಉಷಾಳ ಬೆಂಬಲದಿಂದ ಲೀಡರ್ ಆಗುತ್ತಾನೆ. ಪ್ರವಾಸದಲ್ಲಿ ಉಷಾ ದೇವರಾಜನ ಪೋಟೋ ಕ್ಲಿಕ್ಕಿಸಿದ ವಿಷ್ಣುನಾಯಕನಿಗೆ ನಾಲ್ಕು ತದಕಿದನು. ಆದರೆ ದೂರದಿಂದ ಬಂದವನೊಬ್ಬ ನಮ್ಮ ಜಾತಿಯ ಹುಡುಗಿಯನ್ನು ಬುಟ್ಟಿಗೆ ಹಾಕಿಕೊಂಡು, ನಮ್ಮ ಮೇಲೆ ದೊಡ್ಡಸ್ತಿಕೆ ತೋರಿಸ್ತನಲ್ಲ ಎಂದು ದ್ವೇಷ ಕಟ್ಟಿಕೊಂಡು ಕಾಲೇಜಿನ ಗೋಡೆ ಮೇಲೆ ಉಷಾ-ದೇವ್ ಅಂತ ದಪ್ಪ ಅಕ್ಷರಗಳಲ್ಲಿ ರಾರಜಿಸಿದವು. ನೋಟೀಸ್ ಬೋರ್ಡನಲ್ಲಿ ದೇವರಾಜ್ ಉಷಾಳನ್ನು ಅಪ್ಪಿಕೊಂಡಂತಿದ್ದ ಭಾವಚಿತ್ರವು ಅಂಟಿಸಲ್ಪಟ್ಟು ಉಷಾಳ ತಂದೆ ಗೋಪಾಲನಾಯಕಾರಿಗೆ ಸುದ್ದಿ ತಿಳಿದು ಚಿಂತೆಗೀಡಾದರು.

ಎಳೆ ಜೀವಗಳ ಪ್ರೇಮದ ಪ್ರವೃತ್ತಿಗಳು ನಿಸರ್ಗ ಪ್ರೇಮದ ವಾಂಚೆಗಳ ನೇರವಾಗಿ ಮನದ ಉನ್ಮಾದಗಳನ್ನು ಹೊರ ಹಾಕುತ್ತವೆ. ಗೋಪಾಲನಾಯಕರ ಎದುರೇ ಉಷಾಳ ಹಣೆಗೆ ಚುಂಬಿಸುವ

ದೇವರಾಜನನ್ನು ಮನೆಯಿಂದ ಹೊರಹಾಕಿ ಊರಿಗೆ ಕಳುಹಿಸುವ ಹುನ್ನಾರಿನಲ್ಲಿ ಇದ್ದ ಅಕ್ಕ ಬಾವನ ಜಗಳದಲ್ಲಿ ಜಗುಲಿಯಲ್ಲೆ ಉಳಿದ. ಪ್ರೇಮ ಎಲ್ಲರನ್ನು ದೂರ ಮಾಡುತ್ತದೆ. ಅಕ್ಕ ಬಾವ ನನ್ನವರು ನನ್ನ ಉಷಾಳನ್ನು ಪ್ರೇಮಿಸಿದ ಸಲುವಾಗಿ ನಾನು ಇಷ್ಟವಾಗಲಿಲ್ಲ ಎಂದು ಕಳೆದ ದಿನಗಳ ನೆನಪಿನೊಂದಿಗೆ ದುಃಖಿಸುತ್ತಾನೆ ಎಂಬಲ್ಲಿನ ಮಾನವ ಸಹಜದ ಗುಣಗಳು ಪ್ರೀತಿಸುತ್ತ ಎಳೆಯ ಬಂಧನದ ಹಂಬುಗಳನ್ನು ಸಮಾಜದಲ್ಲಿನ ಚೌಕಟ್ಟುಗಳನ್ನು ಚಿತ್ರಿಸಿಕೊಡುತ್ತಾರೆ.

ಗೋಪಾಲನಾಯಕರು ತನ್ನ ಮಗಳ ಪ್ರೇಮದ ನಿರ್ಧಾರ ಕೇಳಿ ಕಾಣದ–ಕೇಳದ ಊರಿನಿಂದ ಬಂದ ಕೈಯಲ್ಲಿ ನೌಕರಿ ಇಲ್ಲದ ಹುಡುಗನೊಬ್ಬನಿಗೆ ಮಗಳನ್ನು ಕೊಡುವುದೇ? ಕೊನೆಗೆ ದೇವರಿಚ್ಚೆ ಎಂದು ಹೇಳುವ ಸಮಾಜದಲ್ಲಿನ ಪ್ರತಿಯೊಬ್ಬ ತಂದೆಯ ಆಲೋಚನೆಗಳ ಅಭಿವ್ಯಕ್ತತೆ ಕಾಲಾತೀತ ಚಿತ್ರಣಗಳ ದ್ಯೂತಕವಾಗಿದೆ. ತನ್ನ ಮಗಳ ಬದುಕಿನ ಚಿಂತನೆ ವಾಸ್ತವವಾಗಿ ಕಂಡರೂ ನೌಕರಿಗೂ–ಹಣಕ್ಕೂ ಅನ್ನಕ್ಕೂ–ವಯಸ್ಸಿಗೂ–ಪ್ರೀತಿಗೂ ಎಷ್ಟೊಂದು ಲೌಕಿಕ ಸಂಬಂಧ ಎಳೆ ಬಿಗದುಕೊಂಡಿದೆ ಎಂಬ ಬಗ್ಗೆ ಯೋಚಿಸ ತೊಡಗಿದ. ಇಲ್ಲಿ ಬದುಕಿಸುತ್ತ ಎಳೆದ ಸಂಕೋಲೆಗಳ ಚಿತ್ರಣದಲ್ಲಿನ ವಾಸ್ತವ ತಾತ್ವಿಕ ಅಂಶಗಳನ್ನು ನೀಡಿದ್ದಾರೆ. ಉದ್ವೇಗಕ್ಕೆ ಒಳಗಾದ ದೇವರಾಜ ನಾನು ಉಷೆಯನ್ನು ಪ್ರೀತಿಸಿದ್ದು ತಪ್ಪೇ? ನೌಕರಿ ಇಲ್ಲದವರು ಪ್ರೀತಿಸಬಾರದೇ. ಅನ್ನ ಹಣಕ್ಕಿಂತ ನನ್ನ ಪ್ರೀತಿಯೇ ಮುಖ್ಯವೆನ್ನುವ, ನನ್ನ ಉಷಾಳ ಬಿಟ್ಟು ಬೇರೆ ಪ್ರಪಂಚವನ್ನು ಗ್ರಹಿಸಲಾರದನಾಗಿರುತ್ತಾನೆ. ಇಲ್ಲಿ ಪ್ರೇಮ ಮನುಷ್ಯನನ್ನು ಯಾವ ದಿಕ್ಕುದೆಸೆಗಳ ಕಾಣದ ಮತ್ತೊಂದು ಜಗತ್ತಿಗೆ ಕರೆದೊಯ್ಯುವ ಮನೊವಿಜ್ಞಾನದ ಹಿನ್ನೆಲೆಯಲ್ಲಿ ಪ್ರಕೃತಿಯೊಳಗಿನ ಪ್ರೇಮವನ್ನು ವ್ಯಕ್ತಪಡಿಸಿದ್ದಾರೆ. ಮತ್ತೆ ಉಷಾಳನ್ನ ಬೇಟಿಮಾಡಲು ಹೋದ ದೇವರಾಜನಿಗೆ, ಉಷಾ ಜ್ವರದ ತಾಪದಲ್ಲಿದ್ದಳು. ಇವಳ ತಂದೆ "ನಿನಗೆ ಎಷ್ಟು ಹಣಬೇಕು ಹೇಳು? ಮೂರು ದಿನದಲ್ಲಿ ಒದಗಿಸಿ ಕೊಡುತ್ತೀನಿ. ಹಣಕೊಂಡು ನಿಮ್ಮ ಬಯಲು ಸೀಮೆಗೆ ಹೋಗಿ ಏನಾದರೂ ವ್ಯಾಪಾರ ಮಾಡಿ ಜಮೀನು ತೆಗೆದು ಸುಖವಾಗಿರು."[1] ಎಂದು ಆಮಿಷ ತೊರುವ ಸಿನಿಮಿಯ ಶೈಲಿಯನ್ನು ಹೊರತುಪಡಿಸಿ ನೋಡಿದರೆ, ಕಥೆಯೊಳಗಿನ ಜೀವನದಲ್ಲಿ ಪ್ರೇಮ, ವ್ಯಕ್ತಿ ಹಾಗೂ ವ್ಯಕ್ತಿಗತ ಬದಲಾವಣೆಗಳನ್ನು ಬದುಕಿನ ತಾಕಲಾಟಗಳಾಗಿ ಬದಕನ್ನು ಪ್ರೇಮವಾಂಚೆಯಲ್ಲಿ ಅಡಗಿ, ಇಡೀ ಬದುಕಿನ ಚಿತ್ರಣಗಳು ಬದಲಾಗುವ ದೇವರಾಜ ಸಮುದ್ರ ಪಾಲಾಗುವ ದುಂರತದಲ್ಲಿ ಕಥೆ ಕೊನೆಯಾಗುತ್ತದೆ. ಅದೆ ಹಾದಿಯಲ್ಲಿ ಕನವರಿಸುವ ದೇವರಾಜನನ್ನು ಅಂಬಲಿಸಿ ಅಲೆವ ಉಷಾ ಬದುಕನ್ನು ಸಹಜ ಪ್ರೇಮದ ಮನೋವಿಜ್ಞಾವನ್ನು, ನೈಪುಣ್ಯತೆಯ ಹೊಸ ತಂತ್ರದಲ್ಲಿ ಬಳಸಿದ್ದಾರೆ. ಇಲ್ಲಿ ಪ್ರೇಮ ಹಾಗೂ ಪ್ರವೃತ್ತಿಯ ಗುಣಗಳು ಕಾಲತೀತವಾಗಿವೆ.

'ಇರುವುದೆಲ್ಲಬಿಟ್ಟು' ಇದೊಂದು ಸಹಬಾಳ್ವೆ ಶೋಧನೆಯ ಕ್ರಿಯಾತ್ಮಕ ಕಥೆಯಾಗಿದೆ. ಬಾಳ ಸಂಜೆಯಲ್ಲಿರುವ ಪ್ರೊಫೆಸರ್ ಕಾಲೇಜೊಂದರಲ್ಲಿ ಹತ್ತು ವರ್ಷ ಪಾಠಮಾಡಿ ಮಾತಿನಲ್ಲಿ ತತ್ವಶಾಸ್ತ್ರವನ್ನು ಹೇಳಿಕೊಟ್ಟವರು. ಮಾತು ಸಾಂಗ್ಯಜೀವದಿಂದ ದೂರವಾಗಿ ಬದುಕಿನ ಶೋಧ ಕ್ರಿಯೆಯಲ್ಲಿ ತೊಡಗುತ್ತಾರೆ. ಬದುಕಿನ ತೀವ್ರ ಕೃತಕತೆ ಮಾತಿನಿಂದಲೇ, ಅರ್ಥಹೀನ ಕ್ರಿಯೆಗೆ ಬಲಿಯಾಗುತ್ತದೆ ಎಂದು ಬಹುದೂರ ಸಮುದ್ರತೆರೆಯ ನಡುವೆ ಪ್ರಯೋಜನಕ್ಕೆ ಬಾರದ ಕಪ್ಪೆ ಚಿಪ್ಪುಗಳ ನಡುವೆ, ತನ್ನೊಳಗಿನ ಬದುಕನ್ನು ಏಕಾಂತವಾಗಿಯೇ ಶೋಧಿಸುವ ವೈಚಾರಿಕ ನೆಲೆಯಲ್ಲಿ ಸೈದ್ಧಾಂತಿಕ ನಡೆಗಳ ಜೀವನ ಕ್ರಮಗಳನ್ನು ಅಳವಡಿಸಿ ಬದುಕಿನ ಶೋಧಕ್ರಿಯೆಯಲ್ಲಿ ಮುಖ ಮಾಡಿ ನಿಲ್ಲುತ್ತಾರೆ ಕಥೆಗಾರರು.

ಸಾಮಾಜಿಕ ಬದುಕಿನ ಮನುಷ್ಯರ ಕೃತಕ ಬದುಕಿನ ಅಂಗನ್ನು ತೊರೆದು ತೊರೆಯ ತೀರದಲ್ಲಿ ಬದುಕಿನ ತೀರಸ್ಕಾರದಲ್ಲೇ ತನಗಾಗಿ ಯಾರೂ ಕಾಯದ, ದುಃಖಿಸದ, ಕಣ್ಣೀರಿಡದ ಮನಗಳಿರುವ ತೃಪ್ತಿಯಿಂದಲೇ ನಶ್ವರತೆ ಸಾದಿಸಲು, ಹೋರಾಟದ ಬಾಳ ದಾರಿಗೆ ತನ್ನದೇ ತತ್ವಶಾಸ್ತ್ರದ ಪಾಠಕೇಳಿದ ಅಂದಿನ ವಿದ್ಯಾರ್ಥಿ 'ಪ್ರೇಮ' ಕಳೆಯಾಗಿ ಬಂದವಳು. ಹೆಸರಿನಷ್ಟೆ ಪ್ರೇಮ ಪ್ರೇಮವನ್ನು ತುಂಬುತ್ತಾಳೆ. ಹೆಣ್ಣು ಎಂದರೆ ಮೋಹ, ಹೆಣ್ಣು ಸರ್ಪ ಭ್ರಮೆ ಎಂದು ನಿರಾಕರಿಸಿದ ಜೀವಾ ಮತ್ತೆ ಪ್ರೇಮ ಎಂಬ ಸಂಕೇತದಲ್ಲಿನ ತನ್ನದೇ ಪ್ರೇಮದ ಬದುಕಿನಲ್ಲಿ ಲೀನಾವಾಗುತ್ತಾನೆ. ಬದುಕಿನಿಂದ ಮುಕ್ತವಾಗಿದ್ದ ವೃತ್ತಿ ಬದುಕು ಸಮಾಜದಿಂದ ಕೊನೆಗೆ ತನ್ನದೇ ಮಾತಿನಿಂದ ದೂರವಿದ್ದ ಜೀವನಕ್ಕೆ ಜೀವನದ ಉತ್ಸಾಹವನ್ನು ತುಂಬಿ ಜೀವಸೆಲೆಯಾಗುತ್ತಾಳೆ. ಅರವತ್ತನೆಯ ವಯಸ್ಸಿನಲ್ಲಿ ಜೀವನ ಪ್ರೀತಿತುಂಬಿ ಬದುಕಿನ ಪ್ರೇಮವನ್ನು ಅರ್ಥೈಸುತ್ತಾಳೆ. ಇಡೀ ಜೀವಮಾನದಲ್ಲಿ ಇಂತಹ ನೂರಾರು ಶೋಧನೆಯ ಕಿಚ್ಚು ಹತ್ತಿಸಿ ನೋವನ್ನು ಹೆಪ್ಪುಗಟ್ಟಿಸುವ, ಲೇಖನಗಳನ್ನು ಬರೆದು ನಮ್ಮನ್ನು ಹುಚ್ಚರನ್ನಾಗಿ ಮಾಡಿ. ಕಡಲಬಳಿ ಕುಳಿತರೆ ಸಾರ್ಥಕ್ಯ ಯಾವುದೆಂದು ಪ್ರೇಮಳ ಪ್ರಶ್ನೆಯಾಗುತ್ತದೆ. ಉತ್ತರವಿಲ್ಲದ ತನ್ನ ಬದುಕಿನಾಳದ ಅನ್ವೇಷಣೆಗೆ ಚುಕ್ಕಿಬಿದ್ದು ಪ್ರೇಮವಾಗಿ ಪ್ರೇಮಾಮಯವಾಗುತ್ತಾನೆ. ಕಾಮ ಪ್ರೇಮಗಳು ಪವಿತ್ರವಾದುದು ಎಂಬ ಸಹಬಾಳ್ವೆಯ ಸಂದೇಶವನ್ನಿಡುತ್ತಾರೆ. ಇಲ್ಲಿ ಪ್ರೇಮಪಾತ್ರ ಒಂದು ಸಂಕೇತವಾಗಿ ಕಂಡರೂ, ಮನದೂಳಗಿನ ತಾಕಲಾಟ, ಬದುಕಿನ ಜಂಜಾಟಗಳ ಶೋಧ ತಾನು ಮಾಡಿದ ತತ್ವದ ಪರಿಣಾಮಗಳನ್ನು, ಬದುಕಿನಲ್ಲಿ ಬೇರುಬಿಟ್ಟ ಮಾನವ ಸಂಬಂಧಗಳನ್ನು ನವಿರಾಗಿ ನಿರೂಪಿಸುತ್ತಾರೆ. ಮನುಷ್ಯನ ಮನೋವೈಜಾನಿಕ ಕ್ರಿಯೆಯ ವೈಚಾರಿಕ ಕಥೆಯಾಗಿ ಬಿಂಬಿತವಾಗಿದೆ.

'ನನ್ನ ಪ್ರೀತಿಯ ಹುಡುಗನಿಗೆ' ಪತ್ರ ಮಾದರಿ ಕಥೆಯಲ್ಲಿ ಹೆಣ್ಣಿನ ಒಳಮನಸ್ಸಿನ ಪ್ರೇಮ ಮತ್ತು ಕಾಮಗಳ ಅಭಿವ್ಯಕ್ತಿಯಾಗಿದೆ. ಇಲ್ಲಿ ಪ್ರೇಮ ಮತ್ತು ಕಾಮಗಳು ಮುಖಾಮುಖಿಯಾಗುತ್ತವೆ. ಕಾಮ

ಮತ್ತು ಪ್ರೇಮ ವಿಭಿನ್ನ ದಿಕ್ಕುಗಳನ್ನು ಸೂಚಿಸುತ್ತದೆ. ಹೆಣ್ಣುಗಂಡಿನ ಆಂತರ್ಯವನ್ನು ಶೋಧಿಸಿ ಓದುಗನನ್ನು ತಲ್ಲಣಕ್ಕೆ ಒಳಮಾಡುವ ಕಥೆಯಾಗಿದೆ, ಕಾಮತೃಷೆಗೆ ದೈಹಿಕ ಸ್ಪಂದನೆಯಾದರೆ, ಪ್ರೇಮ ಭಾವನೆಗಳಿಗೆ ಸಂಬಂಧಿಸಿದ್ದು. ಜೀವನ ಎಂದರೆ ಭಾವನೆಗಳಲ್ಲ. "ಜೀವನ ಎಂದರೆ ಸಂಭೋಗ, ಹಾದರ, ಕೊಲೆ, ಸಾವು ಇತ್ಯಾದಿ. ಭಾವನೆಯಿಂದ ಜಠರ ತುಂಬೋಲ್ಲ. ಬಂಗಲೆ ಬರೋಲ್ಲ, ಕಾರು ಚಲಿಸೋಲ್ಲ, ಪಾರ್ಟಿಗಳಿಗೆ ಕರೆಯೋಲ್ಲ, ಕಪ್ಪುಹಣ ಬೆಳೆಯೋಲ್ಲ. ಭಾವನೆಗಳಿಂದ ಸಿಗೋದು ಕಣ್ಣೀರು ದುಃಖ, ಬರೇ ದುಃಖ ಬರೆ ನೋವು."[2] ಎಂದೇಳುವ ಕಥಾನಾಯಕಿ ಉಮಾ. ಪ್ರೇಮ ತತ್ವದ ಅನ್ವೇಷಕಿಯಾಗಿ ತನ್ನ ಹುಡುಗನಿಗೆ ಹೇಳಲಾಗದೆ ಪತ್ರ ಮಾಧ್ಯಮವನ್ನು ಆಯ್ಕೆಮಾಡಿಕೊಂಡು, ಪ್ರೇಮಕಾಮವನ್ನು ಅರ್ಥೈಸುವ ಪ್ರೇಮತತ್ವವನ್ನು ಬಸಿದು ಜೀವನವನ್ನು ಶೋಧಿಸುತ್ತಾರೆ. ಪ್ರತಿ ಹೆಣ್ಣಿನ್ನಲ್ಲಿ ಪ್ರೇಮಕ್ಕೊಬ್ಬ, ಕಾಮಕ್ಕೊಬ್ಬ ಬೇಕೇ ಬೇಕು. ಗಂಡ ಅನ್ನಿಸಿದವನಲ್ಲಿ ಎರಡೂ ಇರುವುದು ಕಷ್ಟ. ಪ್ರತಿ ಹೆಣ್ಣಾಗಲಿ ಗಂಡಾಗಾಲಿ ಪ್ರೇಮ – ಕಾಮಗಳು ಬೇಕು. ಅವು ಒಬ್ಬರಲ್ಲೇ ಸಿಗಲು ಸಾಧ್ಯವಲ್ಲ ಎಂಬ ತರ್ಕಕ್ಕೆ ಇಲ್ಲಿ ಕಥೆಗಾರರು ಜೀವನದ ಮುಖಗಳನ್ನು ಪರಿಚಯಿಸಿದರು, ಪ್ರೇಮವಿಲ್ಲದೆ ಕಾಮವಿಲ್ಲ ಕಾಮವಿಲ್ಲದೆ ಪ್ರೇಮವನ್ನು ಗ್ರಹಿಸಲಾರದೆ ಚೌಕಟ್ಟನ್ನು ಮೀರಿ ಮೇಲೆರುತ್ತಾರೆ. ಭಾವನೆ, ಬದುಕು. ಪ್ರೀತಿ ಕಾಮಗಳ ನಡುವೆ ಜೀವನ ನಲುಗುವ ಅರ್ಥೈಸುವ ಜಂಜಾಟವು ಬದುಕೆಂದು, ಬದುಕಿನ ಶೋಧನವನ್ನು ಭಾವತೀವ್ರತೆಯಲ್ಲಿಯೇ ನಿರೂಪಿಸಿದ್ದಾರೆ. ಬದುಕು ನಿಂತ ನೀರಾಗದೆ ಕ್ರಿಯಾಶೀಲವಾಗಬೇಕು, ಯಾರ ಹಂಬಲ ಪ್ರೀತಿಗೆ ಕಾದು ಕುಳಿತುಕೊಳ್ಳುವುದರಲ್ಲಿ ಅರ್ಥವಿಲ್ಲ. ಪತ್ರದ ಕೊನೆಯ ಸಾಲು ಸಂದೇಶವಾಗಿ ಕಂಡರೂ ಕಾಲಾತೀತವಾಗಿ ಓದುಗನ ಜಿಜ್ಞಾಸೆ ಮೂಡಿಸಿ ತಿರುಳನ್ನು ಅರ್ಥೈಸುವಂತೆ ಮಾಡುವ ಪ್ರಯೋಗಶೀಲವಾಗಿ ಕ್ರಿಯಾತ್ಮಕ ಪ್ರೇಮತತ್ವವನ್ನು ನೀಡುತ್ತದೆ.

'ಯಶೋಧರ ಚರಿತೆ ' ಕಾಮ ಪ್ರೇಮಗಳು ಮುಖಾಮುಖಿಯಾಗುವ ದುರಂತ ಕಥೆಯಾಗಿದೆ. ಲೈಂಗಿಕ ಅನುಭವದ ಕಾತುರತೆಯಲ್ಲಿ, ಬದುಕಿನ ದುರಂತ ಕಾಣುವ ಕಥೆಯಾಗಿದೆ. ಬಡ ಬ್ರಾಹ್ಮಣರ ಮಗಳು ಯಶೋಧರೆ ಮದುವೆಯಾಗಿ ಬದುಕನ್ನ ಕಾಣಬೇಕಾದವಳು ಉಲ್ಕಾಪಾತಕ್ಕೆ ಉದುರಿ ಕರೆಂಟು ವೈರಿಗೆ ಸಿಕ್ಕಿ ಸುಟ್ಟು ನೇತಾಡುವ ಹಕ್ಕಿಯಾಂತಗುವುದನ್ನು ಕಥೆಯ ಮುನ್ನಡೆಯಲ್ಲೇ ಆಶಯವನ್ನು ಕಥೆಗಾರರು ಚಿತ್ರಿಸುತ್ತಾರೆ. ಮದುವೆಯ ವಯಸ್ಸು ಮೀರಿದರು ಮದುವೆಯಾಗದ ಅಕ್ಕಂದಿರನ್ನು ಬಿಟ್ಟು ಸಾಯುವ ತಂದೆಯ ಬಗ್ಗೆ ಜಿಗುಪ್ಸೆ, ಯೌವ್ವನದ ತಾಕಲಾಟದಲ್ಲಿ ಕಾಣದ ಕಾಮ ಸುಖದ ಕಾತರತೆಯಲ್ಲಿ ಪಾತ್ರದ ಚಿತ್ರಣವಾಗಿದೆ. ಕಾಮಕ್ಕಾಗಿ ಕಾತುರಿಸುವ ನಿವೃತಿಯ ಅಂಚಿನಲ್ಲಿರುವ ಪ್ರೊಫೆಸರ್‌ನ ಕಾಮದ ಇಂಗಿತಗಳು ವಾಸ್ತವ ಕಾಮ ಚಪಲಗಳು ನಿರೂಪಿತವಾಗಿವೆ.

ಯಶೋಧರೆಯ ಕಾಮದ ತುಡಿತಕ್ಕೆ ಸಿಕ್ಕಿ. ಕುರೂಪಿ ವೀರಭದ್ರನೆಂಬ ಕೆಳವರ್ಗದ ವಿದ್ಯಾರ್ಥಿ. ಈತನ ಮುಗ್ಧತೆ ಹೊಸ ಅನುಭವದ ತೃಷೆಯ ಚೇಷ್ಟೆಗೆ ಬಲಿಯಾಗಿ, ಕಾಮವೇ ಪ್ರೇಮವೆಂದು ಹಂಬಲಿಸಿ ಸಿಗದಿದ್ದಾಗ, ಮೃಗವಾಗಿ ತನ್ನದಾಗಿಸುವ ಕ್ರೌರ್ಯವನ್ನು ವ್ಯಕ್ತಪಡಿಸುತ್ತದೆ.

ಕಾಮಕ್ಕೆ ಸೌಂದರ್ಯವಲ್ಲದ ಒರಟು ಮೃಗತ್ವ ಬೇಕೆಂದು ಕಾಮವನ್ನು ಸ್ವೀಕರಿಸುವ ಹೆಣ್ಣನ್ನು, ಗಂಡು ಜೀವಿಗಳನ್ನು ಪ್ರೇಮ ಹಾಗೂ ಕಾಮವಾಂಚೆಯ ಬಲೆಯನ್ನು ಬೀಸಿ ಹೇಗೆ ಕಬಳಿಸಬೇಕೆಂದು ವಿವರಿಸುವ ಕಥೆಗಾರರೂ, ಹೆಣ್ಣು ಮತ್ತು ಗಂಡಿನ ಪ್ರೇಮ ಹಾಗೂ ಕಾಮ ವಾಂಚೆಯ ಪ್ರೌವೃತಿಗಳನ್ನು ನೈಜವಾಗಿಯೇ ನಿರೂಪಿಸುತ್ತಾರೆ.

"ನಮ್ಮ ಪ್ರೋಫೆಸರ್... ನಿನಗೆ ಗೊತ್ತಲ್ಲ... ಎಡಗೈಲಿ ನನ್ನ ಮೊಲೆ ಮುಟ್ಟಿ ಬಲಗೈಯಲಿ ಮಾರ್ಕ್ಸ್ ಹಚ್ಚಿದ..."[3] ಎಂಬಲ್ಲಿ ಕಾಮದ ಸಾಧನೆಗಳು ಸಮಾಜದಲ್ಲಿ ಸಾಧಿಸುವ ದಾರಿಯನ್ನು ವಾಸ್ತವ ಜಗತ್ತಿನ ಗುಟ್ಟುನ್ನು ತೆರೆದಿಡುತ್ತಾರೆ. ಯಶೋಧರಳ ಸ್ನೇಹಿತೆ ಉಮಾ ಪಾತ್ರದ ಮೂಲಕ "ನಿನ್ನದು ಅಸ್ವಸ್ಥ ಮನಸ್ಸು ಪುರುಷಾರ್ಥದಲ್ಲಿ ಕಾಮವೂ ಒಂದು, ಆದರೆ ಕಾಮವೇ ಜೀವನವಲ್ಲ, ಇನ್ನು ಧರ್ಮ, ಅರ್ಥ, ಮೋಕ್ಷಗಳಿವೆ ಮರಿಬೇಡ"[4] ಎಂಬಲ್ಲಿ ಬದುಕಿನ ಪೂರ್ಣತೆಯನ್ನು ವ್ಯಕ್ತಪಡಿಸಿದರು ಧರ್ಮ ಅರ್ಥ ಮೊಕ್ಷಗಳೆಂಬ ಅಲೌಕಿಕ ಬದುಕಿಗೆ ಲೇಖಕರ ನಿಲುವನ್ನು ನೋಡದೆ ಪೂರ್ಣ ಬದುಕಿನ ಗ್ರಹಿಕೆಯನ್ನು ಕಾಣಬೇಕೆಂದು ಗ್ರಹಿಸಲಾಗಿದೆ.

ಕಾಮ ಮೊವಲ ಕನುಟು ವಾಸನೆಯ ಹಿತಕಾಣುವ ತೃಷೆಯ ತೃಪ್ತಿಯು ತೃಷ್ಣಿಗುಣವಾಗುವ ನಿಯಮಪಾದರು ಕಾಮದಿಂದ ಹೋರಬರಲಾರದ, ಕಾಮ ಬದುಕಿನ ಅಂಗವಾಗುತ್ತವೆ. ಅದು ಪ್ರೇಮವೇ ಎಂಬ ಪ್ರಶ್ನೆ ಇಲ್ಲಿ ವೀರಭಧ್ರ-ಯಶೋಧರೆಯಾಗಿದೆ. ಹೆಣ್ಣಿನ ಪ್ರಣಯ ನಿವೇದನೆ ಗಂಡಿನ ಪ್ರೇಮ ಉತ್ಕಟತೆ ಪ್ರೇಮಗಳ ಹರಿವಿಲ್ಲದ, ವೀರಭದ್ರ ಕಾಮದ ಸೊಂಕಿಗೆ ಸಿಲುಕಿದ ಜೀವವಾಗುತ್ತಾನೆ. ಪ್ರೇಮ ತತ್ವವನ್ನೆ ಮೈಗೂಡಿಸಿ ಕೊಂಡರೆ ಕಾಯದ ಹಸಿವನ್ನು ಊಟ ತಿಂಡಿಯಷ್ಟು ಸರಳ ಕ್ರಿಯೆ ಮಾಡಿಕೊಳ್ಳುವ ಯಶೋಧರೆ ಮುಖಾಮುಖಿಯಾಗುತ್ತಾಳೆ. ಕಾಮ ಬರೇ ಕ್ರಿಯೆಯಲ್ಲ, ಅದು ಎಲ್ಲರನ್ನು ಪ್ರಪಾತಕ್ಕೆ ಎಳೆದು ಕೊಂಡು ಹೋಗುವ ಗಟ್ಟಿಯಾದ ಹಗ್ಗ ಎಂದು ಹಗ್ಗದ ಎರಡು ತುದಿಗೆ ಇಬ್ಬರು ಸಿಕ್ಕಿಕೊಂಡು ಬದುಕನ್ನು ಗ್ರಹಿಸದೆ ವಿಫಲರಾಗುವ ಬದುಕಿನ ಶೋಧ ಈ ಕಥೆಯದ್ದಾಗಿದೆ.

ಮೃಗವಾಗುವ ಕ್ರಿಯೆ ತನ್ನದ್ದನ್ನು ಪಡೆಯುವ ಯತ್ನವಾದರೂ ಬದುಕನ್ನು ಸ್ವೀಕರಿಸಲು ಹೊರ ಸಮಾಜಕ್ಕೆ ಹೆದರಿ ಜೀವ ಕಳೆದು ಕೊಳ್ಳುವ ಕ್ರಿಯೆ ಇಲ್ಲಿ ಲೇಖಕರು ಯಶೋಧರೆ ಸಾವಿನಿಂದ ಸ್ತ್ರೀಪರ ಧೋರಣೆಗೆ ದೂರ ಎಂದಾದರೆ ವಾಸ್ತವದಲ್ಲಿ ಎಷ್ಟೋ ಸ್ತ್ರೀಯರು ಪ್ರಾಣ ಕಳೆದು ಕೊಂಡಿಲ್ಲ.

ಯಶೋಧರೆ ಕಾಮವಾಂಚೆಯ ಪ್ರತಿನಿಧಿ ಅಷ್ಟೇ. ವೀರಭದ್ರ ಪ್ರೇಮವನ್ನು ಹಂಬಲಿಸಿ ಹೋರಾಟಮಾಡಿದ ಕ್ರೌರ್ಯದ ಮುಖ. ಇದು ಸತ್ಯ ಘಟನೆಯಾಗಿಯೇ ಸ್ವೀಕರಿಸಿ ಎಂದು ಹೇಳುವ ಕಥೆಗಾರರು ಯಶೋಧರೆಯ ಸಂದೇಶವನ್ನು ಗ್ರಹಿಸಲು ಓದುಗನಿಗೆ ಅವನ ಆಲೋಚನೆಯು ಸಂಘರ್ಷಕ್ಕೆ ಸೂಕಿ ಕಥೆಯು ನೈಪುಣ್ಯತೆ ಸಾಧಿಸುತ್ತಾರೆ. **'ಮೌನಗಳೇ ಮಾತನಾಡಿ'** ಎಂಬ ಕಥಾಯಲ್ಲೂ ಪ್ರೇಮ ಕಾಮಗಳಲ್ಲಿ ಆದರ್ಶದ ಹುಡುಕಾಟ ಮಾಡಿ ಹೆಣ್ಣು ಪ್ರೇಮದ ಸಂಕೇತವಾಗಿ ಯಾವುದಕ್ಕೆ ಒಲಿಯಬಹುದೆಂಬ ತೀರ್ಮಾನದಲ್ಲಿ ಯಾವುದಕ್ಕೂ ಸಿಗದೆ ಮರೀಚಿಕೆಯಾಗುವ ಹೆಣ್ಣನ್ನು ಮಾಯೆಯಾಗಿ ಚಿತ್ರಿಸಿದ್ದಾರೆ.

ಇಲ್ಲಿ ಪ್ರೇಮದ ಪ್ರತಿನಿಧಿಯಾಗಿ ತನ್ನನ್ನೊಬ್ಬಳು ಪ್ರೇಮಿಸುವ ಹುಡುಗಿ ಸಿಗುತ್ತಾಳೆ, ಎಂಬ ಹಂಬಲ ಹೊತ್ತು ಕನಸುಗಾರ ಫೋಟೋಗ್ರಾಫ್‌ರ್ ಕೆಂಪಣ್ಣ. ವಿಸ್ಕಿ ಬಾಂದ್ರಿಗಳೆಂದರೆ ಪ್ರಾಣವಾಗಿ ಸಿಕ್ಕ ಹೆಣ್ಣುಗಳನ್ನು ಕಾಮದ ತೆವಲಿನಲ್ಲಿ ನೋಡಿ ಪ್ರೀತಿ ಪ್ರೇಮಗಳು ಖೋಟ ಚೆಕ್ಕುಗಳಂತೆ ಒರಟಾಗಿ ಕಾಣುವ ಲಂಬೋಧರ ಚಿನ್ನ ಬೆಳ್ಳಿ ಸ್ವಂತ ಅಂಗಡಿ ಹೊಂದಿದ್ದಾನೆ. ಮತ್ತೊಬ್ಬ ಬಡಕಲು ಪ್ರಾಣಿ ಸಾಂಬಶಿವಮೂರ್ತಿ ಸದಾ ತಾತ್ವಿಕ ಚಿಂತಕನಾಗಿ ಅನ್ಯಾಯದ ಮಾರ್ಗ ವ್ಯಯಗಳನ್ನು ತಿರಸ್ಕರಿಸುವವ. ಮುದ್ರಕ ಮತ್ತು ಪ್ರಕಾಶಕನಾಗಿರುವವ ಒಂದನ್ನು ಮುದ್ರಿಸಿರಲಿಲ್ಲಿ ಪ್ರಕಾಶಪಡಿಸಿರಲಿಲ್ಲ. ಈ ಮೂರೂ ಒಂದೇ ರೂಮಿನ ವಾಸಿಗಳು ಎಂಬಲ್ಲಿ, ಒಂದೇ ದೇಹದ ವಿವಿದ ಮುಖಗಳನ್ನು, ಸ್ವಭಾವಗಳನ್ನು ಪರಿಚಯಿಸಲು ಎದುರು ಮನೆಯ ಸುಂದರ ಯುವತಿ 'ಅರ್ವಿ' ಈ ಮೂರು ಸ್ವಭಾವಗಳಲ್ಲಿ ಯಾರನ್ನು ಮೆಚ್ಚಬಹುದೆಂದು ಆದರೆ ಜಡನಾಗಿದ್ದ ವ್ಯಕ್ತಿಗಳು ಅರ್ವಿಳಗಾಗಿ ಕ್ರೀಯಾಶೀಲರಾಗುವ, ಹೆಣ್ಣು ಮಾಯೆ ಶಕ್ತಿ ಸೌಂದರ್ಯ ಕಾಮ ಪ್ರೇಮಗಳು ವ್ಯಕ್ತಿಯ ಬದುಕಿನಲ್ಲಿ ಸಂಚಲನ ಮೂಡಿಸುವ ಭಾವಗಳ ಅನಾವರಣ ಮಾಡಿದ್ದಾರೆ. ಅರ್ವಿ ಮೆಚ್ಚುವುದು ಪ್ರೇಮ, ಕಾಮ ಹಾಗೂ ಚಿಂತಕನನ್ನು, ಎನ್ನುವ ಪ್ರಶ್ನೆಗೆ ಚಿಂತಕಬಾವವಾದ ಆದರ್ಶಗಳನ್ನು ಮೆತ್ತಿದ್ದ ಸಾಂಭಶಿವಮೂರ್ತಿ ಮೊದಲ ಅಧ್ಯಾಯದಲ್ಲೇ ಅಣ್ಣನಾಗುತ್ತಾನೆ. ಪ್ರೇಮ -- ಕಾಮಗಳು ಮೌನವಾಗಿರುವ ಉತ್ತರಕ್ಕೆ ತವಕಿಸುವ ಭಾವ ಒಂದೆಡೆಯಾದರೆ ಹೆಣ್ಣಿನ ಒಳಭಾವವು ಇಲ್ಲಿ ರಹಸ್ಯವಾಗಿಯೆ ಉಳಿದುಬಿಡುತ್ತದೆ. ಹೆಣ್ಣು ಕಾಮವನ್ನು ಅಥವ ಪ್ರೇಮವನ್ನು ಅಪೇಕ್ಷೆ ಯಾವುದು ಎಂಬ ತೀರ್ಮಾನ ನೀಡಬೇಕಾಗದ್ದ ಅರ್ವಿ ಬೆಂಕಿಗೆ ಆಹುತಿಯಾಗುತ್ತಾಳೆ. ಇಲ್ಲಿ ಮನೋವೈಜ್ಞಾನಿಕ ದೃಷ್ಠಿಗೆ ಹತ್ತಿರವಾಗುವ ವಾತ್ಸಲ್ಯದಿಂದ ಕಾಣುವ ಆದರ್ಶದ ವ್ಯಕ್ತಿತ್ವ ಒಂದೆಡೆಯಾದರೆ, ಕಾಮ ಹಾಗೂ ಪ್ರೇಮಗಳು ನಶ್ವರತೆಯನ್ನು ಸೂಚಿಸುವವಳಾಗಿರುತ್ತಾಳೆ. ಅರ್ವಿ ಎಂದರೆ ಜಲಪಾತ ಯಾರ ಕೈಗೂ ಸಿಗದವಳು. ಪ್ರೇಮ ಸಂಕೇತವಾಗಿ ಎಂಬುದನ್ನು ಕಥೆಗಾರನು ಸೂಚಿಸಿದ್ದಾರೆ. ಕೊನೆಯದಾಗಿ ಕಾಮದ ಹೊಲಸನ್ನು ಪ್ರೇಮದ ಒಡಲನ್ನು ಸೋದರತೆಯ ನಂಟಿನ ವ್ಯಕ್ತಿತ್ವವನ್ನು ಒಟ್ಟಿಗೆ ಬಸಿಯುತ್ತದೆ. ಅರ್ವಿಯ

ಸಾವಿಗೆ ರೋಧಿಸುತ್ತದೆ ಎನ್ನುವ ಸೈದ್ಧಾಂತಿಕ ವ್ಯಕ್ತಿತ್ವ ಸಂಕೇತಗಳು ಕೌಶಲ್ಯದಿಂದ ಕಥೆಯನ್ನು ನಿರೂಪಿಸುವ ಹೊಸ ತಂತ್ರ ಓದುಗನ ಆಳಕ್ಕಿಳಿದು ಜಿಜ್ಞಾಸೆಗೆ ನೂಕಿ ಪ್ರೇಮತತ್ವವನ್ನು ಹಿಡಿಯುತ್ತದೆ.

'ಯಾತ್ರೆ' ಪಾಶ್ಚಿಮಾತ್ಯ ಯಾತ್ರಿಕ ಬದುಕಿನ ಅನಾವರಣ ಮಾಡುವ ಕಥೆ. ಪಾಶ್ಚಿಮಾತ್ಯ ಹಾಗೂ ಭಾರತೀಯ ಸಾಂಸ್ಕೃತಿಕ ಮನೋಧರ್ಮದ ಮುಖಾಮುಖಿಯಾಗುವ ಸಂವೇದನೆಯಾಗಿದ್ದು ಮೃದಲಳ ಭೇಟಿಯೊಡನೆ ಜರ್ಮನ್ ಯಾತ್ರೆ ಮುಗಿಸಿ. ಹಿಟ್ಲರ್‌ನ ಬವೇರಿಯ ರಾಜ್ಯದ ಡಾಕಾವ್‌ನಲ್ಲಿದೆ. ಕಾನ್ ಸೆಂಟ್ರೇಶನ್ ಕ್ಯಾಂಪು ಶಿಂಡ್ಲರ್ಸ್ ಲಿಸ್ಟ್ ಲಕ್ಷಾಂತರ ಜನರನ್ನು ಸುಟ್ಟ ಚರ್ಮ ಸುಲಿದ ಜಾಗ. ವಾಚ್ ಟವರ್‌ಗಳು, ಬ್ಯಾರಕ್‌ಗಳು, ಗ್ಯಾಸ್ ಚೆಂಬರ್, ನೇಣುಗಂಬಗಳು. ಜೀವಂತ ಸುಟ್ಟ ಒಲೆಗಳು ಈ ಎಲ್ಲವುಗಳ ಪರಿಚಯ ಗತಕಾಲದ ಭಯಗ್ರಸ್ತ ಕ್ರೂರ ಮನಗಳ ದರ್ಶನ ಮಾಡಿಸಿದ್ದಾರೆ. ಸಾಲ್‌ಯಾಕ್ ನದಿ ಆಲ್ಪ್ ಪರ್ವತ ಏಕ್ಷಾಂಗನ್ ಪ್ರಕೃತಿ ಸಾಸ್‌ಬರ್ಗ್‌ನ ಪ್ರಖ್ಯಾತ ಸಂಗೀತಗಾರ ಮೋಜಾರ್ಟ್‌ನ ಹುಟ್ಟೂರು. ಹೀಗೆ ಕೌರ್ಯ ಸಂಗೀತಗಳ ನೆಲೆಯನ್ನು ಕಾಣುವಲ್ಲಿನ ಪ್ರಜ್ಞಾ ಜಾಗೃತಿಯಿಂದ ಕಥೆಯನ್ನು ಏಳೆಯಾಗಿಸುತ್ತಾರೆ ನವಿರುಭಾವವನ್ನು ತುಂಬುವ ನೈಪುಣ್ಯವುಳ್ಳ ಕಥೆಗಾರರಾಗಿ ಕಾಣುತ್ತಾರೆ.

ಕಥೆಯ ಆರಂಭದಲ್ಲೆ ಯಾಂತ್ರಿಕ ಬದುಕಿನ ನಿರ್ಭಾವನೆಗಳನ್ನು ವ್ಯಕ್ತಪಡಿಸುವ ನಗೆಮೊಗದ ಕೃತಕ ಆತಿಥ್ಯದಾರಿ ಗಗನಸಖಿಯರ ಬದುಕನ್ನು ಚಿಂತಿಸುವ ಕಥೆಗಾರರು. ತನ್ನ ಗೆಳತಿಯಾದ ಮೃದುಲಳ ಸೌಂದರ್ಯ, ನಿಮಾಕು. ಪ್ರತಿಭೆ ಹೊಂದಿದ್ದ ಬಾಲ್ಯದ ಗೆಳತಿ. ಶ್ರೀಮಂತ ಮನೆತನದ ಲಕ್ಷಣಗಳನ್ನು ಹೊಂದಿದ್ದವಳು. ಇವಳಿಗಾಗಿ ಪರಿತಪಿಸುವ ಪ್ರೇಮಿಸುವ, ಹಂಬಲಿಸುವ ಹುಡಗರ ಮಧ್ಯ ಬಸವಾರಾಧ್ಯ ಎಂಬ ಜೊತೆಗಾರನೂ ಒಬ್ಬ. ಇಂತಹ ಆರಾಧಕರನ್ನು ಕಂಡು ಸುಖಪಡುವ ತುಂಟತನವಿದ್ದ ಇವಳಿಗೆ, ಮುಂದೆ ಗಂಡ ಎಂತಹವನು ಸಿಗಬಹುದು? ಇವಳ ಸೌಂದರ್ಯ ನಗುವಿಗೆ ಮಾರುಹೋಗಿ ಗಂಡನ್ನೇ ಆಳ್ತಾಳೆ ಎಂದವರು ಇವಳ ಜಂಬಕ್ಕೆ ದಿನಾ ಒದೆಯುವ ಗಂಡ ಸಿಗಬೇಕು ಅಂತ ಆಶಿಸುತ್ತಿದ್ದವರ ನಡುವೆ ಭಾರತೀಯ ಸುಸಂಸ್ಕೃತ ಮಹಿಳೆಯನ್ನು ಮದುವೆಗಾಗಿ ಹಂಬಲಿಸಿದ ಜರ್ಮನಿಯ ಪ್ರಜೆ ಪೀಟರ್ ಕೊಲ್‌ಮಾನ್‌ನ ಮದುವೆಯಾದಳು. ಪಾಶ್ಚಾತ್ಯ ಹೆಂಗಸರಿಗೆ ತಾಳ್ಮೆ, ಔದಾರ್ಯಗಳೇ ಇಲ್ಲ. ಭಾರತೀಯ ಮಹಿಳೆ ಜಗತ್ತಿಗೆ ಮಾದರಿ. ಬೆಳಿಗ್ಗೆ ಮದುವೆ ಮಧ್ಯಾನ ಹನಿಮೂನ್ ಸಂಜೆ ಡೈವೊರ್ಸ್ ಎಂಬಂತಾಗಿ ವಿವಾಹಕ್ಕೆ ಬೆಲೆಯೇ ಇಲ್ಲ. ಹಾಗಾಗಿ ಸುಸಂಸ್ಕೃತ ಭಾರತೀಯ ಮಹಿಳೆ ಮೃದುಲಳ ಮದುವೆಯಾಯಿತು.

ಮೃದುಲ ಐಷರಾಮಿತನ ಸೋಂಕಿ ಬದುಕಿನ ಹಂಬಲವನ್ನು ಹೊತ್ತು, ಭಾರತೀಯ ನಾಗರಿಕತೆಯನ್ನು ತಿರಸ್ಕರಿಸಿ ಜರ್ಮನಿ ಸೇರಿದಳು. ನಂತರವಷ್ಟೆ ಭಾರತದ ಗೌರವ ಪ್ರೀತಿ ಸಂಸ್ಕೃತಿಗಳ

ಮಣ್ಣಿನ ವಾಸನೆ, ಕಮರು ತಂಗಾಳಿಗಾಗಿ ಹಂಬಲಿಸುತ್ತಾಳೆ. ಕೊಲ್ ಮಾನ್ ಮಗುವಿಗೆ ಜನ್ಮ ನೀಡಿ ಒಂದಷ್ಟು ಹಣ, ನೆನಪು ಕೊಟ್ಟು ಡೈವೊರ್ಸ್‌ನ್ನೂ ಕೊಡುತ್ತಾನೆ. ಅನಂತರ ಗಜಾ ಚಿಟಚಿಟಿ ಎಂಬುವನು ಮದುವೆಯಾಗಿ ಅವನೂ ಬಿಟ್ಟುಹೋದ. ಈಗ ಮೈಕಲ್ ರಾಯಿತಲ್ ಎಂಬ ಬಾಯ್ ಫ್ರೆಂಡ್ ಜೊತೆ ಇರುವ ಮೃದುಲಳಿಗೆ ಒಂಟಿತನ ಕಾಡಿದೆ. ತನ್ನ ಜೊತೆಗಾರರಾದ ಮಾನಸ, ಸುಜಯ್, ಪವಿತ್ರ, ಕಲ್ಪನರಂತೆ ಭಾರತೀಯ ಸಂಸ್ಕೃತಿಯ ಜೀವನವೇ ಸಾರ್ಥಕವೆನಿಸಿದೆ. ಈ ನಡುವೆ ಕಥೆಗಾರರಲ್ಲಿ ಭಾರತಕ್ಕೆ ಬರುವ ಹಂಬಲ. ಭಾರತಕ್ಕೆ ಮರಳಿ ಬರುವ ನಿರ್ಧಾರಕ್ಕೆ ಕಥೆಗಾರರ ವಿರೋಧದಿಂದ ಅರಿವನ್ನು ಮನವರಿಕೆ ಮಾಡಿಕೊಡುತ್ತಾರೆ. ಸಂಪ್ರದಾಯದ ಚೌಕಟ್ಟನ್ನು ಮುರಿದು ಕಟ್ಟುವ ಕ್ರಿಯೆ ಇಲ್ಲಿದೆ. ವಿಲಾಸ ವೈರಾಗ್ಯವಾಗುವ ಐಷಾರಾಮಿತನದ ಬದುಕಿನ ಕ್ರಿಯೆ ದಾಂಪತ್ಯವಿಯೋಗ ಪ್ರಣಯ ಸಂಚಾರಿಭಾವದ ಬದುಕು ನೆವೆಯಾಗಿರುವಾಗ, ಭಾರತ ನಿನಗೆ ಜಾಡ್ಯವಾಗಬಹುದು. ಆದರೆ ಅಲ್ಲಿಯ ಸಂಸ್ಕೃತಿ ಮೊದಲ ಮೃದುಲಳಾಗಿ ಸ್ವೀಕರಿಸಲಾರದು ಎಂಬ ಸ್ಥಿತ್ಯಂತರವನ್ನು ಚಿತ್ರಿಸುತ್ತಾರೆ. ಅಮೇರಿಕಾ ಅಮೇರಿಕಾದ ಸಿನಿಮಾದ ಭೂಮಿಕಾ, ಪ್ಯಾರಿಸ್ ಪ್ರಣಯದ ಪೂರ್ವಿ ಮರಳಿ ಮಣ್ಣಿನ ವಾಸನೆ ಸವಿಯಲು, ಹಂಬಲಿಸಿದವರೇ ಭಾರತೀಯ ಮೌಲ್ಯ ದಾಂಪತ್ಯ ಹಾಗೂ ಪಾಶ್ಚಿಮಾತ್ಯ ಬದುಕಿನ ದಾಂಪತ್ಯವನ್ನು ಇಲ್ಲಿ ಮುಖಾಮುಖಿಯಾಗಿಸುತ್ತಾರೆ. ಕಥೆಗಾರರು ಭಾರತೀಯ ಗೊಡ್ಡು ಸಂಪ್ರದಾಯನ್ನು ದಾಟಿಸಿದರೂ ಎಂಬುದಕ್ಕಿಂತ ಬದುಕಿನ ಅನುಸಂಧಾನ ಮಾಡುತ್ತಾರೆ. ಮರಳಿ ಬಯಸಿದರೂ ಅದು ಮೀರಿದ ಕಾಲವಾಗುವ ಕಟುವಾಸ್ತವದ ನೈತಿಕ ಪ್ರಜ್ಞೆ, ಮೃದಲಳ ಬದುಕಿನ ಯಾತ್ರೆ ಉತ್ಕಾಟವಾಗಿದ್ದರೂ ಸ್ನೇಹಬಾವವಿಲ್ಲದೆ ಸುಖ ದುಃಖಗಳ ಸಮಭಾಗದ ಸಹಾನುಭೂತಿಗಳಿಲ್ಲದೆ ಕೃತಕ ಯಂತ್ರವಾಗುವ ಬದುಕು ಇಲ್ಲಿ ಸ್ತ್ರೀಯ ವಾಸ್ತವ ನೈಜತೆಯ ನಲೆಯನ್ನು ನೈತಿಕತೆಗಳ ಸೋಲು ಗೆಲುವುಗಳ ಪರಿಕ್ಕಿಂತಲೂ ಬದುಕಿನ ಶೋಧನೆ ಮುಖ್ಯವಾಗುತ್ತದೆ.

'12155' ಎಂಬ ಕಥೆಯಲ್ಲಿ ವ್ಯಕ್ತಿಯೊಳಗಿನ ಆಳದ ಪ್ರೇಮ ವಾಂಚೆಯನ್ನು ಸಂವೇದನಗೊಳಿಸಿದ್ದಾರೆ. ತನ್ನ 43ನೇ ವಯಸ್ಸಿನವರೆಗೆ ಆರ್ಮಿಯಲ್ಲಿ ಕ್ಯಾಪ್ಟನ್ ಶಿಸ್ತಿನ ಸಿಪಾಯಿ. ನಿವೃತ್ತಿಯಾಗಿ ಈಗ ಥೇಟರ್‌ನಲ್ಲಿ ಮ್ಯಾನೆಜರ್ ಆಗಿ ಕಾರ್ಯನಿರ್ವಹಣೆ ಮಾಡುತ್ತಾರೆ. ಈ ಮೊದಲೇ ಅಸ್ತವ್ಯಸ್ಥವಾಗಿದ್ದ ಥೇಟರ್‌ನ ಸಂಪೂರ್ಣ ಬದಲಾವಣೆ ಮಾಡಿ ಬ್ಲಾಕ್ ಮಾರ್ಕೆಟ್ ರದ್ದಾಯಿತು. ಆಡಿಟೋರಿಯಂ ಸ್ವಚ್ಚವಾಗಿತ್ತು, ಬೀಡಿ ತಿಗಣೆ ನೀಷೇಧವಾಯಿತು, ಒಬ್ಬರಿಗೆ ಒಂದೇ ಟಿಕೆಟ್, ಕ್ಯೂನಲ್ಲಿ ಬರಬೇಕು. ನೌಕರರ ಸಮಯ ಪಾಲನೆ ಪೂರ್ಣ ಬದಲಾವಣೆ, ಲಾರಿ ಬೂಟಿನ ಶಬ್ದಕ್ಕೆ ಜಾಗೃತವಾಗುವಂತಾಯಿತು. ಪಿಕಲಾಟಕ್ಕೆ ಬಂದ ನೌಕರರಲ್ಲಿ ಪೀರ ಕೂಡ. ಈತ ಮುಸ್ಲಿಂ ಅಗಿದ್ದರೂ, ಹರಿಕಥೆ ಮಾಡಬಲ್ಲ, ಎಲ್ಲಾ ಸಿನಿಮಾದ ಸಾಹಿತ್ಯ ಹಾಡು ಧ್ವನಿಯನ್ನು ಬಲ್ಲ. ಪ್ರತಿಭೆಯುಳ್ಳ ಪೀರ ಮೈಗಳ್ಳ, ಶೋಕಿಲಾಲ, ಥಳಕು ಜಾಸ್ತಿ. ಸಿನಿಮಾದಲ್ಲಿ ನಟಿಸುವ ಹಂಬಲದೊಳಗೆ ಕ್ಯಾಪ್ಟನ್‌ನ ಶಿಸ್ತಿನಲ್ಲಿ

ಕೆಲಸ ಮಾಡುತಿದ್ದ ಪೀರ ಕ್ಯಾಪ್ಟನ್‌ಗೆ, ಅವಳ ಮಗಳದೇ ವಯಸ್ಸಿನ ಪ್ರಾಯದ ಹುಡುಗಿ ಮೆಚ್ಚಿ ದಿನನಿತ್ಯ ಕರೆ ಮಾಡುವ ಕುಸುಮಬಾಲೆಯಾಗಿ ಬಿಡುತ್ತಾನೆ. ದಿನನಿತ್ಯ ಕಾಯುವ ಬಣ್ಣದ ಪ್ರೀತಿ ವಾಂಚೆಗಳ, ಆಕರ್ಷಣೆಯ ಮಾತುಗಳಿಂದ ಶಿಸ್ತಿನ ಒರಟುತನದ ಕ್ಯಾಪ್ಟನ್, ಮೃದು ಸ್ವಭಾವದ ಹೃದಯಿಯಾಗುತ್ತಾರೆ. ಆತ್ಮೀಯತೆಯನ್ನು ನೌಕರರನ್ನು ಕಾಣುವ ಪ್ರೇಮದ ತತ್ವವನ್ನು ಕಥೆಗಾರರು ಇಲ್ಲಿ ನಿರೂಪಿಸುತ್ತಾರೆ. ಕುಸುಮಬಾಲೆಯಾಗಿ ಒಗ್ಗಟನ್ನು ನಾವಿರಾಗಿ ಬಿಡಿಸುವ ಇಉ 12155 ರ ಗುಟ್ಟನ್ನು ಬಿಡಿಸಿ, ಬುಕ್ಕಿಂಗ್ ಕ್ಲರ್ಕ್ ಆಗಿ, ತನ್ನ ಧ್ವನಿ ಬುದ್ಧಿವಂತಿಕೆಯ ಲಾಭ ಪಡೆದುಕೊಳ್ಳುತ್ತಾನೆ. ಆದರೆ ಪತ್ರಿಕೆಯಲ್ಲಿ ಬಂದ ಶ್ರೀಮಂತರ ಮಗಳ ಸಾವಿನ ಸುದ್ದಿಯಿಂದ ತನ್ನನ್ನೇ ಪ್ರೇಮಿಸಿದ 12155 ಇರಬಹುದೆಂದು ಮನೋವ್ಯಥೆಗೆ ಒಳಗಾಗಿ, ರೋಗಿಯಾಗಿ ಆಸ್ಪತ್ರೆ ಸೇರಿದಾಗ. ಫೀರನ ಪಶ್ಚಾತ್ತಾಪ ಜಾಗೃತಗೊಂಡು ಕ್ಯಾಪ್ಟನ್‌ಗೆ ತಿಳಿಸಿ ಸುಖಾಂತಗೊಳಿಸುತ್ತಾನೆ. ಕಠಿಣ ಧೋರಣೆಗೆ ಪ್ರೇಮ ಔಷಧವಾಗುತ್ತದೆ. ಹಾಗೂ ತನ್ನದೇ ಮಗಳ ವಯಸ್ಸಿನ ಯುವತಿಯಲ್ಲಿ ಪ್ರೇಮವಾಂಚೆಯಾಗುವ ಹಾಗೂ ಸಾಮಾನ್ಯನಲ್ಲಿರುವ ಪ್ರತಿಭೆ ವ್ಯಕ್ತಿಯನ್ನು ಅನಾವರಣಗೊಳಿಸುತ್ತದೆ. ಕುಸುಮಬಾಲೆಗಾಗಿ ತನ್ನ ಬದುಕಿನ ತವಕ ಪ್ರೀತಿ ಅತಂಕಗಳ ಮುಡಿಪಿಡುವ, ಮಾನವಸಹಜ ಗುಣಗಳ ಕ್ರಿಯೆ ಇಲ್ಲಿ ವ್ಯಕ್ತವಾಗಿದೆ. ಒಟ್ಟಾರೆ ಪ್ರೇಮ ಮನುಷ್ಯನನ್ನು ಬದಲಾಯಿಸುವ ಪ್ರೇಮದ ಸಾಮರ್ಥ್ಯ ಇಲ್ಲಿ ನಿರೂಪಿತವಾಗಿದೆ.

'ಸನ್ನಿಧಿ' ಇದೊಂದು ಸಾಮಾಜಿಕ ಹಾಗೂ ಅನೈತಿಕ ಪ್ರೇಮದ ಕಥೆಯಾಗಿದೆ ಸ್ವಂತ ಕಥೆಗಾರರ ಮಿತ್ರನಾದ ಪುಂಡಲೀಕ ಸಾಕತ್ ಪುಂಡ, ಲೋಭಿ, ಅಸೆಬುರುಕ, ಧನದಾಹಿ, ಕಚ್ಚೆಹರುಕ, ಶೋಕಿಲಾಲನಾಗಿದ್ದು. ಮದುವೆಯಾಗದೆ ಹರೇಯದ ಹುಡುಗೀರ ಪ್ರೇಮ ಒಲ್ಲಿದೇ ಸದಾ ದ್ಯೂತದಲ್ಲಿವರು ಸೈನಿಕನ ಹೆಂಡತಿಯನ್ನು ಪ್ರೇಮಿಸಿ ಕಥೆಗಾರರ ಗೆಳೆತನದಲ್ಲೇ ಇದ್ದು ಇವರು ನೈತಿಕತೆಯ ಬಗ್ಗೆ ತಿಳುವಳಿಕೆ ಹೇಳಿದರೆ ತಿರಸ್ಕಾರವಾದರೂ ಈತನ ಗೆಳೆತನ ಸಾನಿಧ್ಯ ಸಾಧ ಇರುತ್ತಿದ್ದವನ್ನು ಕಥೆಗಾರರಿಗೆ ಪ್ರಿಯವಾಗ್ಗಿದ್ದ. ತನ್ನ ದೌರ್ಬಲ್ಯಗಳ ನಡುವೆಯೂ ಉತ್ಸಾಹದಿಂದ ಪುಟಿಯುತ್ತಿದ್ದ ಪುಂಡಲೀಕ ಹೆಚ್ಚು ಇಷ್ಟಾವಾಗುತಿದ್ದ. ಅತನ ಉತ್ಸಾಹವನ್ನು ಸರಿದಾರಿಗೆ ನಗ್ಗಿಸುವ ವಾತಾವರಣ ಮಾರ್ಗದರ್ಶನ ಸಿಕ್ಕಿದ್ದರೆ ಅವನನ್ನು ಇನ್ನಷ್ಟು ಚೆನ್ನಾಗಿ ಬಳಸಿಕೊಳ್ಳಬಹುದಿತ್ತೇನೋ, ಅಂದರೆ ಇಲ್ಲಿ ಸಾಮಾಜಿಕವಾಗಿ ಯಾರು ಕೆಟ್ಟವರಲ್ಲ ಸಮಯ ಪರಿಸರ ಮತ್ತೆಯಾವುದೊ ಸಂದರ್ಭಗಳಲ್ಲಿ ಕೆಟ್ಟ ಪ್ರವೃತ್ತಿಗೆ ಒಳಗಾಗಿಬಿಡುತ್ತಾರೆ. ಅದರೆ ಮಾರ್ಗದರ್ಶನದ ಅಗತ್ಯತೆಯನ್ನು ಅದರ ಕೊರತೆಯನ್ನು ಬದುಕಿನ ವಿಶ್ಲೇಷಣಾ ಸಂವೇದನೆಯನ್ನಿಡುತ್ತಾರೆ

ಇಂತಹ ಪುಂಡಲೀಕ ಮುದಿ ವೆಂಕಟಪ್ಪನ ಸೊಸೆ ಮಿಲಿಟರಿಯಲ್ಲಿರುವವನ ಹೆಂಡತಿಯನ್ನು ತನ್ನ ಭೋಗಜೀವನದ ತೃಷೆಯನ್ನು ಹೆಂಡತಿಯಂತೆ ಕಾಮಿಸಿ ಪ್ರೇಮಿಸುತ್ತಿದ ಆಕೆ ಗರ್ಭವತಿಯಾಗುತ್ತಿದ್ದಂತೆ, ಈತನಿಗೆ ಕ್ಯಾನ್ಸರ್ ಬಂದು ಸಾವಿನ ಸನ್ನಿಧಿಗೆ ಸೇರುತ್ತಾನೆ. ಈ ಪದುಮ ಕಥೆಗಾರರಿಗೆ ಪತ್ರ ಬರೆದು ಅವರ ಸಾವಿನ ಸಾಮೀಪ್ಯವನ್ನು ತನ್ನ ಪ್ರಸವ ವೇದನೆಯಲ್ಲಿ ಪಕ್ಕದ ವಾರ್ಡನಲ್ಲಿರುವ ವಿಷಯ ತಿಳಿಸಿ ಬಂದು ಒಮ್ಮೆ ನೋಡಲು ತಿಳಿಸಿದಾಗ ಆತ್ಮೀಯ ಮಿತ್ರನ ಅಂತಿಮ ದರ್ಶನಕ್ಕೆ ಬರುವ ಸಂದರ್ಭದಲ್ಲಿನ, ಪಯಣದಲ್ಲಿ ಗೆಳೆಯನ ಸಿಂಹವಲೋಕನವನ್ನು ಮಾಡಿಕೊಡುವ ಕಥನತಂತ್ರ ಸಹಜ ಅಭಿವ್ಯಕ್ತಿಯಾಗಿ ಮೂಡಿಬಂದಿದೆ.

ಪುಂಡಲೀಕ ಸಾವಿನ ಸನ್ನಿಧಿಯಲ್ಲಿ ಸರಿದು ಪಶ್ಚಾತ್ತಪದಲ್ಲಿ ಬೆಂದು ತಾನು ಬದುಕುವ ಹಂಬಲವನ್ನು ವ್ಯಕ್ತಪಡಿಸಿದನಾದರೂ ಅದೂ ಸಾಧ್ಯವಿಲ್ಲದ ಮಾತು ಕೊನೆಗೆ ಪದುಮಳ ಮಗುವನ್ನು ಸಾಯುವುದರೊಳಗೆ ನೋಡಬೇಕೆಂಬ ಹಂಬಲ ವ್ಯಕ್ತವಾಗುವ ಮುನ್ನ ವಿಕಲ್ಪಗಳು ಮಾನವಿಕ ಸೈದ್ಧಾಂತಿಕ ಹಿನ್ನೆಲೆಯಲ್ಲೇ ಲೇಖಕರ ವ್ಯಕ್ತತೆ ಇಲ್ಲಿನ ತಾಂತ್ರಿಕ ನೈಪುಣ್ಯತೆಯಲ್ಲಿ ಕಥೆ ಸಾಗುತ್ತದೆ. ಪುಂಡಲೀಕನ ನೋವಿನ ಚೀರಾಟ ಪದುಮಳ ಪ್ರಸವದ ನೋವಿನ ಚೀರಾಟ ಏಕಕಾಲದಲ್ಲೇ ನಡೆಯುತ್ತದೆ. ಒಂದು ಸ್ವಾಗತ ಮತ್ತೊಂದು ನಿರ್ಗಮನ ಜೀವನದ ತುದಿಗಾಲಿನ ಸನ್ನಿಧಿಯಾಗಿದೆ. ಕೊನೆಗೆ ಮಗು ಹುಟ್ಟುವುದಿಲ್ಲ ಪುಡಲಿಕ ಸಾಯುವುದಿಲ್ಲ, ಕಥೆ ಆತ್ಯಂತವಾಗಿ ರಹಸ್ಯವಾಗಿಯೆ ಮುಗಿಸುವ ಸನಿಹವನ್ನು ಕಾತರದಲ್ಲಿ ಹಂತಕ ಮಾಡುವಲ್ಲೇ ನಿಲ್ಲಿಸುತ್ತಾರೆ. ಪದುಮ ಇನ್ನೇನು ಹಡೆಯುತ್ತಾಳೆಂದು ಪುಂಡಲೀಕ ನೋಡಿದನೆ? ಎಂಬುದು ಪ್ರಶ್ನೆಯಾಗಿ ಉಳಿಯುತ್ತದೆ, ಇದೇ ಸನ್ನಿಧಿಯಾಗಿ ಕಥೆ ಮುಗಿಯುತ್ತದೆ. ಇಲ್ಲಿನ ಅನೈತಿಕ ಪ್ರೇಮ- ನೈತಿಕ ಸಿದ್ಧಾಂತಗಳನ್ನು ಮೀರಿದ ಬೇರೊಂದು ಲೋಕ ಬದುಕಿನ ಹುಡುಕಾಟದಲ್ಲಿ ಉತ್ತರವಿಲ್ಲದೆ ಮರೆಯಾಗುವ ಕಥನ ತಂತ್ರದ ನೈಪುಣ್ಯತೆಯಿಂದ ಕಥೆಗಾರರು ಮೌನಿಯಾಗುತ್ತಾರೆ.

'ಸರಸ್ವತೀ ಪುರದಲ್ಲೊಂದು ಹೆಬ್ಬೆಟ್ಟಿನ ಗುರುತು' ಅಂತರ್‌ಜಾತಿಯ ಪ್ರೇಮದ ದುರಂತ ಕಥನವಾಗಿದೆ ಗೌಡರ ಹುಡ್ಗ ರವಿ ವತ್ಸಲ ಎಂಬ ಬ್ರಾಹ್ಮಣರ ಹುಡ್ಗಿ ಪ್ರೀತಿಸುವ ಕಥೆಯಲ್ಲಿ ನಿರೂಪಕನ ಪಾತ್ರದ ಕಥೆಗಾರರು ಕಥೆಯನ್ನು ಚಿತ್ರಿಸಿಕೊಡುತ್ತಾರೆ. ರವಿಗೆ ಬ್ರಾಹ್ಮಣ್ಯದ ಮೇಲೆ ಸಿಟ್ಟು ಕೋಪ ಎಷ್ಟೇ ಮುಗ್ಧತೆಯಿಂದ ಬದುಕೀವಿ ಅಂದರೂ ರಕ್ತದಲ್ಲಿ ಬೆರೆತಿರುವ ಜಾತಿಯ ಪ್ರಭಾವದಿಂದ ಬಿಡಿಸಿಕೊಳ್ಳಲಾಗದೆ ಹೆಣಗ್ತಿದ್ದಾನೆ. ಇದರ ಜೊತೆಗೆ ಇವರ ಮೇಷ್ಟ್ರರಾಗಿ ನಿರೂಪಕರಿದ್ದಾರೆ. ಇವರಿಬ್ಬರೂ ಗಂಗೋತ್ರಿಯಲ್ಲಿ ಎಂ.ಎ ತರಗತಿಯಲ್ಲಿ ಓದುತ್ತಿದ್ದಾರೆ. ಗೌಡ ರವಿಯನ್ನು ಓದಿಸುವ ಸಲುವಾಗಿ ಊರಿನ ಆಸ್ತಿ ಮಾರಿ ಕ್ಯಾತಮಾರನಹಳ್ಳಿಯಿತ ಸರಸ್ವತೀಪುರಗೆ ಬಂದಿದು, ರವಿಯನ್ನು

ಓದಿಸಿ ಎಂ.ಎ ಮಾಡಿದ ನಂತರ ಸ್ವಾಮೀಜಿಗಳವರನ್ನು ಕರೆಯಿಸಿ ಪಾದಪೂಜೆ ಮಾಡಿ ಗೌಡರ ಕಾಲೇಜಿನಲ್ಲೊಂದು ಲೆಕ್ಚರರ್ ಕೆಲಸ ತಗೊಂಡರೆ ಅವರ ಅರ್ಧ ಆಸೆ ಮುಗಿಯುತ್ತದೆ. ಉಳಿದವು, ಭದ್ರಾವತಿಯ ಗಿಡ್ಡೇಗೌಡರ ಮಗಳನ್ನು ಸೊಸೆಮಾಡಿಕೊಳ್ಳುವುದು. ಒಬ್ಬಳೇ ಮಗಳು ಹೊತ್ತು ತರುವ ಗದ್ದೆ ಸಿನಿಮಾ ಮಂದಿರಗಳಿವೆ ರವಿಯನ್ನ ಮಾಲಿಕನಾಗಿಸುವುದು ಇತ್ಯಾದಿಗಳು.

ರವಿ–ವತ್ಸಲ ಸುಂದರವಾದ ಜೋಡಿ ಜಾತಿಯ ಕಟ್ಟುಪಾಡು ಕಿತ್ತರೆ ಇಂಥಾ ಎಷ್ಟು ಸುಂದರ ಜೋಡಿಗಳು ರೂಪುಗೊಳ್ಳುತ್ತವೆ. ಇಂಡಿಯಾದಲ್ಲಿ ಇಂಟರ್ ಕ್ಯಾಸ್ಟ್ ಮ್ಯಾರೇಜ್‌ಗಳನ್ನು ಕಡ್ಡಾಯ ಮಾಡುವ ಹಂಬಲ ವ್ಯಕ್ತಪಡಿಸಿ ಅದುನಿಕ ಬಸವಣ್ಣರಾಗುವ ತುಂಟ ತನವನ್ನು ವ್ಯಕ್ತಪಡಿಸಿ ನಿರೂಪಿಸುತ್ತಾರೆ. ಇಲ್ಲಿ ಗೌಡ್ರು ಹುಡುಗ ಬ್ರಾಹ್ಮಣ ಹುಡುಗಿ ವತ್ಸಲಳನ್ನು ಪ್ರೇಮಿಸುವುದ್ದನ್ನು ವಿರೋಧಿಸುವ ಕುಟುಂಬಕ್ಕೆ, ನಿರೂಪಕರಾದ ಮೇಷ್ಟ್ರು ಗೌಡರ ಮನೆಗೆ ಹೋಗಿ ವಿವರಿಸಿದ್ದಕ್ಕೆ, ನೀವು ಸುಮ್ಮನೆ ಕಥೆ ಬರೀರಿ ಎಂಬ ವಿಡಂಬನೆ, ಬದಲಾಗದ ಮನಸ್ಥಿತಿಯನ್ನು ಜಾತಿ ವರ್ಗಗಳ ಚೌಕಟ್ಟುಗಳನ್ನು ವ್ಯಕ್ತಪಡಿಸುತ್ತಾರೆ. ತನ್ನ ವ್ಯಾಸಂಗವನ್ನು ಅರ್ಧಕ್ಕೆ ನಿಲ್ಲಿಸಿ ಗೌಡರ ಹುಡುಗ ರವಿ ಬ್ರಾಹ್ಮಣರ ಹುಡುಗಿ ವತ್ಸಲ ಪ್ರೇಮ ವಿವಾಹವಾಗಿ ಬದುಕಿನ ಹೋರಾಟವನ್ನು ಸ್ವೀಕಾರ ಮಾಡುತ್ತಾರೆ. ಆದರೆ ಹೋರಾಟದ ಬದುಕು ರವಿಯ ಸಾವಿನಲ್ಲಿ ಅಂತ್ಯವಾಗುತ್ತದೆ. ಶವವನ್ನು ಬಯಸುವ ಗೌಡರಿಗೆ ವತ್ಸಲಳ ಗರ್ಭವನ್ನು ಅನಿಷ್ಠ ಪಿಂಡದಂತೆ ವರ್ತಿಸುವ ಅಮಾನವೀಯತೆ, ಜಾತಿ ಹಾಗೂ ವರ್ಗಗಳ ನಡುವೆ ಪ್ರೇಮ ಸೋಲು ಅನುಭವಿಸುವಂತೆ ಕಟು ಸಮಾಜದ ವಿಡಂಬನೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ವಿದವೆ ವತ್ಸಲಳ ಗಂಡನಾಗಿ ಮಗುವಿಗೆ ಆಶ್ರಯ ಕೊಡಬಯಸುವ ಕಥೆಗಾರರು, ಮರುಹುಟ್ಟಿನ ರವಿಯಾಗ ಬಯಸುತ್ತಾರೆ. ಪರಿವರ್ತನೆಯ ಮಾನವೀಯ ಕಾಳಜಿ, ಶಿಷ್ಟ ಜಗತ್ತಿನ ಒಳವ್ಯಾಪಾರದ ಕ್ರಾಂತಿಯನ್ನು, ವತ್ಸಲಳ ಬದುಕಿನ ದೀವಿಗೆಯಾಗುವ ಆದರ್ಶದ ಆಶೆಯ ಸಮಾಜಮುಖಿಗುಣವನ್ನು, ಸೋತು ಗೆಲ್ಲುವ ಕಥೆಗಾರರ ತವಕವನ್ನು, ಪ್ರೇಮಮುಖಿಯಾಗಿ ಜೀವನವನ್ನು ಶೋಧಿಸುವ ಕ್ರಿಯೆ ನಾಗತಿಹಳ್ಳಿರವರ ಕಥೆಯಲ್ಲಿ ನೋಡಬಹುದಾಗಿದೆ.

'ವಾಸ್ತವಗಳೆ ನಮ್ಮನ್ನು ಬಿಟ್ಟು ಬಿಡಿ' ಎಂಬ ಕಥೆ ಬದುಕಿನ ವಾಸ್ತವತೆಯ ನೆಮ್ಮದಿಯ ಹುಡುಕಾಟದ ಸಂವೇದನೆಯಾಗಿದೆ. ವಿಷ್ಣು ಮತ್ತು ಅಮೃತ ನಗರ ಬದುಕಿನ ಉದ್ಯೋಗಿಗಳಾಗಿ ನಗರ ಜೀವನದ ಜಂಜಾಟ ಬದುಕಿನ ಅನಾವರಣ ಇದಾಗಿದೆ. ಗಂಡ ಹೆಂಡತಿ ಇಬ್ಬರ ದುಡಿಮೆಯಲ್ಲಿ, ಊಟ ಮಾಡಲಾಗದ ಆಯಾಸ ಅಡಿಗೆ ಮಾಡಿ ಉಣಲಾರದ ವ್ಯಥೆ. ಎಷ್ಟು ದುಡಿದರೂ ಪ್ರಯೋಜನವಿಲ್ಲದ ಬಾಳ್ವೆ, ನೆಮ್ಮದಿ ತರದ ಬಾಡಿಗೆ ಮನೆ. ನಗರ ಬದುಕಿನ ಜಂಜಾಟಗಳ ಬದುಕಿನಿಂದ ದೂರ ಸರಿಯುವ ಅಲೋಚನೆ ಮಾಡಿ, ನಗರದ ಹೊಗೆ ವಾಹನಗಳ ಕಿರಿಕಿರಿ ಕೆಟ್ಟ

ಕನಸ್ಸುಗಳಿಂದ ಬಹದೂರ ಹಳ್ಳಿಯನ್ನ ಭೂಮಿಯನ್ನು ಕೊಂಡುಕೊಳ್ಳವುದು ನಿರ್ಧಾರವಾಗುತ್ತದೆ. ನಗರ ಬದುಕಿನ ಯಾಂತ್ರಿಕ ಒತ್ತಡದ ನೌಕರಿ, ಸ್ಕೂಟರ್, ಟಿ.ವಿ, ಬಂಗಾರದ ಬಳೆ ಸಹೋದ್ಯೋಗಿ, ಹೀಗೆ ಭ್ರಮೆಯ ಲೋಕವೆ ನಗರ. ಮರಳಿ ಹಳ್ಳಿಗೆ ಮಣ್ಣಿಗೆ ಹೋಗುವುದೆ ವಾಸ್ತವೆಂದು, ಗರಿಬಿಚ್ಚಿದ ಹಕ್ಕಿಯಾಗಿ ಹಳ್ಳಿಯಿಂದ ದೂರದ ಹೊಲದಲ್ಲಿ ಮನೆಮಾಡಿ, ಬಾವಿ ತೋಟ ಸದಾ ನೀರು ಹರಿಯುವ ಹಳ್ಳ ಮರಕೊಂಬೆಗೆ ತೂಗುಯ್ಯಾಲೆ ಮನೆಯ ಹೊರಗಿನ ಶೆಡ್‌ನಲ್ಲಿ ಹಸುಗಳು. ಹೀಗೆ ಸರಳ ಸುಂದರ ನೆಮ್ಮದಿಯ ಮನೆಮಾಡಿ ಸುಖವನ್ನು ಕಾಣತೊಡಗಿದರು.

ಯಾಂತ್ರಿಕ ಬದುಕಿನ ಜಂಜಾಟಗಳಲ್ಲಿ ದುಡಿಮೆ ಸಂಪಾದನೆ ನಗರ ವಿಲಾಸ ಬದುಕಿಗಿಂತ "ಅನ್ನ, ಮನೆ, ಪ್ರೀತಿಸುವವರು..."[5] ಸುಖೀ ಜೀವನಕ್ಕೆ ಮತ್ತೇನು ಬೇಕೆನ್ನುವ, ಕಥೆಗಾರರ ನಗರ ಬದುಕಿನ ವಿಲಾಸ, ಬದುಕಿನ ಸಂದೇಶವನ್ನು ಭೋಗ ಜೀವನದ ನಶ್ವರತೆಯನ್ನು ವ್ಯಕ್ತಪಡಿಸುತ್ತಾರೆ. ಗ್ರಾಮೀಣ ಬದುಕಿನಲ್ಲಿ ಯಾರ ಹಂಗಿಲ್ಲದೆ, ನೆಮ್ಮದಿಯ ನೆಲೆ ಕಾಣುವ ಸಂದರ್ಭದಲ್ಲೇ ಡಕಾಯಿತರ ಬಲಿಗೆ ಅಹುತಿಯಾತ್ತಾರೆ. ವಿಷ್ಣು ಅಮೃತರ ನೆಮ್ಮದಿಯ ಹುಡುಕಾಟದಲ್ಲಿ ಎಲ್ಲೂ ನೆಮ್ಮದಿ ಸಿಗದೆ, ಜೀವಕಳೆದುಕೊಂಡು, ವಾಸ್ತವತೆಯ ಕರಿ ನೆರಳು ಮಾತ್ರ ಗೋಚರಿಸುವ ಈ ಕಥೆ ಬದುಕಿನ ಜಂಜಾಟಗಳಲ್ಲಿ ನಮ್ಮದಿ ಸುಖೀ ಜೀವನ ಪಡೆಯಲು ಯಾಂತ್ರಿಕ ಬದುಕಿನ ನಗರವನ್ನು ತಿರಸ್ಕರಿಸಿ, ಹಳ್ಳಿಯೊಂದರಲ್ಲಿ ಜೀರೊಂದು ಸಮಸ್ಯೆ. ಅಂದರೆ ಬದುಕು ಸಮಸ್ಯೆಗಳ ಸಾಗರ ಎಲ್ಲಾ ಕಡೆಯಲ್ಲೂ ಒಂದಲ್ಲಾ ಒಂದು ಬದುಕಿನ ಸಮಸ್ಯೆ ಸಹಜವೆನ್ನುವ ಬದುಕಿನ ದಾರಿ ಸರಳವಲ್ಲವೆನ್ನುವ ಕಥೆಯನ್ನು ಇಲ್ಲಿ ನಿರೂಪಿಸಿದ್ದಾರೆ.

'ಭೂಮಿ ಗುಂಡಾಗಿದೆ' ಎಂಬ ಕಥೆಯಲ್ಲಿ ಪ್ರೇಮದ ಪ್ರಣಯ ಸುಖವನ್ನು ಅರಿಯಲಾರದೆ, ಕಾಮದ ಸವಿಯಲ್ಲೇ ಕಾಲಚಕ್ರ ಉರುಳಿ ಭಗ್ನವಾದ ಪ್ರೇಮಕ್ಕೆ ಹಂಬಲಿಸಿ. ವಿಫಲನಾಗುವ ಮಾನವನ ಗುಣ ಇಲ್ಲಿ ವ್ಯಕ್ತವಾಗಿದೆ. ನಗರದ ಶ್ರೀನಿವಾಸರ ಮನೆಯಲ್ಲಿ ಬಾಡಿಗೆಗೆ ಇದ್ದ ಬಾಲು. ಅವರ ಮಗಳು ರುಕ್ಮಿಣಿಯನ್ನು ಒಂದು ಉನ್ಮಾದ ಚಪಲದ ಕುತೂಹಲಕ್ಕೆ ಶುರುವಾದ ಬಾಲುವಿನ ಪ್ರೀತಿ. ಬಾಡಿಗೆ ಕೊಡಲು ಚೈತನ್ಯವಿಲ್ಲದ ಬಾಲುವಿನ ಬದುಕಿಗೆ ರುಕ್ಮಿಣಿಯೆ ಆಧಾರವಾಗುತ್ತಾಳೆ. ಅವಳಿಂದ ಎಲ್ಲಾ ರೀತಿಯ ಸುಖವನ್ನು ಅನುಭವಿಸುತ್ತಾನೆ ಬಾಲು. ತನ್ನ ಭೋಗಜೀವನ ಖರ್ಚು ವೆಚ್ಚಗಳಲ್ಲದೆ, ಪದ್ಮನಾಭನೊಡನೆ ಬಿಯರ್ ಕುಡಿವುದು ರುಕ್ಮಿಣಿಯ ಹಣದಿಂದಲೇ. ಇದರ ಲೆಕ್ಕ ರುಕ್ಮಿಣಿಗೆ ಬೇಡವಾದರೂ ಬಾಲು ಒಪ್ಪಲಿಲ್ಲ ಚರಿತ್ರೆ ನೋಟ್ಸ್‌ನ ಪುಸ್ತಕದ ಕೊನೆಯಲ್ಲಿ ಬರೆದಿದ್ದಳು. ಆದರೆ ಪ್ರೀತಿ. ಪ್ರೇಮ. ಸಂಸಾರ. ಇವೆಲ್ಲ ನಶ್ವರ ಬಾಳಿಗೆ ಸುಖ ಜೀವನ ನೀಡಲು ಸಾಧ್ಯವಿಲ್ಲವೆಂದು ಪದ್ಮನಾಭನ ಏಳುಸೂತ್ರಗಳೊಡನೆ ಸಮಾಜವಾದ ದೆಸೆಯಿಂದ ಬಾಲು ರುಕ್ಮಿಣಿಯನ್ನು ಬಿಟ್ಟು ಬೇರೆ

ಊರಿಗೆ ಸೇರಿದ. ನಂತರದ ದಿನದಲ್ಲಿ ಸಮಾಜವಾದದ ಪದ್ಮನಾಭ ಸಂಸಾರ ದೀಕ್ಷೆ ತೊಟ್ಟು ಹೆಂಡತಿ ಮಕ್ಕಳು ಸಂಸಾರದ ಬದುಕನ್ನು ಕಂಡು, ತಾನು ನಂಬಿಕೆಟ್ಟು ಕೈಕೊಟ್ಟ ರುಕ್ಮಿಣಿಯ ಸ್ಮರಣೆಯಲ್ಲೇ ಅವಳ ಕಾಗದ ಕಂಡು, ಬಾಲುವಿನ ಪ್ರೇಮ ಚಿಗುರೊಡೆಯುತ್ತದೆ. ರುಕ್ಮಿಣಿಯ ಪ್ರೇಮ ಸಾನಿಧ್ಯ ಬಯಸುತ್ತದೆ. ರುಕ್ಮಿಣಿಯ ಪ್ರೇಮದ ಹಂಬಲ ತಾನೊಂದು ಸಂಸಾರ ತನಗೊಂದು ಜೀವ ಹಂಬಲಿಸುವ ಪ್ರಣಯ ವೇದನೆಗಳು ಏನೆಲ್ಲಾ ಕನಸು ಹೊತ್ತು ರುಕ್ಮಿಣಿಯನ್ನು ಕಂಡರೆ ಆಕೆ ಗರ್ಭಿಣಿ. ತನ್ನ ಗಂಡ ಬದುಕುಗಳ ನಡುವಿನ ಬಡತನ ನೋವು, ಹಣದ ಅವಶ್ಯಕತೆ. ಎಲ್ಲವನ್ನೂ ತಿಳಿಸಿ ತನ್ನದೇ ಚರಿತ್ರೆ ಪುಸ್ತಕದ ಕೊನೆ ಆಳೆಯಲ್ಲಿನ ಬಾಕಿ ಕೊಡಬೇಕಾಗಿದ್ದ ದುಡ್ಡಿನ ಲೆಕ್ಕ. ಇದು ಬಾಲು ಮಾಡುವ ಸಹಾಯ. ಬಡತನದ ನೋವಿನಲಿದ್ದೂ ಹೆರಿಗೆಗೆ ಸಹಕಾರಿಯಾಗುವ ದಾರಿಯೊಂದೆ ಇಲ್ಲಿ ಯಾರಾದೋ ಆಶಾವಾದಗಳಿಗೆ ತನ್ನ ಬದುಕನ್ನು ಬಲಿತೆತ್ತು ಬಾಲು ಸರ್ವಸ್ವವನ್ನು, ದೇಹವನ್ನು, ಧಾರೆ ಎರೆದರೂ ಕೈಕೊಟ್ಟ ಪ್ರೇಮಿಯ ಗಾಳಕ್ಕೆ ಸಿಕ್ಕ ಬಾಲುವಿಗೆ ಅನ್ಯತಾ ಉಪದೇಶ ಮಾಡಿ ತಾನು ಲಾಭ ಪಡೆವ ಉನ್ನಾರಿನ ಪದ್ಮನಾಭ. ಈ ಕಥೆಯಲ್ಲಿ ಸಾಗತಿಹಳ್ಳಿರವರ ವಿಶೇಷವೆಂದರೆ ಸ್ತ್ರೀ ಪಾತ್ರದ ನಿಲುವು, ವಾಸ್ತವಿಕ ಮೌಲಿಕ ಪ್ರಜ್ಞೆ ಇಲ್ಲಿ ಮಿಳಿತವಾಗುತ್ತದೆ. ತನ್ನ ಬಾಳಿನ ನಶ್ವರತೆಯಲ್ಲಿ ಕಳೆದ ಬದುಕಿನ ಪ್ರೇಮವನ್ನ ಹಂಬಲಿಸುವ. ಮನೋವ್ಯಥೆಗೆ ಒಳಗಾಗಿ ನರಳುವ, ನಂಬಲಾಗದ ಸಾಮಾಜಿಕ ಗೊಂದಲದಲ್ಲಿನ ಮಾನವ ಪ್ರವೃತಿಗಳನ್ನು, ಮನೋವಿಜ್ಞಾನದ ತಂತ್ರಗಳ ಸೂಕ್ಷ್ಮನೆಲೆಯಲ್ಲಿ ಚಿತ್ರಿಸಿದ್ದಾರೆ.

'ಹೂವಿನಂಗಡಿಯ ಮದುಮಗ' ಭಗ್ನಗೊಂಡ ಪ್ರೇಮದ ಕಥೆ ಇದಾಗಿದೆ. ಪ್ರೇಮದ ಮೋಹಕ್ಕೂ ಯಾಂತ್ರಿಕನ ಬದುಕಿನ ದೈಹಿಕ ಕ್ರಿಯೆಯ ಮುಖಾಮುಖಿಯಾಗಿಸುವ ಸಂವೇದನೆಯಾಗಿದೆ. 30 ವರ್ಷದಲ್ಲಿ ಭಗ್ನಗೊಂಡ ಪ್ರೇಮಕ್ಕಾಗಿ ಹಂಬಲಿಸುವ ಹೂವಿನಂಗಡಿಯ ಮದುಮಗನಿಗೆ ಈಗ ಐವತ್ತು ವರ್ಷ. ಕರುಳು ಬೇನೆಯಿಂದ ಆಸ್ಪತ್ರೆಯ ವೈದ್ಯರಲ್ಲಿ ಚರ್ಚಿಸಿ ಪ್ರೇಮದ ರೋಗಿಯಾಗಿದ್ದವನ ಯಾಂತ್ರಿಕ ಬದುಕಿಗೆ ಎಳೆದೊಯ್ಯುವ ಮನೋವ್ಯಾಪ್ತಿ ಕಥೆಯ ಹಂದರವಾಗಿದೆ.

ಮಂಜರಿ ಎಂಬ ಅನಾಥೆ ಸುಂದರಿ ಹುಡುಗಿಯನ್ನು ಓದಿಸಿ, ಬಿ.ಎಡ್ ಮಾಡಿಸಿ ಅವಳಿಗೆ ನೋವಾಗದಂತೆ ನೋಡಿಕೊಳ್ಳುತ್ತಾನೆ. ಕೆಲಸಕ್ಕೆ ಸಿಕ್ಕ ಮಂಜರಿಯನ್ನು ಮದುವೆಯಾಗವ ಹಂಬಲದಲ್ಲಿದ್ದ ಹೂವಿನಂಗಡಿಯ ಮದುಮಗ ಅಷ್ಟರಲ್ಲಿ ಕೇರಳದ ಗಡಿಭಾಗಕ್ಕೆ ವರ್ಗಾವಣೆಯಾಗುತ್ತಾಳೆ. ಅಲ್ಲಿಗೆ ತೆರಳಿದ ಮೇಲೆ ಹೂವಿನ ಅಂಗಡಿಯವನನ್ನು ಮರೆತು. ಬೇರೊಂದು ಮದುವೆ ಮಾಡಿಕೊಂಡಳು. 20ವರ್ಷಗಳ ನಂತರವೂ, ಅವಳಿಗೆ ಅವಳ ಪ್ರೇಮಕ್ಕಾಗಿ ಹಂಬಲಿಸಿ ಕಾಯುವ ಹೂವಿನಂಗಡಿಯವನ್ನು. ಹೊಟ್ಟೆನೋವಿನ ಕಾಯಿಲೆ ಬಿದ್ದು ಕರುಳು

ಬೇನೆಯಿಂದ ಅಪರೇಷನ್ಗೆ ಒಳಗಾಗಿ ವೈದ್ಯರೊಡನೆ ತನ್ನ ಕಾಯಿಲೆ ಚರ್ಚೆಯಲ್ಲಿ, ಇವನಿಗಿದ್ದ ಮನೋವ್ಯಾದಿಯನ್ನು ಗುರುತಿಸುತ್ತಾರೆ. ಯಾಂತ್ರಿಕ ಬದುಕನ್ನು ಪರಿಚಯಿಸುವ ಮಾನವನ ಅಂಗಾಂಗಗಳಲ್ಲಿ ಭಾವನೆ, ಆಸೆ, ಮನಸ್ಸು, ಪ್ರೀತಿ, ಪ್ರೇಮ, ಇವುಗಳೆಲ್ಲ ಮನುಷ್ಯನ ವ್ಯಾಪಾರದ ಬಗೆಯೆಂದು. ಭಾಷಾ ಎಂಬ ವ್ಯಕ್ತಿ ಶವಗಳನ್ನು ಕ್ಯೊಯ್ದು ಅಂಗಗಳನ್ನು ತೂರಿಸುವ ಕ್ರೀಯಾತ್ಮಕ ರಚನೆ, ದೈಹಿಕ ನಶ್ವರತೆಯನ್ನು, ಮನುಷ್ಯ ಪ್ರಾಣಿಯ ಹಂಬಲದಲ್ಲಿ ಯಾಂತ್ರಿಕ ಕ್ರಿಯೆಗಳಲ್ಲಿ ವ್ಯಕ್ತವಾಗುತ್ತದೆ. ಆದರೆ ಮನಸನ್ನು ನೋಡುವ ಆಸೆ ಅತನ ತುಷ್ಟಿಗುಣ ಕಥೆಗಾರರ ಕೃತಕವಾದರೂ ತಲ್ಲಣಿಸುವ ಮನೊವ್ಯಾಥೆಗೆ ನಿರೂಪಣೆ ಸಾಕ್ಷಿಯಾಗಿದೆ.

ಅವರೂ ಮನಸಿನಲ್ಲಿ ಹೆಂಡತಿಯೆಂದು ಸ್ವೀಕಾರ ಮಾಡಿದ ಮಂಜರಿಗೆ ಟೆಲಿಗ್ರಾಂ ಕೊಡಿ, ಅವಳೆನ್ನೊಮ್ಮೆ ನೊಡಿ ಸಾಯುವ ಹಂಬಲ ವ್ಯಕ್ತಪಡಿಸುತ್ತಾನೆ. ಡಾಕ್ಟರ್ ಬದುಕನ್ನ ವ್ಯಕ್ತಪಡಿಸಿ ನನ್ನಲ್ಲಿ ಪ್ರೇಮ ಮಣ್ಣು ಯಾವುದೂ ಇಲ್ಲ, ಮೆಡಿಕಲ್ ಓದುವಾಗ ಎಷ್ಟೋ ಹುಡುಗಿಯರ ಸಂಗಡ ನಾನು ಮಲಗಿದ್ದೇನೆ, ಎಷ್ಟೋ ಹುಡುಗರು ನನ್ನ ಹಾಗೆ ಶಿಶ್ನೆ ಯೋನಿಗಳೆಂಬ ಎರಡು ಅಂಗಗಳ ಸಂಘರ್ಷ ಇದು. ಅನೇಕ ಬಾರಿ ಅವುಗಳನ್ನು ಮುಟ್ಟಿ ಕತ್ತರಿಸಿ ಔಷಧಿ ಹಾಕಿ ನಿಚ್ಚಳವಾಗಿ ಕಾಣುತ್ತೆವೆ. ಕಾಮ ಪ್ರೇಮವೆಲ್ಲ ಹಾಗೆ ವ್ಯಾವಹಾರಿಕ ಬದುಕನ್ನು ಮುಂದುವರಿಕೆ ಮಾಡಿಕೊಡುತ್ತದೆ. ಮದುಮಗನನ್ನು ಕರೆದ್ಯೊಯ್ದು, ಶಸ್ತ್ರ ಚಿಕಿತ್ಸೆ ಮಾಡಿ ನಂತರ ಮಂಜರಿ ಬರೆದ ಪತ್ರದಲ್ಲಿ, ಅವಳು ತಾನು ಮನೆಕಟ್ಟಿ ಸುಖವಾಗಿದ್ದು, ತನ್ನ ಮಗಳ ಮದುವೆಗೆ ಕರೆಯುತ್ತಾ, ಅಂದು ನೀವು ಧನಸಹಾಯ ಮಾಡಿದ್ದೀರಿ. ನಾನು ಮರೆತಿಲ್ಲ 20,000 ರೂ ಗಳ ಡಿ.ಡಿ ಕಳುಹಿಸಿದ್ದೇನೆ ಸ್ವೀಕರಿಸಿ. ಇನ್ನು ಮುಂದೆ ಪತ್ರ, ಟೆಲಿಗ್ರಾಂ ಕಳುಹಿಸಬೇಡಿ. ನನ್ನ ಗಂಡ ತಪ್ಪು ಬಾವಿಸುತ್ತಾರೆಂದು ನಿಮ್ಮ ಹೆಂಡತಿ ಮಕ್ಕಳಿಗೆ ವಂದನೆಗಳೆನ್ನುವ ಮಂಜರಿ. ಹೂವಿನಂಗಡಿಯವನಿಗೆ ಮದುವೆಯಾಗಿದೆ ಎಂದು ಬಾವಿಸುತ್ತಾಳೆ.

ಇದು ಯಾವುದನ್ನುಲೆಕ್ಕಿಸದೆ ಎಲ್ಲವನ್ನೂ ಮರೆತು ಹೊಸ ಮನುಷ್ಯನಾಗುವ ಹಂಬಲದಲ್ಲಿ ವೈದ್ಯರಿಗೆ ತಿಳಿಸಿ ಹೊರಡುವ ಭಾವಜೀವಿ ಹೂವಿನಂಗಡಿ ಮದುಮಗ. ಇಲ್ಲಿ ಕಥೆಯ ಉದ್ದೇಶ ಪ್ರೇಮ ವ್ಯತೆಯಲ್ಲಿದ್ದು ಮನೋರೋಗಿಯನ್ನು ಗುಣಪಡಿಸುವುದಾಗಿದೆ. ಪ್ರೇಮ ಸಾಮ್ರಾಜ್ಯದಲ್ಲಿ ಸೋಲು ಬಲುಹೀನ. ಭಗ್ನಪ್ರೇಮ ಮನುಷ್ಯನನ್ನು ಇಂಚಿಂಚು ಕೊಲ್ಲಲು ಪಡುತ್ತದೆ ಎಂಬುದಕ್ಕೆ ಹೂವಿನಂಗಡಿ ಮದುಮಗ ಸಾಕ್ಷಿಯಾಗಿ, ತನ್ನ ಬದುಕಿನ ಸ್ವಾರ್ಥ ಹಂಬಲದಲ್ಲಿ ಪ್ರಯೋಜನ ಪಡೆದು ದೂರಸರಿವ ಮಂಜರಿಯನ್ನು, ಬಾಷಾ ನಂತಹ ವ್ಯಕ್ತಿಗಳ ಚಿತ್ರಣವನ್ನು ಇಲ್ಲಿ ಕಥೆಗಾರರು ನಿರೂಪಿಸುತ್ತಾರೆ .

ಪ್ರೇಮವೆಂಬುದು ಯಾಂತ್ರಿಕವಲ್ಲದ ಮಾನುಷ್ಯನ ಅಂತರಂಗದ ಸ್ವತ್ತು, ಅದರೆ ರೋಗಿ ಗುಣವಾಗಲು ವಾಸ್ತವಿಕ ಯಾಂತ್ರಿಕತೆಯ ಮತ್ತೊಂದು ನಡವಳಿಯನ್ನು ವೈದ್ಯರಿಂದ ವ್ಯಕ್ತಪಡಿಸುತ್ತಾರೆ. ಕಥೆಗಾರರು ಮನೋವಿಜ್ಞಾನದ ಹಿನ್ನೆಲೆಯಲ್ಲಿ ಮೂಡಿಬಂದ ಪ್ರೇಮಕಥೆಯ ಭಗ್ನಪ್ರೇಮ ವೈಜ್ಞಾನಿಕವಾಗಿ ಮೂಡಿಬಂದಿದೆ.

ಅಡಿ ಟಿಪ್ಪಣಿ

1. ಮಲೆನಾಡಿನ ಹುಡುಗಿ ಬಯಲುಸೀಮೆಯ ಹುಡುಗ, ನಾಗತಿಹಳ್ಳಿ ಚಂದ್ರಶೇಖರ್, ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು.2009. ಪುಟ 16.
2. ನನ್ನ ಪ್ರೀತಿಯ ಹುಡುಗನಿಗೆ. ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2009. ಪುಟ 22
3. ಅದೇ. ಪುಟ 96.
4. ಅದೇ. ಪುಟ 98
5. ಸನ್ನಿಧಿ ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2009. ಪುಟ 101.

ಅಧ್ಯಾಯ – 6

ಅಧ್ಯಾಯ – 6

ನಾಗತಿಹಳ್ಳಿರವರ ಕಥೆಗಳಲ್ಲಿ ಸ್ತ್ರೀಸಂವೇದನೆ

ಬದುಕಿನಾಳದಲ್ಲಿ ಮಹಿಳೆ ಕಟ್ಟಿಕೊಂಡ ಸಂಸಾರ, ಸಮಾಜಗಳ ನಡುವಿನ ಜಂಜಾಟದ ಅನನ್ಯತೆಗಳು ನಾಗತಿಹಳ್ಳಿ ಕಥೆಗಳಲ್ಲಿ ಮಿಳಿತವಾಗಿವೆ, ಮಹಿಳೆ ಸಾಂಸ್ಥಿಕ ವ್ಯವಸ್ಥೆಯ ಪ್ರಭುತ್ವದ ವಿರುದ್ಧ ಹೋರಾಡಿದ ಬಲವುಳ್ಳವಳು. ಇವರ ಕಥೆಗಳಲ್ಲಿನ ಸಂವೇದನೆಗಳು ಜೀವನದ ಬಗ್ಗೆ ಅನ್ನಿಸಿದನ್ನು ನೇರವಾಗಿ ವ್ಯಕ್ತಪಡಿಸುವ ಹಂಬಲಗಳು ಕಂಡು ಬರುತ್ತದೆ. ಆದರೆ ಪುರುಷ ಪ್ರಭುತ್ವವೇ ಮೇಲುಗೈಯಾದರೆ ಮಹಿಳೆಯರ ಸಾಮಾಜಿಕ ಅಂತಸ್ತು ಸ್ಥಾನಮಾನಗಳ ಬಗ್ಗೆ ಕಟ್ಟು ಕಟ್ಟಾಳೆಗಳನ್ನು ರೂಪಿಸುವ ಹಂತದಲ್ಲಿ ಪುರುಷರಿರುತ್ತಾರೆ. ದಬ್ಬಾಳಿಕೆ ಸಹಿಸದ ಮಹಿಳೆ ಬಂಡೇಳುತ್ತಿರುವುದನ್ನು ಸಾಮಾಜಿಕ ಪ್ರಜ್ಞೆಯ ಕಥೆಗಾರರು, ಆಗುತ್ತಿರುವ ಅನ್ಯಾಯ ಶೋಷಣೆಯ ವಿರುದ್ಧ ಸೌಮ್ಯ ಚಳುವಳಿ ನಡೆಸುವುದೇ ಸಂವೇದನಾತ್ಮಕ ಕಥೆಯ ಮಾಧ್ಯಮವಾಗಿದೆ.ನಾಗತೀಹಳ್ಳಿರವರ ಕಥೆಗಳು ಆತ್ಮವಿಶ್ವಾಸದ ವಿಮರ್ಶ ಧ್ವನಿಯಲ್ಲಿ, ಸ್ತ್ರೀ ಸಂವೇದನೆಯ ಚಲನಶೀಲತೆಯ ಕ್ರಿಯೆಯಲ್ಲಿ ತೊಡಗಿದೆ. ಇವರ ಆಯ್ದ ಮಹಿಳಾ ಪ್ರತಿನಿಧಿ ಕಥೆಗಳಲ್ಲಿ ಸಾಮಾಜಿಕಪ್ರಜ್ಞೆಯನ್ನ ದಟ್ಟವಾಗಿ ವ್ಯಕ್ತವಾಗಿಸುವ ಕಥೆಗಳಾಗಿವೆ. ಸಾಮಾಜಿಕ ಅನ್ಯಾಯದ ವಿರುದ್ಧ ಬಂಡೇಳುವ ಸ್ತ್ರೀ ಪಾತ್ರಗಳಿವೆ. ಪ್ರೇಮ, ಮದುವೆ, ಕುಟುಂಬ, ಸಿನಿಮಾ, ಹೆಣ್ಣುಗಂಡುಗಳ ಜೊತೆಯ ಸಂಬಂಧದ ಹೊಯ್ದಾಟಗಳು,ಭಾವನೆಗಳು ಹಾಗೂ ಎದುರಿಸಬೇಕಾದ ಸಮಸ್ಯೆಗಳು ಆತ್ಮ ವಿಶ್ವಾಸ ಸ್ಥೈರ್ಯ ಹಾಗೂ ಅಸ್ಥಿತ್ವಗಳನ್ನು ಮಹಿಳಾ ಅನುಭವ ಲೋಕವನ್ನು ಸೃಷ್ಟಿಸುವುದಾಗಿದೆ. ಹೀಗೆ ಪ್ರಸ್ತುತ ಕಾಲದಲ್ಲಿನ ಸಾಮಾಜಿಕ ವಸ್ತು ಸ್ಥಿತಿಯನ್ನು ಹೆಣ್ಣಿನ ಹಂಬಲದ ಬದುಕನ್ನು ನಿರೂಪಣೆ ಮಾಡುತ್ತಾರೆ.ಹೆಣ್ಣಿನ ಆಂತರ್ಯದ ಧ್ವನಿ ಇಲ್ಲಿ ಕಥೆಯಾಗಿವೆ.ಅಂತಹ ಕಥೆಗಳಲ್ಲಿ 'ಬನ್ನೇರಿ' ಗ್ರಾಮೀಣ ಸ್ತ್ರೀ ಬದುಕಿನ ಪ್ರಾತಿನಿದಿಕ ಕಥೆ ಬನ್ನೇರಿ.ಸೋಮಾರಿ ಉಡಾಳಗಂಡ ಸಿದ್ರಾಮನ ಕಟ್ಟಿಕೊಂಡು ಬನ್ನೇರಿ, ತನ್ನ ತೋಟ ಹೊಲ ಭೂಮಿಯಂತ ಅರಿವಿಲ್ಲದ ಗಂಡನ ಎದುರಿಗೆ ಗಂಡಳಾಗಿ ದುಡಿವ ಬನ್ನೇರಿ ಆಧುನಿಕ ಮಹಿಳೆಗೇನು ಕಡಿಮೆ ಇಲ್ಲ. ದುಡಿಮೆಗೆ ಬಂದ ಆಳ ಮಗ ರಂಗಣ್ಣನಿಗೆ ಅವ್ವನಾಗಿ ಬದುಕಿನ ಹಂಬಲವೊತ್ತು ಸಾಗಿದ ಬನ್ನೇರಿ, ಗಂಡನರಾಜಕೀಯ ಚಪಲಕ್ಕೆ ಭೂಮಿ ಫಸಲುಗಳು ಕಂಡೋರ ಪಾಲಾಗುತ್ತದೆ. ಅದಕ್ಕೂ ಧೃತಿಗೆಡದೆ ಒಣ ಭೂಮಿಯಿಂದಲೇ ಬಾವಿ ತೆಗೆದು ಫಸಲು ತೆಗೆವ ದಿಟ್ಟ ಛಲಗಾತಿ ಬನ್ನೇರಿ.ಆದರೆ ಹೆಣ್ಣತನದ ಮಾತುಗಳನ್ನಾಡಿ, ರಂಗಣ್ಣ ಮನೆಯಿಂದ ಹೊಡಿಸುವ ಹೂನ್ನಾರಿಗೆ ರಂಗಣ್ಣನಂತ ಮಗನನ್ನ ಕಳೆದು ಕೊಳ್ಳುವ, ವಾತ್ಸಲ್ಯಗಳು ವಿಸ್ಮೃತವಾಗುತ್ತದೆ.ಇಷ್ಟೆಲ್ಲ ದೌರ್ಬಲ್ಯಗಳ ಗಂಡನನ್ನು ಸಲಹುವ ಧಾತ್ರಿಯಾಗುತ್ತಾಳೆ.ತನ್ನ ಬೆವರಿನ ಫಲದ ತೆಂಗು ಭೂಮಿ ಕಳೆದುಕೊಳ್ಳವಾಗಿನ

ಬನ್ನೇರಿ ಕಾಳಿಯಾಗುತ್ತಾಳೆ. ಹೀಗೆ ಗ್ರಾಮೀಣ ಮಗಳ ಬದುಕಿನಳಾದ ಪಾಡನ್ನು ನಾಗತೀಹಳ್ಳಿ ತನ್ನದೇ ಸ್ತ್ರೀಸಂವೇದನೆಯ ಅನುಭವದಾಳದಲ್ಲಿ ಚಿತ್ರಿಸುತ್ತಾರೆ, ದಾರಿಯಲ್ಲಿ ಬಿದಿದ್ದ ರಂಗಣ್ಣನನ್ನು ಸಂತೈಸಿ ಉಪಚಾರ ಮಾಡುವ, ಗಂಡನ ಉಪಟಳಗಳನ್ನು ಸಹಿಸಿ ದುಡಿಮೆಮಾಡುವ ಕ್ರಿಯಾತ್ಮಕ ಸ್ತ್ರೀಯನ್ನು ಅಭಿವ್ಯಕ್ತಿಸಿದ್ದಾರೆ. **'ಪುಟ್ಟಕ್ಕನ ಮೆಡಿಕಲ್ ಕಾಲೇಜು'**.ಸ್ತ್ರೀಯೊಬ್ಬಳ ಬಂಡಾಯದ ಧ್ವನಿಯಾಗಿ ಮೇಲ್ವರ್ಗದ ತುಳಿತಗಳ ಶೋಷಣೆಗಳನ್ನು ಈ ಕಥೆಯಲ್ಲಿ ಅನಾವರಣ ಮಾಡಿದ್ದಾರೆ.ಹಳ್ಳಿಯ ಸಾಮಾನ್ಯ ಮಹಿಳೆ ಪುಟ್ಟಕ್ಕ.ಗಂಡ ಮಕ್ಕಳಿಲ್ಲದ ಅನಾಥೆ ಬಳಿ ಇದ್ದ 20 ಎಕ್ರೆ ಭೂಮಿಯನ್ನು ಸ್ವಾಮೀಜಿ ಕಬಳಿಸಿ, ಮೆಡಿಕಲ್ ಕಾಲೇಜು ಕಟ್ಟಿದ್ದರ ಸಾರ.ವಾಸ್ತವ ಘಟನೆಯೇ ಪುಟ್ಟಕ್ಕನ ಮೆಡಿಕಲ್ ಕಾಲೇಜು. ಸಮಾಜಸೇವೆಯ ಸೋಗಿನಲ್ಲಿ, ಮಠ ಮಾನ್ಯರು ಮಾಡುವ ಬಡವ ಹಾಗೂ ಸಾಮಾನ್ಯನ ಮೇಲಿನ ದಬ್ಬಾಳಿಕೆಗಳು ಇಲ್ಲಿ ಅನಾವರಣವಾಗುತ್ತದೆ. ಇಂತಹ ಅನ್ಯಾಯಕ್ಕೆ ತುತ್ತಾದ ಪುಟ್ಟಕ್ಕ, ಇದನ್ನೆ ಅವಕಾಶ ಮಾಡಿಕೊಂಡ ಹರಿಕಥೆದಾಸ ಕೃಷ್ಣಪ್ಪ ಅವಳ ಮೈಮನಸ್ಸು ಹಣಗಳನ್ನು ಬಳಸಿಕೊಳ್ಳುವ ದರಿದ್ರ ಹೀನರ ಮುಖಗಳ ಅನಾವರಣಮಾಡುತ್ತಾರೆ.ತನ್ನ ಬದುಕಿನ ಅಂಗವಾದ ಭೂಮಿ ಉಳಿಸಿಕೊಳ್ಳುವ ಗಟ್ಟಿಗಿತ್ತಿ ಪುಟ್ಟಕ್ಕ. ಗಂಡಸಿನಂತೆ ದುಡಿದವಳು, ಗಾಡಿ ಹೊಡೆದು ಹೊಲ ಹುತ್ತವಳು, ಯಾರಾದರು ಇವಳ ಬಗ್ಗೆ ಮಾತನಾಡಿದರೆ ಮಿಸುಕಾಡಲು ಬಿಡದೆ ಧೈರ್ಯದಿಂದಲೆ ತನ್ನ ಸಮಾಜವನ್ನು ನಿಯಂತ್ರಿಸಿ ಹೆಣ್ಣಿನ ಸ್ವರೂಪ ಗಂಡಿನ ಆವೇಷದ ಪುಟ್ಟಕ್ಕನಿಗೆ, ಕುಡಿದು ಬರುವ ಗಂಡನೇ ಹೆದರಿ ಯಾರ ಮನೆ ಬಾಗಿಲ್ಲಲ್ಲೇ ಮಲಗುತ್ತಿದ್ದವನು.ಇಂತಹ ಅವಿದ್ಯಾವಂತ ಹಾಗೂ ಮುಗ್ದ ಪುಟ್ಟಕ್ಕನಿಗೆ ಅನ್ಯಾಯವಾದಾಗ ನ್ಯಾಯ ಕೇಳಲು ಸಿಕ್ಕ ಸಿಕ್ಕ ಕಛೇರಿ,ಪೋಲಿಸ್ ಠಾಣೆಗಳಿಗೆ ಅಲೆಯುತ್ತಾಳೆ.ಆದರೆ ಮೂಲ ವರ್ಗ ವರ್ತುಲಗಳಲ್ಲಿ, ಭ್ರಷ್ಟತೆಯ ಮದಕ್ಕೆ ಸಿಕ್ಕ ಅಧಿಕಾರಿಗಳು ಪುಟ್ಟಕ್ಕನನ್ನು ಸಹಜವಾಗಿಯೇ ತಿರಸ್ಕರಿಸಿದಾಗ, ಬಂಡಾಯವೇಳುವ ಪುಟ್ಟಕ್ಕನ ಕೆಂಗಣ್ಣಿಗೆ ಗುರಿಯಾಗುವ ಸ್ವಾಮೀಜಿ ಹಾಗೂ ಅಧಿಕಾರಿಗಳು.ಬಲವಿಲ್ಲದ ಈ ಸ್ತ್ರೀಯಯುಸೋಲುವುದು ಸಾವಿನಲ್ಲಿ ಎಂಬುವುದೇ ದುರಂತ.

ಇಲ್ಲಿ ಸೋಲು ಸಾವುಗಳು ವಾಸ್ತವತೆಯ ನೆರಳಿನಲ್ಲಿ ಪ್ರಶ್ನಾತೀತವಾಗುತ್ತವೆ. ಆದರೆ ಪುಟ್ಟಕ್ಕನ ನೆನೆಪು ಸದಾ ಉಳಿಯುವ ಹಾಗೆ, ಪುಟ್ಟಕ್ಕನ ಹೋರಾಟದ ಬಂಡಾಯದಲ್ಲಿ ಕಥೆಗಾರರ ನೈಪುಣ್ಯತೆ ಇಲ್ಲಿನವಿರಾಗಿ, ಸಹಜ ನೆಲೆಯನ್ನು ಚಿತ್ರಿಸುತ್ತಾರೆ.

'ಪಾಲು' ಕಥೆಯೊಳಗೆ ತಾನು ಶ್ರಮಿಸಿ ದುಡಿದ ಆಸ್ತಿಗಾಗಿ,ಮಕ್ಕಳು ಗುದ್ದಾಡಿ ಪಾಲು ತೆಗೆದುಕೊಳ್ಳುತ್ತಾರೆ. ಆದರೆ ವಯಸ್ಸಾದ ತನ್ನ ತಂದೆ ತಾಯಿಯ ಬದುಕು ಜೀವನವನ್ನು ಗ್ರಹಿಸದೇ, ಆವರದೆ ಬದುಕಿನ ಸ್ಪರ್ಧಾ ಜಗತ್ತಿಗೆ ಒಳಗಾಗಿ ಬಿಡುತ್ತಾರೆ.ಇದರನಡುವೆ ಮುದುಕ ಮೇಷ್ಟ್ರು

ಸಾವಿನ್ನಪ್ಪಿದ ಬಳಿಕ, ಅದ್ದೂರಿಯಾಗಿ ತಿಥಿ ಮಾಡುತ್ತಾರೆ.ಇದನ್ನು ಕಂಡ ಮುದುಕಿ ಸ್ವಾಭಿಮಾನಿಯಾಗಿ ಸ್ವಂತ ಮಕ್ಕಳು, ಯಾರ ಹಂಗಿಲ್ಲದೇ ಬದುಕುವ ಮುದುಕಿಯಲ್ಲಿ ಸ್ವಾಭಿಮಾನಗಳು ಸ್ತ್ರೀ ಸಂವೇದನೆ ದೃಷ್ಟಿಯಿಂದಲೇ ಕಾಣಬಹುದು.

'ಗಾಯ' ಕಥೆಯೊಳಗೆ ಗ್ರಾಮೀಣ ಬದುಕಿನ ವ್ಯವಸ್ಥೆಯನ್ನು, ರಾಜಕೀಯದ ಕೊಳಕು ಜೀವನ ವ್ಯಕ್ತವಾಗುತ್ತದೆ.ಮಂಡಲ ಪಂಚಾಯಿತಿಯ ಚುನಾವಣೆ ಹೆಸರಿನಲ್ಲಿ ಊರು ಇಬ್ಭಾಗವಾಗಿ, ಒಕ್ಕಲಿಗರಿಗೂಹರಿಜನರ ನಡುವೆ ಮಾರಾಮಾರಿ ಹೊಡೆದಾಟಗಳಾಗುತ್ತದೆ. ಹಿರಿಜನರ ಹುಡುಗನಿಗೆ ತನ್ನ ಮಗಳನ್ನು ಮದುವೆ ಮಾಡಿಸಿ, ಕ್ರಾಂತಿ ಮಾಡುವ ಒಕ್ಕಲಿಗ ಮಯೂರಿಯಂತಹ ಸ್ತ್ರೀಯೊಬ್ಬಳ, ದಿಟ್ಟ ಮನೋಭೂಮಿಕೆಯನ್ನು ಕಥೆಗಾರರು ನಿರ್ಮಾಣ ಮಾಡುತ್ತಾರೆ. ತಾನೆ ಚುನಾವಣೆಯಲ್ಲಿ ಗೆದ್ದು ಮುಖ್ಯಸ್ಥಳಾಗಿ ಹೋರಾಟ ಮಾಡುವ ಬಂಡಾಯ ನಿಲುವನ್ನು ಕಥೆಗಾರರು ಚಿತ್ರಿಸಿದ್ದಾರೆ.

'ನೋಣಗಳು' ಎಂಬ ಕಥೆಗಳಲ್ಲಿನ 'ಸ್ತ್ರಿ' ಬದುಕಿನಲ್ಲಿ, ಶೋಷಣೆಗೆ ಒಳಗಾಗಿ ಅವಮಾನವಿಯ ಬದುಕಿನ ಕರಾಳತೆಯನ್ನು ವ್ಯಕ್ತಪಡಿಸುತ್ತದೆ. ಆಂಧ್ರ ಮೂಲದ ಸುಂದರ ಯುವತಿ ಹೋಟೆಲ್ ನಡೆಸುತ್ತಿದ್ದಳು, ಅವಳ ಸೌಂದರ್ಯವನ್ನು, ತನ್ನ ಚಾಣಾಕ್ಷತನದ ಪ್ರೇಮದ ಬಲೆಯಲ್ಲಿ ಸುಖ ಅನುಭವಿಸಿದ ಪಟೇಲರ ಮಗ ರಾಮ.ಬಸುರಾದ ಜಯಳನ್ನು ಬೀದಿಗೆ ತರುವ ಮೇಲವರ್ಗದ ಶೋಷಣೆಯ ಶೋಚನಿತೆಯನ್ನು ಅನಾವರಣ ಮಾಡುತ್ತಾರೆ.ಹೋಟ್ಲು ಹುಡ್ಗಿನ ಗೌಡರ ಸೊಸೆ ಮಾಡಿ ಕೊಳ್ಳದ ರಾಮನ ತಂದೆ ಪಟೇಲ. ನ್ಯಾಯ ಕೇಳಿದ ಜಯಳನ್ನು ಮನೆಯಿಂದ ಆಚೆಯಾಕುತ್ತಾನೆ. ಹೋಟೆಲ್‌ನ್ನು ದೂಳಿಪಟ ಮಾಡಿಸಿ, ವೇಶ್ಯಾಗಾರಿಕೆ ಪಟ್ಟ ಕಟ್ಟಿ, ಊರ ಖಾಲಿ ಮಾಡಿಸುತ್ತಾನೆ. ಇಲ್ಲಿ ಸೌಂದರ್ಯವೆ ಹೆಣ್ಣಿನ ಬಾಳಿಗೆ ಮುಳುವಾಗವ ದಾರುಣ ಘಟನೆಯನ್ನು ಚಿತ್ರಿಸಿದ್ದಾರೆ.ತನ್ನ ಕ್ಷೇತ್ರದಲ್ಲಿನ ಷಢ್ಯಂತ್ರ ಕುತಂತ್ರಗಳ ಮೂಲಕ ಮಂತ್ರಿಯಾಗಿ, ಸಮಾಜ ಕಲ್ಯಾಣ ಸಚಿವನಾಗುವ ರಾಮು.ಅದೆಷ್ಟೋ ಜಯಳಂತ ಕುಟುಂಬಗಳನ್ನು ಆಳುಮಾಡುತ್ತಾನೆಂಬ ಮಾರ್ಮಿಕ ವ್ಯಕ್ತಿತ್ವಗಳ ಅನಾವರಣವಾಗುತ್ತದೆ. ಕೊನೆಗೆ ಜಯ, ಮೈಸೂರಿನ ಗಾಂಧಿ ಸ್ಕೈರ್‌ನಲ್ಲಿ ದೊಡ್ಡಗಾಡಿ ಎಂದು ವಿಡಂಬನೆ ಮಾಡುವ ಸಮಾಜ, ಸುಂದರ ಯುವತಿಯನ್ನು ಪಾಪ ಕಾರ್ಯದಲ್ಲಿದೂಡಿ, ನೋಡುವ ನಿಕೃಷ್ಟ ಸಮಾಜದ ದರ್ಶನವನ್ನು ಕಥೆಗಾರರು ಮಾಡಿದ್ದಾರೆ.ಇಲ್ಲಿ ಸ್ತ್ರೀ ಸಮಾಜದಲ್ಲಿ ಬದುಕುವ ವೇದನೆ ನೊವುಗಳನ್ನು ತನ್ನದೆ ದಾಟಿಯೋಳಗಿನ ಸ್ತ್ರಿ ಸಂವೇದನೆಯ ಚಿತ್ರಣ ಇಲ್ಲಿವೆ

'ಯಶೋಧರ ಚರಿತೆ' ಕಥೆಯೊಳಗೆ ತನ್ನ ಸಂಪ್ರದಾಯದೊಳಗಿನ ಆಕ್ರೋಶವನ್ನು ದಾಟಿ, ಸಮಾಜವನ್ನು ಮುಖಾಮುಖಿಯಾಗಲಾರದೆ, ಪಲಾಯನ ಮಾಡುವ ಹೆಣ್ಣಿನ ದುರಂತದ

ಕಥೆಯಾಗಿದೆ. ಬ್ರಾಹ್ಮಣ ಕುಟುಂಬದ ಹೆಣ್ಣು ಮಗಳಾದ ಯಶೋಧರೆ, ಕಾಲೇಜಿನ ಉಪನ್ಯಾಸಕಿ. ಮೂವರು ಅಕ್ಕಂದಿರ ಮದುವೆಯಾಗದೆ, ಈ ನಡುವೆ ತನ್ನ ಪ್ರೇಮ ಕಾಮದ ವಾಂಛೆಯಲ್ಲಿ, ಅನುಭವದ ಕಾತುರೆಗೆ ತನ್ನ ಸಾಂಪ್ರದಾಯದ ಚೌಕಟ್ಟನ್ನು ಮೀರುತ್ತಾಳೆ.ತನ್ನ ವಿದ್ಯಾರ್ಥಿ ಕುರೂಪ ವೀರಭದ್ರನೊಡನೆ ಸುಖಿಸುವ ಹಾಗು ತನ್ನ ತೃಷೆಯ ಕಾಮಾನೆಗಳನ್ನು ಪೂರೈಸಿಕೊಳ್ಳುತ್ತಾಳೆ. ನಂತರ ಹೆಣ್ಣು ಬೋಗದ ವಸ್ತು ಆಸ್ತಿಯಾಗಿ ಬಂಧಿಸಲ್ಪಡುವ ವೀರಭದ್ರ ಕ್ರೌರಿಯಾಗಿ ಮೃಗಿಯಾಗಿ ಆಕೆಯನ್ನು ಅ ಹಂಬಲಿಸುವ ಸಮಾಜದ ಪುರುಷದೌರ್ಜನ್ಯಗಳನ್ನು ಕಾಣಬಹುದು. ಹೆಣ್ಣನ್ನು ಒಂದು ಮಾಂಸದ ಸುಂದರತೆಯಲ್ಲಿ ನೋಡಿ, ಕಾಮದಾಟದ ದಾಳವಾಗಿ ಬಳಸುವ ಪುರುಷನ ಪ್ರವೃತ್ತಿಯಾಗಿ ಕಾಣುವ ವೀರಭದ್ರನನ್ನು, ಸಮಾಜದ ಧಾರ್ಮಿಕ ಚೌಕಟ್ಟಿನೊಳಗೆ ಸ್ತ್ರೀಯ ವೇದನೆಗಳನ್ನು ಅನಾವರಣ ಮಾಡುತ್ತಾರೆ, ಆದರೆ ಸಾಮಾಟಿಕ ಬಂಡಾಯ ನೆಲೆಯಲ್ಲಿ ಚಿಗರೊಡೆದು, ಬಾಡುವ ಬಂಡಾಯವಾಗಿದೆ.ಸಂಪ್ರಾದಾಯಗಳ ವಿರುದ್ಧ ನಿಂತ ಯಶೋಧ ಸಮಾಜದ ವಿರುದ್ಧ ನಿಲ್ಲಲಾರಳಾಗುತ್ತಾಳೆ, ಆದರೆ ಕಥೆಗಾರರು ಹೇಳುವ, ಹಾಗೆ ಇದೊಂದು ನಡೆದ ವಾಸ್ತವ ಘಟನೆಯಾಗಿದ್ದು ಅದರ ನಿರೂಪಣೆಯಷ್ಟೆ ನನ್ನ ಕ್ರಿಯೆ,ಎಂದು ವರದಿ ನೀಡುತ್ತಾರೆ.

'ಯಾತ್ರೆ' ಕಥೆಯೊಳಗೆ ಸಂಸ್ಕೃತಿಯ ಚೌಕಟ್ಟಿನ ಎಲ್ಲೆ ಮಿರುವ ಮೃದುಲ.ಬದುಕಿನ ದಾಂಪತ್ಯ ವಿಲಾಸವನ್ನು ಅರಸಿ ಹೊರಟ ಹೆಣ್ಣಿನ ಬದುಕಿನ ವೈರಾಗ್ಯಗಳು ಮಿಳಿತವಾಗುತ್ತವೆ.ಪ್ರಣಯವು ಸಂಚಾರಿಯ ಬಾವವಾಗಿ, ನಿಶ್ಚಲ ದಾಂಪತ್ಯದ ಬದುಕಿನ ಕನವರಿಕೆಯಲ್ಲೆ ಅಂತ್ಯ ಕಾಣುತ್ತದೆ.ನವಯುಗದ ಮಾದರಿಯ ಸ್ತ್ರೀಯಾಗುತ್ತಾಳೆ, ಮೃದುಲ ಪಾಶ್ಚಿಮಾತ್ಯದ ಅಕಾಶ ಬುಟ್ಟಿಯ ಕನಸುಗಳು ನೆವೆಯಾಗಿ ಸ್ನೇಹದ ಬಾವವಿಲ್ಲದ ಸುಖ ದುಃಖಗಳಿಗೆ ಸಹಾನುಭೂತಿಯ ಜೀವಗಳಿಲ್ಲದೆ, ಮಹಿಳೆಯ ನಿಸರ್ಗ ಬದುಕಿನ ನೋವಿನ ರೋದನೆಗಳನ್ನು ವಿಮಾನದ ಗಗನ ಸಖಿಯ ಯಾತ್ರಿಕ ಬದುಕಿನ ನಡವಳಿಯನ್ನು ವಿವರಿಸುತ್ತಾರೆ.ತನ್ನದೆ ಬದುಕಿನಾಳಾದ ದಿನಚರಿಯ ಚರಿತೆಯಾಗಿ, ಕತೆಗಾರರ ಗೆಳತಿಯ ಬದುಕಿನ ಹಂದರವನ್ನು ವ್ಯಕ್ತಪಡಿಸಲಾಗಿದೆ. ತನ್ನನ್ನು ಪ್ರೇಮಿಸುವ ಬಸವರಾಧ್ಯ ಕೂಡ ಈಗ ಬಯಸಲಾರ ಎಂಬ ರೋಚಕತೆಯ ಕ್ಷಣ, ಓದುಗನಲ್ಲಿ ಮೃದುಲ ಒಮ್ಮೆ ಸಮಾಜದಲ್ಲಿನ ಚೌಕಟ್ಟನ್ನು ಮೀರಿದ ಮಹಿಳೆ ಒಂದು ಕಡೆಯಾದರೆ ಮತ್ತೊಂದು ಐಶಾರಾಮದ ಬೋಗ ಜೀವನವನ್ನು ಆಯ್ಕೆ ಮಾಡಿಕೊಳ್ಳುವಳು. ಇದರಿಂದ ನೆಮ್ಮದಿ ಇಲ್ಲದೆ ಬದುಕು ಕಾಡುತ್ತದೆ ಎಂಬುದೆ ಕಥೆಯ ವೈಚಾರಿಕ ನಿಲುವಾಗಿದೆ.

'ಸರಸ್ವತಿಪುರದಲೊಂದು ಹೆಬ್ಬೆಟ್ಟಿನ ಗುರುತು' ಒಂದು ದುರಂತ ಪ್ರೇಮಕಥೆಯಾಗಿದ್ದು, ಕಥಾ ನಾಯಕ ರವಿಒಕ್ಕಲಿಗ ಹುಡುಗ, ಬ್ರಾಹ್ಮಣರ ಹುಡುಗಿ ವತ್ಸಲ, ಎಂ.ಎ ತರಗತಿ ಓದುವಾಗಲಿನ

ಗೆಳೆತನ ಪ್ರೇಮವಾಗಿ ಕುಟುಂಬದ ವಿರೋಧದ ನಡುವೆ ವಿವಾಹವಾಗಿ, ಬದುಕನ್ನು ಹಂಬಲಿಸಿ ದೂರದ ಊರಿನಲ್ಲಿ ಕೆಲಸಮಾಡಿ ಜೀವನ ಸಾಗಿಸುತ್ತಿರುತ್ತಾರೆ.ಈ ಸಂದರ್ಭ ರವಿ ಅಕಾಲಮರಣಕ್ಕೆ ತುತ್ತಾಗುತ್ತಾನೆ. ಗರ್ಭಿಣಿ ಮಹಿಳೆಯ ಅನಾಥತೆ, ತನ್ನನ್ನು ಕೈ ಬಿಡಬೇಡಿ ಎಂದು ಅಂಗಲಾಚಿದಾಗ 500 ನೋಟನ್ನು ಬೀಸಾಡಿ ಹೋಗುವ ಗೌಡರ ಅಮಾನಿಯತೆ, ಹಾಗೂ ವತ್ಸಲಳ ಮುಂದಿನ ಧಾರಣ ಬದುಕಿನ ಸ್ಥಿತಿಯೇನು?ಎಂಬುದನ್ನು ಚಿತ್ರಿಸುತ್ತಾರೆ. ಸ್ತ್ರೀ ಭಾವದ ಹಿನ್ನಲೆಯ ಉಪನ್ಯಾಸಕನ ಮನೋಭಾವ, ವತ್ಸಲಳನ್ನು ಮದುವೆಯಾಗಿ ಮತ್ತೊಬ್ಬ ರವಿಯಾಗುವ ಹುಡುವ ಮಗುವಿನ ಆಸರೆಯಾಗಬಯಸಿದ ಕಥೆಯ ಅಂತ್ಯ, ಸ್ತ್ರೀ ಕುಲದ ಅಭಯವಾಗಿ ಸಂಸ್ಕೃತಿಯ ಚೌಕಟ್ಟನ್ನು ಸಿಡಿಸುವ ಭಾವದ, ಸ್ತ್ರೀ ಸಂವೇದನೆಯ ನೆಲೆಯಲ್ಲಿ ಕಥೆಯನ್ನು ಚಿತ್ರಿಸುತ್ತಾರೆ.

'ಇರುವುದೆಲ್ಲವ ಬಿಟ್ಟು' ಬದುಕನ್ನೇ ತಿರಸ್ಕರಿಸಿದ ಪ್ರೊಫೆಸರ್ ಈ ಬಾಳಿನ ಉತ್ಸಹ ತುಂಬುವ ಪ್ರೇಮಳ ಪ್ರೇಮದ ಕಥೆ.ಜೀವನದ ನಶ್ವರತೆಯನ್ನು ಕಾಣಲು ಏಕಾಂಗಿಯಾಗಿ, ಕಡಲ ತಡಿಯ ಕಾಟೇಜ್ ಸೇರುವ, ಬಾಳಿನ ಸಂಜೆಯಲ್ಲಿದ್ದ ವೃದ್ಧ ಪ್ರೊಫೇಸರ್.ಬಾಳ್ವೆಯಲ್ಲಿ ಎಲ್ಲವೂ ಕೃತಕಮಯವಾದ ಸೋಗು, ಹಿಂಸೆ ಇವುಗಳಿಂದ ದೂರಸರಿದ ತತ್ವಜ್ಞಾನಿಯನ್ನು ಪ್ರೇಮ, ಪ್ರೀತಿ, ದ್ವೇಷ, ಅಸೂಯೆಗಳ ಜನಸಮುದಾಯದ ನಡುವೆ ಬಾಳ್ವೆಯ ಸ್ವೀಕಾರವನ್ನು ಕಟ್ಟಿ ಸಹಜ ಜೀವನವನ್ನು ನಡೆಸಿ ಸಹಬಾಳ್ವೆಯ ಸಾರುವ, ಪ್ರೇಮ ಪಾತ್ರದ ಹೆಣ್ಣಿನಿಂದಮಾತ್ರ ಸಾಧ್ಯ.ಪ್ರೇಮದಿಂದ ಸ್ತ್ರೀಯ ಸಂವೇದನಗಳಿಂದ ವ್ಯಕ್ತಿ ಬದಲಾವಣೆ ಮಾಡುವ ಮಾತೃತ್ವದ ಪ್ರೇಮತ್ವವನ್ನು ಇಲ್ಲಿ ಸಾರುತ್ತದೆ.ಕಟುಕನನ್ನ ಪರಿವರ್ತಿಸಿದ ಸ್ವರೂಪಿಯಾಗಿ ಪ್ರೇಮ ಪ್ರೊಫೆಸರ್‌ನ ಬಾಳಿನ ಜೀವನೋತ್ಸಾಹ ಚಿಲುಮೆಯಾಗಿಸುವ ಸಹಜೀವನಕ್ಕೆ ಕರೆದೊಯ್ಯುವ 'ಬುದ್ಧ'ಳಾಗಿ, ಸ್ತ್ರೀ ಸಂವೇದನಾ ದಾರಿ ತತ್ವಗಳನ್ನು ವೈಚಾರಿಕ ಹಿನ್ನೆಲೆಯಲ್ಲಿ ತಂದಿದ್ದಾರೆ.

'ಕನಸು ಹುಟ್ಟಿತು ಕೇಳಾ' ಎಂಬ ಕಥೆಯಲ್ಲಿ ಸಂಸಾರಿಕ ಬದುಕಿನ ಲೌಕಿಕ ಜಗತ್ತು ಮತ್ತು ಭಾವನೆಗಳು ಇಲ್ಲಿ ಸಂಘರ್ಷವಾಗಿದ್ದು ಕಥಾನಾಯಕ ಭಾವುಕನಾದರೆ, ನಾಯಕಿ ನಿರ್ಭಾವುಕಳು ಏಕೆಂದರೆ ಮಧ್ಯಮ ವರ್ಗದ ಎಲ್ಲಾ ನೋವುಗಳನ್ನು ಅರಿತವಳು ಗಂಡನ ಕನಸುಗಳಿಗಿಂತ ಹೆಂಡತಿಯ ಲೌಕಿಕ ಬದುಕಿನ ತತ್ವ, ಜಿಜ್ಞಾಸೆಗೆ ಅವಕಾಶ ಮಾಡಿಕೊಡುತ್ತದೆ. ತೊಟ್ಟಿಲು ತೂಗಿ ಜೋಗುಳಹಾಡುವ ಪ್ರಕೃತಿ ಸಹಜವಾದ ತಾಯ್ತನದ ತುಡಿತಗಳು ಪುರುಷರಿಗೇಕಿಲ್ಲ? ಎಂಬ ಪ್ರಶ್ನೆ ಈಕೆಗಿದೆ. "ದುಡಿಯೋ ಹೆಣ್ಣು ಗರ್ಭಧರಿಸೋದು ತುಂಬಿದ ಹೊಟ್ಟೆಹೋತ್ತು ಕೊಂಡು ಅಫೀಸಿಗೆ ಓಡಾಡೋದು ಹೆರಿಗೆ ರಜಾ ಬೇಡೋದು ಅಣಕದ ನೋಟಗಳಿಗೆ ಆಹಾರವಾಗೊದು ಇವೆಲ್ಲಾ

ಪುರುಷನಿಗೆ ಅರ್ಥವಾಗಲಾರದು." [1] ಎನ್ನುವ ನಾಯಕಿಯ ಛಾಟಿ ಏಟುಗಳು ಇಡೀ ಪುರುಷ ಲೋಕದ ಪ್ರಕೃತಿಯನ್ನು ಸ್ತಬ್ಧಗೊಳಿಸುವ ಸ್ತ್ರೀಯೊಳಗಿನ ವೇದನೆಯನ್ನು ನಿರೂಪಿಸುತ್ತಾರೆ.

ಹೆಣ್ಣಿನ ಹೆರಿಗೆನೋವಿನ ಪ್ರಕ್ರಿಯೆಯನ್ನು ರಮ್ಯವಾಗಿ ಯೋಚಿಸುವ ಗಂಡ. ಮದುವೆಯಾಗಿವರ್ಷದೊಳಗಿನ ಮಗುಹುಟ್ಟಿಸಿ ಗಂಡಸುತನ ಸಾಭೀತು ಮಾಡೊ ಹಠ. ಎಂಬ ಚೂಪಾದ ದನಿ ಸ್ತ್ರೀಕುಲ ಪ್ರಕೃತಿಯೊಡನೆ,ಹೆಣ್ಣು ತಾಯ್ತನದ ನೋವಿನಲ್ಲಿ ತೃಪ್ತಿ, ಸುಖಕಾಣುವ ಪುರುಷರ ಮನೋಭೂಮಿಕೆಯನ್ನು ವ್ಯಕ್ತಪಡಿಸುತ್ತಾಳೆ. ಗಂಡು ಒಂದು,ತಾಯಾದರೆ, ಅವಳ ನೋವು ಅವನಿಗೂ ವರ್ಗವಾಗುವಂತಿದ್ದರೆ, ಎನ್ನುವನೋವಿನಲ್ಲಿ ಸಾಮಾನತೆಯನ್ನು ಕಾಣುವ ಸ್ತ್ರೀವೇದನೆಗಳ ಧ್ವನಿಯಾಗಿ ಕಥೆಯನ್ನು ಚಿತ್ರಿಸುತ್ತಾರೆ

'ನನ್ನ ಪ್ರೀತಿಯ ಹುಡುಗನಿಗೆ' ಹೆಣ್ಣಿನ ತೃಪ್ತ ಮತ್ತು ಅತೃಪ್ತ ಜೀವನದ ಪರಿಚಯ ಇದಾಗಿದೆ, ಹೆಣ್ಣನ್ನ ಬೋಗದ ವಸ್ತುವಾಗಿ ಕಾಮದ ಹಂಬಲದಲ್ಲಿ ಬಯಸುವ ಗಂಡಿಗೂ ಪ್ರೇಮದವಾಂಚೆಯ ನೆರಳಿನಲ್ಲಿ ಕನಸಿನ ತಂಗಾಳಿಯನ್ನ, ನವಿರು ಭಾವಗಳ ಸಂಗಮಗಳ ವ್ಯತ್ಯಾಸವನ್ನು, ಹೆಣ್ಣಿನ ಅಂತರಂಗದ ತುಮುಲಗಳನ್ನು ಇಲ್ಲಿ ವ್ಯಕ್ತಪಡಿಸುತ್ತದೆ.ಪ್ರತೀ ಹೆಣ್ಣಿನಲ್ಲಿ ಕಾಮಕ್ಕೊಬ್ಬ ಪ್ರೇಮಕ್ಕೊಬ್ಬ ಬೇಕೆನ್ನುವ ಉಮಾ.ಗಂಡನಾದವನು ಕಾಮಪ್ರೇಮಗಳೆರಡನ್ನು ನೀಡಲಾರ ಎಂಬುದರಲ್ಲಿ ಸ್ತ್ರೀ ಮನಸ್ಸಿನ ಅಂತರಾಳದ ಬಾವನೆಗಳನ್ನು ಒಬ್ಬ ಸ್ಪಂದಿಸಲಾರ, ಭಾವನೆಯನ್ನು- ಪ್ರಣಯವನ್ನು ಏಕ ವ್ಯಕ್ತಿ ನೀಡಲಾರ. ಎಂಬ ಸ್ತ್ರೀಯೊಳಗಿನ ಒಡಲಾಳವನ್ನು ಸ್ಪೋಟಗೊಳಿಸುತ್ತಾರೆ.

ಸಮಾಜದಲ್ಲಿ ಹೆಣ್ಣು ಜೀವನ ಸಂಗಾತಿಯಾಗಬೇಕಾದವಳು ರಾತ್ರಿಯ ರತಿಯಾಗುವ ಸಂದರ್ಭವೇ ಹೆಚ್ಚು ನಿರ್ಮಾಣವಾಗಿರುವಾಗ, ಅವಳ ಭಾವನೆಗಳಿಗೆ ಬೆಲೆ ಸಿಗುವುದೆಂದು, ಅವಳಿಗೆ ಭಾವನೆಗಳಿಲ್ಲವೇ? ಎಂಬ ಪ್ರಶ್ನೆಗಳು ಉದ್ಬವವಾಗುತ್ತದೆ.ಕಥೆಗಾರರೊಳಗಿನ ಉಮಾ ಪಾತ್ರದ ವೈಜ್ಞಾನಿಕ ಹಿನ್ನೆಲೆಯನ್ನ ಪ್ರೇಮ ಮತ್ತು ಕಾಮಗಳ ಮುಖಾಮುಖಿಯನ್ನು ಸ್ತ್ರೀ ಸಂವೇದನಾ ಹಿನ್ನೆಲೆಯಲ್ಲಿ ಒಂದು ಹೆಣ್ಣಾಗಿ ಚಿತ್ರಿಸುತ್ತಾರೆ.

'ಸಾವು ಮತ್ತು ಮದುವೆ' ಮೂಡನಂಬಿಕೆಗಳ ಶೋಷಣೆಯೊಳಗೆ ಸುಟ್ಟು ಕರಕಲಾದ ಹೆಣ್ಣಿನ ವ್ಯಥೆಯು ಈ ಕಥೆಯಾಗಿದೆ ಸಂಪ್ರದಾಯ ನಂಬಿಕೆಗಳೆಂಬ ಗೋಡು ಅಚಾರಗಳ ನಡುವೆ ದುರಂತವಾಗುವ ಸ್ತ್ರೀ ಬದುಕಿನ ದಾರುಳ ಕಥೆಯಾಗಿದೆ.ನಿರೂಪಕ ಶೇಕರನ ಅಣ್ಣನ ಮದುವೆ, ಚಪ್ಪರದ ಹಿಂದಿನದಿನವೇ ಸೆಲೆಜ್ವರ ಬಂದಿದ ಎತ್ತು ಸತ್ತು ಹೋಯಿತು. ಮನೆಯಲ್ಲಿ ಶುಭಕಾರ್ಯಮಾಡುವಾಗ ಎತ್ತು ಸತ್ತುದ್ದು, ಅಪಶಕುನವೆಂದು ಅವ್ವ ಪಾರ್ವತಮ್ಮನ ಪ್ರಕಾರ ಈ ಮದುವೆ ನಿಲ್ಲಿಸಬೇಕು. ಸೋಸೆ ಅಂತ ಮನೆಗೆ ಬರೋಳು ಇನ್ನು ಬರುವಾಗಲೇ ಗೋಬಲಿ

ತಗೊಂಡವಳೇ ಅನ್ನುವ ಅಕ್ರೋಶದಲ್ಲಿ ಮದುವೆಯ ಸಮಾರಂಭ, ಬಾಳಗಂಜಿ ಗ್ರಾಮದ ರಾಮುವಿನ ತಂಗಿ ಶಾಂತಳನ್ನು ಅಣ್ಣ ನೆಚ್ಚಿಕೊಂಡು ಮದುವೆಯಾಗುತ್ತಿದ್ದವನು.ಆದರೆ ಅಣ್ಣವರದಕ್ಷಿಣೆ ಪಡೆದ್ದಿದ್ದಾನೆ. ಎನ್ನುವ ನಿರೂಪಕರ ಅಕ್ರೊಶ ಸಾಮಾಜಿಕ ಪ್ರಜ್ಞೆಗೆ ಉದಾಹರಣೆಯಾಗಿದೆ.ಹೆಣ್ಣಿನ ಕಡೆಯವರು ಕೊಟ್ಟ ವಾಚಿನ ಬೆಲ್ಟ್ ಎಮ್ಮೆಚರ್ಮದ್ದು ಎಂದು ತಿರಸ್ಕರಿಸುವ, ಬೆಳಗಿನ ತಿಂಡಿ ಉಪ್ಪಿಟ್ಟಿನಲ್ಲಿ ಸ್ವಲ್ಪ ಉಪ್ಪು ಜಾಸ್ತಿಯಾಗಿದೆ, ಎಂದು ಜಗಳ ತೆಗೆಯುವ ಹಾಗು ಊಟದಲ್ಲಿ ಅದು ಸರಿಯಿಲ್ಲ ಇದು ಸರಿಯಿಲ್ಲವೆಂದು ತರಟೆ ತೆಗೆಯುವ ಸಮಾಜದಲ್ಲಿ ಸ್ತ್ರೀ ಕುಲವನ್ನು ಇಷ್ಟೆಲ್ಲ ಶೋಷಣೆಗೆ ಒಳಗು ಮಾಡುವ, ಮಾರ್ಗವನ್ನು ಕಂಡು ಬೆದರುವ ನಿರೂಪಕರ, ವಾಸ್ತವಚಿತಂನೆಗಳು ಕಥೆಯಲ್ಲಿ ಮಿಳಿತವಾಗಿವೆ.

ಮದುವೆ ಮಂಟಪದ ಧಾರೆಯಲ್ಲಿ ನಿಂತ ಹೆಣ್ಣಿನ ಕಾಲು ಸರಿಯಿಲ್ಲ, ಪಾದಗಳು ತುಂಬಾ ಅಗಲವಾಗಿವೆ ಆರೀತಿ ಹೆಣ್ಣಿಗೆ ಇರಬಾರದು.ಜೋತೆಗೆ ಎಡಗಡೆ ಪಾದದ ಹೆಬ್ಬೆಟ್ಟಿನ ಮೂಳೆ ತುಂಬಾ ದಪ್ಪವಾಗಿದೆ.ಇದೆಲ್ಲ ಮುಚಿಟ್ಟು ನಮಗೆ ಮೋಸ ಮಾಡಿದ್ರು, ಈ ತರಾ ಕಾಲುಗುಣ ಇರೋದಕ್ಕೆ ನಮ್ಮ ಎತ್ತು ಸತ್ತಿದ್ದು.ಎಂದು ಎತ್ತಿನ ಸಾವಿಗೆ ಮದುವೆ ಹೆಣ್ಣು ಶಾಂತಳೇ ಕಾರಣವೆಂದೂ, ಸಂತೆಯಲ್ಲಿ ಎತ್ತು ದನಗಳನ್ನು ನೋಡಿ ಅಂಗಾಂಗಗಳನ್ನು ವಿಮರ್ಶೆ ಮಾಡುವ ಹಾಗೆ, ಹೆಣ್ಣಿನ ಬದುಕಿನ ಶೋಚನೀಯತೆಯನ್ನು, ಗೂಡ್ಡುನಂಬಿಕೆಗಳಲ್ಲಿ ಬಲಿಪಶುವಾಗುವ ಸ್ತ್ರೀಕುಲದ ಬದುಕನ್ನು ಅನಾವರಣ ಮಾಡುತ್ತಾರೆ.ಹೆಣ್ಣಿನ ಬಗ್ಗೆ ಅಪಶಕುನದ ಮಾತನಾಡುವ ನೀವು, ನಮ್ಮ ಮಗನಲ್ಲಿ ಯಾವ ದೋಷಗಳಿಲ್ಲವೆ. ಆತ ಮನ್ಮಥನೆ ಎಂದೆಳುವ ಕಥೆಗಾರರ ಸ್ತ್ರೀಪರ ಧೋರಣೆಯನ್ನು ಕಾಣಬಹುದು. ಆರು ತಿಂಗಳಾದರು ಪ್ರಸ್ತ ಮಾಡಿಕೊಳ್ಳದೇ ಶಾಂತಿಯನ್ನು ಬಿಟ್ಟ ಅಣ್ಣ. ತನ್ನ ಅತ್ತಿಗೆಯನ್ನು ತವರಿನಿಂದ ಮನೆಗೆ ಕರೆತರದ ಅಣ್ಣ ಅವ್ವನ ಬಗ್ಗೆ ಜಿಗುಪ್ಸೆ ಪಡುವ ಬುದ್ಧಿ ಹೇಳುವ ನೈತಿಕ ಪ್ರಜ್ಞೆಯನ್ನು ಮೂಡಿಸುವಲ್ಲಿ ಹಾಗೂ ಮೂಢನಂಬಿಕೆಗಳನ್ನು ಸುಧಾರಿಸಲು ವಿಫಲವಾಗುತ್ತಾರೆ.

ಕೊನೆಗೆ ಒಂದು ವರ್ಷವಾದರು ಮದುವೆ ಮಾಡಿಕೊಂಡ ಶಾಂತ. ತವರಿನಲ್ಲೇ ಉಳಿದುಬಟ್ಟೆ ತೋಳೆವ ನೆಪದ್ದಲ್ಲಿ, ಆತ್ಮಹತ್ಯೆ ಮಾಡಿ ಕೊಳುವ ಬಗೆಗೆ ತೀವ್ರ ಆಕ್ರೋಶ ಪಡಿಸುತ್ತಾರೆ.ಆದರೆ ಶಾಂತಿಯ ಬದುಕಿಗೆ ನ್ಯಾಯ ದೊರೆಯದೆ ವಿಫಲವಾಗಿ, ಅರಳುವ ಬದುಕು ಕಮರಿಹೋಗುವ ಸಾವಿನ ದುರಂತ ವಾಸ್ತವವಾಗುತ್ತದೆ.ಇಲ್ಲಿ ಕಥೆಗಾರರು ಶಾಂತಳ ಬದುಕಿಗೆ ನ್ಯಾಯ ದೊರಕಿಸಿ ಕೊಡುವ ಹಂಬಲವಿದ್ದರು, ವ್ಯವಸ್ಥೆಯೊಳಗಿನ ಗೊಡ್ಡು ನಂಬಿಕೆ ಸಂಪ್ರದಾಯಗಳನ್ನು ದಾಟಿಸಲು ವಿಫಲವಾಗುತ್ತಾರೆ.ಶೋಷಣೆ ವಿರುದ್ಧ ಹೋರಾಟ ಮಾಡುತ್ತಾರೆ ವಿನಹ: ಹೋರಟದ ಫಲ ವಿಫಲವಾಗುತ್ತದೆ. ಕಥೆ ವಾಸ್ತವತೆಯನ್ನು ನಿರೂಪಿಸುವುದರಲ್ಲಿ ಗೆಲುವನ್ನು ಸಾಧಿಸಿದರು, ಸ್ತ್ರೀಗೆ

ನ್ಯಾಯ ದೊರಕಿಸಿ ಕೋಡುವದರಲ್ಲಿ ವಿಫಲರಾಗುತ್ತಾರೆ.ಗೊಡ್ಡು ಸಂಪ್ರದಾಯ ಹಾಗೂ ಮೂಢ ನಂಬಿಕೆಗಳಿಂದ ಆಚೆ ಬರಲಾರದವರಾಗುತ್ತಾರೆ ಎಂಬುದೆ ಸತ್ಯವಾಗಿರುತ್ತದೆ.

ಅಡಿ ಟಿಪ್ಪಣಿ

1. ನಿಮ್ಮ ಮೆಚ್ಚಿನ ಕಥೆಗಳು.ನಾಗತಿಹಳ್ಳಿ ಚಂದ್ರಶೇಖರ್.ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2013. ಪುಟ 88

2. ಹದ್ದುಗಳು.ನಾಗತಿಹಳ್ಳಿ ಚಂದ್ರಶೇಖರ್. ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2009.

72

ಅಧ್ಯಾಯ–7

ಅಧ್ಯಾಯ–7

ನಾಗತಿಹಳ್ಳಿಯವರ ಕಥೆಗಳಲ್ಲಿ ಸಾಮಾಜಿಕ ಪ್ರಜ್ಞೆ

ಪ್ರತಿಯೊಬ್ಬ ಲೇಖಕನೂ ಸಮಜವೊಂದರ ಅಂಗ, ಅವನ ವ್ಯಕ್ತಿತ್ವದ ರಚನೆ ದೃಷ್ಟಿಕೊನ ಬಾವನೆಗಳ ಸಂಘರ್ಷ ಬೌದ್ಧಿಕ ಸ್ವರೂಪ, ಸಂವಹನ ಇವೆಲ್ಲವೂ ಸಾಮಾಜಿಕ ಪರಿಸರದ ಪ್ರಭಾವದಿಂದ ಒಡಮೂಡಿರುತ್ತದೆ. ಹಾಗಾಗಿಯೇ ಲೇಖಕ ತನ್ನ ಕಾಲದ ಜೀವನವನ್ನು ಪ್ರಭಾವಿಸುವ ಧಾರ್ಮಿಕ, ರಾಜಕೀಯ, ನೈತಿಕ, ಸಾಂಸ್ಕೃತಿಕ, ರಾಷ್ಟ್ರೀಯ ಸಮಸ್ಯೆಗಳನ್ನು ಮುಕ್ತ ಮನಸ್ಸಿನಿಂದ ನೋಡಿ ಆ ಹೊಸ ಅನುಭವಕ್ಕೆ ತನ್ನನ್ನೂ ಒಡ್ಡಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದಲೇ ನಾಗತಿಹಳ್ಳಿಯವರು ತಮ್ಮ ಕಥನಗಳಲ್ಲಿ ಅಂತರರ್ಮುಖಿಯಾಗಿ, ಸಾಮಾಜಿಕವಾಗಿ, ಒಳಗೊಳ್ಳುವ ಸಾಮಾಜಿಕ ವಿಶೇಷಗುಣಗಳಿಂದ ಮಾನವನ ವರ್ತನೆಗಳನ್ನು ದಾಖಲಿಸುತ್ತಾರೆ .

ನಾಗತಿಹಳ್ಳಿಯವರು ತಮ್ಮ ಕಥೆಗಳಲ್ಲಿ ಸಮಾಜದ ಮಾನವನ ವರ್ತನೆಗಳಸಮಾಜ ಘಾತಕ ಶಕ್ತಿಗಳ ವಿರುದ್ದ ಸಿಡಿದೇಳುವ, ಧೈರ್ಯ ಅಸಹಾಯಕತೆ ಧೃಡತೆಯನ್ನು ಬಿಂಬಿಸುವ ಪ್ರಯತ್ನ ಮಾಡಿದ್ದಾರೆ. ಕಟ್ಟುವಾಸ್ತವವನ್ನು ಬಯಲಿಗೆಳೆಯುವುದರೊಂದಿಗೆ ಇವರ ಕಥೆಗಳು ಅನಾವರಣಗೊಳ್ಳುತ್ತದೆ. ಮಾನವೀಯ ಔದರ್ಯದ ನೆಲೆಯನ್ನು ಮನವರಿಕೆ ಮಾಡಿ, ನಂಬಿಕೆಗೆ ಅರ್ಹ ವ್ಯಕ್ತಿ ಶೋಧನೆಯನ್ನು ಮುಖಮಾಡಿ ನಿಲ್ಲಿಸುತ್ತದೆ. ಸಾಮಾಜಿಕ ವ್ಯವಸ್ಥೆಯೊಳಗಿನ ಸಮಸ್ಯೆಗಳನ್ನು ಅನ್ಯಾಯಗಳನ್ನು ಅನಾವರಣ ಮಾಡುವುದರ ಜೊತೆಗೆ ಪರಿವರ್ತನ ಆಶಯಗಳನ್ನು ಬಿಂಬಿಸುತ್ತಾರೆ. ಅಂತಹ ಕಥೆಗಳಲ್ಲಿ ಮೊದಲ ಪಂಕ್ತಿಯಲ್ಲಿ ಸೇರುವ "ಪುಟ್ಟಕ್ಕನ ಮೆಡಿಕಲ್ ಕಾಲೇಜು" ಸಮಾಜವನ್ನು ಸುಧಾರಣೆ ಮಾಡಬೇಕಾದ ಮಠ, ಸಮಾಜಘಾತುಕದಲ್ಲಿ ಬಂಡವಾಳ ಮಾಡ ಹೋರಾಟ ದಾರಿ ಮಾರ್ಮಿಕವಾಗಿ ಚಿತ್ರಿತವಾಗಿದೆ. ಗ್ರಾಮೀಣ ಅವಿದ್ಯಾವಂತ ವಿದವೆಯೊಬ್ಬಳ ಹೊಲವನ್ನು ಕಿತ್ತುಕೊಳ್ಳುವ ಸಂದರ್ಭದಲ್ಲಿ ವ್ಯವಸ್ಥೆಯ ವಿರುದ್ಧ ಹೋರಾಡುವ ಮಹಿಳೆಯ ದಿಟ್ಟತನಗಳು ಅಸಹಾಯಕತೆ ಹೋರಾಟದ ಛಲ ನ್ಯಾಯಪಡೆದುಕೊಳ್ಳಲು, ಅಂತರಂಗದ ನೋವಿನ ಅಭಿವ್ಯಕ್ತಿಯನ್ನು ನವಿರಾಗಿ ಚಿತ್ರಿಸುವುದರ ಜೊತೆಗೆ, ಅನ್ಯರ ನೋವನ್ನು ಬಂಡವಾಳ ಮಾಡಿಕೊಂಡು ಲಾಭ ಪಡೆವ ಕೃಷ್ಣನ ಲೈಂಗಿಕ ಶೋಷಣೆಗಳನ್ನು ಚಿತ್ರಿಸಿದ್ದಾರೆ. ಇಲ್ಲಿ ಸಾಮಾಜಿಕ ವರ್ತನೆ ಮನಸ್ಸಿನ ಹಂಬಲಗಳ ನೆಲೆಯಲ್ಲಿ ರೈತಮಹಿಳೆಗಾದ ಅನ್ಯಾಯದ ಕುರುಹುಗಳನ್ನು ದಾಖಲಿಸುವ ನಿರೂಪಣೆ ಕಥೆಯ ಸಾಮಾಜಿಕ ಪ್ರಜ್ಞೆಯಾಗಿದೆ.

'ಗಾಯ' ಕಥೆಯಲ್ಲಿ ಬರುವ ಮಂಡ್ಲು ಪಂಚಾಯ್ತಿ ಚುನಾವಣೆಯಿಂದ ಹಳ್ಳಿ ಕುಟುಂಬಗಳು ಇಬ್ಭಾಗವಾಗಿ ಹೊಡೆದಾಡಿ ಕೊಲೆ ಸುಲಿಗೆಗಳಾಗುವ ಕ್ರೌರ್ಯಕ್ಕೆ ಚುನಾವಣೆಯ ಕಾರಣ ಒಂದೆಡೆಯಾದರೆ, ಜಾತಿಕಲಹ ರಾಜಕಾರಣದ ಲಾಭಪಡೆವ ಹುನ್ನಾರಗಳು ಬಿಂಬಿತವಾಗುತ್ತವೆ. ಇದರ ನಡುವೆಯೇ ಅಂತರಜಾತಿ ವಿವಾಹದಿಂದ ಹಾಗೂ ಚುನಾವಣೆಯಲ್ಲಿ ಗೆದ್ದು ಪ್ರತಿನಿಧಿಯಾಗುವ ಮಯೂರಿಯಂತಹ ಮಹಿಳೆಗೆ ಸಮಾನತೆಯ ಮೆಟ್ಟಿಲುಗಳನ್ನು ವ್ಯಕ್ತಪಡಿಸಿದರು. ಕಥೆಯಲ್ಲಿ ಸಾಮಾಜಿಕ ಅಸ್ತವ್ಯಸ್ಥತೆಗಳನ್ನು ಚಿತ್ರಿಸುತ್ತಾರೆ. ಪರಿವರ್ತನೆಯ ತೊಳಲಾಟ ಸ್ವೀಕರಿಸಿದ ಸಮಾಜದ ನಡುವಿನ ಮುಖಗಳು ಇಲ್ಲಿ ಅನಾವರಣಗೊಳ್ಳುತ್ತದೆ. ಹೀಗೆ **'ಮುತ್ತಾಲಯ್ಯನ ರಾಜಿನಾಮೆಯ ಪ್ರಸಂಗ'**ದಲ್ಲಿ ನ್ಯಾಯ ಕೇಳುವ ಮುತ್ತಾಲಯ್ಯನ ರಾಜಿನಾಮೆ ಪಡೆವ ಅಧಿಕಾರಿಯ ಭ್ರಷ್ಟತನಗಳು ಸರ್ಕಾರಿಯ ವಸ್ತುಗಳು ಸ್ವತ ಮನೆಗೆ ಬಳಕೆಯಾಗುತ್ತವೆ. ಐಶಾರಾಮಿ ಮದುವೆಯಿಂದಾಗುವ ಅವಾಂತರಗಳು, ಸಾಮಾಜಿಕ ಶೋಷಣೆಯಲ್ಲಿನ ಅಜ್ಞಾನ ಮುಗ್ಧತೆಯಲ್ಲೇ ಮಗುವನ್ನು ಕಳೆದುಕೊಳ್ಳುವ ಮುತ್ತಾಲಯ್ಯ ತನ್ನ ನೋವಿನ ಆರ್ಭಟದ ಬಂಡಾಯದಲ್ಲಿ ಅಧಿಕಾರಿಗಳ ಭ್ರಷ್ಟ ಶೊಗಿನಲ್ಲಿ ತನ್ನ ಕೆಲಸವನ್ನೇ ಕಳೆದುಕೊಂಡ ಪ್ರಸಂಗವನ್ನು ಅಮಾನವೀಯ ನಡೆವಳಿಯನ್ನು ನಿರೂಪಿಸುತ್ತಾರೆ.

'ಸೆಕೆಂಡ್ ಡಿವಿಜನ್ ಕ್ಲಾರ್ಕಿನ ಸಾವಿನ ಉತ್ತರಾರ್ಧ' ಕಥೆಯಲ್ಲಿ ಸಾವಿನ ನೆಪದಲ್ಲಿ ಹೋರಾಟ ಮಾಡಿ ಸಂಸ್ಕಾರದ ನೆಪವೊಡ್ಡಿ ಕಛೇರಿ ಜೀಪನ್ನು ಕಛೇರಿ ಸಮಯವನ್ನು ಹಾಳು ಮಾಡುವ ಕಛೇರಿ ಸಿಬ್ಬಂದಿಗಳು, ಭ್ರಷ್ಟತೆಯನ್ನು ಸೃಷ್ಟಿ ಮಾಡಿ ಬದುಕುವ, ಅಧಿಕಾರ ವರ್ಗಗಳ ಸರ್ಕಾರಿ ಉದ್ಯೋಗ ಹಾಗೂ ಭ್ರಷ್ಟ ಆಳ್ವಿಕೆಯನ್ನು ಸಾಮಾಜಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.

'ಹದ್ದುಗಳು' ಎಂಬ ಕಥೆಯಲ್ಲಿ ಸಾಮಾಜಿಕ ಶೋಷಣೆಯಲ್ಲಿ ಕಿತ್ತುತಿನ್ನುವ ಮಾನವನ ವರ್ತನೆಯನ್ನು ನಿರೂಪಿಸುತ್ತಾರೆ. ಲಾರಿಗೆ ಅಡ್ಡ ಬಂದ ವಯಸ್ಸಾದ ಅಜ್ಜಿ ಕೆಳಗೆ ಬಿದ್ದು ಪ್ರಜ್ಞೆ ತಪ್ಪಿದಾಗ ಸ್ಥಳೀಯ ಜನರ ಒಡೆತಗಳಿಗೆ ಚಾಲಕ ತುತ್ತಾಗಿ, ಅಜ್ಜಿಯನ್ನು ಸಮೀಪದ ಆಸ್ಪತ್ರೆಗೆ ಕರೆದ್ಯೊಯ್ದಾಗ ಅಪಘಾತದ ಕೇಸೆಂದು ವಾಸೂಲಿ ಮಾಡುವ ವೈದ್ಯರು. ಏನೂ ಪೆಟ್ಟಾಗಿಲ್ಲವೆಂದು ಅಜ್ಜಿಯ ವಾರಸುದಾರರು ತಿಳಿಸಿದ್ದರೂ ಕೇಸು ಹಾಕುವ ನೆಪದಲ್ಲಿ ಲಂಚದ ರೂಪದಲ್ಲಿ ಸುಲಿಗೆ ಮಾಡುವ ಪೊಲೀಸ್ ಪೇದೆ, ಸ್ಥಳೀಯ ಗ್ಯಾರೇಜ್ ಹುಡುಗರ ಹಣದ ಹಂಬಲ, ನಾಳೆ ನಾಳಿದ್ದು ಅಜ್ಜಿಯನ್ನು ವೈದ್ಯರಲ್ಲಿಗೆ ಕರೆದ್ಯೊಯುವ ಔಷಧಿ ಯ ವೆಚ್ಚ, ಜಟಕಾ ಸಾಬಿ, ಅಜ್ಜಿಯ ಮನೆಯ ಜವಾನ, ಇವರೆಲ್ಲ ಹಣವನ್ನು ವಸೂಲಿ ಮಾಡಿ ಚಾಲಕನ ಬಳಿ ಸಣ್ಣ ಕಾರಣಕ್ಕೆ ಶೋಷಣೆ ಮಾಡುವ ಹದ್ದುಗಳಾಗಿ ನಿರೂಪಿಸುತ್ತಾರೆ. ಕಣ್ಣು ಕಾಣಿಸದ ಕಿವಿಯೂ ಕೇಳಿಸದ ಅಜ್ಜಿ ಮನೆಯಿಂದ

ರಸ್ತೆಗೆ ಬಂದು ಲಾರಿಗೆ ಸಿಕ್ಕಿಕೊಳ್ಳುವ ಸಂದರ್ಭ ಅಜ್ಜಿ ಕ್ಷಣಾರ್ದದಲ್ಲಿ ಪಾರುಮಾಡಿದರು, ಅಜ್ಜಿ ನೆಲಕ್ಕೆ ಬಿದ್ದ ನೆಪಮಾಡಿಕೊಂಡು ದಿನಗೂಲಿ ಡ್ರೈವರ್‌ನ ಶ್ರಮದ ಬದುಕನ್ನು ಕಿತ್ತುತಿನ್ನುವ ಮಾನವನ ಕೆಳವರ್ತನೆಯನ್ನು ದಾಖಲಿಸುತ್ತಾರೆ. ಸಮಾಜದಲ್ಲಿ ಸಣ್ಣ ತಪ್ಪುಗಳನ್ನು ಕಂಡು ತೀರ ಸಣ್ಣತನದ ವರ್ತನೆ ಮಾಡಿ, ಅನ್ಯರ ಸಂಪತ್ತನ್ನು ಕಬಳಿಸಲು ಹೊಂಚುಹಾಕುವ ಮನುಷ್ಯರನ್ನು ಕಾಣಬಹುದು. ಕಾನೂನನ್ನು ಕಾಯುವ ಪೊಲೀಸರೇ ರಣ ಹದ್ದುಗಳಾಗಿ ಕಾದು ಕಬಳಿಸುವ ಪೊಲೀಸರ ಗುಣಗಳನ್ನು ನೈಜವಾಗಿ ನಿರೂಪಿಸುತ್ತಾರೆ. ವಾಸ್ತವ ಘಟನೆಯನ್ನು ನೈಜ ನಿರೂಪಣೆಯಾಗಿ ತೀಕ್ಷ್ಣವಾಗಿ ಚಿತ್ರಿಸಿದ್ದಾರೆ.

'ವಿಶ್ವ' ಎಂಬ ಕಥೆಯಲ್ಲಿನ ಯಾವುದೋ ಸನ್ನಿವೇಶದ ನೋವಿನ ಆತ್ಮಹತ್ಯೆ ಪ್ರಯತ್ನದಿಂದ ಮತ್ತೊಂದು ಉಪಯೋಗವಾಗುವ, ಸಾಮಾಜಿಕ ವರ್ತನೆಯನ್ನು ದಾಖಲಿಸುತ್ತದೆ. ತನ್ನ ವೈಯಕ್ತಿಕ ಘಟನೆಯಿಂದ ಆತ್ಮಹತ್ಯೆಗೆ ಪ್ರಯತ್ನ ಮಾಡುವ ವಿಶ್ವ, ಹೋರಟದ ಚಳುವಳಿಯ ನಾಯಕನಾಗಿ ಲಾಭಪಡೆದದ್ದು. ಸಮಾಜದಲ್ಲಿ ಅದೆಷ್ಟೋ ಸಂದರ್ಭಗಳನ್ನು ನೆನಪಿಗೆ ತರುವತಂಹ ಹೋರಾಟದ ಚಳುವಳಿಗಳಾಗಿವೆ.

ಕಾಲೇಜಿನ ಹಾಜರಾತಿ ಕೊರತೆ ಪಟ್ಟಿಯಲ್ಲಿ ನೂರು ಜನರ ಹೆಸರಿನಲ್ಲೊಬ್ಬ ವಿಶ್ವ, ಅನ್ಯಾಯಕ್ಕೆ ಹೋರಾಟ ಮಾಡಿ ವಿಷ ಸೇವಿಸಿದ್ದು, ಹೋರಾಟದ ನೆಪವಾದರೆ. ಕಾರಣ ತನ್ನ ಲವ್ವರ್ ಮಾಲಿತಿ ಕೈಕೊಟ್ಟು ಬೇರೆ ಮದುವೆ ಮಾಡಿಕೊಂಡಿದಕ್ಕೆ. ಆದರೆ ಸನ್ನಿವೇಶ ಕಾಲೇಜಿನ ಹಾಜರಾತಿ ಕೊರತೆಯ ಚಳುವಳಿಯಲ್ಲಿ ಎಂಬ ಇಂತಹ ವಾಸ್ತವ ಘಟನೆಗಳು ಸಮಾಜದಲ್ಲಿ ನಡೆಯುತ್ತಿರುವ ಅನೇಕ ಘಟನೆಗಳಿಗೆ ಸಾಕ್ಷಿಯಾಗಿವೆ. ಇಂತಹ ಘಟನೆಗಳಲ್ಲಿ ರೈತ ಆತ್ಮಹತ್ಯೆ – ಉದ್ಯೋಗ, ಹೋರಾಟದಲ್ಲಿನ ಬಲಿಗಳನ್ನು ನಾವು ನೋಡಿದ್ದರೂ, ಸತ್ಯಘಟನೆ ಹಾಗೂ ಸನ್ನಿವೇಶಗಳೇ ಬೇರೆ ಎಂಬ ಸಾಮಾಜಿಕ ಪ್ರಜ್ಞೆಯ ಕಥೆಯನ್ನು ಎಳೆಯಾಗಿಸಿ ಚಿತ್ರಿಸಿದ್ದಾರೆ.

ಪ್ರಸ್ತುತ ದಿನದ ಶಿಕ್ಷಣದ ಮಹತ್ವವನ್ನು, ಪರೀಕ್ಷೆಯ ಗುಣಮಟ್ಟವನ್ನು ದಾಖಲಿಸುತ್ತಾರೆ. ಪರೀಕ್ಷೆ ಹಾಲ್‌ನಲ್ಲಿ ಚೂರಿ ತೆಗೆದು ಡಿಗ್ರಿ ಪಾಸ್ ಮಾಡುವ 'ಪೂರ್ಣಚಂದ್ರ', ಒಂದು ವಾರಕ್ಕೆ ಮುಂಚೆ ಒಂದಷ್ಟು ದುಡ್ಡು ಬಿಸಾಕಿ ಪ್ರಶ್ನೆ ಪತ್ರಿಕೆ ಕೊಂಡು ಬಿಡುವ 'ಧರಣಿ', ಪರೀಕ್ಷೆ ಮುಗಿದ ಮೇಲೆ ಒಂದು ಪೇಪರ್‌ಗಿಷ್ಟು ಅಂತ ಕೊಟ್ಟು ಪಾಸ್ ಮಾಡಿಸುವ ಪಾಂಡು. ಹೀಗೆ ಪೂರ್ಣಚಂದ್ರ, ಧರಣಿ, ಪಾಂಡು ಅಂತಹ ಶಿಕ್ಷಣ ಪಡೆವರು ನಮ್ಮ ಸಮಾಜದ ಸುತ್ತಲೂ ನಡೆಯುತ್ತಿರುವ ಘಟನೆಯಾಗಿದ್ದಾರೆ. ಪ್ರಸ್ತುತ ದಿನದ ಸಮಾಜಿಕ ವ್ಯವಸ್ಥೆಗಳನ್ನು ಬಯಲು ಮಾಡುವ ಸಾಮಾಜಿಕ ಪ್ರಜ್ಞೆಯನ್ನು ಕಥೆಗಾರರು ವ್ಯಕ್ತಪಡಿಸುತ್ತಾರೆ.

'ಗತಿಶೀಲ' ಎಂಬ ಕಥೆಯೊಳಗೆ ಸಾಮಾಜಿಕ ಸೇವೆಗಳ ಗತಿಯನ್ನು ವ್ಯಕ್ತಪಡಿಸುವ ಕಥೆಗಾರರು ತಮ್ಮ ಊರಿನಲ್ಲಿ ಸ್ಥಾಪಿಸಿದ ಯುವಕ ಸಂಘ ಚುನಾವಾಣೆಯಿಂದ ಕಚ್ಚಾಡಿ ತಮ್ಮೊಳಗಿನ ರಾಜಕೀಯದ ಸ್ವಾರ್ಥಕ್ಕೆ ಬಲಿಯಾಗುವ ಮಾನವನ ವರ್ತನೆಯನ್ನು ನಿರೂಪಿಸುತ್ತಾರೆ. ಗ್ರಾಮವನ್ನು ನೈರ್ಮಲ್ಯದಿಂದ ಕೊಳಚೆಯನ್ನು ನಿರ್ಮೂಲನೆ ಮಾಡಿ ಶುದ್ದ ಮಾಡಿ ಊರಿಗೆ ಕರೆಂಟು ತಂದು, ಗಿಡನೆಟ್ಟು, ಬೋರ್‌ವೆಲ್, ಬಸ್‌ಶೆಲ್ಟರನ್ನು ಸರ್ಕಾರಿ ಸವಲತ್ತುಗಳನ್ನು ಗಿಟ್ಟಿಸಿಕೊಂಡು ಗ್ರಾಮದ ಯುವಕರಿಗೆ ಸ್ವಉದ್ಯೋಗಗಳನ್ನು ಕಲ್ಪಿಸಿಕೊಂಡು, ಜಿಲ್ಲೆಯ ಅತ್ಯುತ್ತಮ ಸಂಘ ಎಂದು ಸರ್ಕಾರದಿಂದ ಪ್ರಶಸ್ತಿ ಪಡೆದಿದ್ದ ಸಂಘ ಎಲೆಕ್ಷನ್ ಬಂದು ಕುಲಗೆಟ್ಟ ಪರಿಸ್ಥಿತಿ, ಸಂಘದ ಜವಬ್ದಾರಿ ಹೊತ್ತು ಸೇವೆ ಮಾಡುವವರ ಬದುಕು ಹಾಳಾಗುವ ಸಂಘಟನೆಗಳನ್ನು ನಿರೂಪಿಸುತ್ತಾರೆ. ಬದುಕಿನಲ್ಲಿ ತಮ್ಮ ಸ್ವಾರ್ಥಸಾಧನೆಗಾಗಿಯೇ ವ್ಯಕ್ತಿಯನ್ನು ವಿಶ್ವಾಸಗಳಿಸುವ ಸಾಮಾಜಿಕ ಅಧ:ಪಥನಗಳನ್ನು ಚಿತ್ರಿಸುತ್ತಾರೆ. ಇಂದಿನ ದಿನಗಳಲ್ಲಿ ಸಾಮಾಜಿಕ ಸೇವೆಗಳು ಸ್ವಾರ್ಥವಾಗಿರುವ ನೆಲೆಯನ್ನು ನಿರೂಪಿಸುವ ಕಥೆಗಾರರು ತನ್ನ ಅನುಭವದ ಮೂಸೆಯಲ್ಲಿ ಕಟ್ಟು ವಾಸ್ತವತೆಯನ್ನು ಜಲಾಡಿ ನಿರೂಪಿಸುತ್ತಾರೆ. ತಿದ್ದಿಬುದ್ದಿ ಹೇಳಿ ಕಲಿಸಿದ ಆದರ್ಶ ವ್ಯಕ್ತಿ ಮಾದರಿ ಮೇಷ್ಟ್ರು ಇಂದು ಕುಡುಕರಾಗಿ ಬೀದಿಯಲ್ಲಿ ಬಿದ್ದು ನರಳುವ ಸಾಮಾಜಿಕ ವ್ಯವಸ್ಥೆಯನ್ನು ಚಿತ್ರಿಸುತ್ತಾರೆ. ಒಂದು ನವಿರಾದ ಭಾಷೆಯ ನಿರೂಪಣೆಯಲ್ಲಿಯೆ ಕಥೆಮುಗಿಯುತ್ತದೆ. ಕಥೆ ಒಂದು ಘಟನೆಯ ವರದಿಯನ್ನು ತನ್ನ ದಿನಚರಿಯಂತೆ ಚಿತ್ರಿಸಿ, ಕಥೆಯಾಗಿಸುವ ಕಥೆಗಾರರ ನೈಪುಣ್ಯತೆ ಗೋಚರಿಸುತ್ತದೆ. **'ಮೂರ್ತಿಯೂ ಕ್ರಾಂತಿಯೂ'** ಎಂಬ ಕಥೆಯಲ್ಲಿ ಏಕವ್ಯಕ್ತಿಯಿಂದ ಕ್ರಾಂತಿ ಅಸಾಧ್ಯ ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ. ಕಥೆಗಾರರ ಗೆಳೆಯ ಮೂರ್ತಿಯ ಚಿಂತನೆಗಳು ಸಾಮಾಜಿಕ ಶೋಷಣೆ ಹಾಗೂ ಚಿಂತನೆಗಳು ಮುಖಾಮುಖಿಯಾಗುತ್ತವೆ. ದೇವರನ್ನು ಪೂಜಿಸದವರನ್ನು ವಿಚಿತ್ರ ಪ್ರಾಣಿಯಂತೆ ಕಾಣುವ ಸಾಮಾಜಿಕವ್ಯವಸ್ಥೆ, ದೇವರನ್ನು ಪೂಜಿಸುವ ನಂಬಿಕೆ ಇಡುವುದರಲ್ಲೇ ಹಾಳು ಮಾಡುತ್ತಿದ್ದಾರೆ. ಪೂಜಿಸುವವರು ಹುಚ್ಚರೆಂದು, ಲೌಕಿಕ ಬದುಕಿನ ಬಗ್ಗೆ ಚಿಂತಿಸಿದವರು ಎಂದು ಪ್ರೀತಿಗಳೇ ಸುಳ್ಳೆಂದು ವ್ಯಕ್ತಪಡಿಸುವ ಮೂರ್ತಿ. ಸಂಪಾದನೆ ತಾರದ ಮಗನು ಪ್ರೀತಿಯಿಂದ ಹೊರಗುಳಿಯುತ್ತಾನೆ. ಎಂಬ ಮನು ಅನಾರೊಗ್ಯ ಸಮಾಜದ ಕಿಡಿಗೇಡಿತನಗಳನ್ನು ಸಹಿಸಿಕೊಳ್ಳುವುದು ಒಂದು ಪಾಪವೆಂದು, ಇಷ್ಟವಿಲ್ಲದ ನಮಸ್ಕಾರಗಳನ್ನು ಮಾಡುವುದು, ಅಯೋಗ್ಯರಿಗೆ ಗೌರವವನ್ನು ನೀಡುವುದು ಹಾದರಕ್ಕಿಂತಲೂ ನೀಚವಾದ ಕೆಲಸ. ಇಂತಹ ನಮಸ್ಕಾರಗಳ ವಿರುದ್ಧ ಕ್ರಾಂತಿ ಮಾಡುವ ಮೂರ್ತಿ. ತಮ್ಮ ಮನಸ್ಸಿನ ವಿರುದ್ಧವಾಗಿ, ಮಾನವೀಯತೆಗೆ ವಿರುದ್ಧವಾಗಿ, ನಡೆದುಕೊಳ್ಳುವ ಮುಕ್ತಮನಸ್ಸಿನಿಂದ ವರ್ತಿಸದಿದರ ವಿರುದ್ಧ ಕಿಡಿ ಕಾರುವ ಮೂರ್ತಿಯನ್ನು ಗುಣಗಳನ್ನೇ..., ಬಂಡವಾಳಮಾಡಿ, ಉದ್ಯೋಗದಲ್ಲಿ ಕೆಲಸ ಖಾಯಂ ಗಳಿಸುವ ಶ್ರೀಧರ

ನಂತಹನನ್ನು ಉದಾಹರಿಸುತ್ತಾರೆ. ಕಛೇರಿಗೆ ತಡವಾಗಿ ಬಂದು ಬೇಗ ಮನೆಸೇರುವ, ಕಛೇರಿಯ ವಾಹನ ವಸ್ತು ವ್ಯಕ್ತಿಗಳನ್ನ ಸ್ವಾರ್ಥಬಳಕೆ ಮಾಡುವ ಮ್ಯಾನೆಜರ್. ಇಂತಹ ಅಧಿಕಾರವರ್ಗ ಸಮಾಜದಲ್ಲಿ ನಡೆಸುವ ಕ್ರಿಯೆಗಳನ್ನು ಕೊಪದಿಂದಲೇ ಕಾಣುವ ಕಥೆಗಾರರು, ಮೂರ್ತಿಯ ಕ್ರಾಂತಿಯ ಬಗ್ಗೆ, ಕ್ರಾಂತಿಯಲ್ಲಿ ನಂಬಿಕೆ ಇದೆ. ಆದರೆ ನಿನ್ನ ಕ್ರಾಂತಿಯಲ್ಲಿ ನಂಬಿಕೆಯಲ್ಲ ಏಕೆಂದರೆ, ಕ್ರಾಂತಿ ಏಕವ್ಯಕ್ತಿಯಿಂದ ಸಾಧ್ಯವಿಲ್ಲ. ಸಾವಿರ ಬುದ್ದರು , ಕೋಟಿ ಬಸವರು ಲೆಕ್ಕವಿಲ್ಲದಷ್ಟು ಗಾಂಧಿಯವರು ಹುಟ್ಟಿ ಬಂದರೂ ಇಲ್ಲಿನ ವಿಷವರ್ತುಲ ಬದಲಾಗುವುದಿಲ್ಲ ಎಂಬ ಕಟು ವಾಸ್ತವವತೆಯನ್ನು ನಿರೂಪಿಸುತ್ತಾರೆ. ಮೂರ್ತಿಯ ಅಣ್ಣ ಶಂಭಣ್ಣನ ನೋವು ಅತ್ತಿಗೆಯ ಕಾಯಿಲೆ ನೀರು ಬಾರದ ಬಾವಿ, ಬೆಳೆದು ನಿಂತಿರುವ ಸಾಲದ ನಡುವೆ ಸಾಮಾಜಿಕ ಬದಲಾವಣೆ ಮಾಡಹೋರಟ ಮೂರ್ತಿಯ ಕ್ರಾಂತಿಗೆ ಬಲವಿಲ್ಲದೆ ಸೋಲುವ ಸಂಗತಿ. ಮ್ಯಾನೇಜರ್‌ನ ಬಾವಮೈದುನನ ಶೋಷಣೆಯನ್ನು ಸಹಿಸದೆ ಕೆರಳಿ ಕೆಲಸಕ್ಕೆ ರಾಜಿನಾಮೆ ನೀಡಿದರು. ಪುಂಡ ರೌಡಿಗಳಿಂದ ಒದೆತಿಂದು ಕ್ರಾಂತಿ ಮರುಗುವ ಸಾಮಾಜಿಕ ವ್ಯವಸ್ಥೆಯೊಳಗಿನ ಮನುಷ್ಯನ ವರ್ತನೆಗಳನ್ನು ಅನಾವರಣ ಮಾಡುತ್ತಾರೆ. ಮೂರ್ತಿ ಕ್ರಾಂತಿಯನ್ನು ಬಿಟ್ಟು ಹಳ್ಳಿಯ ಬದುಕಿನ ಅಣ್ಣನ ನೋವು, ಬಾರದ ಬಾವಿಯಲ್ಲಿ ನೀರನ್ನು ತರಲೆತ್ನಿಸಿ ಹಿಂದಿರುಗುವ ಕ್ರಾಂತಿ ಪಲಾಯನ ಮಾಡುವ ಎಷ್ಟೂ ಸಾಮಾಜಿಕ ಕ್ರಾಂತಿಗಳ ಪಥನವನ್ನು ಸೂಚಿಸುವುದಾಗಿದೆ. ಇಲ್ಲಿ ನಿಸ್ವಾರ್ಥ ಸಾಮಾಜಿಕ ಕ್ರಾಂತಿಗೆ ಬೆಂಬಲವಾಗಿ ನಿಲ್ಲುಬೇಕಾಗಿದ್ದ ಜನಶಕ್ತಿ, ಸ್ವಾರ್ಥ ಸಾಧನವಾಗುವ ಪ್ರಸ್ತುತ ಸಾಮಾಜಿಕ ನೆಲೆಯನ್ನು ತಿಳಿಸುತ್ತದೆ. ಈ ವ್ಯವಸ್ಥೆಯೊಳಗಿನ ಮಾಲಿನ್ಯಗಳನ್ನು ಮೂರ್ತಿಯಂತಹ ಒಬ್ಬ ವ್ಯಕ್ತಿಯಿಂದ ಸಾಧ್ಯವಿಲ್ಲ. ತಿಮಿಂಗಲಗಳಂತಹ ಭ್ರಷ್ಟ ವ್ಯವಸ್ಥೆಗಳು ಮೂರ್ತಿಯ ಕ್ರಾಂತಿಯನ್ನು ನುಂಗಿ ನೀರು ಕುಡಿಯುವ ಸಾಮಾಜಿಕ ವ್ಯವಸ್ಥೆ ಇಲ್ಲಿ ಚಿತ್ರಿತವಾಗಿದೆ.

'ದ್ವಂದ್ವಗಳು' ಎಂಬ ಕಥೆಯಲ್ಲಿ ಮನುಷ್ಯನಾಳದ ದ್ವಂದ್ವ ವ್ಯಕ್ತಿತ್ವದ ನಿಲುವುಗಳನ್ನು ವ್ಯಕ್ತಪಡಿಸುತ್ತದೆ. ಮನುಷ್ಯನ ತಾಕಲಾಟ ಬದುಕಿನೊಳಗಿನ ಯಾಂತ್ರಿಕ ವ್ಯವಸ್ಥೆಗಳನ್ನು ಅನಾವರಣ ಮಾಡುತ್ತಾರೆ. ಸತ್ತ ಅಪ್ಪನಿಗೆ ಗೋರಿ ಕುಟ್ಟಿಸುವ ಬದಲು ಬದುಕಿರುವಾಗಲೇ ಅವರನ್ನು ಸುಖದಿಂದ ನೋಡಿಕೊಳ್ಳುವುದು ಮುಖ್ಯವಾಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ಅಪ್ಪ, ನಮ್ಮ ಪ್ರಾಣಕ್ಕಿಂತ ಹೆಚ್ಚು, ಆದರೆ ಅವರಿಗೆ ಸಿಮೆಂಟಿನ ಗೋರಿ ಕಟ್ಟಿ ತೋರಿಕೆ ಪ್ರೀತಿಯ ವ್ಯಕ್ತಿಸಲು ವಿರೋಧಿಸುವ ಕಥೆಗಾರರ ವೈಚಾರಿಕ ನಿಲುವುಗಳು ಕಥೆಯಲ್ಲಿ ನಿರೂಪಿತವಾಗಿವೆ. ನಿರೂಪಕರು ಡೈರಿಯಲ್ಲಿ ಕೆಲಸ ಮಾಡುವ ನೌಕರರಾಗಿದ್ದು, ರಾತ್ರಿ ಪಾಳಯದ ಕರ್ತವ್ಯ ನಿರ್ವಹಿಸುವ ಕೆಲಸದ ಮೇಲಿನ ಜಿಗುಪ್ಸೆಯನ್ನು ಬಗ್ಗೆ ವಿವರಿಸುತ್ತಾರೆ. ತಾನ್ನೊಳಗಿನ ಜಿಜ್ಞಾಸೆಯಲ್ಲಿ ಕೆಲಸ ಸಿಗುವವರೆಗೆ ಒಂದು ರೀತಿಯ ಬಡತನ ನೋವು ಕಷ್ಟಗಳಿರುತ್ತದೆ. ಕೆಲಸ ಸಿಕ್ಕಿದ ಮೇಲೆ ದುಡಿಯಲೇಬೇಕಾದರೆ ದುಡಿಮೆಯ ವಿರೋಧ.

ಮನುಷ್ಯನ ಹಂಬಲಗಳಲ್ಲಿ, ಇರುವುದನ್ನು ಬಿಟ್ಟು ಮತ್ತಾವುದನ್ನು ಹುಡುಕುವ ಮನಷ್ಯವರ್ತನೆಗಳನ್ನು ಬಿಂಬಿಸುತ್ತಾರೆ.

ಮೈಸೂರಿನ ಪ್ಯಾಕ್ಟರಿ ಕೆಲಸಕ್ಕೆ ಪ್ರಯಾಣಿಸುತ್ತಿದ್ದ ಕಥೆಗಾರರು, ತಾವಿದ್ದ ಬಸ್ಸು ಹಾಗೂ ಇದನ್ನು ಹಿಂದಕ್ಕೆ ಹಾಕುವ ಅಬ್ಬರದಲ್ಲಿ ಲಾರಿ ಒಂದಕ್ಕೊಂದು ಸ್ಪರ್ಧೆ. ಆದರೆ ಆ ಲಾರಿಯಲ್ಲಿ ತುಂಬಾ ಜನ, ಆದರೂ ಬಾಲಕರಿಬ್ಬರ ಪೈಪೋಟಿ ಪ್ರತಿಷ್ಠೆಗಳ ನಡುವೆ ಲಾರಿಯ ಜನರ ಹರ್ಷೋದ್ಗಾರದಲ್ಲಿ ಮುಂದೆಸಾಗಿ, ಶ್ರೀರಂಗಪಟ್ಟಣದ ಸೇತುವೆಯ ತಡೆಗೋಡೆ ಮುರಿದು ನುಗ್ಗಿ, ಕಾವೇರಿ ನದಿಗೆ ಬಿದ್ದು ಅಲ್ಲಿನ ಸಾವು ನೋವುಗಳನ್ನು ವಿವರಿಸುತ್ತಾರೆ. ತಾವಿದ್ದ ಬಸ್ಸಿನಲ್ಲಿ ಮಧುಚಂದ್ರಕ್ಕೆ ಹೊರಟ ನವ ದಂಪತಿಗಳ ಕೆ.ಆರ್.ಎಸ್ ವೀಕ್ಷಣೆಗೆ ತಡವಾಗುತ್ತದೆ. ನಾಳೆ ಚಾಮುಂಡೇಶ್ವರಿ ಬೆಟ್ಟದ ರಥೋತ್ಸವದ ಯೋಚನೆಯಾದರೆ, ಸಿನಿಮಾ ನೋಡಬೇಕೆಂಬುವವರ ಹಂಬಲಗಳು ನಿರಾಸೆಯಾಗುತ್ತವೆ. ತಾವು ತಲುಪಬೇಕಾಗಿದ್ದ ಸಂದರ್ಭ ಸಮಯಗಳ ನಡುವೆ ಹಪಿಹಪಿಸುವ ಜನರು, ಕಣ್ಣೆದುರು ಸಾವು ನೋವುಗಳ ದರ್ಶನಗಳನ್ನು ಅನುಭವಿಸಿದರು, ಮನುಷ್ಯನ ಜಂಜಾಟದ ಯಾಂತ್ರಿಕ ಬದುಕಿನ ನಡುವೆ, ತಾನು ತನ್ನ ಎಂಬ ಪ್ರತಿಷ್ಠೆ. ಎಷ್ಟೇ ನೋವುಗಳನ್ನು ಕಂಡರೂ ಮತ್ತದೇ ಜಂಜಾಟಗಳನ್ನು ಬಿಡಲು ಸಾಧ್ಯವಿಲ್ಲ ಎಂಬುದನ್ನು ಚಿತ್ರಿಸುತ್ತಾರೆ. ಇಲ್ಲಿನ ಮನುಷ್ಯ ವರ್ತನೆಗಳನ್ನು ನಿರೂಪಿಸುತ್ತ, ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವ, ಸಾಮಾಜಿಕ ಪ್ರಜ್ಞೆಯಲ್ಲಿ ಕಥೆಯನ್ನು ನಿರೂಪಿಸುತ್ತಾರೆ.

'ಪರಚಿಂತೆ ಏಕಯ್ಯ' ಎಂಬ ಕಥೆಯಲ್ಲಿ ಮಾನವೀಯತೆಯಿಂದ ಮಾಡಿದ ಸೇವೆಗಳೇ, ವ್ಯಥೆಯ ದುರಂತವಾಗುವ ಮನುಷ್ಯನ ವರ್ತನೆಗಳನ್ನು ದಾಖಲಿಸುತ್ತಾರೆ . ಲೇಖಕರ ಕಛೇರಿಗೆ ವಿಳಾಸ ತಪ್ಪಿನಿಂದ ಬಂದ ಪಾಂಡುರಂಗ ಪ್ರಭುವಿನ ಮೂರು ಸಾವಿರ ರೂಗಳ ಡಿಮ್ಯಾಂಡ್ ಡ್ರಾಫ್ಟನ್ನು , ಕಾಳಜಿಯಿಂದ ತಲುಪಿಸುವ ಉದ್ದೇಶವನ್ನು ಮಾನವೀಯತೆ ಎಂದು ಬಾವಿಸುತ್ತಾರೆ. ಗಲ್ಲಿ, ಬೀಡಿ ಅಂಗಡಿ, ಹುಡುಕಿ ಪಾಂಡುರಂಗ ಪ್ರಭುವಿಗೆ ತಲುಪಿಸಿದರೆ, ಆತನು "ಬ್ಯಾಂಕಿಗೆ ಹೋಗಿ ಕ್ಯಾಷ್ ಮಾಡಿಕೊಳ್ಳಲು ಸಾಧ್ಯವಿದ್ರೆ ತರ್ತಿದ್ದನಾ? ಎಲ್ಲಾ ಸತ್ಯ ಹರಿಶ್ಚಂದ್ರನ ಥರವೇ, ಮಹಾಉಪಕಾರ ಮಡೋಕೆ ಬಂದುಬಿಟ್ಟ."[1] ಎಂಬ ತಾತ್ಸರ ಅಮಾನವೀಯತೆ ನಡೆ ಮಾನವೀಯತೆಯು ಮುಖಾಮುಖಿಯಾಗುವ ಸಂದರ್ಭವನ್ನು ಚಿತ್ರಿಸಿದ್ದಾರೆ. ಸಿಕ್ಕಪತ್ರ ತಲುಪಿಸಿದಾಗ ಹುಡುಗಿ ಪತ್ರವೆಂದು ಹಾಸ್ಪೆಲ್ಲಿಗೆ ಹೋಗಿ ಕೊಟ್ಟರೆ. ನಾನ್‌ಸೆನ್ಸ್ ಈ ಪತ್ರ ಬಂದು ಆರು ತಿಂಗಳಾಗಿದೆ ಈಗ ತಂದು ಸಿಕ್ಕ ಪತ್ರ ಕೊಡ್ತಿದ್ದಿರಿ. ಎಂದು ಬೈಸಿಕೊಂಡ ಗ್ರಹಚಾರ ನಿಮಗ್ಯಾಕೆ ಎಂದು ವಿಡಂಬನೆ ಮಾಡುವ ಪತ್ನಿ ಪಾರ್ವತಿ. ಇದರ ನಡುವೆಯು ಸೇವೆ ಮುಂದುವರೆಸಿ. ರಸ್ತೆಯಲ್ಲಿ ಯಾರೋ ಅಜ್ಜಿಗೆ ಢಿಕ್ಕಿ ಹೊಡೆದು.

ಸ್ಕೂಟರ್ ನಿಲ್ಲಿಸದೆ ಓಡಿಹೊದವರನ್ನು ಕಂಡ ಕಥೆಗಾರರು ಅಜ್ಜಿನ ಆಸ್ಪತ್ರೆಗೆ ಕರ್ಕೊಂಡು ಬಂದು ಸೇರಿಸಿದ್ರೆ ಇವರೇ ಡಿಕ್ಕಿ ಹೊಡೆದದ್ದು ಎಂದು ಕೇಸು ದಾಖಲಿಸುವ, ಕೊರ್ಟನಲ್ಲಿ ದಂಡಕಟ್ಟಿಸುವ, ಪೊಲೀಸನ ಪ್ರಜ್ಞಾಹೀನ ಕಾನೂನು ಪಾಲನೆಯನ್ನು ವ್ಯಕ್ತಪಡಿಸುತ್ತಾರೆ.

ಶಾಲಿನಿ ಎಂಬ ಅನಾಥ ಬಡ ಹೆಣ್ಣುಮಗಳ ಕಾಲೇಜಿನ ಫೀ ಕಟ್ಟಲು, ಆಕೆ ಸಿಗುವುದೇ ಇಲ್ಲ ಆಕೆ ವೇಶ್ಯೆಯಾಗಿ ಬಡತನದ ಸೋಗಿನಲ್ಲಿ ಮಾಡಿದ ಚಾಲಕಿನ ಮೋಸವನ್ನು, ಪಿಕ್‌ಪಾಕೀಟ್ ದಂದೆಯ ಹುಡುಗನ ಚಾಣಕ್ಷ ಗುಣದಲ್ಲಿ ಮೋಸಹೋದ ಸಂಗತಿಗಳನ್ನು ದಾಖಲಿಸುತ್ತಾರೆ.

ಮಾನವೀಯತೆಯೊಳಗೆ ಮೋಸಹೋಗುವ ಸಾಮಾಜಿಕ ಸಂಗಾತಿಯನ್ನು ಚಿತ್ರೀಕರಿಸಿ ಕೊಡುತ್ತಾರೆ. ತನ್ನ ಪತ್ನಿ ತಂಗಿ ನಾಯಿ ಕೊಟ್ಟು ಕಥೆಗಾರರನ್ನು ವಿಡಂಬನೆ ಮಾಡುತ್ತಾರೆ. ಇದು ಕೃತಜ್ಞಾಹೀನ ಸಮಾಜದ ವಿಡಂಬನೆಯಾಗಿದೆ. ಮನುಷ್ಯನ ಮಾನವೀಯತೆಯೆ ದುರ್ಗುಣವಾಗಿ ಕಾಡುವ ಚಿತ್ರಣವನ್ನು ಈ ಕಥೆಯಲ್ಲಿ ದಾಖಲಿಸುತ್ತಾರೆ.

'ಅನ್ನದಾತೋ ಸುಖೀಭವ' ಎಂಬ ಕಥೆ ದೇವರು, ನಂಬಿಕೆಗಳ ಮಧ್ಯೆ ಒಬ್ಬರನ್ನು ಮತ್ತೊಬ್ಬರು ಬಡಿದು ತಿನ್ನುವ ಸಾಮಾಜಿಕ ವರ್ತನೆಯನ್ನು ವ್ಯಕ್ತಪಡಿಸುತ್ತದೆ. ಯಾರಿಗೂ ಉಪಕಾರ ಮಾಡದ ಧಗಲಬಾಜಿ ವಿಶ್ವನಾಥಶೆಟ್ಟರ ಮನೆಬಾಲಿಗೆ ತಲೆಬುರುಡೆ, ಬೊಂಬೆಗಳನ್ನು ಇಟು ಬುಡುಬುಡಕೆಯವನಿಂದ ಅಪಶಕುನವನ್ನು ಸಾರಿಸುವ ಊರಿನ ಪುಂಡರು. ಇದನ್ನು ಅರಿಯದ ಶೆಟ್ಟಿ ಯರೋ ತಮಗಾಗದವರು ಮಾಟ ಮಡಿಸಿದರೆಂದು, ತಾನೆ ಮೋಸ ಮಾಡಿ ಸಂಪಾದಿಸಿದ ವ್ಯಕ್ತಿಗಳನ್ನು ನೆನಪಿಸಿಕೊಳ್ಳತ್ತಾರೆ. ಭಟ್ಟರನ್ನು ಶಾಸ್ತ್ರ ಕೇಳಿದಾಗ. ಬ್ರಾಹ್ಮಣರಿಗೆ ಗೋದಾನ ಮಾಡಿ ಅನ್ನ ಸಂತರ್ಪಣೆ ಮಾಡಿಸಿದರೆ, ದೊಷ ಪರಿಹಾರವಾಗುತ್ತದೆ ಎಂದು ಪರಿಹಾರ ಹುಡುಕಿ ಇಡೀ ಊರಿಗೆ ಅನ್ನಸಂರ್ಪಣೆ ಮಾಡಿದರು. ಯಾರಿಗೂ ಬಿಡಿಗಾಸನ್ನು ದಾನಮಾಡದೆ ಮೋಸಮಾಡಿ ಸಂಪಾದಿಸಿತ್ತಿದ್ದ ಶೆಟ್ಟಿ ಈಗ ಹೊಲೇರು, ಒಕ್ಲಿಗರು, ಬ್ರಾಹ್ಮಣರು ಎಲ್ಲಾರ್ಗು ಅನ್ನಾ ಹಾಕಂಗಾಯ್ತು. ಅನುಭವಿಸ್ಲೀ ಶೆಟ್ಟಿ ಎಂಬ ಮಾರ್ಮಿಕ ನುಡಿಗಳು ಕೇಳಬಂದವು. ಇಲ್ಲಿ ಶೆಟ್ಟಿ ಮೋಸಮಾಡಿದ್ದು ಅನ್ಯಾಯ. ಊರಿನ ಪುಂಡಹುಡುಗರು ದೇವರು ಮಾಟ ಮಂತ್ರದ ಹೆಸರಿನಲ್ಲಿ ಮಾಡಿದ್ದು ಅನ್ಯಾಯ. ಅದರೆ ಶೆಟ್ಟಿ ತಾನು ಕೊಡಿಟ್ಟ ಹಣ, ಸಮಾಜ ಸೇವೆ ಮಾಡುವುದು ಸಾಮಾಜಿಕ ಕಾರ್ಯವಾಗಿಸುವ ಕಥನತಂತ್ರದ ನೈಪುಣ್ಯತೆಯಾಗಿದೆ. ಮಾನವನ ವರ್ತನೆಯ ಏಳೆಗಳನ್ನು ನವಿರಾಗಿ ಬಿಡಿಸುವ ತೀಕ್ಷ್ಣ ಸಂವೇದನೆ ಕಥೆಯದಾದೆ. ಕಚ್ಚಾಡುವವರ ನಡುವೆ ಲಾಭಪಡೆಯುವ ಬ್ರಾಹ್ಮಣ ಹಾಗೂ ದೇವರಗುಡ್ಡರನ್ನು ಗೋದಾನದಿಂದ ಮುಗ್ಧ ಜನರನ್ನು ದೈವದ ಹೆಸರಿನಲ್ಲಿ ಶೋಷಣೆ ಮಾಡುವ. ವ್ಯಾಪ್ರ ತನಗಳನ್ನು ಅನಾವರಣ ಮಾಡುತ್ತಾರೆ. ಕುಡಿತದಿಂದ ಸತ್ಯಗಳು ಹೊರಬರುತ್ತವೆ ಎಂಬುದಕ್ಕೆ

ಮಿಲ್ಟ್ರಿಯಲ್ಲಿರುವುದಾಗಿ ಸುಳ್ಳು ಹೇಳುವ ಶೆಟ್ಟರ ಮಗ ಹಾಗೂ ಊರಿನ ಪುಂಡಹುಡುಗರನ್ನು ಸಾಕ್ಷಿಯಾಗಿಸುತ್ತಾರೆ. ಕುಡಿದ ಅಮಲಿನಲ್ಲಿ ತಾವೆ ಈ ರೀತಿ ಶೆಟ್ಟರಿಗೆ ಭಯ ಹುಟ್ಟಸಿ ಅನ್ನಸಂರ್ಪಣೆ ಮಾಡಿಸಿದ್ದು ಎಂದು ಒಪ್ಪಿಕೊಳ್ಳುತ್ತಾರೆ. ತಾನು ಸಹ ಮಿಲ್ಟ್ರಿಯಲಿಲ್ಲ. ಬಾಂಬೆಯ ಮಿಲ್ಟ್ರಿ ಹೋಟೆಲ್‌ನಲ್ಲಿ ಕೆಲಸ ಮಾಡಿಕೊಂಡಿರುವುದು. ಎನ್ನುವ ಮೋಸ ಮಾಡಿದ ಸತ್ಯಗಳು ಹೊರಬರುತ್ತವೆ. ಇದೇ ರೀತಿ ಮಲ್ಲೇಶ್ವರದಮ್ಮಿಗೆ, ಸುಬ್ಬಾಭಟ್ಟರಿಗೂ, ವಿಶ್ವನಾಥಶೆಟ್ಟರಿಗೂ, ಸುಬ್ಬಲಕ್ಷ್ಮಿಗೂ, ಒಂಚೂರು ಕುಡಿಸಿದರೆ ಎಂಥೆಂಥ ಸತ್ಯ ಹೊರಬರಬಹುದು, ಇವರುಗಳು ಮಾಡಿದ ಮೋಸಗಳನ್ನು ಕಾಣಬಹುದಲ್ಲ ಎಂಬ ಸಾಮಾಜಿಕ ಮೋಸ, ಅನ್ಯಾಯಗಳು ಒಬ್ಬರನ್ನು ಬಡಿದು ಮತ್ತೊಬ್ಬರು ತಿನ್ನುವ ಮಾನವನ ಸರಪಳಿ ವರ್ತನೆಗಳನ್ನು ನೈಜ ವಾಸ್ತವತೆಯ ಘಟನೆಗಳಾಗಿ ಚಿತ್ರಿಸುತ್ತಾರೆ. ಮತ್ತೇ ಬುಡಬುಡುಕೆಯವನು ಊರಿಗೆ ಕೇಡುಗಾಲ ಬಂದೈತೆ ....ಎಂದು ಸಾರುವ ಸಂದರ್ಬದಲ್ಲೆ ಕಥೆ ಅಂತ್ಯವಾಗುತ್ತದೆ. ಎಷ್ಟೇ ಅಪನಂಬಿಕೆ ಮೂಢನಂಬಿಕೆಯ ಮೋಸಕ್ಕೆ ಬಲಿಯಾಗಿದ್ದರೂ, ಮನುಷ್ಯ ಅವುಗಳ ಮೊರೆಹೋಗುತಾನೆ ಮೊಸಹೋಗುತ್ತಲೇ ಇರುತ್ತಾನೆ ಎಂಬ ಮಾನವಸಹಜ ಗುಣಗಳನ್ನು ಚಿತ್ರಿಸುತಾರೆ.

'ಕೊಟೆ' ಕಥೆ ಜಾತಿಯ ವಿಷವರ್ತುಲವನ್ನು ವ್ಯಕ್ತಪಡಿಸುತ್ತದೆ. ಕಥೆಯ ನಿರೂಪಕರು ಕನ್ನಡ ಪ್ರಾಧ್ಯಪಕರಾಗಿ ಮಹಾಸಂಸ್ಥಾನಮಠ ಒಂದರಲ್ಲಿ ಕಾರ್ಯನಿರ್ವಹಿಸಿ ತನ್ನನ್ನ ತಾನು ಪಾಪಿಷ್ಟನೆಂದು ಅಳಿದ ಅದರ್ಶಗಳನ್ನು ನಿವೇದಿಸಿ ಕೊಳ್ಳುತ್ತಾರೆ. ತನ್ನ ಜಾತಿಗಾಗಿಯೇ ಮಠವನ್ನು ಕಟ್ಟಕೊಂಡು ಸಮಾಜ ಸೇವೆಯ ಸೋಗಿನಲ್ಲಿ ಶೋಷಣೆ ಮಾಡುವ, ಮಠಮಾನ್ಯಗಳ ಮುಖವನ್ನು ಅನಾವರಣ ಮಾಡುತ್ತಾರೆ. ಕಾಲೇಜಿನ ಹುಡುಗರು ಬಸ್ಸಿನಲ್ಲಿ ಮಾತನಾಡಿಕೊಳ್ಳುವ ಅಮಿತಾಬ್ನ ಸಂಭಾವನೆ, ಸಿಲ್ಕ್ ಸ್ಮಿತಾಳ ನೃತ್ಯವಿಮರ್ಶೆ, ಸ್ವಾಮೀಜಿಯವರ ವಿಶ್ರಾಂತಿ ಗೃಹಕ್ಕೆ ಹೋಗುವ ನರ್ಸ್, ಎತ್ತಂಗಡಿಯಾದ ಕನ್ನಡ ಪಂಡಿತರ ಪರಿಚಯವನ್ನು ಬಸ್ಸಿನಲ್ಲೆ ಮಾಡಿಕೊಡುತ್ತಾರೆ. ಇಂದಿನ ಕಾಲೇಜುಗಳ ಪ್ರಸ್ತುತ ಸಾಮಾಜಿಕ ಚಹರೆಯನ್ನು ಪರಿಚಯಿಸುತ್ತಾರೆ.

ತನ್ನ ಹಲವು ಕನಸುಗಳನ್ನು ಕಟ್ಟಿಕೊಂಡು ಸಾಂಸ್ಕೃತಿಕ ರಾಯಬಾರಿಯಂತೆ ಮಠದ ಕಾಲೇಜನ್ನು ಪ್ರವೇಶಿಸಿದ ನಿರೂಪಕ. ಮಠದಲ್ಲಿ ಹುಡುಗರಿಗೆ ಕೂಡುವ ಊಟದಲ್ಲಿನ ಕಲ್ಲು, ಬೆಂದಿರದ ಸಾರಿನ ಬಗ್ಗೆ ಸ್ವಾಮೀಜಿಯವರಲ್ಲಿ ನಿವೇದಿಸಿಕೊಂಡಿದೇ ದೊಡ್ಡ ಅಪಚಾರವಾದಂತೆ. ಇವರನ್ನು ಕಾಣುವದೃಷ್ಟಿ ಹಾಗೂ ಮಠದ ಊಟಮಾಡುವ ಹುಡುಗರಲ್ಲಿ ನಮ್ಮ ಜಾತಿಯವರ ಸಂಖ್ಯೆ ಎಷ್ಟು? ಅವರಿಗೆ ಬೇರೆ ವ್ಯವಸ್ಥೆ ಮಾಡಿದರೆ ಹೇಗೆ ಎನ್ನುವ ಸ್ವಾಮೀಜಿ ಬಗ್ಗೆ ಅರಿಷಡ್ವರ್ಗಳನ್ನು ನಿಗ್ರಹಿಸಿ ಮಹಾಸಂಸ್ಥಾನ ಪೀಠಾಧೀಶರಾದ ಈ ಸ್ವಾಮೀಜಿಗೆ ಜಾತಿರೋಗ ಹೊಗಿಲ್ಲ. ಪ್ರಸ್ತುತ ಇಂದಿನ

ಸಮಾಜದ ಎಲ್ಲಾ ಬಹುಪಾಲು ಮಠದ ಸ್ವಾಮೀಜಿಗಳ ವ್ಯಕ್ತಿತ್ವವನ್ನು ಬಹಿರಂಗಪಡಿಸುತ್ತಾರೆ. ಹಿಂದಿನ ಆ ಕನ್ನಡ ಪಂಡಿತ ಬೇರೆ ಜಾತಿಯವರಿಂದಲೇ, ಓಡಿಸಿಬಿಟ್ಟೆ ಎನ್ನುವ ಸ್ವಾಮೀಜಿ, ನಿಮ್ಮ ಕಾರ್ಯಕ್ರಮ, ನಮ್ಮ ಜಾತಿಯ ಹುಡುಗರಿಗೆ ಸಲ್ಲಬೇಕು. ಅದ್ದೂರಿಯಾಗಿ ರಥೋತ್ಸವ ಮಾಡಬೇಕು, ಮಂತ್ರಿ ಕರೆಸಬೇಕು, ಕಾಲೇಜಿನ ಸಭಾಂಗಣ ಕಟ್ಟಿಸಬೇಕು. ದನಗಳ ಜಾತ್ರೆ ನಡೆಸಿ ಮಠದ ಕೀರ್ತಿ ಎಲ್ಲೆಡೆ ಹರಡಬೇಕು ವಿದ್ಯಾರ್ಥಿಗಳಿಂದ ಈ ಬಾರಿ ಧಾನ್ಯಸಂಗ್ರಹಣೆಯನ್ನು ಹೆಚ್ಚು ಮಾಡಿಸಬೇಕೆನ್ನುವ ಸ್ವಾಮೀಜಿಯ ಬೌದ್ಧಿಕ ದಾಹವನ್ನು ವ್ಯಕ್ತಪಡಿಸುತ್ತಾರೆ. ಸ್ಟಾಫ್‌ನಲ್ಲಿ ಇಬ್ರೆ ಇಬ್ರು ಬೇರೆ ಜಾತಿಯವರಿದ್ದಾರೆ. ಅವರು ಏಳೂ ಅಂದ್ರೆ ಏಳ್ತಾರೆ. ಕೂರು ಅಂದ್ರೆ ಕೂರ್ತಾರೆ, ಡಿಗ್ರೀ ಕ್ಲಾಸ್‌ಗೆ ಪಾಠ ಮಾಡಿ ಅಂದ್ರುಮಾಡ್ತಾರೆ. ಎಂಟನೇ ಕ್ಲಾಸ್‌ಗೆ ಡ್ರಿಲ್ ಮಾಡ್ಸಿ ಅಂದ್ರೂ ಮಾಡಿಸ್ತಾರೆ, ಅವರಿಗ್ಗೊತ್ತು ನಮ್ಮ ಜಾತಿಯೋರ ಮುಂದೆ ಬಾಲ ಬಿಚ್ಚುವ ಹಾಗಿಲ್ಲಾಂತ. ಎನ್ನುವ ಎಲ್ಲಾ ಜಾತಿಯವರಿಗೂ ಮಠ ಇದ್ದು, ಅವುಗಳ ಶೋಷಣೆಯ ಮೂಲಗಳನ್ನು ಅನಾವರಣ ಮಾಡುತ್ತಾರೆ. ಕಾಲೇಜಿನಲ್ಲಿ ಪಾಠವೇ ಕೇಳದೆ ದೂರ ಉಳಿದ ವಿದ್ಯಾರ್ಥಿಗಳನ್ನು ಕುರಿತು ನಾಳಿನ ಭವಿಷ್ಯದ ಬಗ್ಗೆ ಮಾತನಾಡಿದ್ದಕ್ಕೆ, ಚಳುವಳಿ ಮಾಡಿ ತಾನು ಮಾಡಿದ್ದು ತಪ್ಪಾಗಿದೆ ಎಂದು ಕ್ಷಮೆಕೋರುವಂತೆ ಮಾಡಿದ ಮಠ. ಕಾಲೇಜಿನಲ್ಲಿ ಓದುವ ಬದಲು ಮಠದ ಕೆಲಸ ನಿರ್ವಹಿಸುವ ವಿದ್ಯಾರ್ಥಿಗಳು, ಉಪನ್ಯಾಸಕರು, ಲೈಬ್ರರಿಯೇ ಇಲ್ಲದ "ಆದಿ ಮಾನವ" ಕಾಲೇಜೆಂದು ವಿಡಂಬನೆ ಮಾಡುವ ವಂಗ್ಯ ಸಾಮಾಜಿಕ ವ್ಯವಸ್ಥೆಯಲ್ಲಿ ಕನ್ನಡಿಯಾಗಿಸುರುತ್ತಾರೆ.

ಪರೀಕ್ಷೆ ಹಾಲ್‌ನಲ್ಲೇ ಹುಡುಗರು ನೋಟ್ಸ್, ಗೈಡ್‌ಗಳನ್ನ ತೆರೆದಿಟ್ಟು, ಉತ್ತರ ಬರೆಸುವ ಸ್ವಾಮೀಜಿ. ಇದರಲ್ಲಿ ವಿದ್ಯಾರ್ಥಿಗಳ ತಪ್ಪೇನಿದೆ? ವರ್ಷವಿಡೀ ಮಠದ ಕಾರ್ಯಗಳನ್ನ ಮಾಡುವ, ಧಾನ್ಯ ಸಂಗ್ರಹಣೆ, ಅಡುಗೆಕೆಲಸ, ಸೌದೆ-ಸೊಪ್ಪು, ರಥೋತ್ಸವ, ತೆಪೋತ್ಸವ, ಅಡ್ಡ ಪಲ್ಲಕಿ ಉತ್ಸವದ ನಡುವೆ ಓದುವುದು ಯಾವಾಗ, ಫಲಿತಾಂಶ ಕಡಿಮೆಯಾದರೆ ಕಾಲೇಜು ರದ್ದಾಗುತ್ತದೆ. ಮಠಕ್ಕೆ ಎಂತಹ ಕೆಟ್ಟ ಹೆಸರು, ಮಠಕ್ಕೆ ಇಂತಹ ಕೆಟ್ಟ ಹೆಸರು ಬಂದರೆ ಜಾತಿಗೆ ಕೆಟ್ಟ ಹೆಸರು. ಮಠ ಅಂದರೆ ಜಾತಿ, ಜಾತಿ ಎಂದರೆ ಮಠ. ಹೀಗೆ ಜಾತಿಯೊಳಗಿನ ವಿಷವರ್ತುಲವನ್ನು ನಿರ್ಮಾಣ ಮಾಡುವ ಮಠಗಳು ನಾಡಿನ ತುಂಬಾ ಹರಡಿ ಶಿಕ್ಷಣ ಸಮಾಜ ವ್ಯಕ್ತಿತ್ವವನ್ನು ಹಾಳುಮಾಡುತ್ತಿರುವ ಅನಿಷ್ಟಮುಖಗಳನ್ನು ಬಿಂಬಿಸುತ್ತಾರೆ.

ಸಾಮಾಜಿಕ ಧಾರ್ಮಿಕ ಕೈಂಕಾರ್ಯದಲ್ಲಿ ತೊಡಗಿ ಜನಸಾಮಾನ್ಯರ ಸೇವೆಮಾಡಿ ಸಾಕ್ಷಾತ್ಕಾರವಾಗಬೇಕಿದ್ದ ಸನ್ಯಾಸಿಯ. ಮಹಾಸಂಸ್ಥಾನವೆಂಬ ಮಠದ ಸ್ವಾಮೀಜಿಯ ಬಂಡ ಬದುಕಿನ ಅಮಾನವೀಯ ಕ್ರೀಯೆಯನ್ನು ಈ ಕಥೆಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ಅಡಿ ಟಿಪ್ಪಣಿ :

1 ಮಲೆನಾಡಿನ ಹುಡುಗಿ ಬಯಲುಸೀಮೆಯ ಹುಡುಗ, ನಾಗತಿಹಳ್ಳಿ ಚಂದ್ರಶೇಖರ್, ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು. 2009

ಅಧ್ಯಾಯ–8

ಅಧ್ಯಾಯ-8

ನಾಗತಿಹಳ್ಳಿಯವರ ಕಥೆಗಳಲ್ಲಿ ಜಾಗತೀಕ ವಿದ್ಯಾಮಾನಗಳು

ಕನ್ನಡ ಕಥೆಗಳ ಲೋಕಕ್ಕೆ ಹಳ್ಳಿಗಳಲ್ಲಿ ಬರತೊಡಗಿ ಹಲವು ದಶಕಗಳೇ ಕಳೆದಿವೆ. ಗಾಂಧಿಯವರು ಗ್ರಹಿಸಿದ ಹಳ್ಳಿಗಳ ಮಾದರಿಯನ್ನು ಮಂಡಿಸಲು, ಮೊದಮೊದಲು ಹಲವು ಕಥೆಗಾರರು ಯತ್ನಿಸಿದ್ದಾರೆ. ಆ ಮಾದರಿಯಲ್ಲಿ ಆ ಹಳ್ಳಿಗಳಲ್ಲಿ ರಕ್ತತೆಯಿದ್ದರೂ ಹೃದಯವಂತಿಕೆ ಇರುತ್ತವೆ. ವೈವಿಧ್ಯಗಳಿಂದ ತುಂಬಿದ ಸಮುದಾಯಗಳಿರುತ್ತವೆ. ಹಲವು ಸೋಜಿಗಗಳಿರುತ್ತವೆ. ಹೊಸ ಬಗೆಯ ಬದುಕು ಹಳ್ಳಿಗಳ ಒಳಗೆ ಕಾಲಿಡಲು ಮೊದಲಾದ ಮೇಲೆ, ಹಳ್ಳಿಗಳ ಮನೆಯ ಒಳಗಿನ ಮತ್ತು ಹೊರಗಿನ ಜಗತ್ತು ಬದಲಾಗ ತೊಡಗಿದವು. ಗ್ರಾಮ ಭಾರತದ ಮಾದರಿಯ ಹಳ್ಳಿಗಳ ಒಳಗಿನ ಚಹರೆಗಳು ಮರೆಯಾದವು. ಹಳ್ಳಿಯ ಹೊಸ ಬೆಳಕಿನಲ್ಲಿ ತಮ್ಮ ಹೊಸ ಚಹರೆಗಳನ್ನು ತೂರುವಂತಾಯಿತು. ಹೊಸ ಬದುಕಿಗೆ ಲಯಗಳು ಆ ಹಳ್ಳಿಗಳಲ್ಲಿ ತಂದ ಬದಲಾವಣೆಗಳನ್ನು ಕತೆಗಾರರು ಮಂಡಿಸುವತ್ತ ಹೊರಡುವುದನ್ನು ನೋಡುತ್ತೇವೆ.

ಹೀಗೆ ನಾಗತಿಹಳ್ಳಿರವರ ಕಥೆಗಳಲ್ಲಿ ಹೊಸ ಸಾಮಾಜಿಕ ವ್ಯವಸ್ಥೆಯಾಗಿ ಕಾಣುತ್ತವೆ. ಚುನಾವಣೆ ರಾಜಕಾರಣ ಶಾಲೆಗಳು, ಹೊಟೆಲುಗಳು, ಬಸ್ಸು, ಹೆದ್ದಾರಿ, ರೈಲು, ವಿಮಾನ, ರೇಡಿಯೋ, ಹೀಗೆ ಹತ್ತಾರು ಹೊಸ ಸಂಗತಿಗಳು, ಹಳ್ಳಿಗಳ ಸಾವಯುವತೆಯನ್ನು ಒಡೆಯುವ ಪರಿಕರಗಳಂತೆ ತೋರಿವೆ. ಸಾಮಾಜಿಕ ಬದುಕಿನಲ್ಲಿ ಸಾಮಾಜಿಕ ಸಂಬಂಧಗಳು ಹಿಂದೆ ಸರಿದು ಮನುಷ್ಯ ಸಂಬಂಧಗಳು ಮುನ್ನಲೆಗೆ ಬಂದಿವೆ ಎನ್ನುವುದು ಸಹಜ. ನೆಲದ ಮೇಲಿನ ಒಡೆತನದ ಮತ್ತು ದುಡಿಮೆಯನ್ನು ನಂಬಿದವರು ಒಂದೆಡೆಯಾದರೆ, ನೆಲದ ಒಡೆತನವಿಲ್ಲದ ದುಡಿಯುವವರು ಇನ್ನೊಂದೆಡೆ ಇದ್ದಾರೆ.

ಆಧುನಿಕ ನಾಗರಿಕತೆಯ ದಾಳಿಯ ಸಂದರ್ಭದಲ್ಲಿ ಎದುರಿಸುವ ತಲ್ಲಣ ತಾಕಟದ ಸಂಘರ್ಷ ಹಾಗೂ ಸಂಪ್ರದಾಯದ ಬಿಕ್ಕಟ್ಟುಗಳು ಕಥೆಯಲ್ಲಿ ಮಿಳಿತವಾಗುತ್ತವೆ. ಬಹುರಾಷ್ಟ್ರೀಯ ಕಂಪನಿಗಳ ಆರ್ಥಿಕ ಲಾಭವನ್ನೆ ಗುರಿಯಾಗಿಟ್ಟುಕೊಂಡು ನಡೆಸುವ ವ್ಯವಹಾರಿಕ ಮನೋಧರ್ಮದ ಅಭಿವ್ಯಕ್ತಿಯನ್ನು ಮುಗ್ಧ ಜನರ ಮೂಲಕ ಬದುಕಿನ ಅನೇಕ ಮೌಲ್ಯಗಳನ್ನು ಪಾರದರ್ಶಕವಾಗಿ ನೋಡುವುದೇ ನಾಗತಿಹಳ್ಳಿರವರ ಕಥೆಗಳ ವೈಶಿಷ್ಠವಾಗಿದೆ. ತನ್ನೂರನ್ನೇ ಸೀಳಿ ಹೋಗುವ ಹೆದ್ದಾರಿ ಒಂದು ರೀತಿಯಲ್ಲಿ ಗ್ರಾಮೀಣ ರೈತ ಬದುಕಿನ ಮಾರಕ ರೋಗವೆಂಬಂತೆ ನಿರೂಪಿಸುವ **"ಪುಟ್ಟಕ್ಕನ ಮೆಡಿಕಲ್ ಕಾಲೇಜು"** ಕಥೆ ಜಾಗತಿಕ ವಿದ್ಯಮಾನಗಳನ್ನು ವೈಚಾರಿಕ ನೆಲೆಯಲ್ಲಿ ನಿಂತು ನೋಡುವ ನೋವನ್ನು ಅನುಭವಿಸುವ ಪಾತ್ರವಾಗಿ ಕಾಣುತ್ತಾರೆ. ಗ್ರಾಮೀಣ ರೈತ ಬದುಕಿನ ಭೂ ಕಬಳಿಕೆಯಲ್ಲಿ ಜಾಗತಿಕ ಪ್ರವೇಶದಿಂದಾಗುವ ಸಮಾಜದಲ್ಲಿನ ರೈತಪಿ ವರ್ಗದ ಮೇಲಿನ ದಬ್ಬಾಳಿಕೆ ಶೋಷಣೆಯಲ್ಲಿ ಬದುಕನ್ನು ಕಳೆದು ಕೊಳ್ಳುವ ರೈತ ಮಹಿಳೆಗೆ ಆಗುವ ಅನ್ಯಾಯದ ಕುರುವು ಇಲ್ಲಿ ದಾಖಲಾಗುತ್ತವೆ. ಜನಸಾಮಾನ್ಯರಿಗೆ ಆಸೆರೆಯಾಗಿ ಸಾಮಾಜಿಕ ಸೇವೆ ಮಾಡಬೇಕಾಗಿದ್ದ ಸ್ವಾಮೀಜಿ, ಜಾಗತೀಕ ಬಂಡವಾಳದ ದುರಾಸೆಯಿಂದ ಬಡ ಹೆಣ್ಣುಮಗಳ ಆಸ್ತಿ ಜೀವವನ್ನೆ ಕಿತ್ತುಕೊಳ್ಳುತ್ತಾನೆ.

ಅಬಲೆ ಹೆಣ್ಣು ಮಗಳಿಗೆ ಆಶ್ರಯ ನೀಡುವ ನೆಪದಲ್ಲಿ ಲೈಂಗಿಕ ಶೋಷಣೆ ಮಾಡಿ, ಮಾಡಿದ ಅಪರಾದವನ್ನೇ ಸಾಧನೆ ಎಂಬಂತೆ ಸಾರುವ ದೂರ್ತ ಗುಣಗಳನ್ನೂ, ಬಿಟ್ಟಿ ಹಣದ ಆಮಿಷಕ್ಕೆ ಬಲಿಯಾಗುವ, ಕಾನೂನು, ಅಧಿಕಾರದ ಭ್ರಷ್ಟ ಮುಖಗಳು ಜಾಗತಿಕ ಮಟ್ಟದ ಎಲ್ಲಾ ಕ್ಷೇತ್ರದ ಸ್ವಾಭಾವಿಕ ಗುಣಗಳಾಗಿರುವುದು ವ್ಯಕ್ತವಾಗುತ್ತವೆ. ಬಂಡವಾಳ ಶಾಹಿಗಳ ಜಾಗತೀಕರಣ ಪ್ರಭಾವಗಳು ನಾಳಿನ ಬದುಕಿನ ಮೇಲಾಗುವ ಪರಿಣಾಮದ ಸೂಕ್ಷ್ಮ ಅವಲೋಕನವನ್ನು ಕಟ್ಟುವಾಸ್ತವತೆಯ ನೆಲೆಯಲ್ಲಿ ಚಿತ್ರಿಸಿದ್ದಾರೆ. ಜಾಗತೀಕರಣದಂತಹ ಪಾಶ್ಚಾತ್ಯ ರಾಷ್ಟ್ರದ ಹಂಬಲಗಳನ್ನು ಹೊತ್ತು ಒತ್ತಡಕ್ಕೆ ಸಿಲುಕುವ **'ಯಾತ್ರೆ'** ಕಥೆಯ ಮೃದುಲಳ ವಿದೇಶಿಯ ಐಶಾರಾಮಿ ತನದ ಕನಸನ್ನು ಜೀವನದ ಒತ್ತಡದ ಅಧಃಪತನದಲ್ಲಿ ಒಡೆದು ಹಾಳಾಗುವ ಮುಖಗಳನ್ನು ಅನಾವರಣಗೊಳಿಸುತ್ತಾರೆ.

ದೇಶ, ಭಾಷೆ ಸಂಸ್ಕೃತಿಗಳನ್ನು ದಿಕ್ಕರಿಸಿ ದೂರದ ಯಾಂತ್ರಿಕ ಬದುಕನ್ನು ಒಳಹೊಕ್ಕಾಗಲೇ, ಅಲ್ಲಿನ ದುಡಿತ ಸಂಸ್ಕೃತಿಗಳು ಬದುಕಿನ ಬೇಸರದ ನೋವು ಅತಾಸೆಗಳು, ಛಿದ್ರಗೂಂಡ ಕನಸುಗಳು, ಮತ್ತೆ ತನ್ನದೇ ನೆಲೆಯ ಭಾಷೆ, ಸಂಸ್ಕೃತಿಯ ಬೇರನ್ನು, ಅರೆಸುವಂತೆ ಮಾಡುವ ಪಾಶ್ಚಾತ್ಯ ಆಕರ್ಷಣೆಗೆ ಒಳಗಾದವರ ತಾಕಲಾಟವನ್ನು ಚಿತ್ರಿಸಿರುತ್ತಾರೆ, ವಿಶಿಷ್ಟ ಸೌಂದರ್ಯದ ಪ್ರತಿಭಾನ್ವಿತ ಭಾರತೀಯ ನಾರಿ ಬದುಕನರಸಿ ಜೀವನದಲ್ಲಿ ಹೊಸದನ್ನು ಕಾಣಲು ಭಾರತವನ್ನು ಬಿಟ್ಟು ಜರ್ಮನಿಯ ಯುವಕನನ್ನು ವರಿಸುತ್ತಾಳೆ. ಹೆಚ್ಚು ದಿನಗಳ ದಾಂಪತ್ಯವನ್ನು ಅನುಭವಿಸಲಾರದ ಅನ್ಯ ಸಂಸ್ಕೃತಿ ತನ್ನ ನೆಲದ ಸಂಸ್ಕೃತಿಗೆ ಮುಖಮಾಡಿ ನಿಲ್ಲುತ್ತವೆ. ಪಾಶ್ಚಿಮಾತ್ಯದ ದಾಂಪತ್ಯ ವಿಯೋಗ, ಕೂಳೆಯಾದ ಬಟ್ಟೆಯನ್ನು ಕಳಚಿ ಎಸೆವ ವಿಲಾಸದಂತಹ ವೈರಾಗ್ಯವನ್ನು ಅನಾವರಣ ಮಾಡುತ್ತಾರೆ. ಪಾಶ್ಚಿಮಾತ್ಯ ಸಂಸ್ಕೃತಿಯ ಯಾಂತ್ರಿಕ ಬದುಕಿನ ಯಂತ್ರ ಸ್ವರೂಪದ ಪ್ರಣಯಗಳು ಸಂಚಾರಿ ಭಾವನೆಗಳಂತೆ ತೆವಳುತ್ತವೆ .

ಸ್ನೇಹ ಸಹಾನುಭೂತಿಗಳಿಲ್ಲದೆ ಬಾಂದವ್ಯದ ಜೀವನ್ಮುಖಿತನಗಳಿಗಾಗಿ ಹಂಬಲಿಸಿ, ಬದುಕು ನೆವೆಯಾಗಿ ಕಾಡುವ ಚಿತ್ರಣವನ್ನು, ಜಾಗತಿಕ ಸಂಸ್ಕೃತಿಗಳ ಸಂಘರ್ಷದ ಹಿನ್ನೆಲೆಯಲ್ಲಿ ಅನಾವರಣ ಮಾಡುತ್ತಾರೆ. **'ಹದ್ದುಗಳು'** ನಾಗರೀಕ ಬದುಕಿನ ಪರಿಸರದಲ್ಲಿ ಒಬ್ಬರನ್ನು ಮತ್ತೊಬ್ಬರು ಬಡಿದು ತಿನ್ನುವ ಕ್ರೌರ್ಯ ಸಮಾಜದ ಚಿತ್ರಣವನ್ನು ನೀಡುತ್ತದೆ. ಸಾಮಾಜಿಕ ವ್ಯವಸ್ಥೆ, ಮಾನವೀಯತೆಯೊಳಗಿನ ಸೋಗಿನಲ್ಲಿ ನಡೆದುಕೊಳ್ಳುವ ಮಾನವೀಯ ವರ್ತನೆಯನ್ನು ಇಲ್ಲಿ ನಿರೂಪಿಸುತ್ತಾರೆ. ಮನವೀಯತೆಯ ಬದಲಾಗಿ ತನ್ನ ಸ್ವಾರ್ಥ ಲಾಭಗಳನ್ನೆಣಿಸುವ ಸಮಾಜ, ಕಾನೂನು ಕಾಯಬೇಕದ ಪೋಲಿಸ್, ಠಾಣೆ, ನ್ಯಾಯಾಲಯ ಇಲ್ಲದ ಕೇಸುಗಳ ಪಟ್ಟಿಯನಿಟ್ಟು ಸುಲಿಗೆ ಮಾಡುವ, ದಂದೆ ಮಾಡಿದರೆ, ವೈದ್ಯರು ಜೀವರಕ್ಷಕರಾಗ ಬೇಕಾದವರು ಹಣದ ದಾಹದಲ್ಲಿ ದ್ರೋಹವೆಸಗುವ, ಜಟಕಾಗಾಡಿಯವನು ಹಾಗೂ ಪುಂಡ ಹುಡುಗರು ವಂಚನೆಯಲ್ಲಿ ತೊಡಗುವ ಮಾನವೀಯತೆಯ ದಮನತೆಯನ್ನು ಗೋಚರಿಸುತ್ತಾರೆ. ಜಾಗತಿಕ ವಿದ್ಯಮಾನಗಳಲ್ಲಿ ಸ್ವಾರ್ಥ ಬದುಕಿನ ಲಾಭದ ಸಂಬಂಧಗಳನ್ನು ಕಾಣುವುದಾಗಿದೆ. ಸಮಾಜದ ಸುತ್ತಲಿನ ಭ್ರಷ್ಟತೆಯನ್ನು, ಸಣ್ಣ ಲಾರಿ ಡ್ರೈವರ್‌ನಲ್ಲಿದ್ದ ಸಣ್ಣ ಪುಡಿಗಾಸನ್ನು ಕಿತ್ತು ತಿನ್ನುವ ಸಮಾಜ ಘಾತುಕ ಕ್ರಿಯೆಯನ್ನು ಚಿತ್ರಿಸುತ್ತಾರೆ.

'ನೀರು ತನ್ನ ಮಟ್ಟವನ್ನು'.. ಎಂಬ ಕಥೆಯೊಳಗೆ ಮನುಷ್ಯನ ಸ್ವಾರ್ಥ ಸ್ವಭಾವದ ವರ್ತನೆಗಳನ್ನು ಚಿತ್ರಿಸುತ್ತದೆ. ಸಿನಿಮಾ ತಾರೆ ಅಖಿಲಳೆಂಬ ನಟಿ, ದಾಂಪತ್ಯದ ವಿರಸದಿಂದ ನೊಂದು ಬೇಸತ್ತ ವೇಳೆ, ರಜ್ಜು ಹಾಗೂ ಕಥೆಯ ನಿರೂಪಕರು ಅವಳ ಆತ್ಮೀಯ ಗೆಳೆಯರಾಗಿ ಅವಳ ಬದುಕನ್ನು ಉನ್ನತಿಕರಿಸಲು ಪಣತೊಡುತ್ತಾರೆ. ಈ ಹಿನ್ನೆಲೆಯಲ್ಲಿ ಸಿನಿಮಾ ಮಾಡಲು ತನ್ನ ದುಡಿಮೆಯ ಎಲ್ಲಾ ಹಣವನ್ನು ಸುರಿದರೂ, ಸಿನಿಮಾ ಚಿತ್ರಿಕರಣ ಮುಗಿಯುವುದಿಲ್ಲ. ಅರ್ಧದ ಹಂತದಲ್ಲೆ ನಿಂತ ಚಿತ್ರೀಕರಣವನ್ನು ಮುಂದುವರಿಸಲು, ಸುರಿದ ಹಣ ಸಾಲದೆ ತನ್ನ ಕಾರನ್ನು ಮಾರಿ, ಹಣ ತಂದು ಚಿತ್ರೀಕರಣ ಮುಂದುವರೆಸುತ್ತಾರೆ. ಆದರೆ ಹಿಂದಿ ಸಿನಿಮಾ ಮಾಡಲು ಬಂದ ರೆಡ್ಡಿ ಹಿಂದಿ ಸಿನಿಮಾ ಮಾಡುವ ಅವಕಾಶ ಕೊಟ್ಟಾಗ, ತನ್ನ ಬದುಕಿಗೆ ಆಸರೆ ನೀಡಿದ ಚಿತ್ರ ನಿರ್ಮಾಪಕ ನಿರ್ದೇಶಕರನ್ನು ಅರ್ಧದಲ್ಲೇ ಕೈಕೊಡುವ, ಅವಕಾಶಕ್ಕಾಗಿ ಕಾದು ಆಸರೆ ನೀಡಿದವರಿಗೆ ಅನ್ಯಾಯವೆಸಗುವ, ನವನಾಗರಿಕ ಬದುಕಿನ, ಮಾನವನ ವರ್ತನೆಯನ್ನು ಅನಾವರಣ ಮಾಡುತ್ತಾರೆ. ಮಾನವನ ಒಳ್ಳೆತನದ ಮಾನವೀಯ ಗುಣಗಳು, ದೌರ್ಬಲ್ಯದ ಪಟ್ಟಿಗೆ ಸೇರುತ್ತದೆ. ಎನ್ನುವ ನಿರೂಪಕರ ಮಾತುಗಳು ನವ ನಾಗರೀಕತೆಯ ಜಾಗತಿಕ ಪ್ರಪಂಚದ ಅವಕಾಶವಾದಿ ತನದ ಮುಖಗಳನ್ನು ಪರಿಚಯ ಮಾಡಿಕೊಡುತ್ತಾರೆ.

ಜಾಗತಿಕ ಸಂದರ್ಭದಲ್ಲಿ ಉದ್ಯೋಗವನ್ನು ಕಳೆದುಕೊಂಡು, ಬದುಕಿನಲ್ಲಿ ಬಳಲುವ ವ್ಯಾಥೆಯನ್ನು, **'ಕಳೆದುಕೊಂಡವನು'** ಎಂಬ ಕಥೆಯಲ್ಲಿ ಉದ್ಯೋಗ ಮನುಷ್ಯನನ್ನು ಕ್ರಿಯಾಶೀಲಗೊಳಿಸುವ ಹಾಗೂ ಬದುಕಿನ ನಿರ್ವಹಣೆಯಲಿನ ವ್ಯವಸ್ಥಿತ ರೂಪವನ್ನು ನಿರ್ಮಾಣ ಮಾಡುತ್ತದೆ. ಆದರೆ ತಾನು ಮಾಡಿದ ಕರ್ತವ್ಯಲೋಪಗಳಿಂದ ಸಸ್ಪೆಂಡ್ ಮಾಡುತ್ತಾರೆ. ತನ್ನ ಮೇಲಿರುವ ಆಪಾದನೆ ಯಾವುದೋ ರೆಕಾರ್ಡ್ ತಿದ್ದಿದ ಬಗೆಗಿನದು, ಆಫೀಸಿನ ಹಣ ಸ್ವಂತಕ್ಕೆ ಬಳಸಿಕೊಳ್ಳುವ ಪ್ರಯತ್ನ ಮಾಡಿದೆನೆಂಬ ದೂರು. ಇದು ಸಹದ್ಯೋಗಿಗಳ ಕಿತಾಪತಿಯೋ, ತಾನು ಮಾಡಿದ ಪಾಪ ಕ್ರಿಯೆಯೋ ಕೆಲಸವನ್ನು ಕಳೆದುಕೊಂಡು ಮನೆಗೆ ಹೋಗುವ ಆತನ ಮನಸ್ಸಿನ ತಲ್ಲಣಗಳು ಆ ವ್ಯಕ್ತಿಯನ್ನು ಬಾದಿಸುವ ವೇದನೆಯನ್ನು ಚಿತ್ರಿಸುತ್ತಾರೆ.

ಇಷ್ಟು ದಿನ ಪ್ರಾಮಾಣಿಕವಾಗಿ ದುಡಿದಿದ್ದರ ಫಲವೇನು ಎಂಬಂತೆ ಅಧಿಕಾರಿಗಳು ಒಳ್ಳೆಯ ಕೆಲಸ ಮಾಡುತ್ತಾನೆ. ಕ್ರಿಯಾತ್ಮಕ ಚಟುವಟಿಕೆಯುಳ್ಳವನು ಗುಡ್ ಎಂದು ಬೆನ್ನು ತಟ್ಟಿದವರು, ಇಂದು ಸಸ್ಪೆಂಡ್ ಮಾಡಿ ಕಳುಹಿಸಿದ ನೋವು. ತನ್ನ ನೋಡಿ ನಗುವ ಸಮಾಜಗಳ ನಡುವೆ ತಲೆ ಎತ್ತದಂತಾಗುವ ಮಾನಸಿಕ ತೊಳಲಾಟಗಳು, ಪ್ರಸ್ತುತ ಜಾಗತಿಕದ ಮಟ್ಟ ಎಲ್ಲಾ ಉದ್ಯೋಗಿಗಳ ಬದುಕಿನ ಅವಾಂತರಗಳೇ ಇಲ್ಲಿ ಉಲ್ಲೇಖವಾಗಿವೆ.

ಸಸ್ಪೆನ್‌ಶನ್ ಕ್ಯಾನ್ಸಲ್ ಮಾಡಿಸುವ ಸಲುವಾಗಿ ಹಣವನ್ನು ಸಾಲವಾಗಿ ಪಡೆವ ನಿರೂಪಕರು ಹಣಕ್ಕಾಗಿ "ವಿಷ ಕುಡೀಲಿಕ್ಕೆ ತಯಾರಿದ್ದೀನಿ ಪತ್ರ ಬರೆದು ಕೊಡಲಿಕ್ಕೆ ಏನು?"[1] ಎಂಬಲ್ಲಿನ ನುಡಿಗಳು, ಮನುಷ್ಯ ಸಮಸ್ಯೆಗೆ ಸಿಕ್ಕಾಗ ಬಳಲುವ ಹಾಗೂ ಅವಶ್ಯಕತೆಗೆ ತನ್ನ ಬದುಕನ್ನೇ ಪಲಾಯನ ಮಾಡುವ ವಾದವನ್ನು ಹೀಗೆ ಮಂಡಿಸಿದ್ದಾರೆ.

ಎಂ. ಎಲ್. ಎ.ತನಗೆ ಸಹಕಾರ ನೀಡಿ ಉಪಕಾರ ಮಾಡುತ್ತಾರೆ ಎಂದು ನಂಬಿದ. ಆದರೆ ಸಸ್ಪೆಷನ್ ಕ್ಯಾನ್ಸಲ್ ಮಾಡುವ ನೆಪದಲ್ಲಿ ಹಣದ ಸುಲಿಗೆ ಮಾಡಿ ಪ್ರತಿ ಹೆಜ್ಜೆಯ ಶೋಷಣೆ ಮಾಡುವ ರಾಜಕಾರಣದ ಮುಖಗಳು ಇಲ್ಲಿ ಅನಾವರಣವಾಗುತ್ತವೆ. ಕೊನೆಗೆ ಹಣದ ಅವಶ್ಯಕತೆ, ಕಳೆದುಕೊಂಡ ಉದ್ಯೋಗದ ನೋವು ಹೆಂಡತಿ ಮಗಳು ತವರಿಗೆ ಹೋಗುವ ಸಂದರ್ಭ. ಉದ್ಯೋಗ ಪುರುಷನ ಲಕ್ಷಣ ಎಂಬುದನ್ನು ಮನವರಿಕೆ ಮಾಡುತ್ತದೆ. ಉದ್ಯೋಗ ಕಳೆದುಕೊಂಡರೆ, ಸಮಾಜದಲ್ಲಿ ಸಿಗುವ ಗೌರವ. ಮನೆಯಲ್ಲಿನ ಸ್ಥಾನಮಾನ, ಕೊನೆಗೆ ಹೆಂಡತಿ ಮಕ್ಕಳು ದೂರವಾಗುವ, ಜಾಗತಿಕ ಪ್ರಪಂಚದ ಮನುಷ್ಯ ಸಂಬಂಧಗಳು ಇಲ್ಲಿ ಅನಾವರಣವಾಗುತ್ತವೆ. ರಾಜಕೀಯದ ಗೊಸಂಬಿತನಗಳ ಸ್ವಾರ್ಥದ ಬದುಕನ್ನು ಇಲ್ಲಿ ಚಿತ್ರಿಸಿದ್ದಾರೆ.

'ಸ್ವಿಚ್' ಎಂಬ ಕಥೆಯಲ್ಲಿ, ಸ್ವಿಚ್ ಯಾಂತ್ರಿಕ ಬದುಕಿನ ಸಂಕೇತವಾಗಿ, ಬದುಕಿನ ಆಯ್ಕೆಯಲ್ಲಿ ಬೇಕು ಬೇಡ ಎಂಬ ತಾಕಲಾಟದ ಅನುಕ್ರಮವನ್ನು ಸೂಚಿಸಿರುವುದಾಗಿದೆ. ಮನೆಯಲ್ಲಿ ಎಷ್ಟೇ ವೈಭವದ ಮನರಂಜನೆಯ ವಸ್ತುಗಳಿದ್ದರೇನು, ವಿದ್ಯುತ್ ಇಲ್ಲದೆ ನಿಷ್ಕ್ರಿಯವಾಗುವ ಹಾಗೆ 'ಕಾವೇರಿ'ಯ ಬದುಕಿನಲ್ಲಿ ಎಲ್ಲಾ ಇದೆ, ಮನೆಯಲ್ಲಿನ ಟಿ.ವಿ.ರೇಡಿಯೋ ಫ್ರಿಡ್ಜ್ ಇದೆ. ಆದರೆ ವಿದ್ಯುತ್ ಇಲ್ಲ. ಇತ್ತ ಒಳ್ಳೆಯ ಉದ್ಯೋಗದಲ್ಲಿರುವ ಗಂಡನಿದ್ದಾನೆ. ಪ್ರೇಮಿಸುವುದಿಲ್ಲ. ತನ್ನ ಸುಖ ಯಾವುದೆಂದು ಕೇಳುವುದೇ ಇಲ್ಲ. ಬಂಗಾರದ ಪಂಜರದ ಗಿಳಿಯಾಗಿದ್ದಾಳೆ ಕಾವೇರಿ ನನಗಾರು ಗತಿ ಎಂಬ ವ್ಯಥೆಯಲ್ಲಿವ ಕಾವೇರಿ, ನಗರ ಬದುಕಿನ ಜಂಜಾಟದ ಅಂಗಡಿ ಸಾಲುಗಳಿವೆ. ಆದರೆ ಬೇಕಾದ ಪ್ರೇಮವನ್ನು ನೀಡುವವರು ಯಾರು? ಎಂಬಲ್ಲಿನ ಜಾಗತಿಕ ಸಮುದಾಯಕ್ಕೆ ಬೇಕಾದ ಪ್ರೀತಿ, ಪ್ರೇಮ, ವತ್ಸಲ್ಯಗಳ ಬದಲಾಗಿ ಹಣ ಐಶಾರಮದ ಕಾರು ಬಂಗಲೆಯಲ್ಲೇ, ಜಾರಿ ಮರೆಯಾಗುವ ಬದುಕಿನ ಚಿತ್ರಣವನ್ನು ಇಲ್ಲಿ ನೀಡುತ್ತಾರೆ. ಅಂತೆಯೇ ಮನೆ ಎದುರು ಎಲೆಕ್ಟ್ರಿಕಲ್ ಅಂಗಡಿಯ 'ಮನು' ಮನೆಯ ಪ್ರೇಮ ದೀಪವಿಲ್ಲದ ಕತ್ತಲೆಯ ಲೈಟ್‌ಗಳನ್ನು, ಫ್ರಿಡ್ಜ್‌ಗಳನ್ನು ಸರಿ ಮಾಡುವ ನೆಪದಲಿ, ಕತ್ತಲೆಯ ಕೋಣೆಯಲ್ಲಿ ಅವಳನ್ನು ಅನುಭವಿಸಿ. ಅವಳ ಮನದ ದೀಪವನ್ನು ಅತ್ತಿಸಿ, ಲೈಟ್‌ಹಾಕಿ ಫ್ರೀಜ್ ಸರಿಮಾಡುತ್ತಾನೆ. ಆಕೆಗೆ ಭಯವಾಗುತ್ತದೆ ಮಾಂಗಲ್ಯ ಕಟ್ಟಿದ ಗಂಡನಿಗೆ ಮೋಸ ಮಾಡಿದನೆಂದು. ಆದರೂ ಸೇಡು ತೀರಿಸಿಕೊಂಡ ವಿಚಿತ್ರ ತೃಪ್ತಿ. ಕಾವೇರಿಯ ಮನದಾಳದ ಪ್ರೇಮಕಾಮಗಳ, ಹಸಿವಿನ ಹಂಬಲಗಳು ವ್ಯಕ್ತವಾಗುತ್ತದೆ. ಮನುವಿನೊಡನೆ ಪ್ರೇಮ ಕಾಮಗಳ ನಡುವೆ ಸುಖಿಸಿ, ತವರು ಮನೆಗೆ ಹೋಗುವ ನೆಪದಲ್ಲಿ ಬಾಂಬೆಗೂ ಹೋಗಿ ಹಲವು ದಿನಗಳ ನಂತರ ಸುಖಿಸಿ ಬಂದರು ಮನುವಿಗಾಗಿ ಹಂಬಲಿಸುತ್ತಾಳೆ, ಕಾವೇರಿಗೆ ಮನು ಮತ್ತೆ ದೊರೆಯುವುದಿಲ್ಲ, ಮನುವಿನಿಂದ ಬಂದ ಪತ್ರದಲ್ಲಿ, 'ನಮ್ಮ ಪ್ರೇಮ ನಿನ್ನ ಸುಖ ಸೌಂದರ್ಯವೆಲ್ಲವು ಯಾಂತ್ರಿಕ ಬದುಕುನ್ನೇವ. ಇದು ಸಮಾಜದ ಕಣ್ಣು ತಪ್ಪಿಸಿ ಪಡೆಯುವ ಕಳ್ಳ ಪ್ರೇಮದ ಪ್ರವತ್ತಿಯನ್ನು ವ್ಯಕ್ತಪಡಿಸುತ್ತಾರೆ. ಆದರೆ ಗಂಡನನ್ನು ಬಿಟ್ಟು ಮನುವನ್ನು ಹಂಬಲಿಸಿ, ಆತನೆ ಗಂಡನನ್ನಾಗಿ ಸ್ವಿಕರಿಸಿದ್ದಾ ಕಾವೇರಿಗೆ, ಇತ್ತ ಗಂಡ ಅತ್ತ ಮನು, ಯಾರು ಶಾಶ್ವತ ಪ್ರೇಮವನ್ನು ನೀಡಲಾಗದೆ, ಸೊಲುವ ಬದುಕಿನ ಜಂಜಾಟಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಮನುಷ್ಯ ಯಾಂತ್ರಿಕನಾಗಿದ್ದು, ಅವನು ಒಮೊಮ್ಮೆ ರಿಪೇರಿಯಾಗಬೇಕಾಗುತ್ತದೆ. ಹೋದ ಫ್ಯೂಸ್ ಬಲ್ಬಗಳನ್ನು

ಬದಲಿಸುವ ಹಾಗೆ ಬೇಕು ಬೇಡವಾದ ಸ್ವಿಚ್‌ನ್ನು ಸರಿಮಾಡಿಕೊಳ್ಳ ಬೇಕಾಗುತ್ತದೆ. ಕಾವೇರಿ ತನ್ನ ಬದುಕನ್ನು ಸರಿಮಾಡಿ ತನ್ನ ಗಂಡನಲ್ಲಿ ಪ್ರೇಮ ಬಾವನೆ ಮಾಡಿಸಿಕೊಳ್ಳಬೇಕಾಗಿತ್ತು. ಎಂಬ ಜಾಗತಿಕ ಯಾಂತ್ರಿಕ ಬದುಕಿನಲ್ಲಿ ಸಂಸಾರಿಕ ಪ್ರೇಮದ ಹುಡುಕಾಟವನ್ನು ವ್ಯಕ್ತಪಡಿಸಿದ್ದಾರೆ.

ಅಧ್ಯಾಯ–9

ಅಧ್ಯಾಯ-9

ನಾಗತಿಹಳ್ಳಿರವರ ಕಥೆಗಳಲ್ಲಿ ಭಾಷೆ ಮತ್ತು ಅಭಿವ್ಯಕ್ತಿ

'ಸಾಹಿತ್ಯ ರಚನೆ' ಎಂಬುದು ಭಾಷೆಯಲ್ಲಿಯೇ ಮೈತಾಳುತ್ತದೆ. ಭಾಷೆ ಜೀವನಾನುಭವಗಳನ್ನು ಅಭಿವ್ಯಕ್ತಿಸುವ ಸಂವಹನ ಮಾಧ್ಯಮ. ಮಾನವನ ಬದುಕಿನೊಳಗಣ ಸಮಸ್ಯೆಗಳನ್ನು, ತನ್ನದೇ ಆಯಾಮಗಳೊಡನೆ ದಾಖಲಿಸಲು ಪ್ರಯತ್ನಿಸುತ್ತವೆ.

ಸಮಜದೊಳಗಿನ ನಂಬಿಕೆ, ಆಚರಣೆಗಳು ಸಂಪ್ರದಾಯಗಳಲ್ಲದೆ ಮಾನವನ ವರ್ತನೆಗಳು ಬದಲಾಗುತ್ತದೆ, ಇಂತಹ ಬದುಕಿನ ಶೋಧನೆಯಲ್ಲಿ ತೊಡಗಿಕೊಳ್ಳುತ್ತದೆ. ಆಗ ಇದು ಒಂದು ಭಾಷೆಯಾಗಿರದೆ ಸಂಸ್ಕೃತಿಯಾಗಿ ಜೀವನ ಹಾಗೂ ಅಭಿವ್ಯಕ್ತಿಯಾಗಿ, ಸಾಹಿತ್ಯ ತೆರೆದು ಕೊಳ್ಳುತ್ತದೆ. ಕಥಾವಸ್ತು ಭಾಷೆ, ತಂತ್ರ, ನಿರೂಪಣೆ ಹಾಗೂ ವಸ್ತು, ಶೈಲಿ ಸಾಹಿತ್ಯ ಕೃತಿಯೊಂದರ ಅನನ್ಯತೆಯನ್ನು ಸೂಚಿಸುತ್ತದೆ, ಆಗ ಕಥೆಗಳಲ್ಲಿನ ಪಾತ್ರಗಳನ್ನು ಘಟನೆಗಳನ್ನು, ಸನ್ನಿವೇಶಗಳನ್ನು ಓದುಗನ ಅರಿವಿಗೆ ತಂದು ಕೊಡುವುದು ಭಾಷೆ. ಸಣ್ಣಕಥೆಗಳು ಕಥೆಗಾರರಲ್ಲಿ ಪ್ರಭಾವ ಬೀರುವ ದೃಷ್ಟಿಕೊನವೆಂದರೆ, ತಮ್ಮ ತಮ್ಮ ಭಾಷಿಕ ನೆಲೆಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಕಥೆಯೊಳಗಿನ ಪಾತ್ರ, ವಸ್ತು, ಉದ್ದೇಶಗಳ ನಿರೂಪಣಿ ಅಭಿವ್ಯಕ್ತಿಯ ಆಯಮಗಳು, ತನ್ನದೇ ನೆಲೆ ಭಾಷೆಯ ಸೊಗಡಾಗಿರುತ್ತವೆ.

ನಾಗತಿಹಳ್ಳಿಯವರ ಕಥೆಗಳ ಭಾಷೆಯನ್ನು ಗಮನಿಸಿದರೆ, ಇವರ ಕಥೆಗಳ ಪಾತ್ರದಲ್ಲಿನ, ವೈವಿಧ್ಯತೆಯ ಮುಖಗಳನ್ನು ಪರಿಚಯಿಸುತ್ತವೆ. ಮಂಡ್ಯದ ನುಡಿಗಟ್ಟುಗಳಲ್ಲಿ, ಇವರ ಹಲವು ಕಥೆಗಳ ನವಿರತನ ಹೆಣೆದುಕೊಳ್ಳುತ್ತದೆ. ಗ್ರಾಮೀಣ ಮಟ್ಟದ ರೂಪಕಗಳು, ವರ್ಣನೆ, ಗಾದೆಗಳು, ಇಂದು ಚಾಲನೆಯನ್ನು ಕಳೆದು ಕೊಳ್ಳುತ್ತಿರುವ ದೆಸೆಯಲ್ಲಿ, ಕಟ್ಟಿಕೊಡುವ ದಿಟ್ಟ ಹಂಬಲಗಳನ್ನು ಕಾಣಬಹುದು. ಇಷ್ಟಲ್ಲದೆ ಅಲ್ಲಲ್ಲಿ ಹೊಸ ನಿರೂಪಣಾ ತಂತ್ರಕ್ಕಾಗಿ ಹೊಸ ಪ್ರಯೋಗಶೀಲ ಬದುಕಿನ ಅನ್ವೇಷಕನಾಗಿ ನಾಗತಿಹಳ್ಳಿ ಕಾಣಿಸಿಕೊಳ್ಳುತ್ತಾರೆ. ತನ್ನ ಸಮಕಾಲಿನ ಘಟನೆ, ಸರ್ವಕಾಲಿಕ ಸಮಸ್ಯೆಯಾಗುವ ಪ್ರಯೋಗವನ್ನು ನೀಡಿದ್ದಾರೆ. ಗ್ರಾಮೀಣ ಬದುಕು, ನಗರ ಬದುಕು, ಪ್ರೇಮ-ಕಾಮಗಳ ಪ್ರವೃತ್ತಿ, ಬಡತನ, ರಾಜಕಿಯ, ಸಾಮಾಜಿಕ ಕ್ರೌರ್ಯದ ವಿಭಿನ್ನ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ , ಅದಕ್ಕೆ ಒಪ್ಪದ ಸನ್ನಿವೇಶ ಘಟನೆಗೆ ತಕ್ಕ ಭಾಷಾ ಮಾದರಿಯು ಇವರ ಕಥೆಗಳಲ್ಲಿ ಒಳಗೊಂಡಿದೆ.

ಗ್ರಾಮ್ಯ ಬದುಕಿನ ಭಾಷೆಯ ಬಳಕೆಯಲ್ಲಿ, ತನ್ನ ಯಾವ ಗ್ರಾಂಥಿಕ ನೆಲೆಯ ಶಿಷ್ಟ ಪದದ ಸೋಂಕಿಲ್ಲದಂತೆ ನಿರೂಪಣೆಗೊಳ್ಳುತ್ತದೆ. ಅದು ಗ್ರಾಮೀಣ ಬದುಕಿನ ಚಿತ್ರಣಗಳನ್ನು ನೀಡುವಾಗ. ಶಿಷ್ಟ

ನಗರ ಬದುಕಿನ ಪರಿಸರ ಸನ್ನಿವೇಶ, ಸಂಗತಿಗಳ ನಡುವೆ ಭಾಷೆ ಕೆಲಸ ಮಾಡುತ್ತದೆ. ಇದರ ನಿರೂಪಣೆಯಲ್ಲಿ ಸರಳತೆಯಿದೆ. ಮೊಣಚಾದ ವ್ಯಂಗ್ಯವಿದೆ. ಕಾಮದ ಅಶ್ಲೀಲ ನುಡಿಗಳನ್ನು ಕಾಣಬಹುದು. ಇಲ್ಲಿ ಅಶ್ಲೀಲವೆಂದರೆ ಓದುಗನಿಗೆ ಮುಜುಗರ ತರುವ ಅಡಕವಲ್ಲದ ನೇರವಾದ ಒಳ ಮುಖಿತ್ವವಿಲ್ಲದ ಭಾಷೆ. ಇವರ ಭಾವುಕನೆಲೆಯ ನಿರೂಪಣೆಯಿಂದಾಗಿ ಸಂಯಮ ನಿರ್ಲಿಪ್ತತೆಯಾಗಿ, ಕಾಪಾಡಿಕೊಂಡ ಕಥನತಂತ್ರವನ್ನು ಪ್ರಧಾನವಾಗಿಸುತ್ತಾರೆ.

ನಾಗತಿಹಳ್ಳಿಯವರ ಕಥಾನಿರೂಪಣೆಯಲ್ಲಿ ವೈವಿದತ್ಯೆಗಳನ್ನು ಕಾಣುತ್ತೇವೆ. ಕಥೆಯೊಳಗಿನ ಸ್ಥಾನ, ಸ್ವಭಾವ ವರ್ತನೆಗಳ ಅನ್ವಯ ಭಾಷೆ ಬಳಕೆಗೊಳ್ಳುತ್ತವೆ. ಆಗ ಗ್ರಾಂಥಿಕ ಹಾಗೂ ಆಡು ನುಡಿಗಳ ಸಂ

ಇಲ್ಲಿ ಕಥೆಗಾರರೆ ಹೇಳುವ ಕಥೆಗಳು, ಕಥೆಗಾರ ನಿರೂಪಕನಾಗಿ ವರದಿ ನೀಡುವ ಕಥೆಗಳಿವೆ, ಕಥೆಯ ನಿರ್ವಹಣೆಯ ಧೊರಣೆಗಳು ಘಟನೆಯ ಸ್ವರಸ್ಯ ನಿರೂಪಣೆ, ತಿರುವು ಇವರ ಕಥಾ ರಚನೆಯಲ್ಲಿ ಮುಖ್ಯವಾಗಿವೆ. ಪ್ರೇಮ, ಭಗ್ನಪ್ರಣಯ, ದಾಂಪತ್ಯ ಕಲಹ, ಬಡತನ, ಹೀಗೆ ಬದುಕಿನ ಶೋದನೆಯ ಸಂಗತಿಗಳು ನಿರ್ವಹಿಸುವಾಗ, ಭಾಷೆ ಏಕರೂಪತೆ ಕಾಯ್ದುಕೊಳ್ಳುವುದು ಕಷ್ಟ ಅಂತಹ ಪ್ರಯೋಗಗಳ ನಡುವೆ ನುಡಿಗಟ್ಟು, ಗ್ರಾಮ್ಯಭಾಷೆ, ನಾಗರಿಕ ಬದುಕು, ಪ್ರಾದೇಶಿಕ ಉಪಭಾಷೆಗಳ ಪ್ರಾಂತ್ಯಗಳ ನಡುವೆ ಸಿನಿಮಾ ರಂಗದ ನಿರೂಪಣೆಗಳಲ್ಲಿ ವಿದೇಶಿ ಯಾತ್ರೆಯ ಸನ್ನಿವೇಶಗಳಲ್ಲಿ, ಎಲ್ಲಾ ಘಟ್ಟಗಳಲ್ಲಿ ಸನ್ನಿವೇಶಕ್ಕೆ ತಕ್ಕಂತೆ ವೈವಿದ್ಯಗೊಳಿಸಿದ್ದಾರೆ. ಅಂತಹ ಕಥೆಗಳನ್ನೇ ವಿಭಾಗಿಸುವ ಭಾಷೆ ಬದುಕುಗಳ ಹಿನ್ನೆಲೆಯಲ್ಲಿ ವಿಭಾಗಿಸಿ ನೋಡುವ ಅಭಿವ್ಯಕ್ತಿಗಳನ್ನು ನೀಡಿದ್ದಾರೆ.

ನಾಗತಿಹಳ್ಳಿಯವರ ಅನೇಕ ಕಥೆಗಳು ಗ್ರಾಮೀಣ ಜೀವನದ ಹಿನ್ನೆಲೆಯುಳ್ಳವು. ಇಲ್ಲಿ ಗ್ರಾಮ್ಯ ಆಡು ಭಾಷೆಯ ನಿರೂಪಣೆಯಲ್ಲಿ ಭಾಷೆ ನಿರ್ವಹಿಸುತ್ತದೆ. ಸಂಭಾಷಣೆಯು ಪಾತ್ರಮುಖೀ ಅಭಿವ್ಯಕ್ತಿಯಾಗಿ, ಬೆಸಗರಹಳ್ಳಿ ರಾಮಣ್ಣ, ದೇವನೂರ ಮಹದೇವರಂತೆ ಸಹ ಅಭಿವ್ಯಕ್ತಿಯ ರೂಪವಾಗಿವೆ.

ಬನ್ನೇರಿ ಕಥೆಯಲ್ಲಿ ಬರುವ ಸನ್ನಿವೇಶದ ಗ್ರಾಮ್ಯನುಡಿ ರೂಪ ಹೀಗಿದೆ. ಬನ್ನೇರಿ "ಎರಡುಸಾರಿ ಕುತ್ತಿಗೆ ಉಳುಕೋ ಹಾಗೆ ತೆಂಕಲ ಹೊಲಕ್ಕೆ ಕಸ ಹೊತ್ತುಕೊಂಡು ಹೋಗಿ ಬರೋದು, ಬರುವಾಗ ಮಗ್ಗಲು ಸಪ್ಪು ತಂದು ಕೊಟ್ಟಿಗೆ ಹಾಕಿ, ದನಕರಾ, ಒಪ್ಪ ಮಾಡಿ , ಕರಾವಿನ ಹಸುವಿಗೆ ಹಸಿ ಹುಲ್ಲು ತಂದು ಹಾಕಿ, ಸೀಗೆಕಾಯಿ ವಂಗೇಕಾಯಿ ಆಯ್ದು ಒಣಾಕಿ ತಮ್ಮಟೆ ಗಿಡಕ್ಕೆ ನೀರೊಯ್ದು... ಸಂದೇ ವೊತ್ಗೆ ಸಾಕೊ ಸಾಕು."[1]

ಇಲ್ಲಿನ ಸನ್ನಿವೇಶದ ಸಾಲಿನಲ್ಲಿ ಬರುವ ತೆಂಕಲ ಹೊಲ, ಮಗ್ಗಲು ಸಪ್ಪು, ಕೊಟ್ಟಿಗೆ, ಒಪ್ಪ, ಒಣಾಕಿ, ಸಂದೇ ಎಂಬ ಗ್ರಾಮ್ಯ ನುಡಿಗಳು ಗಮನಾರ್ಹವಾದವು.

ಬಸ್ನೇರಿಗೆ ರಂಗಪ್ಪ ಹೇಳುವ ಕಥೆಯ ಸಂಭಾಷಣೆ ಹೀಗಿದೆ ;

"ಅವ್ವಾ, ನಿನ್ನ ಕಷ್ಟ ತಪ್ಪುಸ್ತಿನಿ ನನ್ನ ಮೈನಾಗೆ ಕಡೇ ಉಸಿರಿರೊ ತನಕ ನಿನ್ನ ಸೇವೆ ಮಾಡ್ತೀವಿ.... ನಿಯತ್ತಿನಿಂದ ದುಡಿದರೆ ನಿನ್ನ ಭೂಮೀಲಿ ಬಂಗಾರ ಬೆಳೀ ಬೌದು."[2] ಎಂಬ ಗ್ರಾಮ್ಯ ಭಾಷಿಕ ಶೈಲಿಯ ನಿರೂಪಣೆಯನ್ನು ಕಾಣಬಹುದಾಗಿದೆ.

ನಾಗತಿಹಳ್ಳಿಯವರ ಕಥೆಗಳಲ್ಲಿ ಬರುವ ಭಾಷಿಕ ನೆಲೆ ನಾಗರಿಕ ಶಿಷ್ಟ ಸಾಹಿತ್ಯವನ್ನು ಸಹಜವಾಗಿ ಅಭಿವ್ಯಕ್ತಿಸುತ್ತಾರೆ. 'ಕನಸು ಹುಟ್ಟಿತು.. ಕೇಳಾ' ಎಂಬ ಕಥೆಯಲ್ಲಿ " ಸರ್, ನೀವು ಈ ಥರಾ ಕ್ಯೂ ನಿಂತ್ರೆ ಏನು ಲಾಭ ಇಲ್ಲ. ಒಂದು ಕವರ್‌ನಲ್ಲಿ ಐವತ್ತು ರೂಪಾಯಿ ಹಾಕಿ 'ನಮ್ಮ ಮಗು ಹುಟ್ಟಿದ ಸಂತೋಷಕ್ಕೆ ಸ್ವೀಟ್ಸ್ ತಗೊಳ್ಳಿ ಸರ್' ಅಂತ ಕೈಗೆ ಕೊಡಿ. ಆರ್ಧ ಗಂಟೇಲಿ ವಾರ್ಡ್ ಅಲಾಟ್ ಮಾಡ್ತಾರೆ. ಲಂಚ ಅನ ಬೇಡಿ. ಹುಷಾರ್....."[3] ಎಂಬ ನಗರ ಬದುಕಿನ ನುಡಿಗಳನ್ನು ಸಂಭಾಷಣಿಗಳನ್ನು ಭಾಷಿಕ ನೆಲೆಯಲ್ಲಿ ಬಳಕೆಯಾಗಿರುವ ಚುರುಕಾದ, ಸರಳ ಭಾಷೆ ಮನ ಸೆಳೆಯುತ್ತದೆ. ಅಯಾಾಯ ವಸ್ತು ಸ್ಥಿತಿಯ ಸನ್ನಿವೇಶಗಳಲ್ಲಿ ಪಡೆದ ಅನುಭವಗಳು ಬನಿಯಾಗಿ ನಿರೂಪಿತಗೊಳ್ಳುತ್ತವೆ.

ನಾಗತಿಹಳ್ಳಿರವರ ಬದುಕಿನ ಪ್ರೇಮ ಶೋದದಲ್ಲಿ ಬರುವ ಯಶೋಧರ ಚರಿತೆ ಕಥೆಯಲ್ಲಿ "ನಮ್ಮ ಪ್ರೋಫೆಸರ್.... ನಿನಗೆ ಗೋತ್ತ..... ಎಡಗೈಲಿ ನನ್ನ ಮೊಲೆ ಮುಟ್ಟಿ ಬಲಗೈಲಿ ಮಾರ್ಕ್ಸ್ ಹಚ್ಚಿದ...."[4] ಎಂಬ ಸಂಭಾಷಣೆಯಲ್ಲಿ ಅಶ್ಲೀಲವೆನಿಸಿದರೂ ಅದೊಂದು ಸೃಜತೆಯಾಗಿ ಬರುವ ಆಕರ್ಷಕ ಕಥನಗಾರಿಕೆಯನ್ನು ಗುರುತಿಸಬಹುದು.

ನಾಗತಿಹಳ್ಳಿಯವರ ಕಥೆಗಳಲ್ಲಿ ಸನ್ನಿವೇಶ ಕಟ್ಟುವ ಕ್ರಿಯೆಯಲ್ಲಿ ಭಾಷೆಯನ್ನು ದುಡಿಸಿಕೊಳ್ಳುತ್ತಾರೆ. ನಿರೂಪಣಾ ಕ್ರಿಯೆಯಲ್ಲಿ ಭಾಷೆಯ ಮೂಲಕ ಒಂದು ಬೆಡಗಾಗಿ ಬಳಕೆ ಮಾಡಿಕೊಳ್ಳುವ ವೈಶಿಷ್ಟವೇ ವಿಭಿನ್ನ. ಆಯ್ಕೆ ಮಾಡಿಕೊಂಡ, ಕಥೆಯ ಭಾಷೆ ಹಾಗೂ ಶೈಲಿಯು ಕಥೆ ಎಣಿಯುವಲ್ಲಿ ಕೆಲಸಮಾಡಿದೆ ನಗರ ಬದುಕಿನ ಕಥೆಗಳ ಭಾಷೆಗೂ, ಗ್ರಾಮೀಣ ಬದುಕಿನ ಕಥೆಯಲ್ಲಿ ಕೊಡುವ ರೂಪಕಶಕ್ತಿ, ಸಿನಿಮಾ ಬದುಕಿನ ಭಾಷೆಗಳಲ್ಲಿ ಸಾಂಸ್ಕೃತಿಕ ಆಸ್ಮಿತೆಯನ್ನು ಅಡಗಿಸುತ್ತಾರೆ. ಹೀಗೆ ಕಥೆಯ ಪರಿಕಲ್ಪನೆ ತರುವ ಬಗ್ಗೆ ಭಿನ್ನವಾದದ್ದು ಅವರು ಕಟ್ಟುವ ಭಾಷೆ ಅಯಾ ಪ್ರದೇಶದಲ್ಲೇ ಅಯಾಯ ವ್ಯಾಪ್ತಿಗೆ ಅಂತರ್ಗತವಾಗಿರುತ್ತದೆ. ಬಹುಪಾಲು ಮನುಷ್ಯನ ಜೀವನದ

ಶೋಧನೆಯಾಗಿದ್ದು ಇದರ ನೈಜ ಶಕ್ತಿಯೊಡನೆ ಸಾಂಸ್ಕೃತಿಕ ಪರಂಪರತೆಯನ್ನು ಏಳೆಯಾಗಿ ನವಿರಾಗಿ ನೀಡುತ್ತಾರೆ.

ಅಡಿ ಟಿಪ್ಪಣಿ :

1 ಅಕಾಲ, ನಾಗತಿಹಳ್ಳಿ ಚಂದ್ರಶೇಖರ್, ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು. 2009 ಪುಟ 45.

2 ಅದೇ. ಪುಟ 55.

3 ನಿಮ್ಮ ಮೆಚ್ಚಿನ ಕಥೆಗಳು. ನಾಗತಿಹಳ್ಳಿ ಚಂದ್ರಶೇಖರ್,ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು. 2013 ಪುಟ 96.

ಅಧ್ಯಾಯ–10

ಅಧ್ಯಾಯ-10

ಉಪಸಂಹಾರ :

ಈವರೆಗಿನ ಅಧ್ಯಯನದಿಂದ ನಾಗತಿಹಳ್ಳಿರವರ ಕಥೆಗಳಲ್ಲಿ ವ್ಯಕ್ತಗೊಂಡಿರುವ ಸಾಂಸ್ಕೃತಿಕ ಸಾಹಿತಿಕ ವಿಚಾರಗಳ ಸಮಗ್ರ ವಿವೇಚನೆ ದೊರೆತಂತ್ತಾಗಿದೆ. ಇವರ ಕಥೆಗಳ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿ ಉಪಯುಕ್ತವಾದವುಗಳಾಗಿವೆ.

ನಾಗತಿಹಳ್ಳಿಯವರ ಬದುಕು ಬರಹ ಅಧ್ಯಯನದಲ್ಲಿ, ನಾಗತಿಹಳ್ಳಿರವರ ಚಾರಿತ್ರಿಕ ಹಿನ್ನೆಲೆಯಲ್ಲಿ ಬೆಳೆದು ಬಂದ ಬಗೆ ವೃತ್ತಿ ಬದುಕಿನ ನೆಲೆಗಳನ್ನು ಒಳಗೊಂಡಂತೆ ಸಾಹಿತಿಕವಾಗಿ ತೊಡಗಿಸಿಕೊಂಡು, ಅಭಿವ್ಯಕ್ತ ಪಡಿಸಿದ ಬರಹಗಳು, ಸಾಧನೆಗಳು ಹಾಗೂ ಸಂದ ಪ್ರಶಸ್ತಿಗಳನ್ನು ವಿವೇಚಿಸಿ ದಾಖಲಿಸಲಾಗಿದೆ. ನಾಗತಿಹಳ್ಳಿ ಬದುಕನ್ನು ಕಟ್ಟಿಕೊಂಡ ನವಿರಾದ ಭಾವವನ್ನು ಅದರೊಟ್ಟಿಗೆ ತನ್ನೂರಿನ ಪ್ರೇಮ ಪರಿಸರ ಹಾಗೂ ಹಿರಿಮೆ ಗರಿಮೆಗಳನ್ನು ಇಲ್ಲಿ ಅವಲೋಕಿಸಿ ನೋಡಲಾಗಿದೆ.

ನಾಗತಿಹಳ್ಳಿರವರ ಕಥೆಗಳಲ್ಲಿ ಗ್ರಾಮೀಣ ಬದುಕು ಎಂಬ ಅಧ್ಯಯನದಲ್ಲಿ ಗ್ರಾಮೀಣ ಪರಿಸರದಲ್ಲೇ ಮೈದಾಳುವ ಅಲ್ಲಿನ ಜನರ ಬದುಕಿನ ಹಂಬಲಗಳ ವ್ಯಕ್ತತೆಯನ್ನು, ಗ್ರಾಮೀಣ ಜನರ ಭಾಷೆ ಸಂಸ್ಕೃತಿ ಸಾಮಾಜಿಕ ನಿಲುವುಗಳ ಒಟನಾಟದ ನ್ಯಾಯಾ ತೀರ್ಮಾನದಲ್ಲಿನ ಮಾನವೀಯ ಮೌಲ್ಯಗಳನ್ನು ದಾಖಲಿಸಲಾಗಿದೆ. ಗ್ರಾಮೀಣ ಜೀವನದಲ್ಲಿನ ಹೋರಾಟದ ಮೌಲ್ಯದ ಆಶಯದೊಳಗಿನ ಸಾಂಸ್ಕೃತಿಕ ನೆಲೆಗಳನ್ನು ನೋವಿನಯಾತನೆ ಅನುಭವಿಸುವ ಸುಖದ ಚಹರೆಯನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲೇ ವಿಶ್ಲೇಷಣೆ ಮಾಡಿ ವ್ಯಕ್ತಪಡಿಸಲಾಗಿದೆ.

ನಾಗತಿಹಳ್ಳಿಯವರ ಕಥೆಗಳಲ್ಲಿ ನಗರ ಬದುಕಿನ ಸಂಕೀರ್ಣ ಮುಖಗಳು ಎಂಬ ಅಧ್ಯಯನದಲ್ಲಿ ಮಾನವ ತನ್ನ ಬದುಕನ್ನು ಕಟ್ಟಿಕೊಳ್ಳುವ ನಗರ ಬದುಕಿನ ಜಂಜಾಟಗಳನ್ನು ನಿರೂಪಿಸಲಾಗಿದೆ. ತನ್ನ ಪರಿಸರದಲ್ಲಿನ ಬದುಕಿಗಿಂತಲೂ ಬೇರೊಂದು ಜೀವನ ಶೈಲಿಯನ್ನು ಅನ್ವೇಷಣೆ ಮಾಡುವ ಕಥೆಗಾರರ ಹಂಬಲ ದೊರಣೆಗಳನ್ನು ಹಾಗೂ ವಿಭಿನ್ನ ನೆಲೆಗಳನ್ನು ಪರಿಸಯಿಸುವ ಕಥೆಗಾರರ ವಿಶೇಷ ಗುಣವನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ. ನೈತಿಕ ಹಾಗೂ ಅನೈತಿಕ ಸಂಬಂಧಗಳ ನಡುವೆ ಮೌಲ್ಯಗಳ ಹುಡುಕಾಟ, ಮೌಲ್ಯದ ಶೋಧನೆ ಹಾಗೂ ಜಿಜ್ಞಾಸೆಗೆ ಒಳಪಡಿಸುವ ನಗರ ಬದುಕಿನ ಸ್ವರೂಪದ ಮಾನವನ ವರ್ತನೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ನಗರ ಬದುಕಿನ ಮೋಜು, ಮಾಲಿನ್ಯತೆಯನ್ನು ಇದರಿಂದ ಆಚೆಬರುವ ಭಾವನಾತ್ಮಕ ತುಡಿತದ ನಡುವೆ

ನೆಮ್ಮದಿಗಾಗಿ ಶೋಧನೆ ಮಾಡುವ ಮಾನವನ ಪ್ರವೃತ್ತಿಯ ಅನ್ವೇಷಣೆಗಳನ್ನು, ಹತಾಸೆಗೊಂಡ ಮನದ ನೋವು, ಬಡತನ, ವರ್ಗಗಳ ಸ್ಥಿತಂತ್ರ್ಯರದ ಬದುಕುಗಳನ್ನು ಎಳೆಯಾಗಿ ತೆಗೆದು ವಿಶ್ಲೇಷಣೆ ಮಾಡಲಾಗಿದೆ.

ನಾಗತಿಹಳ್ಳಿಯವರ ಕಥೆಗಳಲ್ಲಿ ಪ್ರೇಮ : ಪ್ರಕೃತಿ ಮತ್ತು ಪ್ರವೃತ್ತಿಯಲ್ಲಿ ಮಾನವನ ಇಂದ್ರೀಯ ಸುಖದಲ್ಲಿ ಪ್ರೇಮದ ಹಂಬಲಗಳ ನಡುವೆ ಆತನ ವರ್ತನೆ ತಾಕಲಾಟಗಳ ವ್ಯಕ್ತತೆಯನ್ನು, ಅವುಗಳ ನಿರೂಪಣೆಯಲ್ಲಿ ವ್ಯಕ್ತಪಡಿಸುವ ನೈಜ ವಾಸ್ತವತೆಯನ್ನು ವಿವರಿಸಲಾಗಿದೆ. ಪ್ರೇಮವು ವ್ಯಕ್ತಿಯೊಳಗಿನ ಭಾವವನ್ನು ಪಲ್ಲಟಗೊಳಿಸುವ, ದುರಂತವಾಗಿಸುವ ಜೊತೆಜೊತೆಯಲ್ಲೇ ಅನುಸಂದಾನ ಮಾಡಿಕೊಳ್ಳುವ ಕಥೆಗಾರರ ಧೋರಣೆಗಳನ್ನು ನೋಡಬಹುದು. ಪ್ರೀತಿ ಪ್ರೇಮ ಕಾಮಗಳ ನಡುವೆ ನೈತಿಕ ಹಾಗೂ ಅನೈತಿಕ ಸಂಬಂಧದಲ್ಲಿ ಮಾನವನ ತುಳಿತಗಳನ್ನು ತನ್ನದಾಗಿಸುವ ಪ್ರೇಮದ ವಾಂಚೆಗಳನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ.

ಪ್ರೇಮವಾಂಚೆಯಲ್ಲಿ ಬದಲಾಗುವ ಮಾನವನ ವರ್ತನೆಗಳ ವಿಭಿನ್ನ ನೆಲೆಗಳ್ನು ಗುರುತಿಸಲಾಗಿದೆ. ಪ್ರೇಮಕ್ಕಾಗಿ ಮನುಷ್ಯ ಸಮಾಜದೊಡನೆ ವ್ಯಕ್ತಪಡಿಸುವ ಪ್ರವೃತ್ತಿಯ ಗುಣಗಳನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಿ ಕಥೆಯ ನಿಲುವು ಧೋರಣೆಗಳನ್ನು ಚರ್ಚಿಸಲಾಗಿದೆ.

ನಾಗತಿಹಳ್ಳಿಯವರ ಕಥೆಗಳಲ್ಲಿ ಸ್ತ್ರೀ ಸಂವೇದನೆ ಎಂಬ ಅಧ್ಯಯದಲ್ಲಿ ಸಾಮಾಜದಲ್ಲಿ ಮಹಿಳೆಯ ನೋವು ಶೋಷಣೆಯ ಹಿನ್ನೆಲೆಯಲ್ಲಿ ಸ್ತ್ರೀಯಾಗಿ ಅಭಿವ್ಯಕ್ತಿಸುವ ಕಥೆಗಾರರ ನಿಲುವುಗಳನ್ನು ಇಲ್ಲಿ ಕಾಣಬಹುದಾಗಿದೆ. ಸ್ತ್ರೀ ಪಾತ್ರಗಳ ಮಿಡಿತಗಳನ್ನು ಕೇಂದ್ರವಾಗಿಸಿ ನಿರೂಪಿಸುವ ಕಥೆಗಳಲ್ಲಿ ಸ್ತ್ರೀಯ ಬದುಕಿನಾಳದಲ್ಲಿ ತೆರೆದುಕೊಳ್ಳುವ ಹಂಬಲ ಹೋರಾಟದ ನೋವು ನ್ಯಾಯಕ್ಕಾಗಿ ಸಿಡಿದೇಳೂವ ಬಂಡಾಯವನ್ನು ವ್ಯಕ್ತಪಡಿಸಿ ಸ್ತ್ರೀ ಸಂವೇದನೆ ಕಥೆಗಳಲ್ಲಿನ ಬಂಡಾಯದ ನೆಲೆಗಳನ್ನು ಗುರುತಿಸಲಾಗಿದೆ.

ಮಹಿಳೆಯು ಧಾರ್ಮಿಕ ಕಂದಾಚಾರಗಳ ನಡುವೆ ಸಿಕ್ಕಿ ನಲುಗುವ ಬದುಕಿನ ದುರಂತಗಳನ್ನು ಹಾಗೂ ಸಾಮಾಜಿಕ ವರ್ತನೆ ಸಂಪ್ರದಾಯ, ಸಂಸ್ಕೃತಿ, ಪರಂಪರೆಗಳ ನಡುವೆ ಮುಖಾಮುಖಿಯಾಗುವುದನ್ನು ಚರ್ಚಿಸಲಾಗಿದೆ. ಒಟ್ಟಾರೆ ಸ್ತ್ರೀಯೊಬ್ಬಳ ಅಂತರಾಳದಲ್ಲಿರುವ ಹೋರಾಟದ ಬಂಡಾಯದ ಧ್ವನಿಗಳನ್ನು ಕಥೆಗಳಲ್ಲಿ ವಿಶ್ಲೇಷಿಸಲಾಗಿದೆ. ಸ್ತ್ರೀ ಸಂವೇದನೆಯಡಿಯಲ್ಲಿರುವ ನಾಗತಿಹಳ್ಳಿ ಕಥೆಗಳಲ್ಲಿನ ನಿಲುವು ಸ್ತ್ರೀಗೆ ಸಿಗುವ ನ್ಯಾಯ ದುರಂತವನ್ನು

ಕಾಣುವ ಕಥೆಗಳಲ್ಲಿನ ವಾಸ್ತವಿಕ ಚಿತ್ರಣದ ನಿರೂಪಣೆ ದಿನಚರಿಯ ಪುಟದಂತೆ ಉಲ್ಲೇಖಿಸುವ ಕಥೆಗಾರ ನಿಲುವುಗಳನ್ನು ಚರ್ಚಿಸಲಾಗಿದೆ.

ನಾಗತಿಹಳ್ಳಿಯವರ ಕಥೆಗಳಲ್ಲಿ ಸಾಮಾಜಿಕ ಪ್ರಜ್ಞೆ ಎಂಬ ಅಧ್ಯಯನದಲ್ಲಿ ನಾಗತಿಹಳ್ಳಿ ರವರು ಕಂಡು ಅನುಭವಿಸಿದ ಸಾಮಾಜಿಕ ವರ್ತನೆಯನ್ನು ನಿರೂಪಿಸುವ ಪರಿಸರಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ರೂಢಿಸಿಕೊಂಡ ಮೌಲ್ಯಕ್ಕೆ ಸಾಮಾಜಿಕ ವರ್ತನೆಗಳ ನಡುವೆ ನೈತಿಕತೆಯನ್ನು ಶೋಧನೆ ಮಾಡಿ ಮೈ ಗೂಡಿಸಿಕೊಳ್ಳುವ ಹಂಬಲದಲ್ಲಿನ, ನೋವು ಸಂಕಟ ಯಾತನೆಗಳನ್ನು ಪ್ರಸ್ತುತ ದಿನಗಳ ಮಾನವನ ಮೌಲ್ಯಗಳ ದಿಕ್ಕುದೆಸೆಗಳನ್ನು ಈ ಭಾಗದಲ್ಲಿ ಚರ್ಚಿಸಲಾಗಿದೆ. ಸಾಮಾಜಿಕ ಸ್ವಾರ್ಥ ಬದುಕಿನೊಳಗಿರುವ ಮೋಸ ವಂಚನೆ ಡಾಂಬಿಕತೆಗಳ ಸಂಗತಿಗಳನ್ನು ತನ್ನದಾಟಿಯಲ್ಲಿ ನಿರೂಪಿಸುವ ಕಥೆಗಾರರ ಪಾತ್ರದೊಳಗಿನ ನಿರೂಪಕನ ವ್ಯಕ್ತಿತ್ವವನ್ನು ಚರ್ಚಿಸಲಾಗಿದೆ.

ನಾಗತಿಹಳ್ಳಿಯವರ ಕಥೆಗಳಲ್ಲಿನ ಜಾಗತೀಕ ವಿದ್ಯಮಾನಗಳು ಈ ಅಧ್ಯಯನದಲ್ಲಿ ಜಾಗತಿಕ ಪ್ರವೇಶದಿಂದ ಗ್ರಾಮೀಣ ಪ್ರದೇಶದಲ್ಲಿ ಆಗುವ ಅಪಘಾತಕಾರಿಯ ಸನ್ನಿವೇಶಗಳನ್ನು ವ್ಯಕ್ತಪಡಿಸಲಾಗಿದೆ. ಜಾಗತೀಕರಣದಿಂದ ಮಾನವನ ಸ್ವಾರ್ಥ ವರ್ತನೆಯ ದುಷ್ಟ ಕ್ರಿಯೆಗಳನ್ನು ಮಾನವೀಯ ನೆಲೆಯ ಸ್ಥಿತ್ಯಂತರಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಜಾಗತೀಕ ಪ್ರಪಂಚದ ಮಾನವೀಯ ನೆಲೆಯನ್ನು ಅವರಿಸಿಕೊಳ್ಳುವ ಬದುಕಿನ ತಳಮಳಗಳನ್ನು ವ್ಯಕ್ತಪಡಿಸುವ ಲೇಖಕರ ನಿಲುವುಗಳ ಮಧ್ಯೆ, ತನ್ನದೇ ಜೀವನ ಶೈಲಿಯನ್ನು ಬದಲಿಸಿ ಕೊಳ್ಳುವ ಮಾನವನ ಅತಂತ್ರ ಬದುಕಿನ ನೈಜ ವಾಸ್ತವತೆಯ ಚಿತ್ರಣಗಳನ್ನು ವಿಶ್ಲೇಷಣೆ ಮಾಡಲಾಗಿದೆ.

ನಾಗತಿಹಳ್ಳಿಯವರ ಕಥೆಗಳಲ್ಲಿ ಭಾಷೆ ಮತ್ತು ಅಭಿವ್ಯಕ್ತಿ ಅಧ್ಯಯನದಲ್ಲಿ ನಾಗತಿಹಳ್ಳಿ ಬಳಸಿಕೊಂಡ ಭಾಷೆ ಗ್ರಾಮೀಣ ಬದುಕಿನ ಆಡುನುಡಿ, ನುಡಿಗಟ್ಟುಗಳನ್ನು ರೂಪಕಗಳ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಿ ವ್ಯಕ್ತಪಡಿಸಲಾಗಿದೆ. ವಿವಿಧ ಕಥೆಗಳಲ್ಲಿ ನಗರ ಬದುಕಿನ ಭಾಷೆ ಹಾಗೂ ಅಭಿವ್ಯಕ್ತತ್ತೆಯನ್ನು ಪ್ರೇಮದ ಕಥೆಯೊಳಗಿನ ನೈಜ ಸಂವೇದನೆ ಗ್ರಾಮೀಣ ಬದುಕಿನ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ವಿಶ್ಲೇಷಣೆ ಮಾಡಿ ನಿರೂಪಿಸಲಾಗಿದೆ.

ನೈಜ ವಾಸ್ತವತೆಯನ್ನು ಕಥೆಯಾಗಿಸುವ ಲೇಖಕರು ಕಥೆಯೊಳಗಿನ ಪಾತ್ರವಾಗಿ ಚರಿತ್ರೆಯನ್ನು ದಾಖಲಿಸುವ ಚಾರಿತ್ರಿಕ ದಿನಚರಿಯಂತೆ ಸೂಚಿಸುವ ಕಥೆಗಳಾದರೂ ಅಘಾದ ಬದುಕಿನ

ಅನುಭವಗಳನ್ನು ಕಟ್ಟಿಕೊಡುವ ದಟ್ಟ ಪರಿಸರ ವಿಶಿಷ್ಟ ನಿರೂಪಣೆಯನ್ನು ಮಾಡುವ ಕಥೆಗಾರರು ಬದುಕಿನ ಶೋಧನೆಯಲ್ಲಿ ತೊಡಗುವ ಕಥೆಗಾರರ ಆಶಯವನ್ನು ವ್ಯಕ್ತಪಡಿಸಲಾಗಿದೆ.

ಅನುಬಂಧ

ಅಧ್ಯಯನದ ಮೂಲ ಆಕರಗಳು

1. ಹದ್ದುಗಳು ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 1981
2. ನನ್ನ ಪ್ರೀತಿಯ ಹುಡುಗನಿಗೆ ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 1985
3. ಮಲೆನಾಡಿನ ಹುಡುಗಿ ಬಯಲುಸೀಮೆಯ ಹುಡುಗ, ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು. 1986
4. ಸನ್ನಿಧಿ ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 1990
5. ಅಕಾಲ, ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 1995
6. ಪ್ರೇಮ ಕಥಾ ಸಂಪುಟ ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 1995
7. ಛಿದ್ರ ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2003
8. ಕಥಾಯಾತ್ರೆ ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2010
9. ನಿಮ್ಮ ಮೆಚ್ಚಿನ ಕಥೆಗಳು ಅಭಿವ್ಯಕ್ತಿ ಪ್ರಕಾಶನ ಬೆಂಗಳೂರು 2013

ಪರಾಮರ್ಶನ ಗ್ರಂಥಗಳು

1. ಚಂದ್ರಮಾನ :ಸಂಪಾದಕರು: ಶಿಲ್ಪಶ್ರೀ ಹರವು , ಶಿವಕುಮಾರ ಕಾರೆಪುರ . ಕನ್ನಡ ಸಾಹಿತ್ಯ ಪರಿಷತು: ಮಂಡ್ಯ 2013